ಕಾಗೋಡು

ಒಂದು ನೆನಪು

■ ಸಿ.ಬಿ. ಚಂದ್ರಶೇಖರ್



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ

ಕಾಗೋಡು

ಒಂದು ನೆನಪು

ಸಿ.ಬಿ. ಚಂದ್ರಶೇಖರ್

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

KAGODU ONDU NENAPU : by C.B. Chandrashekar
Maruthi Nagara, Near Nrupatunga School, Tumkur - 572103
Published by : Ashoka N. Chalavadi, Administrative Officer, Kannada Pustaka Pradhikara (Kannada Book Authority), Kannada Bhavana, J.C. Road, Bangalore-560 002.

Pages : Viii + 108

ಮೊದಲ ಮುದ್ರಣ : 2007

ಗ್ರಂಥ ಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ

ಪ್ರತಿಗಳು : 1000

ಬೆಲೆ : 40/-

ISBN : 81-7713-202-4

ಮುಖಪುಟ ವಿನ್ಯಾಸ : ಮೋಸಪ್ಪ

Printed at :
ವಿಶ್ವಾಸ್ ಪ್ರಿಂಟ್ಸ್
VISHWAS PRINTS
23, 3rd Cross, Nanjamba Agrahara
Chamarajpet, Bangalore - 560 018
Ph : 26604835

ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು-ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅನುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡು ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾ ದೇವಿಯವರ ಜ್ಞಾನಶಕ್ತಿ ೨ x ೨=೪ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗು ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲಾ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆ ಯಿಂದ ಆ ಭಾಷೆಯನ್ನ ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯ ವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಸ್ಥಿತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗು ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ ಬದುಕನ್ನು ರೂಪಿಸುವ ಪ್ರಭುತ್ವ ಹಾಗು ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮೂಲಕ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ, ಅಲ್ಲಮನ ಒಂದು ವಚನ ಹೀಗಿದೆ –

ಹಿಂದಿಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆನಂದರೆ, ಜೀವನ ವೈವಿಧ್ಯತೆಯ ಬಹುಮುಖಿ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗು ಅಸಮಾನತೆಯ ಪ್ರಮಾಣವನ್ನು ಆಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು ; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತುದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗು ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗು ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ

ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

* * * * *

ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಡೆದ ಹಲವು ಜನಪರ ಹೋರಾಟಗಳಿಗೆ ಸಂಬಂಧಿಸಿದಂತೆ ಕರ್ನಾಟಕಕ್ಕೆ ಅದರದೇ ಆದ ವಿಶಿಷ್ಟ ಸ್ಥಾನವಿದೆ. ಭಾಷೆ ಗಡಿ ವರ್ಗ ವರ್ಣ ಮೊದಲಾದ ನಿರ್ದಿಷ್ಟ ವಿಷಯಗಳ ಜೊತೆಗೆ ಕೆಲವು ಸಮುದಾಯ ಕೇಂದ್ರಿತ ಹೋರಾಟಗಳು ಇಲ್ಲಿ ಮಹತ್ತರ ಪಾತ್ರವಹಿಸಿವೆ. ಅವುಗಳಲ್ಲಿ ಕಾಗೋಡು ಸತ್ಯಾಗ್ರಹಕ್ಕೆ ಅದರದೇ ಆದ ಒಂದು ವಿಶಿಷ್ಟ ಅಸ್ಮಿತೆ ಇದೆ. ಶತಶತಮಾನಗಳಿಂದ ಭೂಮಾಲಿಕರ ದಬ್ಬಾಳಿಕೆ ವಂಚನೆ ಶೋಷಣೆಗಳಿಗೆ ತುತ್ತಾದವರು ಗೇಣೀದಾರರು. ತಮ್ಮ ಬೆವರುಗಳಿಕೆಯ ಫಲದಲ್ಲಿ ನ್ಯಾಯಯುತವಾದ ಪಾಲುಪಡೆಯಲಾರದವರಾಗಿ ಆರ್ಥಿಕ ಭದ್ರತೆ ಶೈಕ್ಷಣಿಕ ಸವಲತ್ತುಗಳಿಲ್ಲದೆ ಜೀತಗಾರಿಕೆಯ ನೊಗಭಾರದಲ್ಲಿ ನರಳುತ್ತಿದ್ದ ಕಾಯಜೀವಿಗಳಿವರು. ಇಂಥ ಈ ಸಮುದಾಯದ ಮಡುಗಟ್ಟಿದ ನೋವು ಕಟ್ಟೆಯೊಡೆದದ್ದು ಮಲೆನಾಡಿನಲ್ಲಿ ; ಸಮಾಜವಾದಿ ಚಿಂತಕರ, ಜನಮುಖಿ ಹೋರಾಟಗಾರರ ಸಾಂಸ್ಕೃತಿಕ ತಾಣವೆನಿಸಿದ ಶಿವಮೊಗ್ಗ ಜಿಲ್ಲೆಯಲ್ಲಿ. ಈ ಹೋರಾಟದ ಮೂಲ ಬಿಂದು ನ್ಯಗ್ರೋದ ಬೀಜದಂತೆ ಅಣು ರೂಪಿಯಾದರೂ ಅದರ ವೃಕ್ಷರೂಪ ನಮ್ಮ ಸಾಂಸ್ಕೃತಿಕ ಸಾಮಾಜಿಕ ರಾಜಕೀಯ ಕ್ಷೇತ್ರಗಳನ್ನು ವ್ಯಾಪಿಸಿದಂತೆ ಹಬ್ಬಿ ಬೆಳೆದ ವಟಸ್ವರೂಪಿಯಾದುದೆ ಆಗಿದೆ. ಈ ಹೋರಾಟವನ್ನು ಕುರಿತಂತೆ ಕನ್ನಡದಲ್ಲಿ ಈಗಾಗಲೇ ಕಥೆ ಕಾದಂಬರಿಗಳ ಜೊತೆಗೆ ಸಂಶೋಧನಾ ಕೃತಿಗಳು ಅನುಭವ ಕಥನಗಳು ಹಲವು ಪ್ರಕಟವಾಗಿವೆ. ಈ ಸಾಲಿಗೆ ಶ್ರೀ ಸಿ.ಬಿ. ಚಂದ್ರಶೇಖರ್ ಅವರ 'ಕಾಗೋಡು ಒಂದು ನೆನಪು' ಕೃತಿ ಇತ್ತೀಚಿನ ಸೇರ್ಪಡೆ. ಶ್ರೀ ಸಿ.ಬಿ. ಚಂದ್ರಶೇಖರ್ ಅವರು ಸ್ವತಹ ಕಾಗೋಡು ಸತ್ಯಾಗ್ರಹದಲ್ಲಿ ಕ್ರಿಯಾಶೀಲರಾಗಿ ಪಾಲ್ಗೊಂಡವರು. ಜೈಲುವಾಸ ಅನುಭವಿಸಿದವರು. ಅವರ ಅನುಭವ ಕಥನ ಇಲ್ಲಿ ಚಿತ್ರವತ್ತಾಗಿ ಕಣ್ಣಿಗೆ ಕಟ್ಟುವಂತೆ ನಿರೂಪಿತವಾಗಿದೆ. ಇಲ್ಲಿ ಹೋರಾಟದ ಸಂದರ್ಭದೊಳಗಿನ ರಾಜಕೀಯ ಸಾಮಾಜಿಕ ವ್ಯಕ್ತಿಗತ ನೆಲೆಯ ಹಲವು ಪ್ರಸಂಗಗಳು ಸೂಕ್ಷ್ಮ ಹಾಗೂ ವಸ್ತುನಿಷ್ಠ ಭಾವದಲ್ಲಿ ಓದುಗರನ್ನು ವಿವೇಚನೆಗೆ ಹಚ್ಚುತ್ತವೆ. ಈ ಹೋರಾಟದ ಕಥನಕ್ಕೆ ಸಂಬಂಧಿಸಿದ ದಾಖಲಾತಿಗಳ ಸಾಲಿನಲ್ಲಿ ಕೆಲವು ಹೊಸ ಸಂಗತಿಗಳನ್ನು ಇವು ಸೇರಿಸುತ್ತವೆ. ಈ ಪುಸ್ತಕವನ್ನು ಪ್ರಾಧಿಕಾರದ ಪ್ರಕಟಣೆಗೆ ನೀಡಿ ಸಹಕರಿಸಿದ ಶ್ರೀ ಸಿ.ಬಿ. ಚಂದ್ರಶೇಖರ್ ಅವರಿಗೆ ಧನ್ಯವಾದಗಳು. ವಿಶ್ವಾಸ ಪ್ರಿಂಟರ್ಸ್‌ನ ಶ್ರಮಿಕ ಬಂಧುಗಳಿಗೆ ಆತ್ಮೀಯ ವಂದನೆಗಳು.

ಪ್ರೊ. ಎಸ್.ಜಿ. ಸಿದ್ದರಾಮಯ್ಯ
ಅಧ್ಯಕ್ಷರು.
ಕನ್ನಡ ಪುಸ್ತಕ ಪ್ರಾಧಿಕಾರ

ಪರಿವಿಡಿ

೧.

ಸ್ವಾತಂತ್ರ್ಯದೇವಿಯ ಪದತಲದಲ್ಲೇ ಗುಲಾಮಗಿರಿ

ಈಗ್ಗೆ ಸುಮಾರು ಐವತ್ತು ವರ್ಷಗಳ ಹಿಂದಿನ ಮಾತು. ಆಗ ಒಬ್ಬ ಜಮೀನುದಾರರು ಮಲೆನಾಡಿನಲ್ಲಿ ಇದ್ದರು. ಅವರು ತಮ್ಮ ಜಮೀನ್ದಾರಿಕೆಯನ್ನು ಒಂದು ರೀತಿಯ 'ದಯಾಮಯ ಯಜಮಾನತನ' ಎಂದು ಬಣ್ಣಿಸಿಕೊಳ್ಳುತ್ತಿದ್ದರು. ಅವರ ಯಜಮಾನತನ ಎಷ್ಟು ದಯಾಮಯವಾಗಿತ್ತು ಎಂದು ಅವಲೋಕಿಸೋಣ.

ಅವರಿಗೆ ಸುಮಾರು ಇನ್ನೂರು ಮಂದಿ ಗೇಣಿದಾರ ಕುಟುಂಬಗಳಿದ್ದವು. ಆ ಗೇಣಿದಾರರು ಬಿಳಿ ಬಟ್ಟೆ ಹಾಕಬಾರದು. ಹೆಂಗಸರು ಮೊಣಕಾಲ ಕೆಳಗೆ ಸೀರೆ ಉಡಬಾರದು. ಅವನ ಮನೆಯ ಎದುರು ಚಪ್ಪಲಿ ಧರಿಸಿ ಓಡಾಡಬಾರದು. ಮಕ್ಕಳಿಗೆ ಒಳ್ಳೆಯ ಹೆಸರುಗಳನ್ನು ಇಡಬಾರದು. ವಿದ್ಯೆ ಕಲಿಸಬಾರದು. ಬಿಟ್ಟಿ ದುಡಿಮೆ ಮಾಡಬೇಕು. ಅವನಿಗೆ ಎದುರು ಮಾತನಾಡಬಾರದು. ಅವನು ನಿಗದಿಪಡಿಸಿದ್ದೇ ಅಧಿಕೃತ ಅಳತೆ. ಅದರ ಪ್ರಕಾರವೇ ಗೇಣಿದಾರರು ಕಾಳು ಕೊಡಬೇಕು. ಯಾರೇ ಆಗಲಿ ಅವನು ಹೇಳಿದ ಕೆಲಸಗಳನ್ನು ತುಟಿಪಿಟಕ್ಕನ್ನದೆ ಮಾಡಿ ಹೋಗಬೇಕು. ಅದೆಷ್ಟೇ ಗಲೀಜು ಕೆಲಸವಾಗಿದ್ದರೂ ಮಾಡಲೇಬೇಕು, ಬಿಟ್ಟಿಯಾಗಿ ಮಾಡಬೇಕು!

ಈ ಬಗೆಯ ಹೇಯ ಗುಲಾಮಗಿರಿ ಆಚರಣೆಗಳನ್ನು ಅವನು ಉಳಿಸಿಕೊಂಡು ಬಂದಿದ್ದ. ಮುಚ್ಚುಮರೆಯಿಂದಲ್ಲ , ಬಹಿರಂಗವಾಗಿ ; ನಾಚಿಕೆ-ಹೇಸಿಕೆಗಳಿಂದಲ್ಲ, ನಿರ್ಲಜ್ಜೆಯಿಂದ ; ಇಂದು -ನಿನ್ನೆಯಿಂದಲ್ಲ , ತಲೆ ತಲಾಂತರಗಳಿಂದ. ಇವುಗಳಿಂದ ತಪ್ಪಿಸಿಕೊಳ್ಳಲು ಯಾರಾದರೂ ಗೇಣಿದಾರರು ಪ್ರಯತ್ನಿಸಿದರೆ, ತನ್ನ ದರ್ಪ ದೌರ್ಜನ್ಯಗಳಿಂದ ಅವುಗಳನ್ನು ನಿರ್ಭಾಗ್ಯ ಗೇಣಿದಾರರ ಮೇಲೆ ಕಡ್ಡಾಯವಾಗಿ ಹೇರುತ್ತಿದ್ದ.

ಆತ ವಿದ್ಯಾವಂತನೂ ಆಗಿದ್ದ. ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನೂ ಮಾಡಿದ್ದ. ಸೆರೆಮನೆ ವಾಸವನ್ನೂ ಅನುಭವಿಸಿದ್ದ. ಸಂಸತ್ ಸದಸ್ಯನೂ ಆಗಿದ್ದ. ಅಂದಿನ ಪ್ರಧಾನ ಮಂತ್ರಿಗಳಿಗೆ ಆಪ್ತನೂ ಆಗಿದ್ದ. ಚೈನಾದೇಶಕ್ಕೂ ಹೋಗಿ ಬಂದಿದ್ದ. ಸಮಾಜವಾದದ ಮೇಲೆ ಒಂದು ಪುಸ್ತಕವನ್ನೂ ಬರೆದಿದ್ದ. ಅವನಿಗೆ ಅಧಿಕಾರ ಬೆಂಬಲ ಇತ್ತು. ಸಾಂಪ್ರದಾಯಿಕ ಗರ್ವ ಇತ್ತು. ಅಹಂಕಾರವೂ ಇತ್ತು. ತಾನು ಉಚ್ಚ ಜಾತಿಯವನು ; ತನ್ನ ಗೇಣಿದಾರರು ಕಡಿಮೆ ಜಾತಿಯವರು ಎನ್ನುವ ತಿರಸ್ಕಾರ ಮನೋಭಾವವು ಚೆನ್ನಾಗಿಯೇ ಇತ್ತು.

ತಾನು ಹೇಳುತ್ತಿರುವುದು ಅನ್ಯಾಯ ಎಂಬ ಪರಿಜ್ಞಾನವಾದರೂ ಇನ್ನು ಅವನಿಗೆ ಹೇಗೆ ಬರುತ್ತದೆ ? ತನ್ನ 'ಫರ್ಮಾನ್' ನಂತೆ ಗೇಣಿದಾರರು ಕಾಳು ಕೊಡಲು ಒಪ್ಪದೇ ಹೋದಾಗ ಅವನು ''ಇನ್ನು ಮುಂದೆ ನನ್ನ ಜಮೀನಿಗೆ ಕಾಲಿಡಬೇಡಿ ! ನಾನು ಬೇರೆ ಜನರಿಂದ ಜಮೀನಿನ ಸಾಗುವಳಿ ಮಾಡಿಸಿಕೊಳ್ಳುತ್ತೇನೆ. ಅಲ್ಲಿಗೆ ಕಾಲಿಟ್ಟೀರಿ ಜೋಕೆ !'' ಎಂದು ಎಚ್ಚರಿಸಿಬಿಟ್ಟ.

ಆದರೆ ಪ್ರಕೃತಿ ಚಕ್ರ ನಿಲ್ಲುತ್ತದೆಯೇ ! ೧೯೫೧ನೇ ವರ್ಷದ ಮಳೆಗಾಲ ಬಂತು. ಗೇಣಿದಾರರು ಜಮೀನು ಉಳಲು ಹೋದರು. ಸರ್ಕಾರದ ಬೆಂಬಲವಿದ್ದ ಜಮೀನ್ದಾರ, ಪೊಲೀಸ್ ನೆರವು ಪಡೆದ, ಗೂಂಡಾ ಪಡೆ ಕಟ್ಟಿದ. ಇತರ ಜಮೀನ್ದಾರರಿಂದ ಹಣ ಸಂಗ್ರಹಿಸಿ 'ರಣನಿಧಿ' ಕೂಡಿಸಿದ. ತಮ್ಮ ಸಾಂಪ್ರದಾಯಿಕ ಗೇಣಿ ಹಕ್ಕನ್ನು ಚಲಾಯಿಸಿ ಜಮೀನು ಉಳಲು ಹೋದ ಗೇಣಿದಾರರನ್ನು ಬೈಸಿದ, ಹೊಡೆಸಿದ, ಜೈಲಿಗೆ ಹಾಕಿಸಿದ. ಅವರ ಗುಡಿಸಲುಗಳಿಗೆ ನುಗ್ಗಿಸಿ ಹೊಡೆಸಿದ. ಅವರ ನೊಗ ನೇಗಿಲುಗಳನ್ನು ಕಡಿಸಿ ಎಸೆದ. ಅವರ ಎತ್ತುಗಳನ್ನೂ, ಅವರನ್ನೂ ನಿರ್ದಯತೆಯಿಂದ ಹೊಡೆಸಿ, ಅವರು ಹಳ್ಳಿಯ ಗಡಿ ಬಿಟ್ಟೋಡುವವರೆಗೂ ಅಟ್ಟಿದ. ಭಯಾನಕ ವಾತಾವರಣ ಅಲ್ಲಿ ಸೃಷ್ಟಿಯಾಯಿತು. ಗೇಣಿದಾರರು ಭೂಮಿಯ ಬಳಿಗೆ ಹೋಗುತ್ತಿದ್ದಂತೆಯೇ ಬೈಗುಳ, ಹೊಡೆತ, ಬಂಧನ, ಹೇಳತೀರದ ದೌರ್ಜನ್ಯ ಪ್ರಾರಂಭವಾಯಿತು. ಅಲ್ಲಿ ಒಮ್ಮೆಗೇ ಪೋಲೀಸ್ ರಾಜ್ಯ ಸೃಷ್ಟಿಯಾಯಿತು. ಬೆಳಗಾದರೆ ಸಾಕು ಇಪ್ಪತ್ತು ಮೂವತ್ತು ಜನರ ಮೇಲೆ ಆಕ್ರಮ ಕೂಟ, ಅಕ್ರಮ ಪ್ರವೇಶ, ದೊಂಬಿ,

ಸರ್ಕಾರೀ ನೌಕರರಿಗೆ ಜಖಂ, ಹಲ್ಲೆ, ಕಾನೂನು ರೀತ್ಯದ ಸರ್ಕಾರಿ ಕ್ರಮಗಳಿಗೆ ಅಡ್ಡಿ, ಸಾಕ್ಷ್ಯಾಧಾರಗಳ ನಾಶ ಮೊದಲಾದ ಆಪಾದನೆಗಳನ್ನು ಹೊರಿಸಿ ಬಂಧಿಸಲಾಗುತ್ತಿತ್ತು.

ಭತ್ತ ಸಾಗಿಸಿದ್ದು, ಕಳ್ಳಭಟ್ಟಿ ಗಾಂಜಾ ನೆಟ್ಟಿದ್ದು, ಚಿಲ್ಲರೆ ಕಳ್ಳತನ, ವ್ಯಭಿಚಾರ, ಲಾರಿ ಓವರ್‌ಲೋಡ್ ಮಾಡಿದ್ದು, ಲೈಸನ್ಸ್ ಇಲ್ಲದೆ ಹೋಟೆಲ್ ನಡೆಸಿದ್ದು ಮೊದಲಾದ ೧೫೦೦ಕ್ಕೂ ಹೆಚ್ಚು ಕ್ರಿಮಿನಲ್ ಆಪಾದನೆ ಮತ್ತು ಕೇಸುಗಳನ್ನು ಗೇಣಿದಾರರು ಮತ್ತು ಅವರ ಕುಟುಂಬಗಳ ಮೇಲೆ ಹೊರಿಸಿ, ಅವರನ್ನುದಸ್ತಗಿರಿ, ವಿಚಾರಣೆ, ದಾಳಿ ಮುಂತಾದ ಕಷ್ಟನಷ್ಟಗಳಿಗೆ ದೂಡಲಾಯಿತು.

ಈ ಆಪಾದನೆಗಳ ಅರ್ಥ ಸಹ ತಿಳಿಯದ ಮುಗ್ಧ ಗೇಣಿದಾರರನ್ನು ದಿನವೂ ಬಂಧಿಸಿ, ಹೊಡೆದು -ಬಡಿದು, ಜೈಲಿಗೆ ದೂಡುತ್ತಿದ್ದರು. ಕ್ರೌರ್ಯದ ಬೀಡಾಯ್ತು ಕಾಗೋಡು, ನಿರ್ದಯದ ನಾಡಾಯ್ತು ಕಾಗೋಡು. ಇದೆಲ್ಲಾ ಆದದ್ದು ಜಮೀನ್ದಾರರ ಕೃಪೆಯಿಂದ !

ಆದರೂ ಸಹ ಅಲ್ಲಿನ ಜಮೀನುದಾರ 'ದಯಾಮಯ ಯಜಮಾನತನ ತನ್ನದು' ಎಂದೇ ಹೇಳುತ್ತಿದ್ದ ! ಅದನ್ನೇ ಸರ್ಕಾರವೂ ಹೇಳುತ್ತಿತ್ತು ! ಅದನ್ನೇ ಪತ್ರಿಕೆಗಳೂ ವರದಿ ಮಾಡುತ್ತಿದ್ದವು ! ಈ ರೀತಿ ಸದ್ದುಗದ್ದಲವಿಲ್ಲದೆ ಕ್ರೌರ್ಯ ವಿಜೃಂಭಿಸುತ್ತಿದ್ದಾಗ ನಾನು ನನ್ನ ತಂಡದೊಂದಿಗೆ ಅಲ್ಲಿಗೆ ಹೋದೆ.

ಆಗ ೨೦ ವರ್ಷದ ತರುಣನಾಗಿದ್ದ ನಾನು ಬೆಂಗಳೂರಿನ ಸೆಂಟ್ರಲ್ ಕಾಲೇಜನಿಲ್ಲಿ ಬಿ.ಎಸ್ಸಿ., ಪದವಿಯ ವಿದ್ಯಾರ್ಥಿಯಾಗಿದ್ದೆ. ನೇತಾಜಿ, ಜೈಪ್ರಕಾಶ್, ಲೋಹಿಯಾ, ಅರುಣಾ ಅಸಫ್ ಅಲಿ, ಯೂಸುಫ್ ಮೆಹರಾಲಿ ಮೊದಲಾದ ಕ್ರಾಂತಿಕಾರೀ ನಾಯಕರು ನನ್ನ ಆರಾಧ್ಯದೈವಗಳಾಗಿದ್ದರು. ಚೀನದ ಮಾವೋತ್ಸೆತುಂಗ, ಚೌ-ಎನ್-ಲಾಯ್, ಘೂ-ಥೇ ಮೊದಲಾದವರು ವಿದೇಶಿ ಮಹಾ ಪುರುಷರುಗಳಾಗಿದ್ದರು. ಸ್ಟಾಲಿನ್, ಲೆನಿನ್‌ರವರಂತೂ ಹೊಸ ಜಗತ್ತನ್ನು ನಿರ್ಮಿಸಿದ, ದೇವರಿಂದಲೂ ಸಾಧ್ಯವಾಗದೆ ಇದ್ದ ಮಹತ್ಕಾರ್ಯಗಳಾದ ಬಡತನ, ಅಜ್ಞಾನ, ರೋಗರುಜಿನ ನಿವಾರಣೆ ಮಾಡಿದ್ದ ಜೀವಂತ ದೇವರುಗಳೇ ಆಗಿದ್ದರು. ಆಗ ನಾನು ಅನೇಕ ತರುಣ ವಿದ್ಯಾರ್ಥಿಗಳಂತೆ ಕಾಂಗ್ರೆಸ್ ಸಮಾಜವಾದೀ ಪಕ್ಷದ ಸದಸ್ಯನಾಗಿದ್ದೆ. ಬಳೇಪೇಟೆಯ ಮೂರನೆಯ ಮಹಡಿಯಲ್ಲಿ ಹರಕು ಚಾಪೆಯ ಮೇಲೆ ಒಬ್ಬ ಇಳಿವಯಸ್ಸಿನ ಬ್ರಿಟಿಷ್ ಬುದ್ಧಿಜೀವಿ ಫಿಲಿಪ್‌ಸ್ಪ್ರಾಟ್ ನಡೆಸುತ್ತಿದ್ದ ವ್ಯಾಸಂಗ ಗೋಷ್ಠಿಯ ಪ್ರಪ್ರಥಮ ವಿದ್ಯಾರ್ಥಿಯಾಗಿದ್ದೆ. ಜಯಪ್ರಕಾಶ ನಾರಾಯಣರ ಸಂಪಾದಕತ್ವದಲ್ಲಿ ಬರುತ್ತಿದ್ದ ನಾಲ್ಕು ಆಣೆ ಬೆಲೆಯ 'ಜನತಾ' ಎಂಬ ವಾರಪತ್ರಿಕೆಯನ್ನು ಬಳೇಪೇಟೆ ಚೌಕದಿಂದ ಮೆಜೆಸ್ಟಿಕ್ ಚೌಕದವರೆಗೆ, ಮೈಸೂರು

ಬ್ಯಾಂಕ್ ವೃತ್ತದವರೆಗೆ, ''ಜನತಾ!...... ಜನತಾ!'' ಎಂದು ಹೆಮ್ಮೆಯಿಂದ ಕೂಗಿ ಮಾರುತ್ತಿದ್ದೆ. ನನ್ನಂತೆಯೇ ಹತ್ತಾರು ಉತ್ಸಾಹೀ ಕಾಲೇಜ್ ವಿದ್ಯಾರ್ಥಿಗಳು ಇದೇ ಬಗೆಯ ಜೀವನ ನಡೆಸುತ್ತಿದ್ದರು. ಪುಟ್‌ಪಾತಿನಲ್ಲಿ ತಯಾರಾಗುವ ವಡೆ ಬಜ್ಜಿಗಳನ್ನು ತಿಂದು, ಹೋಟೆಲ್‌ಗಳಲ್ಲಿ ಟೀ-ಕಾಫಿ ಕುಡಿದು, ಗಂಟೆ - ಗಂಟೆಗಟ್ಟಲೆ ಗುಂಪು - ಗುಂಪಾಗಿ ರಸ್ತೆ ಬದಿಗಳಲ್ಲಿ ನಿಂತು ಹೊಸ ಜಗತ್ತನ್ನು ನಿರ್ಮಿಸುವ ಕನಸು ಕಾಣುತ್ತಿದ್ದೆವು. ಮಾಕ್ಸಿಂ ಗಾರ್ಕಿಯ 'ಮದರ್' ; ಜೇಮ್ಸ್‌ಜಾಯ್ಸನ 'ಯೂಲೈಸಿಸ್', ಡಿ.ಹೆಚ್. ಲಾರೆನ್ಸ್‌ನ 'ಲೇಡಿ ಛಾಟರ್‌ಲೀಸ್ ಲೋವರ್', ಝೋಲಾರ 'ನಾನಾ' , ದಾಸ್ಟೋವಸ್ಕಿಯ 'ಕ್ರೈಮ್ ಅಂಡ್ ಪನಿಷ್‌ಮೆಂಟ್' ಮೊದಲಾದ ಕಾದಂಬರಿಗಳು; ಅಡಿಗ, ಬೇಂದ್ರೆ ಇವರ ಕಾವ್ಯಗಳು ; ಸ್ಟೀಪನ್ ಸ್ಪೆಂಡರ್ ಮತ್ತು ಜಾನ್‌ಲ್ಹೆಮಾನ್‌ಇವರ ವಿಚಾರಪೂರಿತ ಲೇಖನಗಳು ಇವುಗಳೆಲ್ಲಾ ಅಲ್ಲಿನ ಚರ್ಚೆ ವಾಗ್ಯುದ್ಧಗಳ ಗ್ರಾಸವಾಗಿರುತ್ತಿತ್ತು.

೧೯೫೧ನೇ ಜೂನ್ ತಿಂಗಳಲ್ಲಿ ಇಂಥದೊಂದು ಸಂಜೆಯ ಮಿತ್ರಮೇಳದಲ್ಲಿ ಮಲೆನಾಡಿನ ಒಂದು ಮೂಲೆಯಲ್ಲಿ ರೈತರ ಅಹಿಂಸಾತ್ಮಕ ಚಳುವಳಿಗೆ ಬಂದಿದ್ದ ಡಾ|| ರಾಂ ಮನೋಹರ್ ಲೋಹಿಯಾರವರ ದಸ್ತಗಿರಿಯಾಗಿರುವುದು ತಿಳಿಯಿತು. ಇನ್ನು ಕೇಳಬೇಕೆ ? ಅವರ ಹೋರಾಟವೇ ನಮ್ಮ ಹೋರಾಟವಾಯಿತು.

ಬೆಂಗಳೂರಿನ ವಿದ್ಯಾರ್ಥಿ ಕಾರ್ಮಿಕ ತಂಡ ಸಭೆ ಸೇರಿ, ಕಾಗೋಡಿಗೆ ಹೋಗಲು ನಿರ್ಧರಿಸಿತು. ಅದಕ್ಕೆ ಇಬ್ಬರು ಮಹನೀಯರು ನಾಯಕರುಗಳಾದರು. ಒಬ್ಬರು ದಂತ ವೈದ್ಯರು. ಇನ್ನೊಬ್ಬರು ಜರಿಪೇಟದ ವಕೀಲರು. ಶ್ರೀರಾಮಚಂದ್ರನ್ ಎಂಬ ಕಾರ್ಮಿಕ ನಾಯಕರು ಹತ್ತಾರು ಕಾರ್ಮಿಕರ ತಂಡದೊಡನೆ ನಮ್ಮನ್ನು ಸೇರಿ ಕೊಂಡರು. ಕೆ.ಜಿ.ಎಫ್. ದಿಂದ ಶ್ರೀಸ್ವಾಮಿನಾಥನ್ ಎನ್ನುವ ಕಾರ್ಮಿಕರ ನಾಯಕರು ಕೆಲವು ಕಾರ್ಮಿಕ ಕಾಮ್ರೇಡ್‌ಗಳೊಡನೆ ಜೊತೆಗೆ ಬಂದರು. ನಮ್ಮನ್ನು ಬೀಳ್ಕೊಡಲು ಒಂದು ದೊಡ್ಡ ಯುವಜನ ಸಮೂಹವೇ ರೈಲ್ವೇ ನಿಲ್ದಾಣಕ್ಕೆ ಬಂದಿತ್ತು. ಡಾಕ್ಟರ್ ಸಾಹೇಬರೂ, ವಕೀಲ ಸಾಹೇಬರೂ ಅಂಬರವನ್ನು ಗುಡುಗಿಸುವ, ಭೂ ಮಂಡಲವನ್ನು ನಡುಗಿಸುವ ಉಗ್ರಭಾಷಣಗಳನ್ನು ಮಾಡಿದರು.

ನಿಲ್ದಾಣದಲ್ಲಿ ಬೀಳ್ಕೊಡಲು ಬಂದ್ದಿದವರು ಅಷ್ಟೇ ಉಗ್ರವಾದ ಘೋಷಣೆ ಗಳನ್ನು ಹಾಕಿದರು. ಇಡೀ ರೈಲ್ವೆ ನಿಲ್ದಾಣದ ಜನ ಇದೇನಪ್ಪ ಈ ವೀರಾವೇಶ! ಏನಾದರೂ ಬೇರೊಂದು ದೇಶವನ್ನು ಗೆಲ್ಲಲು ಇವರು ಹೊರಟಿದ್ದಾರೋ ಎಂದು ಸೋಜಿಗದಿಂದ ನೋಡುತ್ತಿರುವಂತೆ, ರೈಲು ಸೀಟಿ ಹಾಕಿ ನಿಲ್ದಾಣದಿಂದ ಶಿವಮೊಗ್ಗ ಅಭಿಮುಖವಾಗಿ ಕಗ್ಗತ್ತಲ ರಾತ್ರಿಯನ್ನು ಸೀಳುತ್ತಾ ಮುನ್ನುಗ್ಗಿತು.

ಬೆಳಕು ಹರಿಯುವ ವೇಳೆಗೆ ನಾವು ಭದ್ರಾವತಿಯಲ್ಲಿದ್ದೆವು. ಯಾರೋ ಒಬ್ಬ ನಿಗೂಢ ವ್ಯಕ್ತಿ ನಮ್ಮ ಕಂಪಾರ್ಟ್‌ಮೆಂಟನ್ನು ಹತ್ತಿ ನಮ್ಮನ್ನು ನಿರೀಕ್ಷೆಯ ಕಣ್ಣುಗಳಿಂದ ನೋಡತೊಡಗಿದನು. ತಲೆಗೆ ಮಫ್ಲರ್ ಸುತ್ತಿದ್ದ ಆತ ಭದ್ರಾವತಿಯ ಒಬ್ಬ ಕಾಮ್ರೇಡ್ ಅಲ್ಲದೆ ಬೇರೆ ಯಾರೂ ಆಗಿರಲಿಲ್ಲ. ಅವನು ಪಿಸುಮಾತಿನಲ್ಲಿ ತಿಳಿಸಿದ ಸಂದೇಶ ಇಷ್ಟೇ. ''ಸತ್ಯಾಗ್ರಹ ಮಾಡಲು ಬರುತ್ತಿರುವ ಸತ್ಯಾಗ್ರಹಿಗಳನ್ನು ಪೋಲೀಸರು ದಸ್ತಗಿರಿ ಮಾಡುತ್ತಿದ್ದಾರೆ. ಬಸ್ಸು ರೈಲ್ವೆ ನಿಲ್ದಾಣಗಳಲ್ಲಿ ಗೂಢಚಾರರ ದಂಡೇ ಇದೆ. ಶಿವಮೊಗ್ಗದ ಸುತ್ತ ಗುಪ್ತಚಾರರ ಚಕ್ರವ್ಯೂಹವೇ ಇದೆ. ಸ್ವಲ್ಪ ಸುಳಿವು ತೋರಿಸಿ ಕೊಂಡರೂ ಸಾಕು, ಸತ್ಯಾಗ್ರಹಕ್ಕೆ ನುಗ್ಗುವ ಯುವಕರ ದಸ್ತಗಿರಿ ನಡೆದುಹೋಗುತ್ತೆ. ಆದ್ದರಿಂದ ಒಬ್ಬೊಬ್ಬರಾಗಿ ಅತ್ತ ಕಡೆಯಿಂದ, ಇತ್ತ ಕಡೆಯಿಂದ, ಆಗೊಬ್ಬರು, ಈಗೊಬ್ಬರಂತೆ ನಗರ ಪ್ರವೇಶ ಮಾಡಿ. ಎಲ್ಲರೂ ಒಟ್ಟಿಗೇ ಒಂದೇ ಕಡೆ ಇರಬೇಡಿ. ನಮ್ಮಲ್ಲೊಬ್ಬ ನಾಯಕ ಮಾತ್ರ ದುರ್ಗಿ ಗುಡಿಯಲ್ಲಿರುವ ಮಾರುತಿ ಪ್ರೆಸ್ ಮಹಡಿಗೆ ಹೋಗಲಿ. ಅಲ್ಲಿ ರಾಜಗೋಪಾಲ್ ಎಂಬ ಯಜಮಾನರು ಇರುತ್ತಾರೆ. ಅವರು ಉಳಿದೆಲ್ಲಾ ವಿಚಾರ ತಿಳಿಸುತ್ತಾರೆ'' ಎಂದು ಸುದ್ದಿ ಮುಟ್ಟಿಸಿದ.

ಈ ಎಚ್ಚರಿಕೆಯ ಪ್ರಕಾರ, ಎಲ್ಲರೂ ತುಂಗಾನದಿಯ ಆಚೆಗೆ ಇರುವ ಪಿಳ್ಳಂಗಿರಿ ಎಂಬ ಗುಡ್ಡದ ಯಾತ್ರಿಕರಂತೆ ಹಳೇ ನಿಲ್ದಾಣದಲ್ಲೇ ಇಳಿದು, ಅಲ್ಲೇ ಯಾತ್ರಾರ್ಥಿಗಳಂತೆ ಇದ್ದೆವು. ನಾನು ಮತ್ತು ಸ್ವಾಮಿನಾಥನ್ ಎಂಬ ಚುರುಕು ಕಾರ್ಮಿಕ ನಾಯಕ ಶಿವಮೊಗ್ಗ ಪ್ರವೇಶಿಸಿ, ದುರ್ಗಿ ಗುಡಿಯಲ್ಲಿದ್ದ ಮಾರುತಿ ಪ್ರೆಸ್‌ಗೆ ಹೋದೆವು. ಅಲ್ಲಿಗೆ ಹೋಗಿ ಬರುವ ಮಾರ್ಗ ತಿಳಿದ ಬಳಿಕ ನಾನು ಮತ್ತೆ ಸಂಪರ್ಕ ಮಾಡುವವರೆಗೂ ಹಳೇ ಶಿವಮೊಗ್ಗದಲ್ಲೇ ಅವರೆಲ್ಲರೂ ಇರಬೇಕೆಂದು ತಿಳಿಸಿ ಸ್ವಾಮಿನಾಥನ್ ಅನ್ನು ಅಲ್ಲಿಂದ ಬೀಳ್ಕೊಟ್ಟೆ.

ಮಾರುತಿ ಪ್ರೆಸ್ ಎಂಬ ಹಳೆಯ ಮಾದರಿಯ ಪ್ರಿಂಟಿಂಗ್ ಪ್ರೆಸ್ ರಾಜ ಗೋಪಾಲಾಚಾರ್ (ಈ ಮಹನೀಯರು ಜ್ಞಾನಪೀಠ ಪ್ರಶಸ್ತಿ ವಿಜೇತ ಪದ್ಮಭೂಷಣ ಶ್ರೀ ಯು.ಆರ್. ಅನಂತಮೂರ್ತಿಯವರ ಪಿತಾಮಹರು) ಎನ್ನುವವರಿಗೆ ಸೇರಿತ್ತು. ಅವರ ಪ್ರೆಸ್ ಕೆಳಗಡೆ ಇದ್ದರೆ, ಅದರ ಅಟ್ಟದ ಮೇಲೆ ಕೆಲವರು ಸೇರಿದ್ದರು. ಸತ್ಯಾಗ್ರಹದ ಬಗೆಗೆ ಸುದ್ದಿ ಸಮಾಚಾರಗಳು, ಅಲ್ಲಿಗೆ ಹೇಗೋ ಬರುತ್ತಿದ್ದವು. ಪ್ರತಿಯೊಬ್ಬರೂ ತಮ್ಮ ನಿಗದಿತ ಕೆಲಸ ಕಾರ್ಯಗಳಿಗೆ ತೆರಳುತ್ತಿದ್ದರು. ಸಂಬಂಧಪಟ್ಟ ಜನರು ಎಲ್ಲಿದ್ದಾರೆ ? ಏನು ಮಾಡುತ್ತಿದ್ದಾರೆ ? ಏನನ್ನು ಮಾಡಬೇಕು? ಎನ್ನುವ ವಿಚಾರಗಳನ್ನು ಅರಿತುಕೊಳ್ಳಲು ಅದೊಂದು ಕೇಂದ್ರ ಕಾರ್ಯಾಗಾರವಾಗಿತ್ತು. ಡಾ|| ರಾಮಮನೋಹರ ಲೋಹಿಯಾ ಶಿವಮೊಗ್ಗದಲ್ಲಿ ಇರಲಿಲ್ಲ. ಶ್ರೀ ಸಿ.ಜಿ. ಕೆ. ರೆಡ್ಡಿ, ಖಾದ್ರಿ ಶಾಮಣ್ಣ ಮೊದಲಾದವರು ಮೆಗ್ಗಾನ್ ಆಸ್ಪತ್ರೆಯಲ್ಲಿ ಪೋಲೀಸ್ ಕಸ್ಟಡಿಯಲ್ಲಿ

ಇದ್ದರು. ನೂರಾರು ರೈತರು ಸೆರೆಮನೆಯಲ್ಲಿದ್ದರು. ಇವರೆಲ್ಲರನ್ನೂ ನಾನು ಭೇಟಿ ಮಾಡಿ ಪರಿಸ್ಥಿತಿ ತಿಳಿದು ಬಂದೆ.

ಸತ್ಯಾಗ್ರಹ ತತ್ತರಿಸಿ ನಿಂತು ಹೋಗಿತ್ತು. ಸರ್ಕಾರ ಡಾ|| ಲೋಹಿಯಾ ಅವರನ್ನು ಬಿಡುಗಡೆ ಮಾಡಿತ್ತು. ಅವರು ಅಮೇರಿಕಾಕ್ಕೆ ಹಾರಿದ್ದರು. ಇತ್ತ ರೈತ ಸತ್ಯಾಗ್ರಹಿಗಳ ಮೇಲೆ ಪೋಲೀಸರ ದಬ್ಬಾಳಿಕೆ, ಹಿಂಸೆ ಹೆಚ್ಚಿತ್ತು. ಭಯದ ವಾತಾವರಣವನ್ನು ಅವರು ಅಲ್ಲಿ ನಿರ್ಮಿಸಿದ್ದರು. ಸಾಗರದ ಗಂಧದ ಕೋಠಿಯ ಜೈಲುಗಳು ಭರ್ತಿಯಾಗಿದ್ದುದರಿಂದ, ಕಾಗೋಡಿನಲ್ಲಿ ಸತ್ಯಾಗ್ರಹ ಮಾಡಲು ಯಾರೇ ಬರಲಿ, ಅವರನ್ನು ಕ್ರೂರವಾಗಿ ಥಳಿಸುವುದು ; ಪೋಲೀಸ್ ವ್ಯಾನಿಗೆ ಕುರಿಗಳಂತೆ ತುಂಬಿಕೊಂಡು ಹೋಗಿ, ದೂರದ ಕಾಡುಗಳಲ್ಲಿ ಅವರನ್ನು ಮನಸೋ ಇಚ್ಛೆ ಚಚ್ಚಿ ಅಲ್ಲೇ ಬಿಟ್ಟು ಬರುವುದು ; ಇಷ್ಟನ್ನು ಪೋಲೀಸರು ಪೂರ್ವಯೋಜಿತವಾಗಿ ಮಾಡುತ್ತಿದ್ದರು. ಜಮೀನುದಾರರ ಗೂಂಡಾ ಪಡೆಯ ಪಾತ್ರ, ಪೋಲೀಸರ ಪಾತ್ರಕ್ಕಿಂತಲೂ ಅಧಿಕವಾಗಿತ್ತು. ರೈತರು ಮತ್ತು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದವರು, ಅವರಿಗೆ ಹೆದರುವಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. ದಾವಣಗೆರೆಯ ಹುಡುಗರಿಗೆ ಅತ್ಯಂತ ಕ್ರೂರವಾಗಿ ಥಳಿಸಿದ್ದರು. ಅವರಲ್ಲೊಬ್ಬನಾಗಿದ್ದ ರೇವಣಸಿದ್ಧಪ್ಪ ಎಂಬ ಯುವಕನಿಗೆ ಕರುಳು ಹೊರಕ್ಕೆ ಬರುವಂತೆ ಹೊಡೆದಿದ್ದರು. ಅವನು ಸಾವು ಬದುಕಿನ ನಡುವೆ ಆಸ್ಪತ್ರೆಯಲ್ಲಿದ್ದ. ಇದೆಲ್ಲವನ್ನೂ ನೋಡಿ ಬಂದ ಬಳಿಕ ದೊಡ್ಡ ವೀರಾಗ್ರಣಿಗಳಂತೆ ನಮ್ಮೊಡನೆ ಬೆಂಗಳೂರಿನಿಂದ ಜೊತೆಗೆ ಬಂದಿದ್ದ ಇಬ್ಬರು ವೃತ್ತಿ ರಾಜಕಾರಣಿಗಳೂ ತಮಗೆ ಟೆಲಿಗ್ರಾಂ ಬಂದಿವೆ. ತುರ್ತಾಗಿ ಹಿಂತಿರುಗಬೇಕಾಗಿದೆ ಎಂದು ಹೇಳಿ, ಹಲ್ಲು ಕಿರಿದು, ಕೈ ಮುಗಿದು ಅಲ್ಲಿಂದ ಸುರಕ್ಷಿತ ಸ್ಥಳಕ್ಕೆ ಕಂಬಿ ಕಿತ್ತರು! ವಿದ್ಯಾರ್ಥಿಗಳಿಗೆ, ಯುವಕರಿಗೆ ಕೆಲವು ರಾಜಕಾರಣಿಗಳು ಇದೇ ರೀತಿ ಹುರಿದುಂಬಿಸಿ ಮುಂದಕ್ಕೆ ತಳ್ಳಿ, ತಾವು ಹಿಂದೆ ಉಳಿದು ಫಲಿತಾಂಶಕ್ಕಾಗಿ ಕಾಯುವುದು ಸಾಮಾನ್ಯ ನಡವಳಿಕೆಯೇ ಆಗಿದೆ. ಆದರೆ ಇದು ಅಂದು ನನಗೆ ಆದ ಮೊದಲ ಅನುಭವ.

ಕಾಗೋಡು ನಿಶ್ಚೇಷ್ಠಿತವಾಗಿದೆ. ಅಲ್ಲಿ ಯಾವ ಚಳುವಳಿಯೂ ನಡೆಯುತ್ತಿಲ್ಲ ಎಲ್ಲವೂ ಶಾಂತವಾಗಿದೆ. ಗಲಭೆ ನಡೆಸಿದ್ದ ಕೆಲವು ಪುಂಡರು ಮಾತ್ರ ಜೈಲಿನಲ್ಲಿದ್ದಾರೆ. ಉಳಿದವರೆಲ್ಲಾ ಡಾ|| ಲೋಹಿಯಾರವರಂತೆ ಬಿಡುಗಡೆಯಾಗಿದ್ದಾರೆ. ಕಾಗೋಡು ಸತ್ಯಾಗ್ರಹ ನಿಂತು ಹೋಗಿದೆ. ಎಲ್ಲಾ ಶಾಂತವಾಗಿದೆ ಎನ್ನುವ ಸುಳ್ಳು ಸಮಾಚಾರವೇ ಪತ್ರಿಕೆಗಳಲ್ಲಿ ಬರುತ್ತಿತ್ತು. ಸರ್ಕಾರದ, ಜಮೀನ್ದಾರರ ಹುನ್ನಾರವೇ ಇದಾಗಿತ್ತು. ಹೀಗಿರುವಾಗ ಅಲ್ಲಿನ ನಿಜ ಪರಿಸ್ಥಿತಿ ಅರಿಯಲು, ಕರ್ನಾಟಕ ಪತ್ರಕರ್ತರ ಒಂದು ಪ್ರಾತಿನಿಧಿಕ ತಂಡದೊಡನೆ , ಆಗ ಮೈಸೂರು ಸಂಸ್ಥಾನದ ಕಾಂಗ್ರೆಸ್ ಅಧ್ಯಕ್ಷರಾಗಿದ್ದ

ಶ್ರೀ ಕೆ. ಹನುಮಂತಯ್ಯನವರು ಕಾಗೋಡು ಗ್ರಾಮಕ್ಕೆ ೨೬-೬-೧೯೫೧ರಂದು ಭೇಟಿ ನೀಡುತ್ತಾರೆಂಬ ಸುಳಿವು ನಮಗೆ ದೊರೆಯಿತು.

ಸರ್ಕಾರದ ಅಪಪ್ರಚಾರವನ್ನು ಸುಳ್ಳು ಎಂದು ಇಡೀ ಜಗತ್ತಿಗೆ ಎತ್ತಿ ತೋರಿಸಲು ಇದಕ್ಕಿಂತ ಉತ್ತಮ ಅವಕಾಶ ಇನ್ನೊಂದು ಇರಲಿಲ್ಲ. ಅಂದು ೧೮-೪-೧೯೫೧ರಂದು ಸತ್ಯಾಗ್ರಹ ಆರಂಭವಾದ ದಿನದಂದು ನಡೆದಂತೆ ; ಸಹಸ್ರಾರು ರೈತರು ತಂಡತಂಡವಾಗಿ ಬಂದು ಸತ್ಯಾಗ್ರಹ ಮಾಡುವಂತೆ ಏರ್ಪಡಿಸುವುದು ಎಲ್ಲರ ಮಹದಾಸೆ ಆಗಿತ್ತು. ಈ ಆಸೆಯ ಈಡೇರಿಕೆಗೆ ಕೆಲವು ದಿನಗಳು ಉಳಿದಿದ್ದವು.

ಆದುದರಿಂದ ರೈತರನ್ನು ಸತ್ಯಾಗ್ರಹಕ್ಕೆ ಪ್ರೇರೇಪಿಸಿ, ಹುರಿದುಂಬಿಸಿ, ಕಳಿಸುತ್ತಿದ್ದ ಜೈಲಿನ ಹೊರಗಿದ್ದ ಕೆಲವು ಕಾರ್ಯಕರ್ತರು ವಿಶೇಷವಾಗಿ ಶ್ರಮಿಸ ತೊಡಗಿದರು. ಇವರುಗಳಲ್ಲಿ ಶಾಂತವೇರಿ ಗೋಪಾಲಗೌಡರು, ಚಿತ್ರದುರ್ಗದ ಟಿ.ಎನ್. ಗಂಡುಗಲಿ, ಗರುಡಶರ್ಮ, ಬಾ.ಸು. ಕೃಷ್ಣಮೂರ್ತಿ, ಬರಸಿನ ದ್ಯಾವಪ್ಪ, ಮಂಡಗಡಲೆ ರಾಮ ನಾಯ್ಕ, ಹೆಚ್. ಗಣಪತಿಯಪ್ಪ, ಸವಾಜಿ ಬೀರನಾಯ್ಕ (ಇವರು ಶ್ರೀ ಕಾಗೋಡು ತಿಮ್ಮಪ್ಪನವರ ಪಿತಾಮಹರು) ಮರಿಯಪ್ಪ ಇವರುಗಳು ಪ್ರಮುಖರು. ಮಾಸ್ತಿಯಮ್ಮ ಮೊದಲಾದ ಹತ್ತಾರು ಸ್ತ್ರೀ ಕಟ್ಟಾಳುಗಳೂ ಇವರ ಜೊತೆಗಿದ್ದರು. ನನಗಿದ್ದ ಅಲ್ಪಕಾಲಾವಧಿಯಲ್ಲಿ ಇವರುಗಳನ್ನೆಲ್ಲಾ ಸಂಪರ್ಕಿಸುವುದು ಅಸಾಧ್ಯವೇ ಆಗಿತ್ತು. ಕಗ್ಗಾಡು, ಹರಿಯುವ ತೊರೆಗಳು, ಬೀಳುವ ಮಳೆ, ಪೋಲೀಸರ ಹದ್ದಿನ ಕಣ್ಣು, ಇವೆಲ್ಲವುಗಳನ್ನೂ ಎದುರಿಸಿ ಸಂಚಾರ ಮಾಡಬೇಕಾಗಿತ್ತು. ನಾನು ಮತ್ತು ನನ್ನ ತಂಡದವರಿಗೆ ೨೬-೬-೫೧ ದೊಡ್ಡ ದಿನ. ಅದರ ಹಿಂದಿನ ದಿನವೇ ಎಲ್ಲರೂ ಸಿದ್ಧರಾಗಿರಿ ಎಂದು ತಿಳಿಸಿ ಶಿವಮೊಗ್ಗಕ್ಕೆ ಹೋದಾಗ ಅಲ್ಲಿ ವಿಚಿತ್ರ ಪ್ರಸಂಗವೊಂದು ನಡೆಯಿತು.

ಆಗ ೫೦ ವರ್ಷಗಳ ಹಿಂದೆ, ಈಗಿರುವ ಗೋಪಿ ಸರ್ಕಲ್ ಇರಲಿಲ್ಲ. ಗೋಪಿ ಹೋಟೆಲ್ ಎಂಬ ಒಂದು ಸಣ್ಣ ಹೋಟೆಲ್ ಇತ್ತು. ಅವನು ರುಚಿ ರುಚಿಯಾದ ತಿಂಡಿ, ತಿನಿಸು, ಊಟ ಮತ್ತು ಬಗೆ ಬಗೆಯ ಐಸ್‌ಕ್ರೀಂ ಕೊಡುತ್ತಿದ್ದ. ಅಲ್ಲಿಗೆ ನಾನು ಮತ್ತು ಸ್ವಾಮಿನಾಥನ್ ಹೋದಾಗ ದಾವಣಗೆರೆಯ ಶಿವಾನಂದಸ್ವಾಮಿ ಸಿಕ್ಕಿದರು. ಈಗ ಅವರನ್ನು ನೋಡಿದವರು ಆಗ ೧೯೫೧ರಲ್ಲಿ ಅವರು ಹೇಗಿದ್ದರು ಎಂದು ಊಹಿಸಿಕೊಳ್ಳುವುದೂ ಕಷ್ಟ. ಆಗ ತಾನೇ ಇಂಟರ್ ನ್ಯಾಷನಲ್ ಲೇಬರ್ ಕಾನ್‌ಫರೆನ್ಸ್ ಪ್ರತಿನಿಧಿಯಾಗಿ ಪ್ಯಾರಿಸ್ ನಗರಕ್ಕೆ ಹೋಗಿ ಬಂದಿದ್ದರು. ಫುಲ್‌ಸ್ಯೂಟ್ ಧರಿಸಿ, ಕೊರಳಿಗೆ 'ಬೋ' ಟೈ ಕಟ್ಟಿದ್ದರು. ಕೈಗೆ ಫಾರೀನ್ ವಾಚ್ ಮತ್ತು ವಜ್ರದುಂಗುರಗಳನ್ನು ಧರಿಸಿದ್ದರು. ನುಣ್ಣಗೆ ಮುಖಕ್ಷೌರ ಮಾಡಿ, ನೀಟಾಗಿ ಕ್ರಾಪ್ ಬಾಚಿ, ಕುರ್ಚಿಯಲ್ಲಿ ವಿರಾಮವಾಗಿ ಒರಗಿ ಕುಳಿತಿದ್ದರು. ತಲೆಗೊಂದು ಹ್ಯಾಟ್ ಮತ್ತು ಬಾಯಲ್ಲೊಂದು

ಸಿಗಾರ್ ಕಚ್ಚಿದರೆ ಸಾಕು ; ಅವರು ಥೇಟ್ ಹಾಲಿವುಡ್ ಸಿನಿಮಾದ ಚಿಕಾಗೋ ಗ್ಯಾಂಗ್‌ಸ್ಟರ್ ಬಾಸ್ ಆಗಿಬಿಡುತ್ತಿದ್ದರರು ! ಹಂಫ್ರಿ ಬೋಗಾರ್ಟ್ ತರಹ !

ಅವರಿಗೆ ಅತ್ಯುತ್ಸಾಹದಿಂದ ನಾನು ನೋಡಿ, ಮಾಡಿ, ಬಂದ ಸಂಗತಿಗಳನ್ನೆಲ್ಲಾ ತಿಳಿಸಿ, ದಿನಾಂಕ ೨೬-೬-೫೧ರಂದು ನಮ್ಮ ಕಾರ್ಯಕ್ರಮವೇನೆಂಬುದನ್ನು ತಿಳಿಸಿದೆ. ಆದರೆ ಆತ ಇದಾವುದರಿಂದಲೂ ಕಿಂಚಿತ್ತೂ ಪ್ರಭಾವಿತನಾಗಲಿಲ್ಲ. ''ಇಲ್ಲ... ಅಂದು ನಾನು ನಿನ್ನೊಡನೆ ಬರೋಲ್ಲ ! '' ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು. ''ಏಕೆ ?'' ಎಂದು ನಾನು ಕೇಳಿದ್ದಕ್ಕೆ ಆತ ಆಸ್ಫೋಟಗೊಂಡರು. ನನ್ನನ್ನು ನಿಷ್ಠುರವಾಗಿ ನೋಡುತ್ತಾ ''ಏಕೆ ಎಂದರೆ, ನಿನ್ನಂಥ ಜನರು ಈ ಚಳುವಳಿಯನ್ನು ಹಾಳು ಮಾಡಿರುವುದಕ್ಕೆ.'' ಎಂದು ಪೂತ್ಕರಿಸಿದರು. ನನಗೆ ಆಶ್ಚರ್ಯವಾಯಿತು. ''ನಾನ್‌ಸೆನ್ಸ್ ! ನನಗೂ ಇದೆಲ್ಲಕ್ಕೂ ಏನ್ರಿ ಸಂಬಂಧ ? ನಾನು ಇಲ್ಲಿ ಇನ್ನೂ ಕಣ್ಣೇ ಬಿಟ್ಟಿಲ್ಲ ! ಈಗ ತಾನೇ ಇಲ್ಲಿಗೆ ಬಂದಿದ್ದೇನೆ.'' ಎನ್ನುತ್ತಿದ್ದಂತೆಯೇ ಆತ ಅನುನಯದಿಂದ ನನ್ನ ಕೈ ಮುಟ್ಟಿ ''ಸಾರಿ, ಎಕ್ಸ್‌ಕ್ಯೂಸ್ ಮಿ. ಇಲ್ಲಿ ಎಲ್ಲರೂ ನಡೆದುಕೊಳ್ತಿರೋ ರೀತಿ ನೋಡಿದರೆ, ನನ್ನ ಮೈ ಉರಿದುಹೋಗ್ತಿದೆ. ನಾನು ಕರ್ಕೊಂಬಂದಿರೋ ಅರವತ್ತು ಹುಡುಗರನ್ನ ದನಕ್ಕೆ ಚಚ್ಚಿದಂತೆ ಚಚ್ಚಿದ್ದಾರೆ. ನಮ್ಮ ನೆಚ್ಚಿನ ಶಿಷ್ಯ ರೇವಣಸಿದ್ದ ಸಾಯೋ ಸ್ಥಿತಿಯಲ್ಲಿದ್ದಾನೆ. ಪೊಲೀಸ್, ಗೂಂಡಾಗಳಿಂದ ರೈತರು ದನಗಳಂತೆ ಚಚ್ಚಿಸಿಕೊಂಡು , ಬೆದರಿ, ಹೆಂಡತಿ - ಮಕ್ಕಳು, ಮಡಿಕೆ-ಕುಡಿಕೆಗಳ ಜೊತೆಗೆ ಗುಡ್ಡ ಬಿದ್ದಿದ್ದಾರೆ. ದಿಕ್ಕಾಪಾಲಾಗಿದ್ದಾರೆ. ಕಾಗೋಡಿಗೆ ನುಗ್ಗಿ ಆ ಜಮೀನ್ದಾರನ ಮನೆಗೆ ಬೆಂಕಿ ಇಟ್ಟು ಅವನ ಇಡೀ ಸಂಸಾರವನ್ನು ಚಿತ್ರಹಿಂಸೆ ಕೊಟ್ಟು ಒಬ್ಬೊಬ್ಬರನ್ನೇ ಬಲಿ ಕೊಡೋಕೆ ಅವರು ಹಾತೊರೀತಿದ್ದಾರೆ. ಅವರನ್ನು ಜೊತೆಗೂಳಿಸಿ , ನಾನು ಈ ಪ್ರತೀಕಾರ ಮಾಡೇ ಮಾಡ್ತೀನಿ. ಮತ್ತೆ ಪೋಲೀಸಿನವರ ಲಾಠಿಗೆ ನನ್ನ ತಲೆ ಕೊಡೋಕೂ ಬರೋಲ್ಲ. ನಮ್ಮ ಹುಡುಗರನ್ನೂ ಕಳಿಸೊಲ್ಲ. ಆ ಕೆಲಸ ನೀವೇ ಮಾಡ್ಕೊಳ್ಳಿ. ನಾನು ಬರ್ತೀನೆ ಗುಡ್‌ಬೈ !'' ಎಂದು ತಮ್ಮ ಕುರ್ಚಿಯಿಂದ ಮೇಲೆದ್ದರು. ಅಲ್ಲಿ ಅವರ ಮತ್ತು ನನ್ನ ಮಾತುಗಳನ್ನು ಆಲಿಸುತ್ತಾ ಗುಂಪು ಸೇರಿದ್ದ ಯುವಜನರು ಸುಮ್ಮನಿದ್ದಾರೆ ! ಅಲ್ಲಿನ ಸಿಹಿಯಾದ ಐಸ್‌ಕ್ರಿಂ ಒಂದಾದ ಮೇಲೊಂದರಂತೆ ಸದ್ದಿಲ್ಲದೆ ಸವಿದಿದ್ದರು ! ಬಿಲ್ ಕೇವಲ ೧೦೦ ರೂಪಾಯಿಗಳಾಗಿದ್ದವು ! ''ಪರವಾಗಿಲ್ಲಯ್ಯ, ನೀವೂ !'' ಎನ್ನುತ್ತಾ ಶಿವನಂದಸ್ವಾಮಿ ನೂರು ರೂಪಾಯಿಗಳ ಒಂದು ಕಂತೆ ನೋಟು ಹೊರತೆಗೆದು , ಆ ಬಿಲ್ ಪಾವತಿ ಮಾಡಿ ಹೊರನಡೆದರು.

''ಸ್ವಲ್ಪಬನ್ನಿ.... ಒಬ್ಬರನ್ನು ಭೇಟಿ ಮಾಡಿಸುತ್ತೇನೆ'' ಎಂದು ಸ್ವಾಮಿನಾಥನ್ ನನ್ನನ್ನು ಪಕ್ಕಕ್ಕೆ ಕರೆದೊಯ್ದರು. ಅಲ್ಲಿ ಇನ್ನೊಬ್ಬ ವ್ಯಕ್ತಿ ಪ್ಯಾಂಟ್ ಷರಟ್ ಧರಿಸಿ ಕಾಲಿಗೆ ಚಪ್ಪಲಿ ಹಾಕಿ ನಿಂತಿದ್ದ.

''ಈತ ಪಳನಿ, ಇಲ್ಲೇ ಒಂದು ಕಡೆ ಡ್ರೈವರ್ ಆಗಿದ್ದಾನೆ. ಈತ ಕಾಗೋಡು, ಕಾನ್ಲೆ, ಸಾಗರ ಎಲ್ಲಾ ನೋಡಿದ್ದಾನೆ. ನಮ್ಮ ತಂಡದ ಜನರೆಲ್ಲರನ್ನೂ ಸರಿರಾತ್ರಿಯಲ್ಲಿ ಕಾಗೋಡಿಗೆ ಕರೆಯೊಯ್ಯುತ್ತಾನಂತೆ.''

''ಆತನ ಬಳಿ ಯಾವ ವಾಹನ ಇದೆ ? '' ಎಂದು ಕೇಳಿದೆ.

''ಹಳೇ ಫೋರ್ಡ್ ವ್ಯಾನ್‌ಸಾರ್, ಎ-ಓನ್ ಗಾಡಿ, ನಮ್ಮೆಲ್ಲರನ್ನೂ ಅಲ್ಲಿಗೆ ಸಾಗಿಸಲು ಸೂಕ್ತವಾಗಿದೆ. ಹಳ್ಳಕೊಳ್ಳಗಳನ್ನು ಬೆಟ್ಟ-ಗುಡ್ಡಗಳನ್ನು ಹತ್ತಿ -ಇಳಿಯುತ್ತದೆ. ನಾನು ಅದರಲ್ಲಿ ಓಡಾಡಿದ್ದೇನೆ'' ಎಂದು ಧೈರ್ಯವಾಗಿ ಹೇಳಿದ, ಸ್ವಾಮಿನಾಥನ್.

''ಸಂಜೆಗೆ ಇಲ್ಲಿಗೆ ತೆಗೆದುಕೊಂಡು ಬಾ ! ಇದನ್ನೇ ತೆಗೆದುಕೊಂಡು ಪಿಳ್ಳಂಗಿರಿ ದೇವಾಲಯಕ್ಕೆಹೋಗಿ, ಅಲ್ಲಿಂದಲೇ ಕಾಗೋಡಿಗೆ ಹೋಗೋಣ.'' ಮುಂದುವರಿಸಿ ''ಹಣದ ಪ್ರಶ್ನೆ ? ಏನು ವ್ಯವಸ್ಥೆ?'' ಎಂದು ನಾನು ಕೇಳಿದೆ.

ಆಗ ಸ್ವಾಮಿನಾಥನ್ ಹೇಳಿದ, ''ಅದನ್ನು ನನಗೆ ಬಿಡಿ ಸಾರ್, ನಾವಿಬ್ಬರೂ ಒಂದೇ ಊರಿನವರು. ಒಂದು ಡ್ರಾಪ್ ಕೊಡುತ್ತಾನೆ. ಅದು ನಮ್ಮ ಸತ್ಯಾಗ್ರಹಕ್ಕೆ ಅವನ ಕಾಣಿಕೆ'' ಎಂದ. ಆತ ಯಾರ ಡ್ರೈವರ್ ? ಎಂದು ವಿಚಾರಿಸಿದೆ. ಅವನು ಉತ್ತರ ಹೇಳಲಿಲ್ಲ. ಆನಂತರ ತಿಳಿದಾಗ ನಾನು ಮೂಗಿನ ಮಲೆ ಬೆರಳಿಟ್ಟುಕೊಂಡೆ. ಆತ ಉನ್ನತ ಜಿಲ್ಲಾ ಮಟ್ಟದ ಅಧಿಕಾರಿಯೊಬ್ಬರ ಡ್ರೈವರ್ ಆಗಿದ್ದ !

ವ್ಯಾನಿನ ವ್ಯವಸ್ಥೆಯೂ ಆಯಿತು. ಇನ್ನು ಸತ್ಯಾಗ್ರಹದ ವಿವರಗಳನ್ನು ಮಾರುತಿ ಪ್ರೆಸ್ಸಿನ ಕಾಮ್ರೇಡ್‌ಗಳಿಂದ ಪಡೆದು ಅಲ್ಲಿಂದ ನಾವು ಯಾರಿಗೂ ಕಾಣದಂತೆ ಅಂತರ್ಧಾನರಾದೆವು.

ಸತ್ಯಾಗ್ರಹ ನಡೆಯುತ್ತಿದ್ದ ಕಾಗೋಡು ಗ್ರಾಮದ ಸುತ್ತ ಪೋಲೀಸರು ಮತ್ತು ಗೂಂಡಾ ಪಡೆಯ ಸರ್ಪಕಾವಲನ್ನು ಹಾಕಲಾಗಿತ್ತು. ಆದ್ದರಿಂದ ನಾವು ಸದ್ದುಗದ್ದಲ ಗಳಿಲ್ಲದೆ ಅಲ್ಲಿಗೆ ನುಸುಳಿ ಹೋಗಿ ವಿವಿಧೆಡೆ ಅವಿತುಕೊಂಡು, ನಿರ್ಣಾಯಕ ಸಮಯದಲ್ಲಿ ಹೊರಬಂದು ಸತ್ಯಾಗ್ರಹ ಮಾಡಬೇಕಾಗಿತ್ತು. ಇಲ್ಲದಿದ್ದರೆ ನಮ್ಮ ಪಡೆ ಕಾರ್ಯಾಚರಣೆಗೆ ಇಳಿಯುವ ಮೊದಲೇ ಪೋಲೀಸ್ ಮತ್ತು ಪುಂಡರ ಕೈಗೆ ಸಿಕ್ಕಿಬಿದ್ದು ನಮ್ಮ ಕಾರ್ಯಾಚರಣೆಯ ಮೂಲ ಉದ್ದೇಶವೇ ನೆರವೇರದಂತೆ ಆಗಿ ಎಲ್ಲಾ ವಿಫಲವಾಗುತ್ತಿತ್ತು.

❊ ❊ ❊ ❊

೨.

ವಿಮೋಚನಾ ಪಡೆ ಮುನ್ನುಗಿತು

ಆ ರಾತ್ರಿ ನಾವು ಪಿಳ್ಳಂಗಿರಿಯಿಂದ ಕಾಗೋಡಿನ ಸರಹದ್ದಿನವರೆಗೆ ನಿಗೂಢವಾಗಿ ಪ್ರಯಾಣ ಮಾಡಿದೆವು. ವ್ಯಾನು ನಿಜವಾಗಿಯೂ ಅದ್ಭುತವಾಗಿತ್ತು. ಪಳನಿಯೂ ಅಪರೂಪ ಪ್ರಾವೀಣ್ಯತೆಯುಳ್ಳ ಚಾಲಕನಾಗಿದ್ದ. ಆ ಬೆಳದಿಂಗಳ ರಾತ್ರಿಯಲ್ಲಿ ಮಲೆನಾಡಿನ ಆ ವನಸಿರಿಯ ನಡುವೆ ಹೆಬ್ಬಾವಿನಂತೆ ಮಲಗಿದ್ದ ಆ ನಿರ್ಜನ ನಿಗೂಢ ರಸ್ತೆಯಲ್ಲಿ ನಾವು ಸಾಗುತ್ತಿದ್ದೆವು. ಬಾನಿನಲ್ಲಿ ತುಂಬಿ ಜೊನ್ನದಂತೆ ಸುರಿಯುತ್ತಿದ್ದ ಬೆಳದಿಂಗಳು. ಅಲ್ಲಲ್ಲಿ ಕಾಡು ಕಣ್ಮರೆಯಾಗಿ ಸುವಿಶಾಲ ಜಲಸಂಪತ್ತಿನಿಂದ, ಬೆಳದಿಂಗಳಲ್ಲಿ ನಯನ ಮನೋಹರವಾಗಿ ಮೈಚಾಚಿ ಮಲಗಿದ್ದ ಮೋಹಕ ತಟಾಕಗಳು ; ಅವು ಮರೆಯಾಗುತ್ತಿದ್ದಂತೆಯೇ ತಂಗಾಳಿಯಿಂದ ಬಿಸುಸುಯ್ಯುತ್ತಿದ್ದ ಪುರಾತನ ಹೆಮ್ಮರಗಳಿಂದ ಕೂಡಿದ ಹೆದ್ದಾರಿಯ ತಿರುವು - ಮುರುವುಗಳು ; ನೀಲಿ ನಭದಲ್ಲಿ ಮಿನುಗುತ್ತಿದ್ದ ನಕ್ಷತ್ರ ಗಣ ; ಇವುಗಳೆಲ್ಲದರ ತೋಳತೆಕ್ಕೆಯಲ್ಲಿ ಪವಡಿಸಿದ್ದ ನಮ್ಮನ್ನು ನಿಶ್ಶಬ್ದವಾಗಿ ನಿರಂತರವಾಗಿ ಆ ವ್ಯಾನು ಸಾಗುತ್ತಿತ್ತು. ಮುಂದೆ ಇದ್ದ ರಣರಂಗದ ಸದ್ದುಗದ್ದಲಗಳ ಸುಳಿವೇ ನೀಡದಂತೆ ಶಾಂತಿಯ ಕಡಲಿನ ಮೂಲಕ ನಾವು ಕ್ಷೋಭೆಯ ಒಡಲಿಗೆ ಧುಮುಕಲು ಧಾವಿಸುತ್ತಿದ್ದೆವು.

ಬೆಳಗಿನ ಜಾವ ೫ ಗಂಟೆಯ ಸಮಯದಲ್ಲಿ ವ್ಯಾನು ಶಿವಮೊಗ್ಗ-ಸಾಗರ ಹೆದ್ದಾರಿಯನ್ನು ಬಿಟ್ಟು ಕಾಡುಮೇಡಿನ ರಸ್ತೆಗೆ ಇಳಿಯಿತು. ಅಲ್ಲಿ ಸ್ವಲ್ಪ ಕಾಲ ಚಲಿಸಿದ ಬಳಿಕ , ಕಾಡಿನ ಮಧ್ಯದ ಬಯಲಿನಲ್ಲಿ ನಿಂತಿತು. ಮುಂದೆ ಯಾವ ರಸ್ತೆಯೂ ಇರಲಿಲ್ಲ. ಕೇವಲ ಕಾಲುದಾರಿಯಿತ್ತು.

ನಾವು ನೇರವಾಗಿ ಕಾಗೋಡಿಗೆ ಹೋಗುವಂತಿರಲಿಲ್ಲ. ಅದರ ಪಕ್ಕದ ಇನ್ನೊಂದು ಗ್ರಾಮಕ್ಕೆ ಹೋಗಿ, ಅಲ್ಲಿ ನಮಗೆ ಕಾಯುತ್ತಿದ್ದ 'ಮಾರ್ಗದರ್ಶಿ' ಮಂಜುನಾಥ್‌ನನ್ನು ಸೇರಿಕೊಳ್ಳಬೇಕಾಗಿತ್ತು. ಅವನು ಮುಂದೆ ಸಿಗುವ ಹಳ್ಳಿಯ ಅಶ್ವತ್ಥ ಕಟ್ಟೆಯ ಬಳಿ ನಮಗಾಗಿ ಕಾಯುತ್ತಿದ್ದ ಎಂಬ ಸುದ್ದಿ ಮಾತ್ರ ನಮಗೆ ಗೊತ್ತಿತ್ತು. ಅಲ್ಲಿ ನಮ್ಮನ್ನು ಬಿಟ್ಟು ವ್ಯಾನು ಹಿಂದಿರುಗಿತು. ಪಳನಿ ''ಗುಡ್‌ಲಕ್ ಸರ್'' ಎಂದು ಹೊರಟುಹೋದ. ''ಥ್ಯಾಂಕ್ಸ್ ಪಳನಿ'' ಎಂದು ನಾನು ಅವನ ಕೈಕುಲುಕಿದೆ. ನಾವೆಲ್ಲರೂ ಕಾಡಿನ ನಡುವೆಯ ಕಾಲುದಾರಿಯಲ್ಲಿ ನಡೆಯತೊಡಗಿದೆವು. ಸ್ವಲ್ಪ ದೂರ ನಡೆಯುವುದರಲ್ಲೇ ಬೆಳಕು ಹರಿಯಿತು. ಆಗ ತಾನೇ ಮುಂಜಾವಿನ ಮಳೆ ಬಂದು ನಿಂತಿತ್ತು. ಹಾದಿಯ ಪಕ್ಕದ ಗಿಡ-ಮರಗಳ ಎಲೆಗಳಿಂದ ನೀರು ತೊಟ್ಟಿಕ್ಕುತ್ತಿತ್ತು. ಕಾಲು ದಾರಿಯಲ್ಲಿ ಅಲ್ಲಲ್ಲಿ ನೀರು ನಿಂತಿತ್ತು. ಆ ಒದ್ದೆಯಾದ ಕೊಚ್ಚೆ ಕಾಲುದಾರಿಯಲ್ಲಿ ಸಾಗುತ್ತಿದ್ದ ನಾನು ನೀರಿನ ಗುಂಡಿಯೊಂದನ್ನು ದಾಟಿದ ತಕ್ಷಣ ಭೀತಿಯಿಂದ ಅವಾಕ್ಕಾಗಿ ನಿಂತೆ! ನನ್ನ ಮೈರೋಮಗಳೆಲ್ಲವೂ ನಿಮಿರಿ ನಿಂತಿತು! ನನ್ನ ಹಿಂದೆಯೇ ಬರುತ್ತಿದ್ದ ಸ್ವಾಮಿನಾಥನ್ ಪ್ರಶ್ನಿಸಿದ, ''ಏನು ಸಾರ್ ?''

''ಅಲ್ಲಿ ನೋಡು'' ಎಂದು ಆ ಹುಲ್ಲುಗಾವಲಿನ ಮಧ್ಯದ ಕಾಲುದಾರಿಯನ್ನು ತೋರಿಸಿದೆ! ಮಳೆಯಲ್ಲಿ ನೆನೆದು ಮೃದುವಾಗಿದ್ದ ಆ ಮಣ್ಣಿನಲ್ಲಿ ಒಂದು ಹೆಬ್ಬುಲಿಯ ಪಾದದ ಪಂಜದ ಗುರುತು ಸ್ಪಷ್ಟವಾಗಿ ಮೂಡಿತ್ತು! ಕಣ್ಣೋಟವನ್ನು ಮುಂದೆ ಮುಂದೆ ಹರಿಸಿದಂತೆ ಆ ಹುಲಿಯ ಹೆಜ್ಜೆ ಸ್ವಲ್ಪ ದೂರದವರೆಗೆ ಕಾಲುದಾರಿಯಲ್ಲೇ ಸಾಗಿ ಹೋಗಿತ್ತು. ಇಷ್ಟು ಹೊತ್ತಿಗೆ ಬೆಳಕು ಚೆನ್ನಾಗಿ ಹರಿದಿದ್ದುದರಿಂದ ಹೆಜ್ಜೆಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ಅದನ್ನು ಭಯಭೀತರಾಗಿ ನೋಡುತ್ತಾ ನಾವು ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟುಕೊಂಡು ಸ್ವಲ್ಪ ದೂರ ಸಾಗಿದೆವು. ಆನಂತರ ಅದೂ ಇದ್ದಕ್ಕಿದ್ದಂತೆಯೇ ಮಾಯವಾಗಿತ್ತು. ಪಕ್ಕದಲ್ಲೇ ಇದ್ದ ಪೊದೆಯೊಂದರ ಕಡೆಗೆ ಅದರ ಹೆಜ್ಜೆಗಳು ಸಾಗಿ, ಅಲ್ಲಿಂದ ಹುಲಿಯ ಹೆಜ್ಜೆ ಗುರುತುಗಳು ಹಸುರಾಗಿದ್ದ ಹುಲ್ಲಿನಲ್ಲಿ ಮಾಯವಾಗಿದ್ದವು. ''ಏನು ಮಾಡೋಣ ? '' ಎಂದು ಸಂಗಾತಿಗಳ ಕಡೆಗೆ ಪ್ರಶ್ನಾರ್ಥಕ ದೃಷ್ಟಿ ಹಾಯಿಸಿದೆ.

''ಅದೆಲ್ಲೋ ಕಾಡಿಗೆ ಹೋಗಿದೆ. ನಮ್ಮ ಪಾಡಿಗೆ ನಾವು ದಾರಿಗುಂಟ ಸಾಗೋಣ. ಅದರ ಪಾಡು ಅದಕ್ಕೆ , ನಮ್ಮ ಪಾಡು ನಮಕ್ಕೆ !'' ಎಂದು ನುಡಿದ ಕೋಲಾರದ ತಮಿಳು ರಾಮಚಂದ್ರನ್. ''ಸರಿ'' ಎನ್ನುತ್ತಾ ಎಲ್ಲರೂ ಕುತೂಹಲದಿಂದ

ಪಕ್ಕದ ಕಾಡಿನ ಪೊದೆಗಳ ಕಡೆಗೆ ನೋಡುತ್ತಾ ನೋಡುತ್ತಾ ಕಾಲುದಾರಿಯಲ್ಲಿ ಮುನ್ನಡೆದೆವು.

ಮಲೆನಾಡಿನ ಮುಂಜಾವಿನ ವನಸಿರಿ ಮಾನವರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತದೆ. ಆಹಾ ! ಕೆಂಡದಂತೆ ಪ್ರಜ್ವಲಿಸುವ ಮುತ್ತುಗದ ಹೂಗೊಂಚಲೇ ! ಎಲ್ಲಿಂದಲೋ ತೇಲಿ ಬರುವ ಸುರಗಿ ಸುರಹೊನ್ನೆ ಪುಷ್ಪಗಳ ಪರಿಮಳವೇ! ಮತ್ತೆ ಮತ್ತೆ ಅಡ್ಡ ನಿಂತು, ಬೆಳಗಿನ "ಗುಡ್ ಮಾರ್ನಿಂಗ್", "ಹೌ ಡು ಯೂ ಡೂ" ಗಳನ್ನು ಕಿವಿಯಲ್ಲೇ ಕೀವ್ ಕೀವ್ ಗುಟ್ಟುವ ಗುಬ್ಬಚ್ಚಿ ಕಾಜಾಣಗಳೇ ! ಎಲ್ಲಿಂದಲೋ ಹಾರಿ ಬಂದು ಪಕ್ಕದ ಮರದ ರೆಂಬೆಯ ಮೇಲೆ ಕುಳಿತು ಕೂಗುವ ನವಿಲೇ ! ಹೀಗೆ ಪಂಚೇಂದ್ರಿಯಗಳನ್ನು ತಣಿಸಿ, ತೂಗಿ - ತೂಗಿ, ತಟ್ಟಿ-ತಟ್ಟಿ ಜೋಗುಳ ಹಾಡುವ ಪ್ರಕೃತಿ ಮಾತೆಯ ಸೊಬಗನ್ನು ತುದಿಗಣ್ಣಿನಿಂದ ನೋಡಿ, ಬಿಸುಸುಯ್ದು, ಮುಂದೆ -ಮುಂದೆ ಕರ್ತವ್ಯದೆಡೆಗೆ ಸಾಗಬೇಕಾಗಿತ್ತು. ಬಾಳಿನ ನಶ್ವರತೆಯಂತೆಯೇ ಸೌಂದರ್ಯ ಆಸ್ವಾದನೆಯೂ ಕ್ಷಣಿಕ. ಅದರ ನೆನಪು, ಆರಾಧನೆಗಳು ಮಾತ್ರ ಶಾಶ್ವತ!

ಮುಂದಿನ ಕೆಲವು ಕ್ಷಣಗಳಲ್ಲಿಯೇ ತುಸು ಆತಂಕಗೊಂಡಿದ್ದ ನಮಗೆ ನಾವು ಸರಿಯಾದ ದಾರಿಯಲ್ಲಿ ಬಂದಿದ್ದೇವೆಂಬ ಭರವಸೆಯುಂಟಾಯ್ತು. ಅರ್ಧದಾರಿಗೇ ಬಂದು ಮಂಜುನಾಥ ನಮ್ಮನ್ನು ಸ್ವಾಗತಿಸಿ ಪಕ್ಕದಲ್ಲೇ ಜೋಪಡಿಗಳಿದ್ದ ಹಳ್ಳಿಗೆ ಕರೆದು ಕೊಂಡು ಹೋದ. ಅಲ್ಲಿನ ಸ್ವಲ್ಪ ದೊಡ್ಡ ಗುಡಿಸಲ ಮುಂದೆ ಮಣ್ಣಿನ ಜಗಲಿ ಕಟ್ಟೆಯಿತ್ತು. ಅಲ್ಲಿ ಕುಳಿತು, ನಾವೆಲ್ಲರೂ ಸ್ವಲ್ಪ ಹೊತ್ತು ದಣಿವು ಆರಿಸಿಕೊಂಡೆವು. ನಮ್ಮ ಪ್ರಾತರ್ವಿಧಿಗಳನ್ನು ತೀರಿಸಿಕೊಂಡೆವು. ತಟ್ಟೆ ಇಡ್ಲಿಯಂತಿರುವ ಒಣಅಕ್ಕಿ ರೊಟ್ಟಿ ಉಪ್ಪಿನಕಾಯಿ ಮತ್ತು ಹಳೆಯ ಕಜ್ಜಾಯಗಳನದ್ನು ಕಡಿಕಡಿದು ತಿಂದು, ಧಾರಾಳವಾಗಿ ಚೊಂಬುಗಳಲ್ಲಿ ಕೊಟ್ಟ ಬೆಲ್ಲದ ಬಿಸಿನೀರಿನ ಕಾಫಿ ಕುಡಿದೆವು. ಆನಂತರ ರೈತರನ್ನು ಭೇಟಿ ಮಾಡಲು ಪಕ್ಕದ ಗುಡ್ಡದ ಕಡೆಗೆ ನಾನು ಮಂಜುನಾಥನೊಡನೆ ಹೊರಟೆ. ಭೇಟಿ ತಂಡದ ಸದಸ್ಯರು ಆ ಗುಡಿಸಲಿನ ಕಟ್ಟೆಯ ಮೇಲೆ ವಿಶ್ರಾಂತಿ ಪಡೆಯಲು ಅಡ್ಡಾದರು.

ಹಳ್ಳಿಯಲ್ಲಿ ಗ್ರಾಮಸ್ಥರು ಇರಲಿಲ್ಲ. ಪೋಲೀಸರು, ಗೂಂಡಾಗಳಿಗೆ ಹೆದರಿ ಎಲ್ಲರೂ ಕಾಡುಬಿದ್ದಿದ್ದರು. ನಾನು ಮಂಜುನಾಥನ ಜೊತೆ ಅವರಿದ್ದ ಗುಪ್ತಸ್ಥಳಕ್ಕೆ ಹೊರಟೆ. ಗದ್ದೆಯ ತೆವರಿಗಳ ಮೇಲಿನ ಕಾಲುದಾರಿಯಲ್ಲಿ ನಡೆಯುತ್ತಾ ನಡೆಯುತ್ತಾ ಇದ್ದಂತೆ ಹಠಾತ್ತನೆ ಜುಳು-ಜುಳು ಎಂದು ವೇಗವಾಗಿ ಆಳೆತ್ತರದ ಕೆಳಗೆ ಹರಿಯುತ್ತಿದ್ದ ಹಳ್ಳ ಎದುರಾಗುತ್ತಿತ್ತು. ೧೦ ಅಡಿ ಅಗಲದ ಆ ಹಳ್ಳದ ಮೇಲೆ ಒಂದು ಅಡಿಕೆ ಮರವನ್ನೇ ಸೇತುವೆಯಾಗಿ ಇಟ್ಟಿದ್ದರು. ಅದರ ಮೇಲೆ ಜೋಕಾಲಿ ಹೊಡೆಯುತ್ತಾ ನಡೆದು ದಾಟಬೇಕಾಗಿತ್ತು. ನಡೆಯುತ್ತಾ ನಡೆಯುತ್ತಾ ಮಧ್ಯಕ್ಕೆ ಬಂದಾಗ ಆ ಅಡಿಕೆ

ಪಟ್ಟಿ ಮೇಲೆ ಕೆಳಗೆ ತೂಗಾಡಲು ಪ್ರಾರಂಭಿಸುತ್ತಿತ್ತು. ಸ್ವಲ್ಪ ಏನಾದರೂ ಎಚ್ಚರ ತಪ್ಪಿದರೆ ಗೋವಿಂದ ! ಸೇತುವೆಯಿಂದ ಕೆಳಕ್ಕೆ ನೀರಿಗೆ ಬಿದ್ದು , ಫಜೀತಿ ಪಟ್ಟು ಮೇಲೆದ್ದು ರಸ್ತೆಗೆ ಬರಬೇಕಾಗಿತ್ತು. ಇಂಥ ನಾಲ್ಕಾರು ತೂಗಾಡುವ ಸೇತುವೆಗಳನ್ನು ದಾಟಿ ಗುಡ್ಡದ ಬಯಲನ್ನು ಸೇರಿದೆವು. ಅಲ್ಲಿನ ದೃಶ್ಯ ಅತ್ಯಂತ ರಮ್ಯವಾಗಿತ್ತು.

ಹೆಂಗಳೆಯರು ಕಲ್ಲು ದುಂಡಿಗಳನ್ನಿಟ್ಟು ಒಲೆ ಹೂಡಿ ಮಡಿಕೆ-ಕುಡಿಕೆಗಳಲ್ಲಿ ಅಡಿಗೆಗೆ ಸಿದ್ಧರಾಗುತ್ತಿದ್ದರು. ಗಂಡಸರು ಗುಂಪು ಗುಂಪಾಗಿ ಕುಳಿತು ಕಾಫಿಯ ಚೆಂಬುಗಳನ್ನು ಇಟ್ಟುಕೊಂಡು, ಬೀಡಿ ಸೇದುತ್ತಲೋ ತಂಬಾಕು ಹಾಕುತ್ತಲೋ ಹರಟುತ್ತಿದ್ದರು. ತಮ್ಮ ಕೋವಿಯ ನಳಿಕೆಗೆ ಚರೆ- ಮದ್ದು ತುಂಬಿ ಶಿಕಾರಿಗೆ ಸಿದ್ಧವಾಗುತ್ತಿದ್ದರು. ಅವರೆಲ್ಲರೂ ಕುತೂಹಲದಿಂದ ನಮ್ಮನ್ನು ನೋಡಿ ನಾವು ಯಾರೆಂದು ಸೌಜನ್ಯದಿಂದ ವಿಚಾರಿಸಿಕೊಂಡರಾದರೂ, ಯಾರೂ ನಮ್ಮೊಂದಿಗೆ ಸತ್ಯಾಗ್ರಹಕ್ಕೆ ಬರಲು ಒಪ್ಪಲಿಲ್ಲ.

''ಸಾಹ್ಕಾರನ ಕಡೆ ಬಡ್ಡೀ ಮಕ್ಕಳಿಂದ ಬಡಿಸಿಕೊಳ್ಳಾಕೆ ನಾವೇನು ದನಗಳಾ ? ನಮಗೂ ಮೀಸೆ ಇಲ್ವಾ? ಕೈನಾಗೆ ಇದು ಇಲ್ವಾ?'' ಎಂದು ಕೋವಿ ತೋರಿಸುತ್ತಿದ್ದರು. ''ಏಟು ತಿನ್ನಾಕೆ ನಾವು ಬರಾಕಿಲ್ಲ ಹೋಗಿ. ಬೇಕಾದ್ರೆ ನಡೀರಿ ಆ ಬೋಳೀಮಕ್ಕಳ ಸದ್ದು ಅಡಗಿಸಿ ಬರೋವ. ಅವನ ಮನೆಗೆ ಬೆಂಕಿ ಮುಟ್ಟಿಸಿ, ಅವನ ಕಡೆಯಾರ್ಗೆ ಕೋವಿ ರುಚಿ ತೋರಿಸಿ, ನಮ್ಮ ಹಳ್ಳಿಗೆ ನಾವು ಹಿಂದಕ್ಕೆ ಹೋಗಾನ. ಇದ್ಯಾಕೆ ಈ ಹೆಣ್ಣು ಬಾಳು ! '' ಎಂದು ಎಂದು ನಮ್ಮನ್ನು ಛೇಡಿಸಿದರು.

ಸುಮಾರು ಹತ್ತು - ಹನ್ನೊಂದು ಗಂಟೆಯಾಗಿತ್ತು. ಸುತ್ತಮುತ್ತಲಿನ ಕಾಡು ಮೇಡುಗಳಿಂದ ಇನ್ನೂ ನೂರಾರು ರೈತರು ಇಲ್ಲಿಗೆ ಬಂದು ಸೇರಿದರು. ಕೆಲವರ ಕೈಯಲ್ಲಿ ಕೋವಿಗಳಿದ್ದವು. ಮಲೆನಾಡಿನ ರೈತರು ಸಾಮಾನ್ಯವಾಗಿ ಒಂದು ದೊಡ್ಡ ಮಚ್ಚು ಮತ್ತು ಕೋವಿಗಳು ಇಲ್ಲದೆ ಮನೆ ಬಿಟ್ಟು ಹೊರಬೀಳುವುದೇ ಇಲ್ಲ. ಅದೊಂದು ಕಾಲಿನ ಮೆಟ್ಟಿನಂತೆ. ಕೈಗೋವಿ ಇರಲೇಬೇಕು. ಅವರನ್ನು ಕಂಡು ನನಗೆ ಆಗ ಹತ್ತಿ ಉರಿಯುತ್ತಿದ್ದ ತೆಲಂಗಾಣ ರೈತ ಚಳುವಳಿ ನೆನಪಿಗೆ ಬಂತು. ಸ್ವಲ್ಪ ಎಚ್ಚರತಪ್ಪಿ ಅಹಿಂಸಾತ್ಮಕ ನಿಯಂತ್ರಣ ಸಡಿಲ ಮಾಡಿದ್ದರೆ ಸಾಕು ; ತೆಲಂಗಾಣ ರೈತರ ಹಿಂಸಾಕಾಂಡ ಮೀರಿಸುವ ಮಾರಣಹೋಮ ಮೈಸೂರಿನ ಮಲೆನಾಡಿನಲ್ಲಿ ನಿರ್ಮಾಣವಾಗುತ್ತಿತ್ತು. ಅಷ್ಟರಲ್ಲಿ ಹೊತ್ತು ಮೀರಿತ್ತು. ಎಲ್ಲಿಂದಲೋ ಹತ್ತಾರು ಮಂದಿ ಕೋವಿಧಾರಿ ಬೆಂಬಲಿಗರೊಡನೆ ಒಬ್ಬ ಗಡ್ಡದ ವ್ಯಕ್ತಿ ಅಲ್ಲಿಗೆ ಬಂದ. ಅವನೊಬ್ಬ ನಿಗೂಢ ವ್ಯಕ್ತಿ. ಅವನೊಡನೆ ಹತ್ತಾರು ದೊಂದಿಗಳ ಕಂತೆಯೂ ಇತ್ತು. ಒಂದೆರಡು ಸೀಮೆಎಣ್ಣೆ ಸೀಸೆಗಳೂ ಇದ್ದವು. ಅವನ ಒಳ ಉಡುಪಿನಲ್ಲಿ ಒಂದು ರಿವಾಲ್ವಾರ ಇದ್ದದ್ದೂ ತೋರಿ ಬಂತು.

ಅವನ ಆಗಮನವಾಗುತ್ತಿದ್ದಂತೆ, ಕೋವಿಧಾರಿ ತರುಣ ರೈತರೆಲ್ಲರೂ ಹರ್ಷೋದ್ಗಾರ ಮಾಡಿ ಮೇಲೆದ್ದು ನಿಂತರು. ಕೈಮುಗಿದು ಗೌರವ ಸೂಚಿಸಿದರು. ಅವರನ್ನು ಕರೆದುಕೊಂಡು ಆ ದಪ್ಪ ಗಡ್ಡಧಾರಿ ವ್ಯಕ್ತಿ ಪಕ್ಕದ ಗುಡ್ಡ ಹತ್ತಿ ಹೋದರು.

ನಾನು ಮತ್ತು ಮಂಜುನಾಥ ಇಬ್ಬರೇ ಉಳಿದೆವು. ನಮ್ಮನ್ನು ನೋಡಿದ ಕೆಲವು ಹೆಂಗಳೆಯರು ''ನಾವ್ಯಾರು ಏಟು ತಿನ್ನೋಕೆ ಬರೋಲ್ಲ! ನೀವು ಪಾಪ ಯಾಕೆ ಏಟು ತಿನ್ತಿರಿ. ಅವರ ಸಂಗಾಡಾನೇ ಹೋಗ್ರಾ'' ಎಂದು ಹೇಳಿದರು.

ಮಂಜುನಾಥ ತೀವ್ರ ನಿರಾಶನಾಗಿದ್ದ, ನನ್ನನ್ನು ಕೈ ಹಿಡಿದು ನನ್ನ ಸಂಗಾತಿಗಳಿದ್ದೆಡೆಗೆ ಕರೆದೊಯ್ಯುತ್ತಾ ದಾರಿಯುದ್ದಕ್ಕೂ ಹೇಳಿದ. ಅವನು ಘಟ್ಟದ ಕೆಳಗಿನ ಕುಂದಾಪುರ ತಾಲ್ಲೂಕಿನ ಒಬ್ಬ ಕಾರ್ಯಕರ್ತ. ಇಲ್ಲಿನ ಪ್ರದೇಶವನ್ನು ಅವನು ಚೆನ್ನಾಗಿ ಅರಿತಿದ್ದ. ಅವನು ಹೇಳತೊಡಗಿದ.

''ಇವರೆಲ್ಲಾ ಬರೀ ರೈತರಲ್ಲ, ಸ್ವಲ್ಪಮಟ್ಟಿಗೆ ಕ್ಷತ್ರಿಯ ಗುಣವೂ ಮನೆ ಮಾಡಿದೆ. ಹಿಂದೆ ಕೆಳದಿಯ ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಇವರ ಹಿರೀಕರು ಅಲ್ಲಿನ ಪದಾತಿ ದಳದ ಸೈನಿಕರಾಗಿದ್ದರು. 'ಹಳೇಪೈಕ'ದವರು ಎಂದು ಅವರನ್ನು ಕರೆಯುತ್ತಾರೆ. ಅವರಿಗೆ ಈಗ ಬೇಸಾಯಕ್ಕಿಂತ ಪೋಲೀಸರಿಗೆ ಚಳ್ಳೇಹಣ್ಣು ತಿನ್ನಿಸುವುದೇ ಬಲುಪ್ರಿಯವಾದ ಉದ್ಯೋಗವಾಗಿದೆ. ಇವರ ಮುಖ್ಯದಂಧೆ ಕಳ್ಳಭಟ್ಟಿ ಅಲ್ಲಿ ನೋಡಿ!'' ಎಂದು ಒಂದು ಪೊದೆಯ ಅಂತರಾಳದಲ್ಲಿ ಅಡಗಿಸಿದ್ದ ಮಡಿಕೆ, ಪೈಪು, ಮುಚ್ಚಳ, ಬೊಂಬುಗಳನ್ನು ತೋರಿಸಿದ.

''ಕೆಳದಿಯ ಸಂಸ್ಥಾನ ಅಳಿದ ಮೇಲೆ ಇವರೆಲ್ಲಾ ನಿರುದ್ಯೋಗಿಗಳಾಗಿ ನಿರ್ವಾಹವಿಲ್ಲದೆ, ಬೇಸಾಯಕ್ಕೆ ಬೇಗಾರಿಕೆಗೆ ಇಳಿಯಬೇಕಾಯಿತು. ಕೆಲವು ತಲೆಮಾರುಗಳ ಬಳಿಕ ಪಾನನಿರೋಧ ಆಜ್ಞೆಯೂ ಜಾರಿಗೆ ಬಂತು. ಈಗ ಅವರು ಹೇಗೋ ಕಾನೂನಿಗೆ ಒಳಪಟ್ಟೂ ಒಳಪಡದವರಂತೆ 'ಔಟ್-ಲಾ'ಗಳ ಬದುಕು ಸಾಗಿಸುತ್ತಿದ್ದಾರೆ. ಅಂತೂ 'ಮಾವೋ'ಗೆ ಫಸ್ಟ್‌ಕ್ಲಾಸ್ ಮೆಟೀರಿಯಲ್ ! ಗಾಂಧೀ ಮಾರ್ಗಕ್ಕೆ ಇವರನ್ನು ತರೋದು ಕಷ್ಟ'' ಎಂದ.

ಅವನ ಮಾತು ನನಗೆ ಒಂದು ಸವಾಲಾಗಿ ಕಾಣಿಸಿತು ! ಮೊದಲಿನಿಂದಲೂ ನನಗೆ ಒಂದು ಕನಸಿತ್ತು. ಅದೇನೆಂದರೆ ನಾನು ಸತ್ಯಾಗ್ರಹ ಮಾಡುವಾಗ ಆದಷ್ಟು ಹೆಚ್ಚು ಸತ್ಯಾಗ್ರಹಿಗಳ ತಂಡ ನನ್ನೊಡನೆ ಇರಬೇಕು. ಕಾಗೋಡಿನ ಸುತ್ತಮುತ್ತಣ ಗ್ರಾಮಗಳಾದ ತಡಕಳಲೆ, ಶುಂಠಿಕೊಪ್ಪ, ಹಿರೇನಲ್ಲೂರು, ಎಲೆಕುಂದ್ಲಿ, ಹಾಗಲಪುರ, ಮಣಗದ್ದೆ, ಸಣ್ಣಮನೆ, ಸೈದೂರು, ಸೂಳೂರು, ಕಾನ್ಲೆ, ಮಂಡಗಳಲೆ ... ಈ ಎಲ್ಲಾ ಗ್ರಾಮಗಳಲ್ಲಿರುವ ಗೇಣಿಗಾರರನ್ನು ಸಂಪರ್ಕ ಮಾಡಬೇಕು. ತಂಡತಂಡವಾಗಿ

ಇವರುಗಳ್ನು ವಿಂಗಡಿಸಿ, ಒಬ್ಬರಾದ ಮೇಲೆ ಒಬ್ಬರಂತೆ ಅಲೆಯಲೆಯಾಗಿ, ನಮ್ಮ ರಣರಂಗಕ್ಕೆ ನುಗ್ಗಿಸಿ, ಸರ್ಕಾರದ, ಜಮೀನ್ದಾರರ ಬಗ್ಗು ಬಡಿಯಬೇಕು.

ಈ ಭವ್ಯಯೋಜನೆ ಕಾರ್ಯಗತವಾಗಲು ನೂರಾರು ಜನರ ಬೆಂಬಲ ಬೇಕಾಗಿತ್ತು. ಸಮಯ ಬೇಕಾಗಿತ್ತು. ಕಾರ್ಯಕರ್ತರು ಬೇಕಾಗಿತ್ತು. ನನಗೆ ದೊರೆತಿದ್ದ ಸಂಗಾತಿ ಮಂಜುನಾಥ್ ಒಬ್ಬನೇ. ಈಗ ಕಾಗೋಡಿನ ಸುತ್ತಮುತ್ತಣ ಗ್ರಾಮಗಳಲ್ಲಿನ ಗೇಣಿದಾರರುಗಳನ್ನು ನಾನು ಅವನೊಡನೆ ಕಂಡಿದ್ದರೂ ಅವರು ದಂಗೆ ಎದ್ದಿದ್ದರು. ಅಹಿಂಸಾತ್ಮಕ ಸತ್ಯಾಗ್ರಹ ಅವರನ್ನು ಭ್ರಮನಿರಸಗೊಳಿಸಿತ್ತು. ''ಉಳುವವನೇ ನೆಲದೊಡೆಯ !'' , ''ಕಾಗೋಡು ಸತ್ಯಾಗ್ರಹಕ್ಕೆ ಜಯವಾಗಲಿ'', ''ಇಂಕಿಲಾಬ್ ಜಿಂದಾಬಾದ್ '' ಎಂದು ಘೋಷಣೆಗಳನ್ನು ಕೂಗುವುದು, ಬಿದಿರು ಬೇಲಿ ಕಿತ್ತು ಒಡೆಯನ ಗದ್ದೆಗೆ ನುಗ್ಗುವುದು ; ನೇಗಿಲಿಂದಲೋ, ತೆಂಗಿನಮಟ್ಟೆಗಳಿಂದಲೋ ಆ ಗದ್ದೆ ಉಳುವ ನಾಟಕವಾಡಲು ಹೋಗುವುದು. ಒಡೆಯನ ಕಡೆಗೆ ಸೇರದೇ ಇದ್ದ ಆ ಊರಿನ ಹೊಲೆ ಮಾದಿಗರಿಂದ ದೊಣ್ಣೆಗಳಿಂದ ಒದೆ ತಿನ್ನುವುದು, ಪೋಲೀಸರ ಬೂಟುಗಾಲು ಮತ್ತು ಲಾಠಿಗಳಿಂದ ಒದೆ ತಿನ್ನುವುದು. ಗದ್ದೆ ಬಿಟ್ಟು ಊರು, ಕೇರಿ-ಮನೆ-ಮಠ ಸಿಕ್ಕುವವರೆಗೂ ಹೊಡೆಸಿಕೊಳ್ಳುವುದು. ವಾಚಾಮಗೋಚರವಾಗಿ ಬೈಯಿಸಿಕೊಳ್ಳುವುದು. ರಾತ್ರಿಯೇನಾದರೂ ಮನೆಯಲ್ಲಿ ಮಲಗಿದ್ದರೆ ಆಗಲೂ ಪೋಲೀಸರಿಂದ, ಗೂಂಡಾಗಳಿಂದ ಹಲ್ಲೆಗೆ ಈಡಾಗುವುದು. ಇದು ಯಾವ ಸೀಮೆಯ ಹೋರಾಟ ? ಯಾವ ಸೀಮೆಯ ಸತ್ಯಾಗ್ರಹ ? ಅಹಿಂಸೆ ಹೆಸರಿಗೆ ಮಾತ್ರ ! ನಡೀತಿರೋದು ಬರೀ ಹಿಂಸೆ, ದೌರ್ಜನ್ಯ ! ನಮಗೆ ಇದನ್ನು ಸಹಿಸಿಕೊಂಡು ಸಾಕಾಗಿದೆ. ಇನ್ನು ನಾವು ಈ ರೀತಿ ಕೈ ಕಟ್ಟಿಸಿಕೊಂಡು, ದನದ ರೀತಿ ಚಚ್ಚಿಸಿ ಕೊಳ್ಳೋದಿಲ್ಲ . ನಾವೂ ನಮ್ಮ ಅಪ್ಪನಿಗೆ ಹುಟ್ಟಿದ ಮಕ್ಕಳು ! ಒಂದು ಕೈ ತೋರಿಸೇ ಬಿಡ್ತೇವೆ ! '' ಎಂದು ಕೋವಿ, ಕುಡುಗೋಲು ಝಳಪಿಸುತ್ತಿದ್ದವರೇ ಎಲ್ಲರೂ. ಇವರನ್ನು ತಿದ್ದಿ, ಅಹಿಂಸಾತ್ಮಕ ಹೋರಾಟಕ್ಕೆ ಕರೆದೊಯ್ಯುವುದು ಬ್ರಹ್ಮನಿಂದಲೂ ಅಸಾಧ್ಯವಾದ ಕೆಲಸವಾಗಿತ್ತು.

❊ ❊ ❊ ❊

೩.

ಬಂಡುಕೋರ ರೈತರು ಬೆಂಕಿಯುಗುಳುವ ನಾಯಕ

''ಏನು ಮಾಡೋಣ ಮಂಜುನಾಥ್ ? '' ಎಂದು ನಾನು ಪ್ರಶ್ನಿಸಿದೆ. ಅವನಿಗೂ ಅದೇ ಆಸೆ ಇತ್ತು.

ಸ್ವಲ್ಪ ಕಾಲ ದೀರ್ಘ ಆಲೋಚನೆಯಲ್ಲಿ ನಾವು ಅಲ್ಲೇ ಇದ್ದ ಒಂದು ಮಣ್ಣಗುಡ್ಡೆಯ ಮೇಲೆ ಕುಳಿತೆವು. ನಮ್ಮ ದೃಷ್ಟಿ ಆ ಗಡ್ಡಧಾರಿ ವ್ಯಕ್ತಿ ಕೋವಿಧಾರಿ ರೈತನನ್ನು ತನ್ನ ಜೊತೆಗೆ ಕರೆದೊಯ್ದಿದ್ದ ಆ ಗುಡ್ಡದ ಕಡೆಗೇ ನೆಟ್ಟಿತ್ತು. ಕೆಲವು ನಿಮಿಷಗಳು ನಾವು ಹಾಗೇ ಕುಳಿತಿರಬಹುದು. ಅಷ್ಟರಲ್ಲಿ ನಾಲ್ಕಾರು ಜನರು ನಮ್ಮ ಹಿಂದೆ ಮಾತನಾಡುವುದು ಕೇಳಿಸಿತು. ಅವರು ನಮ್ಮ ಕಡೆಗೇ ಬರುತ್ತಿದ್ದರು.

''ನೋಡಪ್ಪ! ಇಲ್ಲೇ ಸಿಕ್ಕಿಬಿಟ್ಟರು ಇವರೆಲ್ಲಾ'' ಎಂದರು ಯಾರೋ ಒಬ್ಬರು. ಧ್ವನಿ ಎಲ್ಲೋ ಕೇಳಿದ ಧ್ವನಿಯ ಹಾಗಿತ್ತು. ನಾನು ಹಿಂತಿರುಗಿ ನೋಡಿದೆ.

ಗೋಪಾಲಗೌಡರು ಇನ್ನೂ ನಾಲ್ಕು ಜನರೊಡನೆ ನಮ್ಮ ಕಡೆಗೆ ಬರುತ್ತಿದ್ದರು. ಅವರೊಡನೆ ಇದ್ದವರೆಲ್ಲರೂ ಸ್ಥಳೀಯ ರೈತರು. ಕರಿಯಪ್ಪ, ಕೆಂಜಟ್ಯನಾಯ್ಕ

ಈರಾನಾಯ್ಕ ಮೊದಲಾದವರು. ಎಲ್ಲರೂ ಒಬ್ಬರಿಗೊಬ್ಬರು ವಂದನೆ-ಪ್ರತಿವಂದನೆ ಸಲ್ಲಿಸಿದೆವು. ಗೌಡರು ನನ್ನನ್ನುಸಂತಸದಿಂದ ವಿಚಾರಿಸಿದರು. ''ನೀವು ಬಂದ ಸುದ್ಧಿ ತಿಳೀತು. ನೀವೆಲ್ಲಾ ಎಲ್ಲಿ ಕಣ್ಮರೆಯಾಗಿಬಿಟ್ಟರಿ '' ಎಂದು ಚಿಂತಿಸ್ತಿದ್ದೆ. ಎಲ್ಲಿದ್ದೀರಿ ? ಎಷ್ಟು ಜನ ಇದ್ದೀರಿ ? ನೀವು ಹೇಗೆ ಇಲ್ಲಿಗೆ ಬಂದಿರಿ ? ಎಂದೆಲ್ಲಾ ಅತ್ಯಂತ ಪ್ರೀತಿ ವಾತ್ಸಲ್ಯಗಳಿಂದ ವಿಚಾರಿಸಿದರು.

ನಾನು ಅವರಿಗೆ ಎಲ್ಲವನ್ನೂ ವಿವರಿಸಿದೆ. ಅವರು ನಮ್ಮ ಮಾತು ಕೇಳಿ ಸಮಾಧಾನದಿಂದ ನಿಟ್ಟುಸಿರುಬಿಡುತ್ತಾ ನನ್ನ ಭುಜ ತಟ್ಟಿದರು. ತಮ್ಮ ಜೊತೆಯಲ್ಲಿದ್ದ ಸಂಗಾತಿಗಳತ್ತ ತಿರುಗಿ ಹೇಳಿದರು.

''ನೋಡ್ರಯ್ಯ. ಇವರು ಚಂದ್ರಶೇಖರ್ ಅಂತ ನನ್ನ ಗೆಳೆಯ. ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು. ಬೆಂಗಳೂರಿನಿಂದ ಇಲ್ಲಿಗೆ ಸತ್ಯಾಗ್ರಹಕ್ಕಾಗಿ ಬಂದಿದ್ದಾರೆ. ಜೊತೆಗೆ ಕೋಲಾರದ ಗಣಿ ಹಾಗೂ ಕೆ.ಜಿ.ಎಫ್. ಫ್ಯಾಕ್ಟರಿಗಳಿಂದಲೂ ಕೆಲಸದವರನ್ನು ಕರ್‍ಕೊಂಡು ಬಂದಿದ್ದಾರೆ. ಅವರು ೧೬ ಜನ ಬಂದಿದ್ದಾರೆ. ನಮ್ಮ ಆಪತ್ಬಾಂಧವರಾಗಿ ಬಂದಿದ್ದಾರೆ. ನಾನು ನಿಮ್ಮ ಅಧ್ಯಕ್ಷ ಮೂಕಪ್ಪನಿಗೆ ಶಿವಮೊಗ್ಗದಲ್ಲಿ ಏನು ಹೇಳಿದ್ದೆ ? ಕಾಗೋಡಿನ ಜಮೀನು ಬಿಟ್ಟು ಕೆಂಜಿಗಾಪುರಕ್ಕೆ ವಲಸೆ ಹೋಗೋದು ಬ್ಯಾಡ್ರಯ್ಯ ಅಂತ. ನಾನು ಹಾಗೇಕೆ ಹೇಳಿದ್ದೆ ಎಂದು ನೀವು ತಿಳ್ಕೊಳ್ಳಿ. ಮೊಟ್ಟ ಮೊದಲನೆಯದಾಗಿ ಇಲ್ಲಿ ನೀವು, ಸರ್ಕಾರ ಮತ್ತು ಒಡೆಯನ ಈ ಒಳಸಂಚಿಗೆ ಒಪ್ಪಿಕೊಂಡ್ರೆ ; ಬರೀ ಕಾಗೋಡಿನಲ್ಲಿರೋ ನಿಮ್ಮನ್ನಲ್ಲ ; ನಿಮ್ಮಂತೆ ಈ ಪ್ರಾಂತ್ಯದಲ್ಲಿರೋ ಎಲ್ಲಾ ಗೇಣಿ ಮಕ್ಕಳನ್ನೂ ಅವರು ಮಾಡ್ತಿದ್ದ ಜಮೀನಿಂದ ಕಿತ್ತೆಸೀತಾರೆ. ಈ ಒಳಸಂಚಿಗೆ ಬಲಿಯಾಗಬೇಡಿ. ಸತ್ಯಾಗ್ರಹ ಮುಂದುವರಿಸಿ, ನಿಮಗೆ ಬೆಂಬಲ ಬರುತ್ತೆ ; ಬೆಂಗಳೂರಿನಿಂದ ಬರುತ್ತೆ ; ಕೋಲಾರದಿಂದ ಬರುತ್ತೆ ; ದಾವಣಗೆರೆಯಿಂದ ಬರುತ್ತೆ; ಇಡೀ ದೇಶದಿಂದ ಬರುತ್ತೆ ಎಂದು ಹೇಳಿರಲಿಲ್ಲವೇ ? ಈಗ ನೋಡಿ, ಚಂದ್ರಶೇಖರ್ ನನ್ನ ಮಾತನ್ನು ಸತ್ಯ ಎಂದು ತೋರಿಸಿಕೊಟ್ಟಿದ್ದಾರೆ '' ಎಂದು ನನ್ನ ಕಡೆ ತಿರುಗಿದರು. ಅಷ್ಟರಲ್ಲಿ ಪಕ್ಕದ ಗ್ರಾಮದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದ ನನ್ನ ಸಂಗಾತಿಗಳು ನಾವಿದ್ದ ಕಡೆಗೇ ಬರುತ್ತಿದ್ದರು. ''ನೋಡಿ ! ಎಲ್ಲರೂ ಬರುತ್ತಿದ್ದಾರೆ!'' ಎಂದು ನಾನು ಹೇಳಿದೆ.

ಗೌಡರು ಸಂತಸದಿಂದ ಕುಣಿದು ''ನೋಡ್ರಯ್ಯ ! .... ನೋಡಿ ! .... ಎಲ್ಲೆಲ್ಲಿಂದ ಬಂದಿದ್ದಾರೆ, ನಿಮ್ಮ ಬೆಂಬಲಿಗರು. ನೀವೇನು ಅನಾಥರೇನಯ್ಯಾ ! ನಿಮ್ಮ ಹಿಂದೆ ಇಡೀ ದೇಶವೇ ಇದೆ. ಒಡೆಯನ ಅನ್ಯಾಯ, ಒಡೆಯನ ದೌರ್ಜನ್ಯ ಎದುರಿಸಿಯೇ ತೀರೋಣ'' ಎನ್ನುತ್ತಿದ್ದಂತೆಯೇ, ಗುಡ್ಡದ ಕಡೆಯಿಂದ ಕೆಲವು ಕೋವಿಧಾರಿ ರೈತರು ನಮ್ಮ ಕಡೆಗೆ ಧಾವಿಸಿ ಬರುತ್ತಿದ್ದರು. ನಿಮಿಷ ನಿಮಿಷಕ್ಕೂ ಈ

ರೀತಿ ಕೋವಿ ಹಿಡಿದು ಬರುತ್ತಿದ್ದ ರೈತರ ಸಂಖ್ಯೆ ಹೆಚ್ಚಾಯಿತು. ಅವರನ್ನೆಲ್ಲಾ ನಾವು ನಸುನಗುತ್ತಾ ನೋಡುತ್ತಿದ್ದೆವು. ಅವರೆಲ್ಲರೂ ಮೊದಲೇ ನಮಗೆ ಭೇಟಿಯಾಗಿದ್ದ ಭಿನ್ನಮತೀಯ, ಉಗ್ರವಾದಿ ರೈತರುಗಳೇ ಆಗಿದ್ದರು. ಅವರನ್ನೆಲ್ಲಾ ಈಗ ಗೌಡರು ಕಟುವಾಗಿ ನೋಡಿದರು. ವ್ಯಂಗ್ಯವಾಗಿ, ವ್ಯಗ್ರಧ್ವನಿಯಲ್ಲಿ ಕೇಳಿದರು, ''ಏನಿದು ಕೋವಿ, ಕಠಾರಿ ?''

ಕೋವಿಧಾರಿ ರೈತರು ಸುತ್ತಲೂ ನಿಂತರು. ಅವರು ಒಬ್ಬರೂ ಮಾತನಾಡಲಿಲ್ಲ. ಗೌಡರೇ ಮತ್ತೆ ಮಾತನಾಡಿದರು, ''ಯಾರ ಮೇಲಾದ್ರೂ ದಂಡಯಾತ್ರೆ ಹೊರಟಿದ್ದಿರೋ?'' ಗುಂಪಿನಲ್ಲಿದ್ದ ರೈತರು ತಮ್ಮ ತಮ್ಮ ಮುಖಗಳನ್ನು ನೋಡಿಕೊಂಡು ಮುಸಿ ಮುಸಿ ನಕ್ಕರು. ಅವರಲ್ಲೊಬ್ಬ ನುಡಿದ , ''ಹೌದು ದಂಡುಗೂಡಿ ಹೊಂಟೀವಿ..... ಒಡೆಯನ ಮೇಲೆ ! ''

''ತುಂಬಾ ಒಳ್ಳೇದು. ನೀವೆಲ್ಲಾ ಕೆಳದಿ ಸಾಮ್ರಾಜ್ಯ ಕಟ್ಟಿದ ಶೂರರು ಅಲ್ಲವೇನ್ರಪ್ಪಾ ! ಸಾಮಾನ್ಯರೇ ! '' ಎಂದೊಡನೆಯೇ ರೈತರ ಗುಂಪು, 'ಹ್ಹೇ ಹೆ ಹ್ಹೇ!' ಎಂದು ಗಹಗಹಿಸಿ ನಕ್ಕಿತು. ಗೌಡರು ಕೆಲಕಾಲ ಗಾಢಾಲೋಚನೆಯಲ್ಲಿ ಮುಳುಗಿದ್ದು ಮತ್ತೆ ಪ್ರಶ್ನಿಸಿದರು.

''ನಿಮ್ಮ ಆಕ್ರಮಣ ಯಾವಾಗ ಪ್ರಾರಂಭ ?''

''ಈಗೀದೀಗಲೇ''

''ಈಗೀಂದೀಗಲೇ ಪ್ರಾರಂಭವೇನ್ರಯ್ಯಾ ? ಏನೇನು ಮಾಡ್ಬೇಕು ಯಾರ್‍ಯಾರನ್ನು ಕೊಲ್ಲಬೇಕು ಎಂದು ಯೋಚ್ನೆ ಮಾಡಿದ್ದೀರಿ ?''

ಆಗೊಬ್ಬ ಅತ್ತಿತ್ತ ನೋಡಿ ಮೆಲ್ಲಗೆ ಹೇಳಿದ, ''ಮೊದಲು ಒಡೆಯನ ಹಿತ್ತಲಲ್ಲಿರೋ ಹುಲ್ಲಿನ ಬಣವೆಗೆ ಬೆಂಕಿ ಹಾಕಾದು. ಅದನ್ನು ಆರಿಸಾಕೆ ಜನ ಬರ್ತಿದ್ದಾಂಗೆ ಅವನ ಮನೆಗೆ ಬೆಂಕಿ ತೋರೋದು. ಆಮೇಲೆ ಆ ಸಬ್‌ಇನ್ಸ್‌ಪೆಕ್ಟರ್ ಬುಡನ್ ಷರೀಫ್‌ಗೆ ಗುಂಡಿಕ್ಕೋದು. ಇಷ್ಟು ಕೆಲಸಾನ್ನ ಮೊದಲಿಗೇ ಮಾಡಿ ಮುಗಿಸ್ಬೇಕು'' ಆತನ ಮಾತು ಮುಗಿಯುವ ಮುಂಚೆಯೇ ಗೌಡರು ಅವನನ್ನು ತಡೆದು, ''ನಿನ್ನ ಪ್ರಲಾಪ ನಿಲ್ಲಿಸು ಸಾಕು ಅವಿವೇಕಿ !'' ಎಂದು ನಿಷ್ಠೂರವಾಗಿ ಹೇಳಿದರು.

ತಮ್ಮೆದುರು ನಿಂತಿದ್ದ ಬಂಡುಕೋರ ರೈತರನ್ನು ತದೇಕ ದೃಷ್ಟಿಯಿಂದ ನೋಡಿದರು. ಅವರ ಕಣ್ಣುಗಳು ಮರುಕ, ತಿರಸ್ಕಾರ, ಭಾವೋದ್ರೇಕದಿಂದ ಹೊಳೆಯುತ್ತಿದ್ದವು.

''ನಿಮ್ಮ ಪ್ಲಾನ್ ಎಷ್ಟು ಸೊಗಸಾಗಿದೆ. ಇದನ್ನು ನಿಮಗೆ ಯಾರು ಹೇಳಿ

ಕೊಟ್ಟರಯ್ಯಾ ?'' ಎಂದು ಕೇಳುತ್ತಿದ್ದಂತೆಯೇ ರೈತರು ತಮ್ಮ ಬೆನ್ನ ಹಿಂದೆ ತಿರುಗಿ ನೋಡತೊಡಗಿದರು. ಇಷ್ಟು ಹೊತ್ತಿಗಾಗಲೇ ಗುಡ್ಡದ ಕಡೆಗೆ ಹೋಗಿದ್ದ ಬಂಡುಕೋರ ರೈತರ ಗುಂಪೆಲ್ಲವೂ ಹಿಂತಿರುಗಿ ಬಂದು ಅಲ್ಲಿ ೩೦-೪೦ ಜನರ ಸಾಕಷ್ಟು ದೊಡ್ಡ ಗುಂಪೇ ಸೇರಿತ್ತು. ಆ ಗುಂಪಿನ ಹಿಂದೆ ಯಾರಿಗೂ ಕಾಣದಂತೆ ನಿಂತಿದ್ದ ಗಡ್ಡಧಾರಿ ವ್ಯಕ್ತಿ ನಗುತ್ತಾ ಮುಂದೆ ಬಂದ.

''ಇವರೇ ನಮ್ಮ ಗುರುಗಳು '' ಎಂದರು ರೈತರು.

ಆತ ಗೋಪಾಲಗೌಡರ ಬಳಿಗೆ ಬಂದು ಉದ್ಧಟತನದಿಂದ ನಿಂತ. ಗೌಡರು ಅವನನ್ನು ಆಶ್ಚರ್ಯದಿಂದ ನೋಡಿ ವಿಚಾರಿಸಿದರು., ''ಯಾರ್ರೀ ನೀವು ?''

''ನಾನು ಯಾರೆಂದು ನಿಮಗೆ ಗೊತ್ತಿಲ್ಲವೇ !''

''ಖಂಡಿತ ಗೊತ್ತಿಲ್ಲ ಮಾರಾಯ ! ಕೃಪೆ ಮಾಡಿ ತಿಳಿಸಿಬಿಡು !''

''ನಾನು ಕೆಳದಿ ಮಠದ ಇಮ್ಮಡಿ ರೇವಣಸಿದ್ಧ ಪ್ರಭು.''

''ಕೆಳದಿ ಮಠದ ಸ್ವಾಮಿಗಳೇನು ? ''

''ಅಲ್ಲ, ಅದರ ಭಕ್ತರು.''

''ಕಾಗೋಡು ಒಡೆಯರ ಮೇಲೆ ನಿಮಗೇಕೆ ಅಷ್ಟು ದ್ವೇಷ ? ''

''ಅವರು ನಮ್ಮ ಆಸ್ತಿ ಅಪಹರಿಸಿದ್ದಾರೆ. ''

''ಏನು ಆಸ್ತಿ ? ''

''ಸಮಸ್ತ ಆಸ್ತಿಯೂ ನಮ್ಮದೇ. ಮಣಗದ್ದೆ, ತಟ್ಟೆಗುಂಡಿ, ಹಿರೇನಲ್ಲೂರು, ಸುಣವಂತೆ, ಶುಂಠಿಕಪ್ಪ, ಯಲಗುಂದಿ, ಇಲ್ಲಿರುವ ಜಮೀನೆಲ್ಲವೂ ನಮ್ಮದೇ.''

''ಭೇಷ್ ! ಭೇಷ್ !'' ಎಂದು ಗೌಡರು ಗಟ್ಟಿಯಾಗಿ ನಕ್ಕು ನುಡಿದರು. ''ಮತ್ತೆ ಇಷ್ಟು ವರ್ಷ ನೀವೇನು ಮಾಡುತ್ತಿದ್ದಿರಿ ? ಈ ವಿಚಾರ ಯಾರಿಗೂ ತಿಳಿದಿಲ್ಲವೇ ?''

''ಅದಕ್ಕೆ ನಾನು ಇಲ್ಲಿ ನೆಲೆಸಿರದಿರುವುದೇ ಕಾರಣ. ನಾನು ರಾಣೆಬೆನ್ನೂರಿನಲ್ಲಿ ಒಂದು ಪ್ರಿಟಿಂಗ್ ಪ್ರೆಸ್ ನಡೆಸುತ್ತಿದ್ದೇನೆ. ನಮ್ಮ ಹಿರೀಕರು ರಾಣಿಚೆನ್ನಮ್ಮನ ಜೊತೆ ರಾಣಿಬಿದನೂರಿಗೆ ದಂಡಯಾತ್ರೆ ಹೋಗಿ ಅಲ್ಲಿ ಒಂದು ಶಾಖೆ ನೆಲೆಸಿತು.''

''ಒಳ್ಳೆಯದು. ಈಗ ನಿಮ್ಮ ದಂಡಯಾತ್ರೆ ಇಲ್ಲಿಗೆ ದಯಮಾಡಿಸಿದ ಕಾರಣ? ಕಾಗೋಡನ್ನು ಎರಡನೇ ಈಸೂರು ಮಾಡೋಕೆ ಹೊರಟಿದ್ದೀರೋ ? ಇಲ್ಲಿ ಯಾರನ್ನು ಗಲ್ಲಿಗೆ ಹಾಕಿಸೋಕೆ ಹವಣಿಸಿದ್ದೀರಿ ? ನನ್ನನ್ನೇ ? ಸವಾಯ್ ಬೀರನಾಯ್ಕರನ್ನೇ ?''

''ಹಾಗೇನಿಲ್ಲ! ನಮ್ಮ ಹಿರೀಕರಿದ್ದ ಇಲ್ಲಿನ ಆಸ್ತಿಗಳನ್ನು ಅಪಹರಿಸಿದವರು ಈ ಒಡೆಯರ್‌ರವರ ಹಿರೀಕರು. ಅದರ ಪ್ರತೀಕಾರಕ್ಕೆ ನಾವು ಬಂದಿದ್ದೇವೆ. ಹೀಗೆ ಪಡೆದುಕೊಂಡ ಜಮೀನುಗಳನ್ನು ಈ ನನ್ನ ದೀವರ ಬಂಧುಗಳಿಗೆ ಹಂಚಿ ಹೋಗಲು ಬಂದಿದ್ದೇನೆ '' ಎಂದು ತನ್ನ ಎರಡು ಕೈಗಳನ್ನು ಚಾಚಿ, ಸುತ್ತ ನಿಂತಿದ್ದ ದೀವ ರೈತರನ್ನೆಲ್ಲಾ ತೋರಿಸಿದ.

ಅದನ್ನು ಕೇಳಿ ಗೌಡರು ನಸುನಕ್ಕರು. ಮೆಚ್ಚುಗೆಯಿಂದ ತಲೆದೂಗಿದರು. ಬಾಯಲ್ಲಿ ಲೊಚ್ ! ಲೊಚ್ ! ಎಂದು ಲೊಚಗುಟ್ಟಿದರು. ಅವರನ್ನುಕುರಿತು ಪ್ರಶ್ನಿಸಿದರು.

''ಈಗ ಏನೇನು ಸಿದ್ಧತೆಗಳನ್ನು ಮಾಡಿಕೊಂಡಿದ್ದೀರಿ. ಕೋವಿ, ಕಠಾರಿ, ಕೊಳ್ಳಿ, ಬೆಂಕಿ, ಸಿಪಾಯಿಗಳು, ರಣತಂತ್ರ ಎಲ್ಲವೂ ಸಿದ್ಧವೇ ? ಇಲ್ಲವೇ ಮತ್ತಿನ್ನೇನಾದರೂ ನೆರವು ಬೇಕೇ ? ಬಾಂಬು ಪಿಸ್ತೂಲು ? '' ಎನ್ನುತ್ತಿದ್ದಂತೆಯೇ ಆಗ,

''ಇದೇ, ಇದೆ. ಪಿಸ್ತೂಲು ಇದೆ ! ಕೋವಿಗಳೂ ಇವೆ ! ಸೀಮೆಎಣ್ಣೆ ದೊಂದುಗಳು ಎಲ್ಲಾ ಸಿದ್ಧವಾಗಿವೆ. ''

''ಭೇಷ್ ! ಭೇಷ್ ! ಎಂಥ ಭರ್ಜರಿ ದಂಡನಾಯಕರು ನಮಗೆ ಸಿಕ್ಕಿಬಿಟ್ಟಿರಿ. ಇಮ್ಮಡಿ ರೇವಣಸಿದ್ಧ ಪ್ರಭುಗಳೇ ! ಇನ್ನೇನು ಚಿಂತೆ ನಮಗೆ '' ಎಂದು ವ್ಯಂಗ್ಯವಾಗಿ ನುಡಿದು ''ಯಾವಾಗ ನಿಮ್ಮ ಧಾಳಿ '' ಎಂದು ಪಿಸುದನಿಯಲ್ಲಿವಿಚಾರಿಸಿದರು.

''ಈ ರಾತ್ರಿ''

''ತುಂಬಾ ಒಳ್ಳೆಯದು ! ತುಂಬಾ ಒಳ್ಳೆಯದು ! '' ಎಂದು ಗೌಡರು ತೆಪ್ಪಗಾದರು. ಆ ಹಿಂಸಾಪ್ರಚೋದಕನನ್ನು ಸುದೀರ್ಘಕಾಲ ಕಣ್ಣಲ್ಲಿ ಕಣ್ಣಿಟ್ಟು ತೀಕ್ಷ್ಣ ಪರೀಕ್ಷಕ ದೃಷ್ಟಿಯಿಂದ ಎವೆಯಿಕ್ಕದೆ ನೋಡಿದರು. ಅವನು ಮೊದಲು ತಲೆತಗ್ಗಿಸಿ ನೆಲ ನೋಡತೊಡಗಿದ. ಒಡನೆಯೇ ಗೌಡರು ಕಣಸೆ ಚೆಟ್ಟನನ್ನೂ ಬಿಳಿಯನ ಕಣ್ಣ, ಕೃಷ್ಣಪ್ಪ, ಚೊಂಟಕೆಂಚ ಮೊದಲಾದ ರೈತ ಕಟ್ಟಾಳುಗಳಿಗೆ ಏನೋ ಕಿವಿಯಲ್ಲಿ ಹೇಳಿದರು. ಅವರೆಲ್ಲರೂ ಇಮ್ಮಡಿ ರೇವಣಸಿದ್ಧ ಪ್ರಭುಗಳ ಬಳಿ ಬಂದುಸುತ್ತಲೂ ನಿಂತರು.

''ಇವರೆಲ್ಲಾ ನಿಮ್ಮ ಅಂಗರಕ್ಷಕರು ಪ್ರಭುಗಳೇ! ಇನ್ನು ಮುಂದೆ ನೀವೇ ನಮ್ಮ ಧಣಿಗಳು. ನಿಮ್ಮನ್ನು ಕಟ್ಟೆಚ್ಚರದಿಂದ ನೋಡಕೊಳ್ಳಬೇಕಲ್ಲವೇ ? '' ಎಂದರು. ಆದರೆ ಇಮ್ಮಡಿ ರೇವಣಸಿದ್ಧಪ್ಪ ಪ್ರಭುಗಳು ಯಾಕೋ ಕಸಿವಿಸಿಗೊಂಡು ಇದ್ದಲ್ಲಿಯೇ ಮಿಸುಕಾಡತೊಡಗಿದರು. ಅತ್ತಿತ್ತ ನೋಡತೊಡಗಿದರು. ಅವರನ್ನು ಸುತ್ತುವರೆದಿದ್ದ ಪ್ರತಿಯೊಬ್ಬ ರೈತನ ಕೈಯಲ್ಲೂ ಹರಿತವಾದ ಕುಡುಗೋಲುಗಳು ಇದ್ದವು. ಆಗ

ಗೌಡರು ಪ್ರಭುಗಳನ್ನು ತೀಕ್ಷ್ಣವಾಗಿ ನೋಡಿ, ಅವರನ್ನು ಬೆರಳು ಮಾಡಿ, ರೈತರೆಲ್ಲರಿಗೂ ತೋರಿಸುತ್ತಾ ವಿಚಾರಿಸಿದರು.

''ಈ ಮಹಾಪುರುಷರನ್ನು ನೀವು ಯಾರಾದರೂ ಮೊದಲು ಈ ಪ್ರಾಂತ್ಯದಲ್ಲಿ ನೋಡಿದ್ದೀರಾ ? ಇವರು ಇಲ್ಲಿ ಎಂದಾದರೂ ವಾಸ ಮಾಡಿದ್ದಾರಾ ? ನೀವು ಯಾರಾದ್ರೂ ನೋಡಿದ್ರೆ ಹೇಳಿ !''

''ಮೊದಲೆಂದೂ ನೋಡಿಲ್ಲ ಗೌಡರೇ ! ನಾವ್ಯಾಕೆ ಸುಳ್ಳಾಡಬೇಕು. ಈಚೆಗೆ ಒಂದೆರಡು ದಿನಗಳಿಂದಷ್ಟೆ ಈ ಸ್ವಾಮಿಗಳು ಇತ್ತ ಕಾಣ ಬಂದಿರೋದು !''

''ಒಂದೆರಡು ದಿನಗಳಿಂದ ಮಾತ್ರ ಇವರನ್ನು ನೋಡಿರಬಹುದು. ಆದ್ರೆ, ಅದಕ್ಕೂ ಮುಂಚೆ ಇವರ ವಿಚಾರವಾಗಿ ಏನಾದ್ರೂ ಕೇಳಿದ್ದಿರಾ ? ಇವರು ಯಾರು ? ಎತ್ತಾ ? ಏನೋ ಹೇಳ್ತಾ ಇದ್ದಾರಲ್ಲ . ಇವರೇ ನಿಜವಾದ ಭೂಮಾಲೀಕರು ಅಂತ. ಇದು ನಿಜಾನಾ ? ಸುಳ್ಳಾ ? ನಿಮಗೆ ಯಾರಿಗಾದ್ರೂ ತಿಳಿದಿದ್ರೆ ಹೇಳ್ರಯ್ಯಾ , ಹೇಳಿ.''

''ನಮಗೇನೇನೂ ತಿಳೀದು ಗೌಡರೇ ! '' ಎಂದು ಬಿನ್ನವಿಸಿಕೊಂಡರು ರೈತರು. ಗೌಡರು ದೀರ್ಘವಾಗಿ ನಿಟ್ಟುಸಿರು ಬಿಟ್ಟು ಉದ್ಗಾರ ಮಾಡಿದರು. ''ಮತ್ತೇ ನೀವೇಂಥ ದಡ್ಡರಯ್ಯ ! ಗೊತ್ತು ಗುರಿ ಇಲ್ಲದೆ ಇರೋ ಈ ಮಹಾನುಭಾವನ ಹಿಂದೆ ಕತ್ತಿ , ಕೋವಿ, ಕೊಳ್ಳಿ ಹಿಡಿದು ದಂಡು ಕಟ್ಟಿಕೊಂಡು ಹೋಗೋಕೆ ನಿಂತಿದ್ದೀರಲ್ಲಾ !''

ಗೌಡರು ಹೀಗೆ ಎನ್ನುತ್ತಿದ್ದಂತೆಯೇ ಒಬ್ಬ ಯುವಕ, ಗಟ್ಟಿಯಾಗಿ ಅಳು ಮೂತಿ ಮಾಡಿ ಆಕ್ಷೇಪಣೆ ಎತ್ತಿದ. ''ಮತ್ತಿನ್ನೇನು ಮಾಡೋದು, ಗದ್ದೆ ಉಳಕೆ ಹೋಗಾದು; ದನಕ್ಕೆ ಬಡಿಸ್ಕೊಂಡಂಗೆ ಬಡೀಸ್ಕೊಳ್ಳೋದು. ಪೋಲೀಸನೋರ ಬೂಟ್ ಕಾಲಾಗೆ ವದಿಸ್ಕೋಳೋದು. ಚಿನ್ನಪ್ಪನ ಕೂಲಿಗಳಿಂದ ಉಗಿಸ್ಕೊಳ್ಳೋದು. ಇದೇ ನೀವು ಮಾಡ್ತಿರೋ ಸತ್ಯಾಗ್ರಹ. ಇಂಥ ಬಾಳು ಏಕೆ ಬಾಳ್ಬೇಕು . ನಾವು ಏಟಿಗೆ ಎದುರೇಟು ಕೊಡೇದೆ ಸೈ !'' ಎಂದು ಭಾವೋದ್ವೇಗದಿಂದ ನುಡಿದು ಕಣ್ಣೀರಿಟ್ಟ. ಗೌಡರು ಮೌನವಾದರು.

ರೈತರ ಗುಂಪಿನಲ್ಲಿ ಗುಜುಗುಜ ಗದ್ದಲ ಪ್ರಾರಂಭವಾಯಿತು. ಎಲ್ಲರೂ ತಮ್ಮ ತಮ್ಮಲ್ಲೇ ಮಾತನಾಡತೊಡಗಿದರು. ''ನೋಡು ನನಗೆ ಹ್ಯಾಂಗೆ ಬಡಿದಿದ್ದಾರೆ. ದನ ಚಚ್ಚಿದಂಗೆ ಚಚ್ಚಿದಾರೆ. ಆ ಚಿನ್ನಪ್ಪನ ಕಡೆ ಲೌಡಿ ಮಕ್ಕಳು'' - ಎಂದು ಒಬ್ಬ ತನ್ನ ಬೆನ್ನ ಮೇಲೆ ಮೂಡಿದ್ದ ಕಪ್ಪು ಬರೆಯನ್ನು ತೋರಿಸಿದರೆ, ಇನ್ನೊಬ್ಬ ತನ್ನ ಇಂಗಿ ಹೋದ ಎಡಗಣ್ಣನ್ನು ತೋರಿಸಿ, ''ಪೋಲೀಸರ ಲಾಠೀ ಏಟು ನನ್ನ ಕಣ್ಣಿಗೆ ಬಿದ್ದು ಎಡಗಣ್ಣ ಗುಡ್ಡೆನೇ ಹೊರಕ್ಕೆ ಬಂತು. ನನ್ನ ಕಣ್ಣೇ ಹೋಯ್ತು '' ಎಂದು ಇನ್ನೊಬ್ಬ ದೂರುತ್ತಿದ್ದ. ಮಗದೊಬ್ಬ ''ನನ್ನ ಹೆಂಡತಿ ಕೈಬೆರಳನ್ನೇ ಮುರಿದು ಹಾಕ್ಯಾರೆ ಲೌಡಿ

ಮಕ್ಕಳು. ಅವಳ ಕೈನಲ್ಲಿದ್ದ ಹಸುಗೂಸನ್ನೂ ಬಿಟ್ಟಿಲ್ಲ. ಅದರ ಕೈ ಕೂಡ ಮುರಿದುಹೋಗದೆ'' ಎಂದು ಗೋಳಾಡಿದ.

''ನಿಮಗೇನು ಗೊತ್ತಾಗ್ತದೆ ನಮ್ಮ ಬವಣೆ ? ಗದ್ದೆಗೆ ನುಗ್ಗಿ, ಒದೆ ತಿನ್ನಿ ಇದೇ ಹೇಳ್ತೀರಿ. ಈ ನಮ್ಮ ಪ್ರಭುಸ್ವಾಮಿಗಳೇ ಸೈ ! ಏಟಿಗೆ ಏದುರೇಟು ಕೊಡಿ ಅನ್ನೋ ಧೀರರು. ನಾವು ಅವರು ಹೇಳ್ದಂಗೆ ಕೇಳ್ತೀವಿ. ಆ ಒಡೆಯನ ಮನೆಗೆ ಬೆಂಕಿ ಇಡೋದೆ ಸೈ. ಏಟಿಗೆ ಏಟು ! ರಕ್ತಕ್ಕೆ ರಕ್ತ ! '' ಎಂಬ ಸಿಟ್ಟಿನ ಮಾತುಗಳು ಎಲ್ಲರಿಂದಲೂ ಎಲ್ಲ ಕಡೆಯಿಂದಲೂ ಕೇಳಿ ಬರತೊಡಗಿದವು.

ಅವರ ಮಾತುಗಳನ್ನು ಕೇಳಿ ಗೋಪಾಲಗೌಡರು ಕಣ್ಣಲ್ಲಿ ನೀರು ತುಂಬಿಕೊಂಡರು. ಅವರು ತಲೆತಗ್ಗಿಸಿ ಕಣ್ಣೀರೊರೆಸಿಕೊಂಡು, ಮಾತಾಡ ತೊಡಗಿದರು. ಅವರು ಭಾವಪರವಶರಾಗಿದ್ದರು. ಅವರ ಧ್ವನಿ ಗದ್ಗದಿತವಾಗಿತ್ತು.

''ಈಗೇನು ಮಾಡೋಣ ! ನ್ಯಾಯ, ಕಾನೂನು, ನೀತಿ, ಧರ್ಮ ಎಲ್ಲಾ ನಮ್ಮ ಕಡೆಗೇ ಇದ್ದರೂ ಸರ್ಕಾರದ ಬೆಂಬಲ, ಅನ್ಯಾಯ ಮಾಡ್ತಾ ಇರೋ ಜಮೀನ್ದಾರನ ಕಡೆಗೇ ಇದೆ. ಅವನು ನಡೆಸ್ತಾ ಇರೋ ದೌರ್ಜನ್ಯ, ಹಿಂಸಾಚಾರಕ್ಕೆ ಬೆಂಬಲ ಕೊಡ್ತಿದೆ. ಇದರ ಎಲ್ಲಾ ಉದ್ದೇಶ ನಮ್ಮನ್ನ ಅಂದ್ರೆ ನೀವು ರೈತರನ್ನು ಗೇಣಿದಾರರನ್ನು ಪ್ರತಿಹಿಂಸೆ ಮಾಡಲು ಪ್ರಚೋದಿಸುವುದೇ ಆಗಿದೆ. ಈ ಒಳಗುಟ್ಟನ್ನು ನೀವು ಚೆನ್ನಾಗಿ ತಿಳ್ಕೋಬೇಕು! ''

ಇದುವರೆಗೆ ನಮ್ಮಲ್ಲಿ ನೂರಾರು ಜನಕ್ಕೆ ಅವರು ಕೊಡಬಾರದ ಚಿತ್ರಹಿಂಸೆ ಕೊಟ್ಟಿದ್ದಾರೆ. ಅನ್ಯಾಯದ ಮೇಲೆ ಅನ್ಯಾಯ ಮಾಡಿದ್ದಾರೆ. ದೌರ್ಜನ್ಯದ ಮೇಲೆ ದೌರ್ಜನ್ಯ ನಡೆಸಿದ್ದಾರೆ. ಹೆಂಗಸರು ಮಕ್ಕಳು ಎಂದು ಕರುಣೆ ಇಲ್ಲದೆ ಲಾಠಿ ಚಾರ್ಜ್ ಮಾಡಿದ್ದಾರೆ. ಕಲ್ಲು ದುಂಡಿಯಿಂದ ಹೊಡೆದಿದ್ದಾರೆ ; ರಕ್ತ ಸುರಿಸಿದ್ದಾರೆ. ಕಣ್ಣೀರಿಡಿಸಿದ್ದಾರೆ. ನಿಮ್ಮ ಬಾಳು ಬದುಕಿಗೆ ಬೆಂಕಿ ಇಟ್ಟಿದ್ದಾರೆ.

''ಆದರೆ ನೀವು ಜಮೀನ್ದಾರನ ಮನೆಯ ಮೇಲೆ ಒಂದು ಕಲ್ಲನ್ನೂ ಬೀರಿಲ್ಲ. ಅವನ ಕಡೆಯ ಒಂದು ನಾಯಿಗೂ ಕಾಲು ಮುರಿದಿಲ್ಲ. ಅತ್ಯಂತ ಶಾಂತಿಯಿಂದ ನಿಮ್ಮ ಹೋರಾಟ ನಡೆಸಿಕೊಂಡು ಹೋಗುತ್ತಿದ್ದೀರಿ. ನಿಮ್ಮ ಶಿಸ್ತು ನಿಮ್ಮ ಶಾಂತಿ, ನಿಮ್ಮ ಕೆಚ್ಚು ನಿಮ್ಮ ಸಹನೆ ಇವೆಲ್ಲಾ ಸಾಮಾನ್ಯರಿಗೆ ಬರೋದಿಲ್ಲ. ಈಗೇನಾದ್ರೂ ಮಹಾತ್ಮಾಗಾಂಧಿಯವರು ಇಲ್ಲಿ ಇದ್ದು ನಿಮ್ಮ ಹೋರಾಟವನ್ನು ಕಣ್ಣಾರೆ ಕಂಡಿದ್ದರೆ ನಿಮ್ಮನ್ನು ವೀರಾದಿ ವೀರರು, ಭಾರತಮಾತೆಯ ಸುಪುತ್ರರು ಎಂದು ಅಭಿನಂದಿಸುತ್ತಿದ್ದರು. ನಿಮ್ಮೊಡನೆ ಅವರೂ ಸೇರಿಕೊಂಡು ಹೋರಾಟ ಮಾಡುತ್ತಿದ್ದರು. ಈಗ ಅವರು ನಿಮ್ಮೊಡನೆ ಇಲ್ಲ ಎಂದುಕೊಳ್ಳಬೇಡಿ. ಅವರ ಆತ್ಮ ನಿಮ್ಮೊಡನೆ ಇದೆ. ನಿಮ್ಮ ಅಹಿಂಸಾತ್ಮಕ

ಸತ್ಯಾಗ್ರಹದಲ್ಲಿ ಇದೆ. ಮೊನ್ನೆ ಇಲ್ಲಿಗೆ ಬಂದು ನಿಮ್ಮೊಡನೆ ಸೇರಿ ಸತ್ಯಾಗ್ರಹ ಮಾಡಿದ ಡಾ|| ರಾಮಮನ್ನೋಹರ ಲೋಹಿಯಾ ಅವರನ್ನು ಆಗಲೇ ಮರೆತುಬಿಟ್ಟಿರಾ ? ಅವರು ಯಾರು ? ಮಹಾತ್ಮರ ಶಿಷ್ಯರು. ಪ್ರತೀಕಾರ ಮನುಷ್ಯನ ಸಹಜ ಪ್ರತಿಕ್ರಿಯೆ. ಈ ಸಹಜ ಪ್ರತಿಕ್ರಿಯೆ ಬಿಟ್ಟವರೇ ದೊಡ್ಡವರು. ಕ್ಷಮೆ ದೊಡ್ಡವರ ದಾರಿ ! ನಾವು ದೊಡ್ಡವರ ಹಾದಿ ಅನುಸರಿಸೋಣ. ಡಾ|| ಲೋಹಿಯಾ ತೋರಿದ ದಾರಿಯಲ್ಲಿ ನಡೆಯೋಣ ''

''ಇಷ್ಟು ದಿನಗಳ ಕಾಲ ಉಳಿಸಿಕೊಂಡು ಬಂದ ಈ ಸತ್ಯಾಗ್ರಹದ ಕೀರ್ತಿಗೆ ಕಳಂಕ ತರುವುದು ಬೇಡ. ನಾನು ನಿಮ್ಮನ್ನು ಕೈ ಮುಗಿದು ಬೇಡಿಕೊಳ್ಳುತ್ತೇನೆ, ಇಂದು ಬಂದು ನಾಳೆ ಹೊರಟು ಹೋಗುವ ಈ ರಾಣಿಬೆನ್ನೂರಿನ ಪ್ರಭುಗಳ ಹಿಂದೆ ಹೋಗಬೇಡಿ. ಹಿಂಸಾಚಾರಕ್ಕೆ ಇಳಿಯಬೇಡಿ ! '' ಎಂದು ಭಾವೋದ್ವೇಗದಿಂದ ಮಾತನಾಡಿದರು. ರೈತರಲ್ಲಿ ಬಹುಪಾಲು ಜನರು ಅವರ ಮಾತುಗಳನ್ನೇನೋ ಮೆಚ್ಚಿಕೊಂಡರು. ಆದರೆ ಇಮ್ಮಡಿ ರೇವಣಸಿದ್ಧ ಪ್ರಭುಗಳ ಹಿಂಸಾತ್ಮಕ ಮಾರ್ಗ ತುಂಬಾ ಆಕರ್ಷಕವಾಗಿ ಕಾಣುತ್ತಿತ್ತು. ಅವರು ಯಾವ ಪ್ರತಿಕ್ರಿಯೆಯನ್ನೂ ತೋರದೆ ಮೌನವಾಗಿದ್ದರು.

ಗೌಡರು, ಈಗ ನಮ್ಮ ಕಡೆಗೆ ನೋಡಲು ಸ್ವಲ್ಪ ಅವಕಾಶ ಸಿಕ್ಕಿತು. ತಮ್ಮ ಸಂಗಾತಿಗಳಾದ ನಮ್ಮನ್ನು ಕರೆದು ಅಲ್ಲಿನ ರೈತರಿಗೆಲ್ಲರಿಗೂ ತೋರಿಸಿ, ''ನೋಡಿ ಈ ಗೆಳೆಯರೆಲ್ಲಾ ಬೆಂಗಳೂರು, ಕೋಲಾರ, ಕೆ.ಜಿ.ಎಫ್. ಗಳಿಂದ ಬಂದಿದ್ದಾರೆ. ಆ ಮಾರ್ಗ ಬಿಟ್ಟು ಅತ್ತಿತ್ತ ಕದಲುವುದಿಲ್ಲ. ನೀವೂ ಕದಲಬಾರದು. ಅವರೊಡನೆ ಹೋಗಿ, ಅವರು ನಿಮ್ಮ ಬೆಂಬಲಕ್ಕೆ ಬಂದಿರುವಾಗ ನೀವೂ ಅವರ ಬೆಂಬಲಕ್ಕೆ ಹೋಗದಿದ್ದರೆ ಅದು ಮರ್ಯಾದೆಯೇ ? ನ್ಯಾಯವೇ ? ಅವರೊಡನೆ ಯಾರೂ ಹೋಗ್ತೀರಾ ಈ ಕಡೆ ಬನ್ನಿ ! '' ಎಂದು ಕರೆದರು.

ಅವರ ಕರೆಯನ್ನು ಯಾರೂ ಲೆಕ್ಕಿಸಲೇ ಇಲ್ಲ. ಯಾವ ಪ್ರತಿಕ್ರಿಯೆಯೂ ರೈತರಿಂದ ಬರಲಿಲ್ಲ. ಕೆಲವು ನಿಮಿಷಗಳ ತೀವ್ರ ಮುಜುಗರದ ಮೌನದ ಬಳಿಕ ಜನರು ಅತ್ತಿತ್ತ ಚದುರತೊಡಗಿದರು.

''ಅವರು ಬೆಂಗಳೂರಿನಿಂದಲೇ ಬಂದಿರಬಹುದು. ಆದರೆ ಅವರಿಗೆ ಇನ್ನೂ ಏಟು ಬಿದ್ದಿಲ್ಲ. ಏಟು ಬೀಳಲಿ, ಅವರೂ ಇಲ್ಲಿಂದ ಕಂಬಿ ಕೀಳೋರೆ ! ಹೋಗಿ ಹೋಗಿ ಗೌಡ್ರೇ ! ಯಾರು ಒದೆ ತಿನ್ನೋಕೆ ಒಪ್ತಾರೆ ? '' ಎಂದು ನುಡಿದ ಒಬ್ಬ ರೈತ.

ಅವನ ನುಡಿ, ಅವನ ನಡತೆ ಗೋಪಾಲಗೌಡರಿಗೆ ಕೆರಳಿಸಿತು, ಅವರು ಕನಲಿ ಕೆಂಡವಾದರು. ''ಇಲ್ಲಿ ಬಾರಯ್ಯಾ ನೀನು '' ಎಂದು ಕರೆದರು. ಅವನು ಧೈರ್ಯವಾಗಿ ತನ್ನ ಕೋವಿಯೊಡನ ಗೌಡರ ಮುಂದೆ ಬಂದು ನಿಂತ. ''ಯಾರು ನೀನು ?''

''ನಾನು ಮಂದಗದ್ದೆ ವೆಂಕ್ಯಾ ....''

''ಹೀಗೆ ಮಾತಾಡೋಕೆ ನಿನಗೆ ನಾಚಿಕೆ ಆಗೋಲ್ವೆ? ಏನು ಹೇಳ್ದೆ ನೀನು ? ಏಟು ತಿಂದ ಮೇಲೆ ಅವರೂ ಇಲ್ಲಿಂದ ಕಂಬಿ ಕೀಳೋರೆ ಅಂದೆ ಅಲ್ವಾ! ಏಟು ತಿಂದು ಕಂಬಿ ಕೀಳೋಕೆ ಅವು ನಿನ್ನಂತ ಹೇಡಿಗಳೇ ? ಈಗ ನಿಮ್ಮೋರು ನೂರಾರು ಜನ ಮತ್ತೆ ಮತ್ತೆ ಸತ್ಯಾಗ್ರಹ ಮಾಡ್ತಿಲ್ವೇ ? ಏಟು ತಿನ್ನುತ್ತಾ ಇಲ್ವೆ ? ಪೋಲೀಸಿನೋರಿಗೆ ಚಳ್ಳೆ ಹಣ್ಣು ತಿನ್ನಿಸಿ ಮತ್ತೆ ಮತ್ತೆ ಹೋರಾಟಕ್ಕೆ ನುಗ್ಗುತ್ತಾ ಇಲ್ವೆ ? '' ಎಂದು ಪ್ರಶ್ನಿಸಿದರು. ಅವರ ಎದೆ ಉದ್ವೇಗದಿಂದ ಏರಿಳಿಯುತ್ತಿತ್ತು. ಅವರ ಕಣ್ಣುಗಳು ಕೋಪದಿಂದ ಕೆಂಡ ಉಗುಳುತ್ತಿದ್ದುವು. ಅವರು ಹಠಾತ್ತನೇ ಅವನ ಕೋವಿಯ ಮೇಲೆ ಕೈ ಇರಿಸಿ ಹೇಳಿದರು. ''ನೀನೊಬ್ಬ ಹೇಡಿ ! ನಿನಗೆ ಈ ಕೋವಿ ಒಂದು ಕೇಡು !'' ಹಾಗೆಂದವರೇ ಕಸಕ್ಕೆಂದು ಅವನ ಕೋವಿಯನ್ನು ಕಸಿದುಕೊಂಡರು. ಅದನ್ನು ಮೇಲಕ್ಕೆ ಎತ್ತಿ ಹಿಡಿದು ಗಟ್ಟಿಯಾಗಿ ಕೂಗಿ ಹೇಳಿದರು.

''ಇವೆಲ್ಲಾ ಹೇಡಿಗಳ ಆಯುಧಗಳು. ಅವನ್ನೆಲ್ಲಾ ಇತ್ತ ಕಡೆಗೆ ಕೊಡಿ. ಇಲ್ಲಿ ಕೊಡಿ !'' ಕಣಸೆ ಚೆಟ್ಯಾನಾಯ್ಕ ಮತ್ತಿತರ ಅವರ ಕಟ್ಟಾ ಅನುಯಾಯಿಗಳಿಗೆ ಕೂಗಿ ತಿಳಿಸಿದರು.

''ಎಲ್ಲರ ಹತ್ರ ಇರೋ ಕೋವಿಗಳನ್ನು ಕಸಕೊಳ್ಳಿ !''ಎನ್ನುತ್ತಾ ತಮ್ಮ ಹತ್ತಿರವಿದ್ದ ಒಬ್ಬಿಬ್ಬರ ಕೋವಿಗಳನ್ನು ತಾವೇ ಸ್ವತಃ ಕಸಿದುಕೊಳ್ಳಲಾರಂಭಿಸಿದರು.

''ಎಚ್ಚರ ! ಗೌಡರೇ ಮದ್ದು ಚರೆ ತುಂಬವ್ರೆ '' ಯಾರೋ ಗುಂಪಿನಿಂದ ಕೂಗಿ ಎಚ್ಚರಿಸಿದರು. ಅಷ್ಟರಲ್ಲಿ ಒಂದು ಕೋವಿಯಿಂದ ಮದ್ದು ಸಿಡಿದೇ ಬಿಟ್ಟಿತು !

'ಢಮಾರ್ ' ಶಬ್ದದಿಂದ ಜನರು ಬೆಚ್ಚಿದರು. ಅವಾಕ್ಕಾದರು. ಗಾಬರಿಯಿಂದ ಅತ್ತಿತ್ತ ಓಡಿದರು. ಗೌಡರ ಕೈಯಲ್ಲೇ ಇದ್ದ ಕೋವಿ ಸಿಡಿದಿದ್ದು. ದೈವವಶಾತ್ ಗುಂಡು ಗಾಳಿಗೆ ಹಾರಿತ್ತು. ಯಾರಿಗೂ ಅಪಾಯವಾಗಿರಲಿಲ್ಲ. ಎಲ್ಲರೂ ಹೆದರಿ ಸ್ಥಬ್ಧರಾಗಿ ನಿಂತರು.

ಗೌಡರು ಈ ಅವಘಡದಿಂದ ತತ್ತರಿಸಿ ಹೋಗಿದ್ದರು. ಅದೃಷ್ಟ ಚೆನ್ನಾಗಿತ್ತು ! ಇಲ್ಲದಿದ್ದರೆ ಸತ್ಯಾಗ್ರಹ ಮಾಡಲು ಬಂದಿದ್ದ ನಾವೆಲ್ಲ ಅವರ ಉತ್ತರಕ್ರಿಯೆಗೆ ಹಾಜರಾಗಬೇಕಾಗಿತ್ತು. ಆಗ ನಿಟ್ಟುಸಿರಿಡುತ್ತಾ ಗೌಡರು ನುಡಿದರು. ಅವರ ಕಣ್ಣುಗಳು ಒದ್ದೆಯಾಗಿದ್ದವು. ಧ್ವನಿ ಗದ್ಗದಿತವಾಗಿತ್ತು.

''ಆ ಗುಂಡು ನನ್ನನ್ನೇ ಬಲಿ ತೆಗೆದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಆಗಲಾದರೂ ನೀವು ಬುದ್ಧಿ ಕಲಿತುಕೊಳ್ಳುತ್ತಿದ್ದಿರಿ ಅಂತ ಕಾಣುತ್ತೆ. ಆದರೆ ಚಿಂತೆ

ಮಾಡ್ಬೇಡಿ. ಒಂದು ಮಾತು ಸ್ಪಷ್ಟವಾಗಿ ತಿಳ್ಕೊಳ್ಳಿ. ಬೇಕಾದ್ರೆ ನಿಮ್ಮ ಕೋವಿಗಳಿದ ನನ್ನನ್ನು ಇಲ್ಲೇ ಸುಟ್ಟು ಹಾಕಿ; ಆಮೇಲೆ ನೀವು ಜಮೀನ್ದಾರನ ಮೇಲೆ ಕೈ ಎತ್ತಬೇಕು. ನನ್ನ ಮೈಯ್ಯಲ್ಲಿ ಒಂದು ಹನಿ ರಕ್ತ ಇರೋವರ್ಗ್ಗೂ ನಾನು ಈ ಕೆಲ್ಸ ಮಾಡಲು ನಿಮ್ಮನ್ನು ಬಿಡೋಲ್ಲ. ನನ್ನ ಹೆಣದ ಮೇಲೆ ನೀವು ಜಮೀನ್ದಾರನ ಮನೆ ಸುಡೋಕೆ ಹೋಗ್ಬೇಕು. ಕೊಲೆ, ಕೊಳ್ಳೆಗೆ ತೊಡಗಬೇಕು. ಚೆನ್ನಾಗಿ ತಿಳ್ಕೊಳ್ಳಿ ಈ ಮಾತನ್ನು'' ಎಂದು ಸ್ಪಷ್ಟವಾಗಿ ಖಡಾಖಂಡಿತವಾಗಿ ಗುಂಡು ಹೊಡೆದಂತೆ ಹೇಳಿ ನಮ್ಮೊಡನೆ ನಡೆದು ಬಂದರು.

ಎರಡು ಹೆಜ್ಜೆ ಬಂದವರೇ ಹಿಂತಿರುಗಿ, ಖಾರವಾದ ಧ್ವನಿಯಲ್ಲಿ ವಿಚಾರಿಸಿದರು. ''ಎಲ್ಲಿ ಆ ಹೈಗ ಮಲ್ಲ! ಇಮ್ಮಡಿ ರೇವಣಸಿದ್ಧ ಪ್ರಭು. ಇಮ್ಮಡಿಯೋ, ಮುಮ್ಮಡಿಯೋ ಸಾಲದ್ದಕ್ಕೆ 'ಪ್ರಭು' ಬೇರೆ ಕೊಸರಿಗೆ'' ಎಂದು ನಿಂತರು. ತಿರಸ್ಕಾರದಿಂದ ಹಿಂತಿರುಗಿ ನೋಡಿದರು. ಆ ಗಡ್ಡಧಾರಿ ಮನುಷ್ಯ ಅಲ್ಲಿಂದ ಅಂತರ್ಧಾನನಾಗಿದ್ದ! ''ಮಲೆನಾಡಿನ ಕಾನನಗಳಲ್ಲಿ ಆಧುನಿಕ ಹೈಗಮಲ್ಲರಿಗೇನೂ ಕೊರತೆ ಇಲ್ಲ. ಬನ್ನಿ ಕಳ್ಳ! ಇಲ್ಲಿಂದ ಓಡಿಬಿಟ್ಟಿದ್ದಾನೆ!'' ಎಂದು ನಮ್ಮನ್ನು ಪಕ್ಕದ ಹಳ್ಳಿಗೆ ಕರೆದೊಯ್ದರು. ಎಲ್ಲ ರೈತರೂ ಅವರನ್ನು ಹಿಂಬಾಲಿಸಿದರು.

❊ ❊ ❊ ❊

೪.

ದೀನರ ಆಕ್ರಂದನ ದುರುಳರ ಅಟ್ಟಹಾಸ

ಕಾಲ ವೇಗವಾಗಿ ಚಲಿಸುತ್ತಿತ್ತು. ನಾವು ಗೋಪಾಲಗೌಡರು ನಿರೂಪಿಸುತ್ತಿದ್ದ ಹೈಗಮಲ್ಲನ ಸಂಗತಿಯನ್ನು ಕುತೂಹಲದಿಂದ ಆಲಿಸುತ್ತಾ ಹಳ್ಳಿಗೆ ಸಾಗಿ ಬಂದೆವು.

ಆದಷ್ಟು ಹೆಚ್ಚು ಜನರೊಂದಿಗೆ ಸತ್ಯಾಗ್ರಹವನ್ನು ನಡೆಸಬೇಕೆಂಬ ನನ್ನ ಆಸೆಯನ್ನು ನಾನು ಗೋಪಾಲಗೌಡರೊಂದಿಗೆ ಹೇಳಿಕೊಂಡೆ. ಅವರಿಗೂ ಅದೇ ರೀತಿಯ ಆಸೆಯಿತ್ತು. ಆದರೆ ಅದು ಕೈಗೂಡಲಿಲ್ಲ.

''ಈಗ ಹಿಂಸೆ-ಅಹಿಂಸೆಯ ಚರ್ಚೆ, ಜಿಜ್ಞಾಸೆ ಬೇಡ, ನಮ್ಮ ಹಾದಿ ಅಹಿಂಸೆಯ ಹಾದಿ ; ಮಹಾತ್ಮರು ತೋರಿದ ಹಾದಿ. ಆದರ ಬಗೆಗೆ ಯಾರಿಗೂ ಯಾವ ರೀತಿಯ ಸಂಶಯವೂ ಬೇಡ. ನಮಗೆ ಕತ್ತಿ ಹಿರಿದು, ಕುದುರೆಯ ಮೇಲೆ ಕುಳಿತು, ಯುದ್ಧಕ್ಕೆ ಧಾವಿಸುವುದೇನೋ ಅತ್ಯಂತ ಪ್ರಿಯ. ಆದರೆ ನಮ್ಮ ನಾಯಕರು ಆ ಹಾದಿಯನ್ನು ತಿರಸ್ಕರಿಸಿದ್ದಾರೆ. ಆ ಹಾದಿ ಹಿಂಸೆ -ಪ್ರತಿಹಿಂಸೆಯ ಮರಿಗಳನ್ನು ಇಡುತ್ತಾ ಸಾಗುತ್ತದೆ. ಸಾವಿರಾರು ವರ್ಷಗಳಿಂದ ಇಡೀ ಜಗತ್ತಿನಲ್ಲಿ ಲಕ್ಷಾಂತರ ಯುದ್ಧ ರಕ್ತಪಾತಗಳು ನಡೆದ್ದಿದರೂ, ಸ್ಮಶಾನ ಶಾಂತಿ ಆಗಾಗ್ಗೆ ದೊರೆತಿದೆಯೇ ವಿನಃ ನಿಜವಾದ ಜೀವಂತ ಪ್ರೇಮಮಯ ಶಾಶ್ವತ ಶಾಂತಿ ಜಗತ್ತಿಗೆ ದೊರತೇ ಇಲ್ಲ. ಇಂಥ ಅಮೂಲ್ಯ ದಿವ್ಯ ಶಾಂತಿಯನ್ನು ಸಾಧಿಸುವ ಏಕೈಕ ಮಾರ್ಗ - ಗಾಂಧೀಜಿಯವರ ಅಹಿಂಸಾ ಸತ್ಯಾಗ್ರಹ

ಮಾರ್ಗ. ಅದನ್ನೇ ನಾವೀಗ ಕಾಗೋಡಿನಲ್ಲಿ ನಡೆಸ್ತಾ ಇರೋದು. ಇಂದಿನ ಸತ್ಯಾಗ್ರಹ ಬಹಳ ಮಹತ್ವದ್ದು. ಅಹಿಂಸಾತ್ಮಕವಾಗಿಯೇ ನಡೆಯಬೇಕು. ಅದಕ್ಕೆ ಯಾರು ಸಿದ್ಧರಾಗಿದ್ದೀರಿ ? '' ಎಂದು ಗೌಡರು ಅಲ್ಲಿ ಸೇರಿದ್ದವರೆಲ್ಲರಿಗೂ ಕೇಳಿದರು.

ಅವರ ಸವಾಲಿಗೆ ಓಗೊಟ್ಟವರು ನಾವು ಮತ್ತು ಸಿದ್ಧಾಪುರ ಮತ್ತು ಮಾಸೂರಿನ ಕೆಲವು ರೈತರು. ''ವಿಳಂಬ ಬೇಡ ! ಬೇಗ ಸಿದ್ಧತೆಗಳನ್ನು ಮಾಡಿಕೊಂಡು ಹೊರಡಿ ಇಂದಿನ ಸತ್ಯಾಗ್ರಹವೇನೋ ನಡೆಯುತ್ತದೆ. ನನ್ನ ಯೋಚನೆ ನಾಳೆಯ ಸತ್ಯಾಗ್ರಹದ್ದು. ನಾಡಿದ್ದಿನ ಸತ್ಯಾಗ್ರಹದ್ದು. ಅದರ ವ್ಯವಸ್ಥೆಗೆ ನಾನು ಹೊರಡಬೇಕು. ಈಗ ನೀವು ಹೊರಡಿ'' ಎಂದರು.

''ಇಂಕಿಲಾಬ್ ಜಿಂದಾಬಾದ್ ! ಉಳುವವನೇ ನೆಲದೊಡೆಯ ! '' ಮೊದಲಾದ ಜಯಕಾರಗಳೊಂದಿಗೆ ಅವರನ್ನು ಬೀಳ್ಕೊಟ್ಟೆವು. ಅವರು ರೈತರ ಸಣ್ಣಗುಂಪಿನೊಂದಿಗೆ ಅಲ್ಲಿಂದ ನಿರ್ಗಮಿಸಿದರು.

ನಾವು ಆ ಹಳ್ಳಿಯ ಗುಡಿಸಲ ಜಗುಲಿಗೆ ವಾಪಸ್ಸಾದೆವು. ಅಲ್ಲಿ ಗಂಜಿಯೂಟ ಮುಗಿಸಿ, ನಾವು ಕಾಗೋಡಿಗೆ ಸಾಗಬೇಕಾಗಿತ್ತು. ಕಾಗೋಡನ್ನು ನಾನು ಎಂದೂ ನೋಡಿಯೇ ಇರಲಿಲ್ಲ. ೨೫ರ ರಾತ್ರಿಯಾದ ಬಳಿಕ ನಸುಕಿನಲ್ಲಿ ನಾವು ಈ ಗ್ರಾಮಕ್ಕೆ ಸಾಗರದಿಂದ ಬರುವ ರಸ್ತೆಯ ವಿರುದ್ಧ ದಿಕ್ಕಿನ ಕಾಡಿನಿಂದ ನುಸುಳಿ ಬಂದು ಕೆಲವು ಮನೆಗಳಲ್ಲಿ ಅಡಗಿ ಕುಳಿತುಕೊಳ್ಳಬೇಕಾಗಿತ್ತು.

ನಾನು ಅಲ್ಲಿಗೆ ಬಂದಾಗ ಅದೊಂದು ಗರಬಡಿದ ಗ್ರಾಮವಾಗಿತ್ತು. ಬಹುಪಾಲು ಮನೆಗಳು ಖಾಲಿಯಾಗಿದ್ದವು. ಅದರ ನಿವಾಸಿಗಳೆಲ್ಲರೂ ಕಾಡಿಗೆ ಬಿದ್ದಿದ್ದರು. ಇಲ್ಲವೇ ಜೈಲಿನಲ್ಲಿದ್ದರು. ಮಕ್ಕಳು ಮರಿಗಳೊಡನೆ ಎಲ್ಲರೂ ಜೈಲಿನಲ್ಲಿ ಇದ್ದ ಕೆಲವು ಕುಟುಂಬಗಳೂ ಕಾಗೋಡಿನಲ್ಲಿ ಇದ್ದವು.

ಅಲ್ಲಿದ್ದ ಒಂದೆರಡು ಬೀದಿಗಳು ನಿರ್ಜನವಾಗಿ ಗವ್! ..... ಎನ್ನುತ್ತಿದ್ದವು. ಮನೆಯ ಹಿತ್ತಲಲ್ಲೋ, ಈ ಮನೆಯ ಜಗುಲಿಯಲ್ಲೋ ಒಬ್ಬಿಬ್ಬರು ಕೈಲಾಗದ ವೃದ್ಧರು ಪ್ರೇತಗಳಂತೆ ಕಾಣಿಸಿಕೊಳ್ಳುತ್ತಿದ್ದರು. ಒಂದು ಮನೆಯ ಬಾಗಿಲು ಮುಚ್ಚಿ ಬೀಗ ಹಾಕಿ ಬಂದೋಬಸ್ತು ಮಾಡಲಾಗಿತ್ತು. ಅದರ ಹಿತ್ತಲ ಬಾಗಿಲಿನಿಂದ ಮಂಜುನಾಥ ನುಸುಳಿ ಆ ಮಹಡಿಯ ಅಟ್ಟ ಏರಿ ನಮ್ಮೆಲ್ಲರನ್ನೂ ಕರೆದ. ಅಲ್ಲಿ ನಮ್ಮ ತಂಡದ ಒಬ್ಬಿಬ್ಬರು ಸದಸ್ಯರು ಅಡಗಿ ಕುಳಿತರು. ಹೀಗೇ ನಾಲ್ಕಾರು ಅಕ್ಕಪಕ್ಕದ ಮನೆಗಳಲ್ಲಿ ಇಬ್ಬಿಬ್ಬರಾಗಿ ಎಲ್ಲರೂ ಅಡಗಿ ಕುಳಿತರು. ನಾನು ಮಂಜುನಾಥನಿಗೆ ಹೇಳಿದೆ.

''ನಾನು ಹಳ್ಳಿಯ ಸರಹದ್ದನ್ನು ಒಮ್ಮೆ ನೋಡಿ ಬರಬೇಕು. ಸಾಗರದಿಂದ ಬರುವ ರಸ್ತೆ ಯಾವುದು ? ಜಮೀನ್ದಾರರ ಮನೆ ಎಲ್ಲಿದೆ ? ಪೋಲೀಸರು ಎಲ್ಲಿ ಬೀಡು

ಬಿಟ್ಟಿದ್ದಾರೆ ? ಪುಂಡರ ದಂಡು ಎಲ್ಲಿದೆ ? ಕಾಂಗ್ರೆಸ್ ಅಧ್ಯಕ್ಷರು ಮತ್ತು ಪತ್ರಕರ್ತರ ವಾಹನಗಳ ಕಾನ್‌ವಾಯ್ ಯಾವ ರಸ್ತೆಯಿಂದ ಬರುತ್ತದೆ ? ಎಲ್ಲಿ ನಿಲ್ಲುತ್ತದೆ ? ಅವರಿಗೆ ಜಮೀನ್ದಾರ ಏನು ತೋರಿಸುತ್ತಾನೆ ? ಏನನ್ನು ಹೇಳುತ್ತಾನೆ ? ಇವುಗಳನ್ನೆಲ್ಲಾ ನಾನು ಚೆನ್ನಾಗಿ ತಿಳಿದುಕೊಳ್ಳಬೇಕಾಗಿತ್ತು. ಈ 'ಆಪರೇಷನಲ್ ಡೀಟೈಲ್ಸ್ ' ನನಗೆ ತುಂಬಾ ಅಗತ್ಯವಾಗಿತ್ತು. '' ಮಂಜುನಾಥನಿಗೆ ಕೆಲವು ವಿಚಾರ ತಿಳಿದಿದ್ದವು. ಕೆಲವು ವಿಚಾರ ತಿಳಿದಿರಲಿಲ್ಲ.

ಅವನನ್ನು ಕರೆದುಕೊಂಡು ಹಳ್ಳಿಯ ಒಂದು ಅಂಚಿನವರೆಗೆ ಬಂದೆ. ಅಲ್ಲಿ ಒಂದು ಹಲಸಿನ ಮರ ಇತ್ತು. ಆ ಮರ ನೆಲದಿಂದ ಆಳೆತ್ತರದಲ್ಲಿತ್ತು. ಅದರ ಮುಂದೆ ರಸ್ತೆ ಒಂದು ಕೊರಕಲಿಗೆ ಬಿದ್ದು ಆ ಕೊರಕಲಿನಲ್ಲೇ ಸಾಗಿ ಕಾಲುದಾರಿಯಾಗಿ, ಮೇಲಕ್ಕೆ ಹೊರಟು ಒಂದು ಪುಟ್ಟ ಕೆರೆಯ ಮುಂದೆ ಅಡಕೆಯ ತೋಟದ ಪಕ್ಕದಲ್ಲಿ ಸಾಗಿ, ಜಮೀನ್ದಾರನ ಮನೆಯ ಮುಂದೆ ಹೋಗಿ, ಸಾಗರದಿಂದ ಬರುವ ರಸ್ತೆಗೆ ಕೂಡಿಕೊಳ್ಳುತ್ತಿತ್ತು. ಈ ರಸ್ತೆಯಲ್ಲೇ ಡಾ|| ಲೋಹಿಯಾ ಸತ್ಯಾಗ್ರಹ ಮಾಡಿದ್ದರು. ಹಾಕಿದ್ದ ಬೇಲಿ ಕಿತ್ತು ಗದ್ದೆಗೆ ತಮ್ಮ ಸಂಗಡಿಗರೊಡನೆ ನೇಗಿಲ ಸಮೇತ ನುಗ್ಗಿ ಉಳಲು ಪ್ರಯತ್ನಿಸಿ, ದಸ್ತಗಿರಿಯಾಗಿದ್ದರು.

ಆ ಸ್ಥಳಗಳೆಲ್ಲವೂ ಆ ಕಡೇ ಮನೆಯ ಅಟ್ಟದ ಒಂದು ಕಿಂಡಿಯಿಂದ ಕಾಣುತ್ತಿತ್ತು. ಮಂಜುನಾಥ ನನ್ನನ್ನು ಆ ಮನೆಯ ಅಟ್ಟಕ್ಕೆ ಕರೆದೊಯ್ದು ಆ ವಿಹಂಗಮ ದೃಶ್ಯವನ್ನು ತೋರಿಸಿ ವಿವರಿಸಿ ಹೇಳಿದ. ''ಅವುಗಳನ್ನೆಲ್ಲಾ ಒಮ್ಮೆ ನೋಡಿ ಬರೋಣವೇ?'' ಎಂದು ಅವನನ್ನು ಕೇಳಿದೆ.

ಅವನು ಹೇಳಿದ, ''ಬಹಳ ಅಪಾಯಕರ ! ಅಲ್ಲಿ ಪೋಲೀಸಿನವರೂ, ಗುಪ್ತಚಾರರೂ, ಜಮೀನ್ದಾರನ ಪುಂಡ ಪಟಾಲಂ ಹೆಜ್ಜೆ ಹೆಜ್ಜೆಗೆ ಇದ್ದಾರೆ. ಇಂದು ಸಂಜೆ ೪ ಗಂಟೆಗೆ ಕಾಂಗ್ರೆಸ್ ಅಧ್ಯಕ್ಷರು,ಪತ್ರಕರ್ತರು ಬರುತ್ತಾರೆ. ಇಲ್ಲಿ ಸತ್ಯಾಗ್ರಹವನ್ನು ಮಟ್ಟ ಹಾಕಿದ್ದೇವೆ. ಎಲ್ಲಾ ಶಾಂತವಾಗಿದೆ. ರೈತರ ಸಮಸ್ಯೆ ಬಗೆಹರಿದಿದೆ ಎಂದು ಪತ್ರಿಕೆಗಳಿಗೆ ಸುಳ್ಳು ಹೇಳುತ್ತಿದ್ದಾರೆ. ಇದನ್ನೆಲ್ಲಾ ಸುಳ್ಳು ಎಂದು ನಾವು ಸಾಬೀತು ಮಾಡಬೇಕಾದರೆ ಇಂದು ಸತ್ಯಾಗ್ರಹ ನಿಮ್ಮ ತಂಡದಿಂದ ನಡೆಯಲೇಬೇಕು. ಇನ್ಯಾವ ತಂಡವೂ ಬರುವ ಸಂಭವವಿಲ್ಲ. ಸರ್ಕಾರ ಹೇಳುತ್ತಿರುವುದೇನೆಂದು ನೀವು ಕೇಳಿಲ್ಲವೇ ? 'ಕಾಗೋಡಿನಲ್ಲಿ ಏನೂ ಆಗಿಲ್ಲ. ಸತ್ಯಾಗ್ರಹವೂ ಇಲ್ಲ, ಪೋಲೀಸರೂ ಇಲ್ಲ, ಎಲ್ಲಾ ಪ್ರಶಾಂತ ' ಎಂದು. ಈ ಮಾತನ್ನು ಸುಳ್ಳು ಎಂದು ತೋರಿಸಲು ಬಂದಿರುವ ನಾವೇ ಈಗ ಸಿಕ್ಕಿಹಾಕಿಕೊಂಡರೆ ಅವರ ರೊಟ್ಟಿ ಜಾರಿ ತುಪ್ಪಕ್ಕೆ ಬೀಳುತ್ತದೆ. ನಮ್ಮ ಇಡೀ ಶ್ರಮ ನಿರರ್ಥಕವಾಗುತ್ತದೆ. ಇಂಥ ಯಾವ ಸಾಹಸವೂ ಬೇಡ.''

ಅವನ ಮಾತು ಸಮಂಜಸವಾಗಿತ್ತು. ಆದರೆ ನನ್ನ ಕುತೂಹಲ, ಸಾಹಸ ಪ್ರವೃತ್ತಿ ತುಡಿಯುತ್ತಿದ್ದು. ಇಷ್ಟು ಹೆದರಿದರೆ ಹೇಗೆ ? ಶತ್ರುಗಳ ಬಲಾಬಲವನ್ನು ರಣನೀತಿಯನ್ನು ನಿಖರವಾಗಿ ಅರಿಯುವುದು ಅಗತ್ಯವಲ್ಲವೆ ? ಸಿಕ್ಕಿಹಾಕಿಕೊಳ್ಳ ಬಹುದು ಎಂಬ ಭಯದಿಂದ ಕತ್ತಲಲ್ಲೇ ಅಡಗಿ ಕುಳಿತು, ಶತ್ರುಗಳು ಒಡ್ಡಿದ ಬಲೆಗೆಯೊಳಗೇ ನುಗ್ಗಿ ಸಾಗುವುದು ಯಾವ ಸೀಮೆಯ ಸಾಹಸ ? ಎಂಥ ಹೋರಾಟ? ಎಂದು ನನ್ನಮನಸ್ಸು ಮಂಜುನಾಥನ ಮಾತನ್ನು ಒಪ್ಪಲಿಲ್ಲ.

''ನಾನು ಯಾವ ಅವಿವೇಕಕ್ಕೂ ಆಸ್ಪದ ಕೊಡದಂತೆ ಹಳ್ಳಿಯನ್ನು ಒಂದು ಸುತ್ತು ಹಾಕಿ ಇಲ್ಲಿಗೆ ಬರುತ್ತೇನೆ. ಆದರೆ ನೀವು ಇಲ್ಲೇ ಇರಬೇಡಿ. ಪಕ್ಕದ ಮನೆಯ ಅಟ್ಟದ ಮೇಲೆ ಇರಿ. ನಮ್ಮ ತಂಡದವರೆಲ್ಲರೂ ನನ್ನ 'ಇಂಕಿಲಾಬ್' ಎಂಬ ಧ್ವನಿ ಕೇಳಿದ ಕೂಡಲೇ ಕೆಳಕ್ಕೆ ಇಳಿದು ನಾನಿದ್ದ ಕಡೆಗೆ ಧಾವಿಸಿ ಬರುವಂತೆ ತಿಳಿಸಿರುವೆ. ಈಗ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ '' ಎಂದು ನಾನು ಹೊರಬಿದ್ದೆ.

ನಾನು ನೇರವಾಗಿ ರಾಮಚಂದ್ರನ್ ಇದ್ದ ಮನೆಗೆ ಹೋಗಿ, ಆತನ ಚೀಲದಿಂದ ಒಂದು ಪಂಚೆ ಪಡೆದೆ. ಪ್ಯಾಂಟು ಬಿಚ್ಚಿ ಕಚ್ಚೆಪಂಚೆ ಕಟ್ಟಿಕೊಂಡೆ. ಷರಟು ಬಿಚ್ಚಿ ಬರೇ ಒಂದು ಟವೆಲ್ ಅನ್ನು ಮೈಗೆ ಹೊದೆದುಕೊಂಡೆ. ಮನೆಯ ದೇವರ ಗೂಡಿನಿಂದ ಕೆಂಪು, ಬಿಳಿ ನಾಮದ ಉಂಡೆ ತೆಗೆದುಕೊಂಡು ಹಣೆಗೆ ಸೊಗಸಾದ ಐಯ್ಯಂಗಾರಿ ನಾಮ ಹಾಕಿಕೊಂಡೆ. ಕಂಕಳಿಗೊಂದು ಜೋಳಿಗೆ ತಗುಲಿಸಿಕೊಂಡು ಅಲ್ಲಿಂದ ಬರಿಗಾಲಿನಲ್ಲಿ ಹೊರಬಿದ್ದೆ. ಹಳ್ಳಿಯ ಅಂಚಿನಲ್ಲೇ ಸಾಗಿ ಸಾಗರ ರಸ್ತೆಯನ್ನು ಸೇರಿಕೊಂಡೆ. ರಸ್ತೆಯ ಪಕ್ಕದ ತೋಟದಲ್ಲಿ ಬೆಳೆದಿದ್ದ ಬಾಳೆಯ ಗಿಡವೊಂದರಿಂದ ಒಂದೆರಡು ಬಾಳೆಲೆ ಕಿತ್ತು ಮಡಚಿ, ಕಂಕುಳಲ್ಲಿ ಇರಿಸಿಕೊಂಡು, ಟವೆಲನ್ನು ತಲೆಯ ಮೇಲೆ ಸೆರಗು ಹಾಕಿಕೊಂಡು, ಜಮೀನುದಾರರ ಮನೆಯ ಮುಂದೆ ಬಂದೆ.

ಅದೊಂದು ದೊಡ್ಡ ಹಳ್ಳಿಮನೆ. ವಿಶಾಲ ಅಂಗಲ, ದೊಡ್ಡ ಜಗುಲಿ ಮನೆಯ ಮುಂದಿತ್ತು. ಒಂದು ಪೋಲೀಸ್ ವ್ಯಾನು ಅಲ್ಲಿ ನಿಂತಿತ್ತು. ಹತ್ತಿಪ್ಪತ್ತು ಪೋಲೀಸ್ ಪೇದೆಗಳು ಅರೆಬರೆ ಬಟ್ಟೆಯಲ್ಲಿ ಜಗುಲಿಯ ಮೇಲೆ ಕುಳಿತು ಇಸ್ಪೀಟ್ ಆಟದಲ್ಲಿ ತಲ್ಲೀನರಾಗಿದ್ದರು. ಪುಂಡರ ಪಡೆ ಬೀಡಿ ಸೇದುತ್ತಾ ನೆಲದ ಮೇಲೆ ಮರದ ನೆರಳಿನಲ್ಲಿ ಚೌಕಾಬಾರ ಆಟ ಆಡುತ್ತಿತ್ತು. ಆಗಾಗ್ಗೆ ಗಹಗಹಿಸಿ ನಗುತ್ತಿದ್ದರು. ಗುಸುಗುಸು ಮಾತನಾಡುತ್ತಿದ್ದರು. ಇಬ್ಬರು ವ್ಯಕ್ತಿಗಳು ಎದುರಿಗಿದ್ದ ಕೆರೆಯಿಂದ ನೀರನ್ನು ಹೊತ್ತು ರಸ್ತೆಯನ್ನು ದಾಟಿ ಆ ಮನೆಯ ಕಡೆಗೆ ಹೋದರು. ನಾನು ಅಲ್ಲೇ ಇದ್ದ ಒಂದು ಕಲ್ಲಿನ ಮೇಲೆ ಕುಳಿತು ತುಂಬಾ ದಣಿದವನಂತೆ ಟವೆಲ್ಲಿನಿಂದ ಮುಖಕ್ಕೆ ಗಾಳಿ ಹಾಕತೊಡಗಿದೆ.

ನೀರು ಹೊರುತ್ತಿದ್ದ ವ್ಯಕ್ತಿಗಳು ತಮ್ಮತಮ್ಮಲ್ಲೇ ಮಾತಾಡಿಕೊಳ್ಳುತ್ತಿದ್ದರು, ''ಸಂಜೀಕೆ ಅದ್ಯಾರೋ ಬರ್‍ತಾರಂತಲ್ಲಾ ಆಗ ಪೋಲೀಸಿನವರು ಯಾರು ಇಲ್ಲಿ

ಇರಾಕಿಲ್ಲವಂತೆ. ಕಣ್ಣಿಗೆ ಬೀಳ್ದಂಗೆ ಒಲ್ಬ್ಯೋಗ್ ಬುಟ್ಟಾರಂತೆ ! ಆಗ ಯಾರಾದ್ರೂ ಬೇಲಿ ಕಿತ್ತು ಹೊಲ ಉಳಾಕೆ ದೀವರು ಬಂದ್ರೆ, ಅವರ ಬುಲ್ಡೇಗೆ ಬಿಸಿನೀರು ಕಾಯಿಸಿ ಬಿಡ್ತಾರಂತೆ ಒಡೆಯರ ಕಡೆಯೋರು'' ಎಂದು ಮಾತನಾಡಿಕೊಳ್ಳುತ್ತಿರುವುದನ್ನು ಕೇಳಿಸಿಕೊಂಡೆ. ಅವರೊಡನೆಯೇ ಕೆರೆಗೆ ಇಳಿದು ಎರಡು ಬೊಗಸೆ ನೀರನ್ನು ಕುಡಿದೆ.

ಕೆರೆಯಿಂದ ಮೇಲಕ್ಕೆ ರಸ್ತೆಗೆ ಬಂದು ನಾನು ಹಳ್ಳಿಯ ಕಡೆಗೆ ಅಡಿಯಿರಿಸುತ್ತಿದ್ದಂತೆ , ಜಮೀನ್ದಾರನ ಮನೆಯ ಮುಂದಿನ ಕಟ್ಟೆಯಿಂದ ಒಬ್ಬ ಪೋಲೀಸ್ ಎದ್ದು ನಾನಿದ್ದೆಡೆಗೆ ವೇಗವಾಗಿ ನಡೆದು ಬರುತ್ತಾ ಕೂಗಿದ, ''ಏಯ್ ! ನಿಂತ್ಕೋ ಅಲ್ಲೇ !''

ನಾನು ಅವನನ್ನು ನೋಡುತ್ತಲೇ ಇದ್ದೆ ; ಹಳ್ಳಿಯ ಕಡೆಗೆ ಹೆಜ್ಜೆ ಹಾಕುತ್ತಲೇ ಇದ್ದೆ. ಕಿವಿ ಕೇಳಿಸದವನಂತೆ ಮುಂದೆ ಹೋಗುತ್ತಲೇ ಇದ್ದೆ. ಅವನು ನಾಲ್ಕಾರು ಹೆಜ್ಜೆ ಧಾವಿಸಿ ಓಡಿ ಬರುತ್ತಾ ''ನಿಂತ್ಕಳ್ಳೋ ಅಂದ್ರೆ....!'' ಎಂದು ಕನಲಿ ನನಗೆ ಎದುರಾಗಿ ನಿಂತು ಕೇಳಿದ, ''ಯಾರೋ ನೀನು ?''

''ಯಾಕ್ರಪ್ಪ , ನಾನು ಸಾಗರದ ಗೌರ್ನಮೆಂಟ್ ಹೈಸ್ಕೂಲಲ್ಲಿ ಸಂಗೀತದ ಮೇಷ್ಟ್ರು ಶ್ಯಾಮಯ್ಯಂಗಾರ್ ಅಲ್ಲವೇ? '' ಎಂದು ಉತ್ತರ ಕೊಟ್ಟೆ.

''ಇಲ್ಲಿಗ್ಯಾಕೆ ಬಂದಿದ್ದೆ ? ''

''ನಮ್ಮನೆಲಿ ಶ್ರಾದ್ಧ , ಅದಕ್ಕೆ ಬಾಳೆಲೆ, ಬಾಳೆಗೊನೆ, ತೊಗೊಂಡು ಹೋಗಕೆ ಅಂತಾ ಬಂದಿದ್ದೆ.''

''ಇಲ್ಲಿ ಯಾರ ಮನೆಗೆ ಬಂದಿದ್ದೆ ? ''

''ಸವಾಜಿ ಬೀರನಾಯ್ಕರ ಮನೆಗೆ, ಅವರ ಮಗ ನನ್ನ ಸ್ಟೂಡೆಂಟ್ ಕಣಪ್ಪ '' ಎನ್ನುತ್ತಿದ್ದಂತೆಯೇ ಅವನು ಚಂಗನೇ ಒಂದೇ ನೆಗೆತಕ್ಕೆ ಹಾರಿ ನನ್ನ ಹೈ ಹಿಡಿದು ''ಬಾ ನನ್ನ ಜೊತೆಗೆ ! '' ಎಂದು ಜಮೀನ್ದಾರನ ಮನೆ ಕಡೆ ಎಳೆದ.

ಅವನ ದುಷ್ಟತನಕ್ಕೆ ಪ್ರತಿಯಾದ ದುಷ್ಟತನ ತಟ್ಟನೆ ಹೊಳೆಯಿತು. ಜು - ಜುಟ್ಸು ರಣತಂತ್ರ ಪ್ರಯೋಗಿಸಿದೆ. ವಿರುದ್ಧ ದಿಕ್ಕಿನಲ್ಲಿ ನಾನೂ ಶಕ್ತಿಮೀರಿ ಎಳೆಯುತ್ತಾ ಇದ್ದು, ಹಠಾತ್ತನೆ ಸೋತು ಶರಣಾದವನಂತೆ, ಅವನು ಜಗ್ಗಿ ಎಳೆದೊಡನೆಯೇ ಹಾಡುಹಂದಿಯಂತೆ ಅವನ ಮೇಲೆ ನನ್ನ ಸಮಸ್ತಶಕ್ತಿಯನ್ನು ಬಿಟ್ಟು ದೊಪ್ಪನೆ ಬಿದ್ದೆ. ಅವನು ನೆಲಕ್ಕೆ ಬಿದ್ದ. ಅವನ ಮೇಲೆ ನಾನು ಬಿದ್ದೊಡನೆ ಅವನು 'ವಯಕ್' ಎಂದು ಮುಲುಕಿದ. ನನ್ನ ಕೈಬಿಟ್ಟಿದ್ದ. ಜೇಬಿನಿಂದ ಶೀಟಿ ತೆಗೆದು ಗಟ್ಟಿಯಾಗಿ ಊದತೊಡಗಿದ. ಅಷ್ಟರಲ್ಲಿ ನಾನು ಕಾಲಿಗೆ ಬುದ್ಧಿ ಹೇಳಿದ್ದೆ. ಹತ್ತಾರು ಮಾರು ಓಡಿ ಹಿಂತಿರುಗಿ ನೋಡಿದಾಗ ಅವನ ಬೆಂಬಲಕ್ಕೆ ಇನ್ನೂ ಹತ್ತಾರು ಜನರು ಓಡಿ

ಬರುತ್ತಿದ್ದರು. ಎಲ್ಲರ ಕೈಯಲ್ಲೂ ದೊಣ್ಣೆಗಳಿದ್ದವು. ಒಬ್ಬ ಸಣಕಲು ಸಬ್-ಇನ್ಸ್‌ಪೆಕ್ಟರ್ ಕೈಯಲ್ಲಿ ಪಿಸ್ತೂಲನ್ನು ಝಳಪಿಸುತ್ತಾ ಓಡಿ ಬರುತ್ತಿದ್ದ. ಏನೋ ಕೂಗುತ್ತಿದ್ದ. ನಾನು ಜಿಂಕೆಯಂತೆ ಕೆಳಗಿನ ಹಳ್ಳಕ್ಕೆ ಹಾರಿ, ಆ ಹಳ್ಳದಲ್ಲೇ ಓಡಿ ಓಡಿ ಹಲಸಿನ ಮರವಿದ್ದ ಆ ಹಳ್ಳಿಯ ಕೊನೆಯ ಮನೆ ತಲುಪಿದೆ.

ಪೋಲೀಸರ ಪಡೆ ಇನ್ನೂ ದೂರದಲ್ಲಿ ಹಳ್ಳದ ಅಂಕುಡೊಂಕು ಕಾಲು ದಾರಿಯಲ್ಲಿ ಓಡಿ ಬರುತ್ತಿತ್ತು. ಅಷ್ಟರಲ್ಲೇ ಒಂದು ಅಜ್ಜಿ ನನಗೆ ಎದುರಾಯಿತು. ಎಲ್ಲವನ್ನೂ ನೋಡಿದ್ದ ಆ ಅಜ್ಜಿ ನನ್ನ ಕೈಹಿಡಿದು ಹಳ್ಳದಿಂದ ಮೇಲಕ್ಕೆ ಎಳೆದುಕೊಳ್ಳಲು ಮುಂದಾದಳು. ಆದರೆ ನಾನೇ ಮೇಲೆಕ್ಕೆ ಹಾರಿದೆ.

''ಬಾರೋ ಮಗನೆ ! ಬಾರೋ ಮಗನೆ !.... ಬಾಪ್ಪ ಬಾ'' ಎಂದು ಮನೆಯ ಬಾಗಿಲು ತೆಗೆದು ನನ್ನನ್ನು ಮನೆಯೊಳಗೆ ದೂಡಿದಳು. ಬಾಗಿಲ ಎದುರಿಗೇ ಗೋಡೆಯಲ್ಲಿ ಒಂದು ದೊಡ್ಡ ದೇವರ ಭಾವಚಿತ್ರವಿತ್ತು. ಅದನ್ನು ಎತ್ತಿದರೆ, ಅದರ ಹಿಂದೆ ಒಂದು ವಿಶಾಲವಾದ ಗೂಡು ಇತ್ತು. ಅದರಲ್ಲಿ ನನ್ನನ್ನು ಹತ್ತಿಸಿ, ಒಳಕ್ಕೆ ತಳ್ಳಿ ''ಇಲ್ಲಿ ಅಡಗು'' ಎಂದು ನನ್ನನ್ನು ಅದರಲ್ಲಿ ಬಚ್ಚಿಟ್ಟು ದೇವರ ಚಿತ್ರವನ್ನು ಗೂಡಿನ ಬಾಗಿಲಿಗೆ ಮೊದಲಿನಂತೆ ಇಳಿಬಿಟ್ಟಳು. ಅದು ಅಡಗುದಾಣಕ್ಕೆ ಪರಿಪೂರ್ಣ ಬಾಗಿಲು ಆಗತ್ತು. ಗೂಡಿನೊಳಗೆ ಏನೂ ಕಾಣದ ಕಗ್ಗತ್ತಲು. ಗಾಳಿಯಿಲ್ಲ, ಬೆಳಕಿಲ್ಲ. ನಾನು ದೇವರ ಮೇಲೆ ಭಾರ ಹಾಕಿ ಸದ್ದುಗದ್ದಲವಿಲ್ಲದೆ, ಗೊಂಬೆಯಂತೆ ಅಡಗಿ ಕುಳಿತೆ. ಆದರೆ ಮೈಯೆಲ್ಲಾ ಕಿವಿಯಾಗಿತ್ತು. ಒಂದು ಕೂದಲೆಳೆಯಷ್ಟು ಸೀಳಿನಿಂದ ಹೊರಗಿನ ಜಗತ್ತು ಕಾಣಬರುತ್ತಿತ್ತು. ಕೆಲವೇ ಕ್ಷಣಗಳಲ್ಲೇ ಪೋಲೀಸರ ಕೂಗು, ಬೂಟು ಕಾಲುಗಳ ಸದ್ದು, ಕೇಕೆಗಳು ಕೇಳಿ ಬಂತು. ಅವರು ಹಳ್ಳ ಬಿಟ್ಟು ನಾನು ಅಡಗಿದ್ದ ಈ ಕೊನೆಯ ಮನೆಯ ಮುಂದೆ ಸಾಗುತ್ತಿದ್ದರು. ಇಷ್ಟರಲ್ಲಿ ಬಾಗಿಲು ಅರಗು ಮಾಡಿಕೊಂಡು ಮನೆಯ ಹೊರಗೆ ನಿಂತಿದ್ದ ಮುದುಕಿಯನ್ನು ಅವರು ಕೇಳುತ್ತಿದ್ದರು. ಎತ್ತ ಹೋದನೇ ಅವ, ಏಯ್ ಮುದುಕೀ ?'' ತುಸುಕೋಪ ಮತ್ತು ಬೇಸರದಿಂದ ಮುದುಕಿ ಹಾದಿಯತ್ತ ಕೈ ತೋರುತ್ತಾ ''ಈ ಹಾದಿಗುಂಟ ಹ್ವಾದ'' ಎಂದು ಮೌನವಾಗೇ ಸೂಚಿಸಿದಳು. ಪೋಲೀಸರ ಹಿಂಡು ಹಳ್ಳಿಯ ರಸ್ತೆಯಲ್ಲಿ ಮುನ್ನುಗ್ಗಿತ್ತು. ಒಂದಿಬ್ಬರು ಪೇದೆಗಳು ಆ ಮುದುಕಿಯ ಮನೆ ಮುಂದಕ್ಕೆ ನೆಗೆದು ಬಂದರು.

''ಅರಗಾಗೇ ಮುದುಕಿ !'' ಎಂದು ಬಾಗಿಲನ್ನು ಬೂಟ್ಸ್ ಕಾಲಿಂದ ಒದ್ದರು. ನಾನು ಗೂಡಿನೊಳಗೇ ಸೆಟೆದು ಉಸಿರು ಕಟ್ಟಿ ಕುಳಿತೆ. ಅವರಲ್ಲೊಬ್ಬ ನೇರವಾಗಿ ನಡುಮನೆಯಲ್ಲಿ ನೇತು ಹಾಕಿದ್ದ ಹಗ್ಗದ ನೆಲುವಿಗೆ ಹಾರಿ ಕೈ ಹಾಕಿದ. ನೆಲುವಿನ ಮೇಲೆ ಇಟ್ಟ ಪುಟ್ಟ ಕುಡಿಕೆಯೊಂದನ್ನು ಅದರ ಮುಚ್ಚಳ ಸಮೇತ ಎತ್ತಿಕೊಂಡು ಮುಚ್ಚಳ

ತೆಗೆದು ಮೂಸಿ ನೋಡಿ, 'ಹಾ ! ಗಟ್ಟಿ ತುಪ್ಪ' ಎಂದು ಉದ್ಗಾರ ಮಾಡಿದ. ''ಅದನ್ನು ಒಯ್ಯಬ್ಯಾಡಪ್ಪೋ. ಅದು ನನ್ನ ಮೊಮ್ಮಗಳಿಗೆ ಇಟ್ಟಿರೋ ತುಪ್ಪ'' ಎಂದು ಕೂಗಿ ಕೊಂಡಳು ಮುದುಕಿ. ಆ ಕುಡಿಕೆಯನ್ನು ಅವನ ಕೈಯಿಂದ ಕಸಿಯಲು ಯತ್ನಿಸಿದಳು. ತುಪ್ಪದ ಕುಡಿಕೆ ಸೆಣೆಸಾಟದಲ್ಲಿ ನೆಲಕ್ಕೆ ಬಿದ್ದು ಒಡೆದು ಹೆಪ್ಪಿಟ್ಟ ತುಪ್ಪ ನೆಲಕ್ಕೆ ಬಿತ್ತು. ''ಅಯ್ಯೋ ಹಾಳಾಯ್ತಲ್ಲೋ ನನ್ನ ಮೊಮ್ಮಗಳ ತುಪ್ಪಾ !'' ಎಂದು ಚೀರಿದಳು ಮುದುಕಿ. ಅಷ್ಟರಲ್ಲಿ ಆ ಇಬ್ಬರು ಪೇದೆಗಳು ನೆಲದ ಮೇಲೆ ಬಿದ್ದಿದ್ದ ಹೆಪ್ಪಿಟ್ಟಿದ್ದ ತುಪ್ಪವನ್ನು ಕೈಯಲ್ಲಿ ಬಳಿದುಕೊಂಡು ಅದನ್ನು ಅಂಗೈಯಿಂದಲೇ ಅವಸರವಸರವಾಗಿ ನೆಕ್ಕುತ್ತಾ ''ಮತ್ತೇನಿಟ್ಟಿದೀಯೇ ಮುದುಕೀ '' ಎಂದು ಅಡಿಗೆ ಮನೆಯ ಮಡಿಕೆ ಕುಡಿಕೆಗಳನ್ನು ತಡಕಲಾರಂಭಿಸಿದರು.

ಮುದುಕಿಗೆ ಹೊಟ್ಟೆಯುರಿ ತಡೆದುಕೊಳ್ಳಲಾಗಲಿಲ್ಲ. ''ನಿಮ್ಮ ನಾಲಿಗೆ ಸೇದಿಹೋಗ. ನಿಮ್ಮ ಬಾಯಿಗೆ ಹುಳ ಬೀಳ!'' ಎಂದು ಸಹಸ್ರನಾಮವನ್ನು ಪ್ರಾರಂಭಿಸಿ ಬಿಟ್ಟಳು. ಅದನ್ನು ಲೆಕ್ಕಿಸದ ಇನ್ನೊಬ್ಬ ತನ್ನ ಸಂಗಾತಿಗೆ ಸೂಚನೆ ಇತ್ತ, ''ಮನೆಯ ಮುಂದಿನ ಮರದಾಗೆ ಹಲಸಿನ ಹಣ್ಣು ಏನಾರಾ ಐತೇನೋ ನೋಡೋ. ''

''ಬಿಟ್ಟಿದ್ದ ಹಲಸನ್ನೆಲ್ಲಾ ನೀವೇ ನುಂಗಿ ನೀರು ಕುಡಿದ್ರಲ್ಲೋ ಮುಂಡೆ ಮಕ್ಕಳಾ!'' ಎಂದು ಲಟ ಲಟ ನೆಟಿಕೆ ಮುರಿದಳು ಮುದುಕಿ. ಅವಳು ಹಾಗೆ ಅನ್ನುತ್ತಿದ್ದಂತೆಯೇ ಒಬ್ಬ ಪೋಲೀಸಿನವನು ತನ್ನ ದೊಣ್ಣೆಯನ್ನು ಅವಳ ಮೂತಿಗೆ ಇಟ್ಟು ತಿವಿದು ''ದವಡೆಗೆ ಒಂದೇಟು ಕೊಟ್ಟರೆ ಒಂದು ಹಲ್ಲೂ ಇರಾಕಿಲ್ಲ ನೋಡು ಹಲ್ಕಾಮುಂಡೆ '' ಎಂದು ಗಟ್ಟಿಯಾಗಿ ಕಿರುಚಿದ. ''ನಿನ್ನ ಕೈ ಸೇದ್ಹೋಗ, ನಿನ್ನ ಬಾಯಿಗೆ ಹುಳ ಬೀಳ !'' ಎಂದು ತನ್ನ ದವಡೆ ಮುಟ್ಟಿ ನೋಡಿಕೊಳ್ಳುತ್ತಾ ಮುದುಕಿ ನೋವಿನಿಂದ ಆಕ್ರಂದನ ಮಾಡುತ್ತಿರುವಾಗಲೇ ಮನೆಯ ಪಕ್ಕದಿಂದ ಪೋಲೀಸರ ಶೀಟಿ ಜೋರಾಗಿ ಕೇಳಿಸತೊಡಗಿತು. ಮರ ಹತ್ತಿದ ಪೋಲೀಸ್ ಪೇದೆಯೂ ಅವಸರವಸರವಾಗಿ ''ಎಲ್ಲಾ ಕಸುಗಾಯಿಗಳೇ'' ಎಂದು ಹೇಳುತ್ತ ಕೋತಿಯಂತೆ ಕೆಳಕ್ಕೆ ಇಳಿದ. ಇಬ್ಬರೂ ಮುದುಕಿಯನ್ನು ಅವಳ ಪಾಡಿಗೆ ಬಿಟ್ಟು ಮನೆಯ ಮುಂದಿನ ಬೀದಿಗೆ ಓಡಿದರು. ಆ ಬೀದಿಯ ಕೊನೆಯ ಮನೆಯಲ್ಲಿ ಅಡಗಿದ್ದ ಇಬ್ಬರು ಅನ್ಯ ಊರಿನ ಸತ್ಯಾಗ್ರಹಿಗಳು ಜಲಬಾಧೆಗೆಂದು ಆಗಲೇ ಬೀದಿಗೆ ಬಂದಿದ್ದರು. ನನ್ನನ್ನು ಹುಡುಕುತ್ತಾ ಬಂದಿದ್ದ ಪೋಲೀಸರ ಕೈಗೆ ಸಿಕ್ಕಿಬಿದ್ದರು. ಪೋಲೀಸರು ಅವರನ್ನು ಹಿಡಿದು ಒದ್ದು ತಮ್ಮ ಪಾಳೆಯಕ್ಕೆ ಎಳೆದೊಯ್ದರು.

ಅದನ್ನು ಕಂಡು ಮುದುಕಿ ನನ್ನನ್ನು ಗೂಡಿನಿಂದ ಹೊರಬಂದು ಮನೆಯ ಅಟ್ಟದಲ್ಲಿ ಅಡಗುವಂತೆ ಸೂಚಿಸಿದಳು. ನಾನು ಬೋನಿನಿಂದ ಬಿಡುಗಡೆ ಪಡೆದ ಚಿರತೆಯಂತೆ, ಅಟ್ಟವನ್ನು ಏರಿದೆ. ಅಲ್ಲಿಂದ ಹೊರಗೆ ಹಳ್ಳಿಯಲ್ಲಿ ನಡೆಯುತ್ತಿದ್ದ

ಸಂಗತಿಗಳು ಕಾಣಿಸುತ್ತಿತ್ತು. ಸ್ವಲ್ಪಕಾಲದಲ್ಲಿ ಪೋಲೀಸರಿಗೆ ಏನೋ ಸೂಚನೆ ಬಂದಿರಬೇಕು. ಎಲ್ಲರೂ ಜಮೀನ್ದಾರನ ಮನೆಯ ಕಡೆಗೆ ಓಡತೊಡಗಿದರು. ಅವಸರವಸರವಾಗಿ ಅಲ್ಲಿದ್ದ ವ್ಯಾನ್ ಹತ್ತಿಕೊಂಡರು. ಪೋಲೀಸ್ ವ್ಯಾನ್ ಕಾಗೋಡು ಗ್ರಾಮದಿಂದ ನಿರ್ಗಮಿಸಿತು. ಅದೆಲ್ಲವೂ ಅಟ್ಟದ ಕಿಂಡಿಯಿಂದ ನನಗೆ ಚೆನ್ನಾಗಿ ಕಾಣಿಸುತ್ತಿತ್ತು. ಈಗ ನಾನು ಹಾಯಾಗಿ ಉಸಿರಾಡಿದೆ.

ನನ್ನನ್ನು ಕಾಪಾಡಿದ್ದ ಆ ಅಜ್ಜಿಯ ಹೆಸರು ಮಾಸ್ತಿಯಮ್ಮ ಎಂದು ಆಕೆಯ ಗಂಡ, ಮಗ, ಸೊಸೆ, ಮೊಮ್ಮಗ ಎಲ್ಲರೂ ಸಾಗರದ ಗಂಧದ ಕೋಠಿಯಲ್ಲಿ ಬಂಧಿಗಳಾಗಿದ್ದರು. ಮಾಸ್ತಿಯಮ್ಮ ಮಾತ್ರ ಮನೆ ಕಾಯಲು ಅಲ್ಲೇ ಇದ್ದಳು. ಆದರೆ ಅದರೊಳಗಿದ್ದ ತಿನ್ನುವ ಎಲ್ಲಾ ವಸ್ತುವನ್ನು ಪೋಲೀಸರು ಪದೇ ಪದೇ ನುಗ್ಗಿ ದೋಚಿದ್ದರು. ಆದರೆ ಧೃತಿಗೆಡದೆ ಆ ಪೈಶಾಚಿಕ ಧಾಳಿಗಳನ್ನು ಗಂಡೆದೆಯಿಂದ ಎದುರಿಸುತ್ತಾ ಆಕೆ ಆ ತನ್ನ ಹಳೆಯ ಮನೆಯಲ್ಲೇ ಗ್ರಾಮದೇವತೆಯಂತೆ ಭದ್ರವಾಗಿ ನೆಲೆ ನಿಂತಿದ್ದಳು. ಅವಳು ಅಂದಿನ ಕಾಗೋಡಿನ ಜನಗಳ ಪ್ರತೀಕವಾಗಿದ್ದಳು.

ಸ್ವಲ್ಪ ಹೊತ್ತಿನಲ್ಲೇ ಎಲ್ಲಾ ಪೋಲೀಸರೂ, ಪುಂಡರೂ ಹಳ್ಳಿಯಿಂದ ನಿರ್ಗಮಿಸಿದ ಸುದ್ದಿ ಹರಡಿತು. ನಾಲ್ಕಾರು ದೀವರು ಬೀದಿಗಳಲ್ಲಿ ಕಾಣಿಸಿಕೊಂಡರು. ನಾನು ಹೊರಗೆ ಹೋಗಿ ಅಕ್ಕಪಕ್ಕದ ಮನೆಗಳಲ್ಲಿ ಅಡಗಿದ್ದ ನಮ್ಮ ಸಂಗಾತಿಗಳನ್ನು ಮಾಸ್ತಿಯಮ್ಮನ ಮನೆಗೆ ಕರೆತಂದೆ. ಆಕೆ ನಮ್ಮ ಉದ್ದೇಶ ತಿಳಿದು, ಅಕ್ಕಪಕ್ಕದಿಂದ ಅನ್ನ, ಮೊಸರು, ಉಪ್ಪಿನಕಾಯಿ ಸಂಪಾದಿಸಿದಳು. ತಿನ್ನುವಂತವರಿಗೆ ಮೀನಿನ ಸಾರು ಸಹ ಇತ್ತು. ಎಲ್ಲರೂ ಆ ಅಪ್ಯಾಯಮಾನವಾಗಿದ್ದ ಬುತ್ತಿಯೂಟ ತಿಂದು ಮುಂದಿನ ಬೆಳವಣಿಗೆಗೆ ಕಾಯತೊಡಗಿದೆವು.

❊ ❊ ❊ ❊

೫.

ದುರಹಂಕಾರದ ನುಡಿ ಧಿಮಾಕಿನ ನಡೆ

ಸ್ವಲ್ಪ ಸಮಯದಲ್ಲೇ ಸಾಗರದ ದಿಕ್ಕಿನಿಂದ ನಾಲ್ಕಾರು ಕಾರುಗಳು ಬಂದವು. ಜಮೀನುದಾರನ ಮನೆಯ ಬಳಿ ನಾಲ್ಕಾರು ನಿಮಿಷ ನಿಂತು ಮತ್ತೆ ಎಲ್ಲವೂ ಮುಂದಕ್ಕೆ ನಾವು ಅಡಗಿ ಕುಳಿತಿದ್ದ ಕಡೆಯ ಮನೆಯತ್ತ ಬಂದು, ಆ ಮನೆಗೆ ಸ್ವಲ್ಪ ದೂರದಲ್ಲಿ ಹಳ್ಳದ ಆಚೆಗಿದ್ದ ಒಂದು ಸಣ್ಣ ಅರಳಿಕಟ್ಟೆಯ ಬಳಿ ನಿಂತವು. ಅಲ್ಲೇ ಗದ್ದೆಯ ಬಯಲು ಇತ್ತು. ಆ ಬಯಲಿನೊಳಗೆ ಹೋಗಲು ಮರದ ಕವೆಗೋಲಿನ ಗೇಟೂ ಇತ್ತು. ಆ ಗೇಟಿನ ಆಚೆ ಈಚೆಗೆ ಬಿದಿರು ಬೊಂಬುಗಳಿಂದ ಕಟ್ಟಿದ ಬೇಲಿ ಇತ್ತು.

ಗಾಂಧೀಟೋಪಿ ಧರಿಸಿ ನೀಳವಾದ ಕೋಟು, ಬಿಳಿಯ ಪ್ಯಾಂಟು ಹಾಕಿ ಕಾರಿನಿಂದ ಕೆಳಗಿಳಿದ ವ್ಯಕ್ತಿ ಶ್ರೀ ಕೆಂಗಲ್ ಹನುಮಂತಯ್ಯನವರಾಗಿದ್ದರು. ಅವರೊಡನೆ ಕಾರುಗಳಿಂದ ಹತ್ತಾರು ಕಾಂಗ್ರೆಸ್ ನಾಯಕರು, ಕೆ.ಜಿ. ಒಡೆಯರ್ ರವರು ಮತ್ತು ಪತ್ರಕರ್ತರು ಕೆಳಗಿಳಿದರು. ಸುತ್ತಲೂ ಪ್ರಶಾಂತವಾಗಿದ್ದ ಗದ್ದೆ ಮೈದಾನವನ್ನು ತದೇಕ ದೃಷ್ಟಿಯಿಂದ ನೋಡತೊಡಗಿದರು. ''ಇಲ್ಲಿ ಯಾವ ಸತ್ಯಾಗ್ರವೂ ಇಲ್ಲ. ಯಾವ ಸತ್ಯಾಗ್ರಹಿಗಳೂ ಇಲ್ಲ, ಯಾವ ಪೋಲೀಸರೂ ಇಲ್ಲ, ಯಾವ ಪೋಲೀಸ್ ರಾಜ್ಯವೂ ಇಲ್ಲ '' ಎಂದು ಜಮೀನ್ದಾರರು ಮತ್ತು ಕಾಂಗ್ರೆಸ್

ಎಂ.ಪಿ. ಯಾಗಿದ್ದ ಶ್ರೀ ಕೆ.ಜಿ ಒಡೆಯರ್‌ರವರು ಕೆಂಗಲ್‌ನವರಿಗೆ ವಿವರಿಸುತ್ತಿದ್ದರು ಎಂದು ತೋರುತ್ತದೆ. ಎಲ್ಲೆಲ್ಲೂ ಹಸಿರು ಬಯಲು. ಬೆಳ್ಳಕ್ಕಿಗಳು, ನೀಲ ನಭದಲ್ಲಿ ತೇಲುತ್ತಿದ್ದವು. ಪ್ರಶಾಂತತೆ ಎಲ್ಲೆಲ್ಲೂ ಕವಿದಿತ್ತು. ಆಗ ಮೇಘ ಗರ್ಜನೆಯಂತೆ ಕೇಳಿ ಬಂತು. ಸ್ವಾಮಿನಾಥನ್ ಮತ್ತು ನಮ್ಮ ಸಂಗಡಿಗರ ರಣಘೋಷಣೆ.

''ಇಂಕಿಲಾಬ್ ....ಜಿಂದಾಬಾದ್ !''

ಆಶ್ಚರ್ಯಚಕಿತರಾದ ಕಾಂಗ್ರೆಸ್ ಅಧ್ಯಕ್ಷರು, ನಾಯಕರು, ಪತ್ರಕರ್ತರು ನಮ್ಮತ್ತ ನೋಡುತ್ತಿರುವಂತೆ ನಾವು ಗದ್ದೆಯ ಕವೆಗೇಟನ್ನೂ ಬೇಲಿಯನ್ನೂ ಕಿತ್ತಸೆದು, ಗದ್ದೆಗೆ ನುಗ್ಗಿ, ಎಲ್ಲಿಂದಲೋ ಸಂಪಾದಿಸಿ ತಂದಿದ್ದ ಒಂದು ನೇಗಿಲನಿಂದ ಗದ್ದೆಯನ್ನು ಉಳುವ ಭಂಗಿಯಲ್ಲಿ ನಿಂತು ಘೋಷಣೆಗಳನ್ನು ಕೂಗತೊಡಗಿದೆವು.

''ಉಳುವವನೇ ...... ನೆಲದೊಡೆಯ !''

''ರೈತ ಕಾರ್ಮಿಕರಿಗೆ.... ಜಯವಾಗಲಿ !''

''ದುಡಿಯುವ ವರ್ಗಕ್ಕೆ ..... ಜಯವಾಗಲಿ !''

''ಇಂಕಿಲಾಬ್ ..... ಜಿಂದಾಬಾದ್ ! '' ಎಂಬ ಕೂಗು ಆ ನೀರವ ಗದ್ದೆಯ ಬಯಲಲ್ಲಿ ಮೊಳಗತೊಡಗಿತು. ಕೆಂಗಲ್‌ರವರೇನು ನನಗೆ ಹೊಸಬರಾಗಿರಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ 'ಚಲೋ ಮೈಸೂರು' ಚಳುವಳಿಗೆ ಒಂದು ವರ್ಷಕ್ಕೂ ಮುಂಚಿತವಾಗಿ ರಾಜದ್ರೋಹದ ಆಪಾದನೆಗೆ ಗುರಿಯಾಗಿ ದಸ್ತಗಿರಿಯಾಗಿ ಸೆಂಟ್ರಲ್ ಜೈಲನ್ನು ಸೇರಿದ್ದ ಮೈಸೂರು ರಾಜ್ಯದ ಮೊಟ್ಟಮೊದಲ ನಾಯಕ ಅವರಾಗಿದ್ದರು. ಆಗ ನಾನು ಬೆಂಗಳೂರಿನ ಸೆಂಟ್ರಲ್ ಹೈಸ್ಕೂಲಿನ ವಿದ್ಯಾರ್ಥಿ. ಅವರನ್ನು ಜಿಲ್ಲಾ ನ್ಯಾಯಾಲಯಕ್ಕೆ ಬಿಗಿ ಪೋಲೀಸ್ ಪಹರೆಯಲ್ಲಿ ವಿಚಾರಣೆಗೆ ಕರೆತಂದಾಗ ನಾನು ಮತ್ತು ನನ್ನ ಸಹಪಾಠಿಗಳಾಗಿದ್ದ ಪ್ರಭಾಕರರಾಜ್ ಮೊದಲಾದ ವಿದ್ಯಾರ್ಥಿ ಸಂಗಾತಿಗಳೊಡನೆ ಕೆಂಗಲ್‌ರವರನ್ನು ನೋಡಲು ಹೋಗಿದ್ದೆವು.

ನಾವೆಲ್ಲಾ ಸೇರಿ ದುಡ್ಡು ಹಾಕಿ ಒಂದು ಡಜನ್ ಕಿತ್ತಲೆಹಣ್ಣು , ಹಾರವನ್ನು ಕೊಂಡು ಹೋಗಿ ಅವರು ಪೋಲೀಸ್ ವ್ಯಾನ್ ಇಳಿಯುತ್ತಿದ್ದಂತೆಯೇ ಅವರಿಗೆ ವಂದಿಸಿ, ನಮ್ಮ ಕಾಣಿಕೆಯ ಫಲಪುಷ್ಪಗಳನ್ನು ಅರ್ಪಿಸಿದ್ದೆವು. ಅವರು ನಮ್ಮ ಹೆಗಲ ಮೇಲೆ ಕೈ ಇರಿಸಿ, ಅಭಿಮಾನದಿಂದ, ನಾವು ಯಾವ ಕ್ಲಾಸಿನಲ್ಲಿ ಓದುತ್ತಿದ್ದೇವೆ, ಯಾವ ಯಾವ ಊರುಗಳಿಂದ ಬಂದಿದ್ದೇವೆ ಎಂದು ವಿಚಾರಿಸುತ್ತಾ, ನಾವು ತಂದಿದ್ದ ಕಿತ್ತಳೆ ಹಣ್ಣುಗಳನ್ನು ಸುಲಿದು ತೊಳೆಗಳನ್ನು ತಿನ್ನುತ್ತಾ ನಮಗೂ ಕೊಡುತ್ತಾ ಪ್ರೀತಿಯ ಮಾತನಾಡಿದ್ದರು. ಆಗ ಅವರು ನಮ್ಮ ಆರಾಧದೈವವಾಗಿದ್ದರು. ಸ್ವಾತಂತ್ರ್ಯಪೂರ್ವದ ಆ ದಬ್ಬಾಳಿಕೆಯ ದಿನಗಳಲ್ಲಿ 'ರಾಜದ್ರೋಹಿ' ಎಂದು ಬಂಧನಕ್ಕೊಳಗಾಗಿ

ಸುತ್ತುವರಿದ ಬಯೋನೆಟ್ ಹಿಂದೆ ತುಪಾಕಿಗಳನ್ನು ಹಿಡಿದ ಪೋಲೀಸರ ನಡುವೆ ನಗುನಗುತ್ತಾ ಇರುವ ಗಂಡಸುತನ ಇದ್ದವರು ಕೆಂಗಲ್‌ರವರೊಬ್ಬರೇ. ಅವರು ಸುಭಾಷ್‌ಚಂದ್ರರಂತೆ ಯುವಕರ, ವಿದ್ಯಾರ್ಥಿಗಳ ಕಣ್ಣಮುಂದೆ ನಿಂತಿದ್ದ ಅತಿ ಎತ್ತರದ ನಾಯಕರಾಗಿದ್ದರು.

ಇದು ನೆನಪು ಮಾತ್ರ. ಗುಣಗಾನವಲ್ಲ, ಅಧಿಕಾರ ಎಲ್ಲಾ ಧೀರರನ್ನೂ ಕುಬ್ಜರನ್ನಾಗಿಸುತ್ತದೆ. ಎಲ್ಲಾ ಕುಬ್ಜರನ್ನೂ ಎತ್ತರದವರಂತೆ ಮಾಡುತ್ತದೆ. ಈಗ ಅವರು ನನ್ನ ದೃಷ್ಟಿಯಲ್ಲಿ ಕುಬ್ಜರೇ ಆಗಿದ್ದರು. ಅವರ ಕಣ್ಣೆದುರಿನಲ್ಲೇ ರೈತರ ನ್ಯಾಯಯುತ ಹಕ್ಕುಗಳಿಗಾಗಿ ಸತ್ಯಾಗ್ರಹವಾಗಿದ್ದು. ಅವರು ಸಂಬಂಧಪಡದವರಂತೆ ಎಲ್ಲವನ್ನೂ ನೋಡುತ್ತಾ ನಿಂತಿದ್ದರು. ನಮ್ಮನ್ನು ಹೊಡೆದು, ಬಡಿಯಲು ಯಾವ ಪುಂಡರ ದಂಡೂ ಬರಲಿಲ್ಲ. ಆದರೆ ಜಮೀನ್ದಾರರನ ಪಾಳ್ಯದಲ್ಲಿ ತೀವ್ರ ಚಟುವಟಿಕೆ ಕಾಣಿಸಿತು. ಸ್ವಲ್ಪ ಹೊತ್ತಿನಲ್ಲೇ ನಾಲ್ಕಾರು ಪೋಲೀಸರು ಪೇಟ ಸಂಬಾಳಿಸಿಕೊಳ್ಳುತ್ತಾ ಗದ್ದೆಯಲ್ಲಿ ಏಳುತ್ತಾ ಬೀಳುತ್ತಾ ಓಡಿಬಂದರು. ನಮ್ಮೆದುರು ನಿಂತು ''ನಿಮ್ಮನ್ನು ದಸ್ತಗಿರಿ ಮಾಡಿದ್ದೇವೆ, ಬನ್ನಿ ನಮ್ಮ ಜೊತೆ '' ಎಂದು ಗದ್ದೆಯಿಂದ ಹೊರಕ್ಕೆ ಕರೆದೊಯ್ದರು. ನಾವು ಹದಿನಾರು ಜನರಿದ್ದೆವು. ಮಂಜುನಾಥ ನಾಪತ್ತೆಯಾಗಿದ್ದ. ನಾವು ಕವೆಗೋಲಿನ ಗೇಟಿನ ಮೂಲಕ ರಸ್ತೆಗೆ ಕಾಲಿರಿಸಿದೆವು. ಅಲ್ಲೇ ಕೆಂಗಲ್‌ರವರ ಕಾರು ಮತ್ತು ಕಾಂಗ್ರೆಸ್ ನಾಯಕರು, ಪತ್ರಕರ್ತರ ತಂಡದೊಡನೆ ನಿಂತಿದ್ದರು. ಅವರು ನಮ್ಮನ್ನು ವಿಚಾರಿಸಿದರು.

''ನೀವೆಲ್ಲಾ ಈ ಗ್ರಾಮದವರಂತೆ ಕಾಣುವುದಿಲ್ಲವಲ್ಲಾ ''

''ಹೌದು ನಾವು ಇಲ್ಲಿಯವರಲ್ಲ, ಬೆಂಗಳೂರು, ಕೋಲಾರ, ತಮಿಳುನಾಡು ಕಡೆಯಿಂದ ಬಂದಿದ್ದೇವೆ. ನಾವೆಲ್ಲಾ ಸೋಷಿಯಲಿಸ್ಟರು. ಕಾಗೋಡಿನ ರೈತರಿಗೆ ಬೆಂಬಲ ನೀಡಲು ಇಲ್ಲಿಗೆ ಬಂದಿದ್ದೇವೆ..... '' ಎಂದು ಹೇಳುತ್ತಿರುವಂತೆಯೇ,

''ಹೊಟ್ಟೆಗೆ ಹಿಟ್ಟಿಲ್ಲದ ಭಿಕಾರಿಗಳು ನೀವು ! ಜೈಲಿನಲ್ಲಿ ಪುಗಸಟ್ಟೆ ಕೂಳು ಸಿಗುತ್ತೆ ಅಂತ ಬಂದಿರೋ ಬದ್ಮಾಷ್‌ಗಳು ! ಸೋಷಿಯಲಿಸ್ಟರು !'' ಎಂದು ಜಮೀನ್ದಾರರಾದ ಕೆ.ಜಿ. ಒಡೆಯರ್‌ರವರು ನಮ್ಮ ಮೇಲೆ ಆಕ್ರೋಶದಿಂದ ಹರಿಹಾಯ್ದು ಬಿದ್ದರು. ಹೊಡೆಯುವವರಂತೆ ನಮ್ಮ ಮೇಲೇರಿ ಬಂದರು. ಎಲ್ಲಾ ಕಾಂಗ್ರೆಸ್ ಅಧ್ಯಕ್ಷರು ಮತ್ತು ಪತ್ರಕರ್ತರ ಮುಂದೆಯೇ ! ಒಬ್ಬ ಪಾರ್ಲಿಮೆಂಟ್ ಸದಸ್ಯ, ವಿದ್ಯಾವಂತ, ಸುಸಂಸ್ಕೃತ ಎನಿಸಿಕೊಂಡಿದ್ದ ಕೆ.ಜಿ. ಒಡೆಯರ್ ಬಾಯಿಂದ ಇಂಥ ಮಾತುಗಳು ಬರುವುದನ್ನು ಕೇಳಿ ನಾನು ಕ್ಷಣಕಾಲ ಅಪ್ರತಿಭನಾದೆ. ಆದರೆ ಕ್ಷಣಾರ್ಧದಲ್ಲೇ ಅದಕ್ಕೆ ತಕ್ಕ ಶಾಸ್ತಿಯೂ ಅವರಿಗೆ ಆಯ್ತು. ನಮ್ಮೊಡನೆ ಇದ್ದ ತರುಣ ಕಟ್ಟಾಳು ಸ್ವಾಮಿನಾಥನ್ ಅವರ ಮುಂದಕ್ಕೆ ಹಸಿದ ಹೆಬ್ಬುಲಿಯಂತೆ ಹಾರಿ ನುಡಿದ.

''ದಿನಾ ನಮ್ಮ ಮನೆ ಅಂಗಳದಲ್ಲಿ ನಿಮ್ಮಂಥ ಹತ್ತಾರು ಜನ ಪುಢಾರಿಗಳು ಹೊಟ್ಟೆ ತುಂಬ ಉಂಡು ಹೋಗ್ತಾರೆ ಜಮೀನ್ದಾರ್. ನಾವು ಹೊಟ್ಟೆಗಿಲ್ಲದ ಭಿಕಾರಿಗಳಲ್ಲ. ಏನು ಮಾತಾಡ್ತೀಯೋ '' ಎಂದು ತಮಿಳಿನಲ್ಲಿ ಮೂದಲಿಸಿದ.

ಅವನ ಮಾತನ್ನು ಕೇಳಿ ಕೆ.ಜಿ. ಒಡೆಯರ್ ಕೆಂಡವಾದರು. ''ಬದ್ಮಾಷ್ ನನ್ನ ಮಗನೇ ! ಹೊಟ್ಟೆಗೆ ಹಿಟ್ಟಿಲ್ಲದವನೇ,...... ಮಹಾ ಸತ್ಯಾಗ್ರಹ ಮಾಡ್ತಾನಂತೆ . ಸತ್ಯಾಗ್ರಹ! ಜೈಲು ಕೂಳು ತಿನ್ನೋಕೆ ಬಂದಿರೋ ಭಿಕಾರಿ. ತಲೆಯೆಲ್ಲಾ ಮಾತಾಡ್ತಾನೆ.'' ಎಂದು ಸ್ವಾಮಿನಾಥನ್‌ರವರನ್ನು ಮೂದಲಿಸಿದರು. ಆದರೆ ಸ್ವಾಮಿನಾಥನ್ ತಮ್ಮನ್ನು ಹಿಡಿದುಕೊಂಡಿದ್ದ ಪೋಲೀಸರಿಂದ ಬಿಡಿಸಿಕೊಳ್ಳಲು ಸೆಣಸಾಡುತ್ತಿದ್ದರು.

ಆಗ ನಾನು ಕೆಂಗಲ್‌ರವರನ್ನು ಪ್ರಶ್ನಿಸಿದೆ. ''ಈ ದುರಹಂಕಾರದ ಮಾತು ಬಿಡ್ರೀ, ದುಡಿಯೋನು ಗೇಣಿದಾರ. ತಿನ್ನೋನು ಜಮೀನ್ದಾರ. ಪುಗಸಟ್ಟೆ ಕೂಳು ಇಡೀ ಜೀವಮಾನ ಕಾಲ ತಿಂದಿರೋದು ನೀವೇ. ಈಗ ರಟ್ಟೆ ಮುರಿದು ದುಡಿದು ತಿನ್ನೋ ಕಾರ್ಮಿಕರಿಗೆ, ಈ ಮಾತು ಹೇಳ್ತಿದ್ದೀರಾ. ತುಂಬಾ ಚೆನ್ನಾಗಿದೆ ನಿಮ್ಮ ಮಾತು!... ಏನ್ ಸ್ವಾಮೀ! ನೀವೂ ಜೈಲಿಗೆ ಹೋಗಿದ್ದೋರೇ! ನೀವು ಸ್ವಾತಂತ್ರ್ಯಕ್ಕಾಗಿ ಜೈಲಿಗೆ ಹೋಗಿದ್ದಿರೋ ; ಜೈಲು ಕೂಳು ತಿನ್ನಲು ಹೋಗಿದ್ದಿರೋ'' ಎಂದು ಪ್ರಶ್ನಿಸಿದೆ.

ಆಗ ಅವರು ನನ್ನ ಕಡೆಗೆ ಕೋಪದಿಂದ ಒಮ್ಮೆ ನೋಡಿದರು. ಏನೋ ಮಾತನಾಡಲು ಹೋದರು. ಆದರೆ ಬಿಂಕದಿಂದ ತೆಪ್ಪಗಾಗಿ, ಮುಖ ಗಂಟಿಕ್ಕಿ ಕೊಂಡರು. ಸುತ್ತಲೂ ಇದ್ದ ಪತ್ರಕರ್ತರು, ಕಾಂಗ್ರೆಸ್ ಮುಂದಾಳುಗಳೊಡನೆ ಮಾತನಾಡಲು ಪ್ರಾರಂಭಿಸಿದರು. ಆಗಿನ್ನೂ ಅವರು ಕೇವಲ ಕಾಂಗ್ರೆಸ್ ಅಧ್ಯಕ್ಷರೇ. ಇನ್ನೂ ಮುಖ್ಯಮಂತ್ರಿ ಆಗಿರಲಿಲ್ಲ. ವಿಧಾನಸೌಧ ಕಟ್ಟಿರಲಿಲ್ಲ. ಆದರೂ ಆ ನಿರೀಕ್ಷೆಯಲ್ಲಿ ನೆಲ ಬಿಟ್ಟು ಆಕಾಶದಿಂದ ಇಳಿದು ಬಂದವರಂತೆ ಠೀವಿ ಠೇಂಕಾರಗಳಿಂದ ನಡೆದುಕೊಳ್ಳುತ್ತಿದ್ದರು. ಒಂದೆರಡು ನಿಮಿಷಗಳಲ್ಲೇ ಸಣ್ಣದಾಗಿ ಮಳೆ ಹನಿಯತೊಡಗಿತು. ಎಲ್ಲರೂ ಅತ್ತಿತ್ತ ಓಡಿದರು.

ಬಡಪಾಯಿಯಂತೆ, ಪೋಲೀಸರ ಬಂಧಿಯಾಗಿ ನಿಂತಿದ್ದ ನನ್ನ ಮತ್ತು ನನ್ನ ಸಂಗಾತಿಗಳನ್ನು ಕಡೆಗಣ್ಣಿನಿಂದಲೂ ನೋಡಲಿಲ್ಲ ಕೆಂಗಲ್. ನಮ್ಮ ಮೇಲೆ ಸಿಟ್ಟಿನಿಂದ ಹರಿಹಾಯಲು ಮತ್ತೊಮ್ಮೆ ಪ್ರಯತ್ನಿಸಿದ ಕೆ.ಜಿ. ಒಡೆಯರ್‌ರವರನ್ನು ತೆಪ್ಪಗಿರುವಂತೆ ಬೆರಳೆತ್ತಿ ಎಚ್ಚರಿಸಿದರು. ಅವರ ತಲೆಯ ಮೇಲೆ ಯಾರೋ ಛತ್ರಿ ಹಿಡಿದರು. ಅವರು ನೇರವಾಗಿ ತಮ್ಮ ಕಾರಿನ ಕಡೆಗೆ ನಡೆದರು. ಅಲ್ಲಿ ಅನೇಕ ಕಾಂಗ್ರೆಸ್ ನಾಯಕರು ಅವರಿಗೆ ನಮ್ರ ಸೇವಕರಂತೆ ಕಾರಿನ ಬಾಗಿಲು ತೆರೆದರು. ಕೆಂಗಲ್‌ರವರು ಹಿಂದಿನ ಸೀಟಿನಲ್ಲಿ ತಾವೊಬ್ಬರೇ ಹೋಗಿ ಕುಳಿತರು. ಅವರ ಅಕ್ಕಪಕ್ಕದಲ್ಲಿ ಕಾಂಗ್ರೆಸ್ ನಾಯಕರು

ಲೋಡು ದಿಂಬುಗಳನ್ನು ಜೋಡಿಸಿದರು. ಇನ್ನೊಬ್ಬ ಹಿರಿಯ ನಾಯಕರು ಕಾರಿನೊಳಗೆ ಮೈ ತೂರಿಸಿ , ನೆಲದವರೆಗೂ ಬಾಗಿ, ದಪ್ಪ ಶಾಲೊಂದನ್ನು ಅವರ ಕಾಲುಗಳಿಗೆ ಮಂಡಿಯವರೆಗೂ ಹೊದಿಸಿದರು. ಹೊರಗೆ ತಮ್ಮ ತಲೆಯನ್ನೆಳೆದು ಕೊಂಡು ಕೈ ಮುಗಿದು ನಡುಬಾಗಿ ನಮಸ್ಕಾರ ಮಾಡಿದರು. ಅವರೊಡನೆ ಎಲ್ಲಾ ಕಾಂಗ್ರೆಸ್ ಮುಖಂಡರೂ ಸೇರಿಕೊಂಡು ಅವರಿಗೆ ವಂದಿಸಿದರು. ಕೆಂಗಲ್‌ರವರು ಪ್ರತಿವಂದಿಸುವ ಶಾಸ್ತ್ರ ಮಾಡಿ ಕಾರಿನಲ್ಲಿ ಆಳವಾಗಿ ಹಿಂದಕ್ಕೊರಗಿ ಕುಳಿತುಕೊಂಡರು.

ಅವರ ಕಾರು ಹೊರಟಿತು. ಉಳಿದ ನಾಯಕರು, ಲಗುಬಗೆಯಿಂದ ಹಿಂದಿದ್ದ ತಮ್ಮ ಕಾರುಗಳಿಗೆ ತುಂಬಿಕೊಂಡರು. ಪತ್ರಕರ್ತರೂ ಹಿಂಬಾಲಿಸಿದರು. ಅವರ ಕಾರುಗಳು ಚಲಿಸಲು ಪ್ರಾರಂಭಿಸಿದವು. ಒಡನೆಯೇ ನಮ್ಮ ರಣಘೋಷಣೆಗಳು ಪ್ರಾರಂಭವಾದವು.

''ಧಿಕ್ಕಾರ , ಧಿಕ್ಕಾರ ! ..... ಜಮೀನ್ದಾರನಿಗೆ ಧಿಕ್ಕಾರ !''

''ಧಿಕ್ಕಾರ , ಧಿಕ್ಕಾರ ! .....ಪೋಲೀಸ್ ದೌರ್ಜನ್ಯಕ್ಕೆ ಧಿಕ್ಕಾರ !''

''ಇಂಕ್ವಿಲಾಬ್ ಜಿಂದಾಬಾದ್ ''

''ಉಳುವವನೇ ನೆಲದೊಡೆಯ !''

''ರೈತ ಕಾರ್ಮಿಕರ ಹೋರಾಟಕ್ಕೆ ಜಯವಾಗಲಿ ! ''

''ಇಂಕ್ವಿಲಾಬ್ ಜಿಂದಾಬಾದ್ '' ಎಂಬ ಘೋಷಣೆಗಳು ನಭವನ್ನು ಸೀಳತೊಡಗಿದವು.

ಕ್ಷೋಭೆ, ಕಿರುಚಾಟ, ಆಕ್ರೋಶ, ಘೋಷಣೆ, ಗದ್ದಲ, ಗಡಿಬಿಡಿಗಳು ಅಲ್ಲಿ ತಾಂಡವವಾಡಿತು. ಕಾಂಗ್ರೆಸ್ ನಾಯಕರ ಕಾರುಗಳು ಹೊರಟು ದೂರಕ್ಕೆ ಸಾಗಿ ಕಣ್ಮರೆಯಾದವು.

ಅಂತೂ ನಮ್ಮ ಅಂದಿನ ಗುರಿಯನ್ನು ನಾವು ಸಾಧಿಸಿದ್ದೆವು ! ಸತ್ಯಾಗ್ರಹವೇ ಇಲ್ಲ ಎಂದು ಸಾಧಿಸುತ್ತಿದ್ದ ಜಮೀನ್ದಾರ ಮತ್ತು ಸರ್ಕಾರದ ಮಾತು ಸುಳ್ಳು ! ಸತ್ಯಾಗ್ರಹ ಮುಂದುವರೆಯುತ್ತಿದೆ ; ಸಶಕ್ತವಾಗಿದೆ ಎಂಬುದನ್ನು ನಾವು ಮನವರಿಕೆ ಮಾಡಿ ಕೊಟ್ಟಿದ್ದೆವು. ಆದರೆ ಆಗಿನ ವಾರ್ತಾ ಮಾಧ್ಯಮಗಳು ನಮ್ಮ ಪರವಾಗಿರಲಿಲ್ಲ.

ಪೋಲೀಸರು ನಮ್ಮೆಲ್ಲರನ್ನೂ ಜಮೀನ್ದಾರನ ಮನೆಯ ಜಗುಲಿಗೆ ಕರೆಯದೊಯ್ದರು. ಅಲ್ಲಿ ನಮ್ಮ ಹೆಸರು ವಿಳಾಸಗಳ ಪಟ್ಟಿ ಮಾಡಿಕೊಂಡರು. ಜಮೀನ್ದಾರನ ಕಡೆಯವರು ಅಬ್ಬರ ಹಾಕುತ್ತಿದ್ದರು.

''ಕಳ್ಳ ನನ್ನ ಮಕ್ಕಳನ್ನ ನಮಗೆ ಒಪ್ಪಿಸಿ, ನಮ್ಮ ಧಣೀರನ್ನು ಬಯ್ದವ್ರೆ. ಈ ನನ್ನ ಮಕ್ಕಳಿಗೆ ಬುರುಡೆಗೆ ಬಿಸಿನೀರು ಕಾಯಿಸಬೇಕು. ನಮ್ಮ ಕಡೆ ಕೊಡ್ರೀ ಇವರನ್ನ ಜಮಾದಾರ ಸಾಹೇಬ್ರೆ'' ಎಂದು ಅಲ್ಲಿದ್ದ ಪೋಲೀಸರನ್ನು ಗೂಂಡಾಪಡೆ ಬೇಡಿ ಕೊಳ್ಳುತ್ತಿತ್ತು. ಪೋಲೀಸ್ ಜಮಾದಾರ ಅವರ ಕಡೆ ನೋಡಿ ಕಣ್ಣು ಮಿಟುಕಿಸಿ, ತುಟಿಯ ಮೇಲೆ ಬೆರಳಿಟ್ಟು ಅವರನ್ನು ತೆಪ್ಪಗಿರುವಂತೆ ಎಚ್ಚರಿಸಿ ತನ್ನ ಪಾಡಿಗೆ ತನ್ನ ಕೆಲಸವನ್ನು ಮುಂದುವರೆಸುತ್ತಿದ್ದ. ನಮ್ಮೆಲ್ಲರ ವಿಳಾಸಗಳೇ ಹೇಳುತ್ತಿದ್ದುವು ಎಲ್ಲರೂ ವಿದ್ಯಾವಂತರು , ಕಾರ್ಮಿಕ ಸಂಘಗಳ ಅಧ್ಯಕ್ಷರು, ಪಕ್ಷದ ಪದಾಧಿಕಾರಿಗಳು, ವಕೀಲರು ಮತ್ತು ಪತ್ರಕರ್ತರು ಎಂದು. ಮೇಲಾಗಿ ಎಲ್ಲರೂ ಕಟ್ಟುಮಸ್ತಾದ ಯುವಕರು. ಆ ಗೂಂಡಾ ಪಡೆಗಳ ದೊಣ್ಣೆಗಳನ್ನೇ ಕಿತ್ತುಕೊಂಡು ಅವರಿಗೆ ತಿರುಗಿಸಿ ಹೊಡೆಯಲು ಸಶಕ್ತರಾಗಿದ್ದವು. ಪೋಲೀಸ್ ಜಮಾದಾರ್ ನಮಗೆ ಕೇಳಿಸದಂತೆ ಅವರ ನಾಯಕನಿಗೆ ಕಿವಿಯಲ್ಲಿ ಉಸುರಿದ - ''ಎಲ್ಲಾದ್ರೂ ಉಂಟೆ ! ಮುಂದೆ ಮುಖ್ಯಮಂತ್ರಿ ಆಗೋ ಕೆಂಗಲ್ಲರ ಕಣ್ಣೆದುರಿಗೆ, ಎಲ್ಲಾ ಪೇಪರ್‌ನೋರ ಕಣ್ಣೆದುರಿಗೇ ಅರೆಸ್ಟ್ ಮಾಡಿದ್ದೇವೆ. ಅಲ್ದೆ ಇವ್ರಾರೂ ಹಳ್ಳಿ ಗಮಾರ್‌ಗಳಲ್ಲ. ಹುಲಿಗಳಿದ್ದಂಗೆ ಅವ್ರೆ. ನಿಮ್ಗೆ ಇವ್ರ ಸಹವಾಸ ಬೇಡಬಿಡ್ರಪ್ಪಾ. ನಾಳೆ ಬೆಳಿಗ್ಗೆ ೧೧ ಗಂಟೆಗೆ ಸಾಗರ ಮ್ಯಾಜಿಸ್ಟ್ರೇಟ್ ಕೋರ್ಟ್‌ನಾಗೆ ಇವ್ರನ್ನ ಹಾಜರ್ ಮಾಡದೆ ಹೋದ್ರೆ, ಬಂತು ನಮ್ಮ ನೌಕರಿಗೆ ಕತ್ರಿ.... ಸುಮ್ಕಿರೋ ! '' ಎಂದು ಕೈ ಮುಗಿದು ಅವರನ್ನು ಬೇಡಿಕೊಂಡ. ''ವ್ಯಾನ್ ಕರೀರಪ್ಪ ಕಾನ್ಲೆ ಸ್ಟೇಷನ್‌ಗೆ ನಮ್ಮನ್ನು ಬಿಟ್ಟುಬಿಡಲಿ'' ಎಂದು ಪೋಲೀಸ್ ವ್ಯಾನ್‌ಗೆ ಹೇಳಿಕಳಿಸಿದ.

ವ್ಯಾನ್ ಡ್ರೈವರ್ ಬಂದು ಜಮಾದಾರನಿಗೆ ತನ್ನ ಕೈಗಡಿಯಾರ ತೋರಿಸಿ ಕೇಳಿದ. ಹಿಗ್ಗು ತಿರಸ್ಕಾರಗಳಿಂದ, ''ಇಷ್ಟು ಹೊತ್ತಿಗೆ ರೈಲು ಸಾಗರದ ಹತ್ರತ್ರ ಹೋಗಿರಲ್ವಾ ? ಇನ್ನೂ ಕಾನ್ಲೆಯಾಗೆ ಇರ್ತಾನಾ ? ಏಟಾಗೈತಪ್ಪೋ ಟೈಮು ?'' ಎಂದು ಕೇಳಿದ. ರೈಲಿಗೆ ಹೊರಡಲು ಹೊತ್ತು ಮೀರಿದೆ ಎಂದು ಅರಿತ ಜಮಾದಾರ್ ಹೌಹಾರಿದ. ''ಹೌದಲ್ಲಪ್ಪೋ ! ಈ ಗಡಿಬಿಡಿಯಾಗ ಟೈಮೇ ಮರತೋಯ್ತು !'' ರೈಲು ಹೋಗಿರ್ತದೆ. ಈಗ ಸಾಗರಕ್ಕೆ ಕಾಲುನಡಿಗೆಯಲ್ಲಿ ನಡಿಯೋದೇ ಗತಿ. ಬಂತಲ್ಲಾಪ್ಪಾ ಗಾಚಾರ ! ಎಂದು ಹಣೆಹಣೆ ಚಚ್ಚಿಕೊಂಡ. ನಮ್ಮೆಲ್ಲರ ಕಡೆಗೆ ತಿರುಗಿ, ''ಏನು ಕಾಮ್ರೇಡ್‌ಗಳೇ ! ಈಗ ೧೨ ಮೈಲಿ ಗದ್ದೆ ತೆವರಿ ಮೇಲೆ ನಡೀಬೇಕು ನಾವು. ನೀವು ಮಾಡೋದ್ ಮಾಡಿದ್ರಿ, ನೀವು ಸತ್ಯಾಗ್ರಹ ರೈಲು ಟೈಮ್ ನೋಡ್ಕೊಂಡು ಮಾಡಾಕಿಲ್ವೆ? ಈಗ ತಂದ್ರೀ ನಮ್ಮ ತಲೀಗೇ. ನಿಮ್ಮ ತಲೆಗೂ ಬಂತು !'' ಎಂದು ಹಣೆ ಹಣೆ ಚಚ್ಚಿಕೊಂಡ.

❊ ❊ ❊ ❊

೬.

ಕಾರಿರುಳಿನಲ್ಲಿ ಹಾಡುತ್ತಾ ಬಂದ ಕರುಣಾಳು

ಅಂದಿನ ಮುಂಜಾನೆಯ ಮುಂಬೆಳಕಿನಲ್ಲಿ ನಾವು ಸಾಲು ಸಾಲಾಗಿ ಕಾಡಿನ ಕಾಲುದಾರಿಯಲ್ಲಿ ಕಾಗೋಡು ಗ್ರಾಮವನ್ನು ಪ್ರವೇಶ ಮಾಡಿದ್ದೆವು. ಅಂದಿನ ಸಂಜೆಯ ಮಬ್ಬುಗತ್ತಲಿನಲ್ಲಿ ನಾವು ಸಾಲು ಸಾಲಾಗಿ ಕಾಡಿನ ಕಾಲುದಾರಿಯಲ್ಲಿ ಅಲ್ಲಿಂದ ನಿರ್ಗಮಿಸುತ್ತಿದ್ದೆವು. ಆದರೆ ಒಂದು ವ್ಯತ್ಯಾಸವಿತ್ತು. ಬರುವಾಗ ಸ್ವತಂತ್ರ ವ್ಯಕ್ತಿಗಳಾಗಿ ಬಂದಿದ್ದೆವು. ಹೋಗುವಾಗ ಸೆರೆಯಾಳುಗಳಾಗಿ ಸಾಗುತ್ತಿದ್ದೆವು ; ಕಗ್ಗತ್ತಲಿಗೆ ಸಾಗುತ್ತಿದ್ದೆವು. ಬಹುಷಃ ಬದುಕು-ಸಾವುಗಳೂ ಹೀಗೇ ಇರಬಹುದು. ಗದ್ದೆಯ ತೆವರಿಗಳ ಮೇಲೆ, ಒಬ್ಬರ ಹಿಂದೆ ಒಬ್ಬರಂತೆ ಪೋಲೀಸರು ಮತ್ತು ಸೆರೆಯಾಳುಗಳ ಕಾರವಾನ್ ಸಾಗುತ್ತಿತ್ತು. ಬರಬರುತ್ತಾ ಕತ್ತಲೆ ದಟ್ಟವಾಯಿತು. ಮುಂದೆ ಮಿಳಮಿಳನೆ ಉರಿಯುತ್ತಿದ್ದ ಮಂಕು ಕಂದೀಲು ಹಿಡಿದ ಪೋಲೀಸನ ಕಾಲುಗಳು ಮಾತ್ರ ಕಾಣುತ್ತಿದ್ದವು. ಅವನ ಹಿಂದಿನವರು ಸರಿಯಾಗಿ ನೆಲ ನೋಡಿ ಹೆಜ್ಜೆಯೂರುತ್ತಾ ಆಗೊಮ್ಮೆ ಬಲಕ್ಕೆ ಈಗೊಮ್ಮೆ ಎಡಕ್ಕೆ ಕೈ ಬೀಸಿ ವಾಲಿಕೊಳ್ಳುತ್ತಾ ಮುಂದೆ ಮುಂದೆ ಸಾಗುತ್ತಿದ್ದೆವು. ಹಳ್ಳಕೊಳ್ಳಗಳ ಮೇಲೆ ಹಾಕಿದ್ದ ಅಡಿಕೆ ಮರದ ಸೇತುವೆಗಳ ಮೇಲೆ ತೊನೆದಾಡುತ್ತಾ ಅಡಿಯಿಡುವಾಗ ಕೆಳಗಿನ ಹಳ್ಳಕ್ಕೆ ಬಿದ್ದೇ ಬಿಟ್ಟೆವು ಎಂದಾಗ

ಮುಂದಿನವನೋ ಹಿಂದಿನವನೋ ನೀಡಿದ ನೆರವಿನೊಂದಿಗೆ ಮುಂದೆ ಮುಂದೆ ಸಾಗುತ್ತಿದ್ದೆವು. ಎಲ್ಲೆಲ್ಲೂ ಕೆಸರುಗದ್ದೆ, ನೀರು, ಹಸಿರು ಪೈರು, 'ಗವ್' ಎನ್ನುವ ಕಗ್ಗತ್ತಲೆ ! ಮುಂದೆ ಮುಂದೆ ಅನತಿದೂರದಲ್ಲಿ ಯಾವುದೋ ಗದ್ದೆಯ ಬದುವಿನ ಮೇಲೆ ಕಾಣಿಸಿಕೊಳ್ಳುತ್ತಿದ್ದ ಲಾಂಧ್ರದ ಬೆಳಕು. ಹಾವಿನಂತೆ ಬಳುಕಿ, ಒಬ್ಬರ ಹಿಂದೆ ಇನ್ನೊಬ್ಬರಂತೆ ಸಾಗುತ್ತಿದ್ದ ಮನುಷ್ಯರ ಕರಿಯಾಕೃತಿಯ ಸಾಲು. ಮೇಲೆ ಪ್ರಕಾಶಮಾನವಾದ ನಕ್ಷತ್ರಲೋಕ ! ತಂಗಾಳಿ- ಹೀಗೇ ಒಂದರಡು ಗಂಟೆ ಸಾಗಿತು ನಮ್ಮ ಪಯಣ. ಜಮಾದಾರ ಭೀಮರಾವ್ ಆಗಾಗ್ಗೆ ಹಲುಬುತ್ತಲೇ ಇದ್ದ. ''ನೀವು ಒಂದು ಸ್ವಲ್ಪ ಮೊದಲೇ ಸತ್ಯಾಗ್ರಹ ಮಾಡ್ಬಿಟ್ಟದ್ರೇ !..''

ಸ್ವಲ್ಪ ಕಾಲದಲ್ಲೇ ನಾವು ಒಣಗಿ ಸೊರಗಿದ್ದ ವರದಾನದಿಯ ದಂಡೆಯ ಮೇಲೆ ಹಾವಿನಂತೆ ಹರಿದಾಡಿದ್ದ ಕಾಲುರಸ್ತೆಗೆ ಬಂದೆವು. ಲಾಟೀನಿನ ಬೆಳಕು ಎಲ್ಲರ ಮೇಲೂ ಬೀಳತೊಡಗಿತು. ಸ್ವಲ್ಪ ದೂರ ಹಾಗೆ ಸಾಗುತ್ತಿದ್ದಂತೆ, ಕಾಲುದಾರಿ ನದಿಯ ಆಳ ಪಾತ್ರಕ್ಕೆ ಇಳಿಯಿತು. ಹಳ್ಳದ ಮಧ್ಯದಲ್ಲಿ ಸೊರಗಿದ ಸಣ್ಣ ತೊರೆಯೊಂದು ಜುಳು-ಜುಳು ಹರಿಯುತ್ತಿತ್ತು. ಅದರ ಎಡ ಬಲದ ವಿಶಾಲ ಪ್ರದೇಶದಲ್ಲಿ ಅತ್ತೊಂದು ಇತ್ತೊಂದು ಕಾಲುದಾರಿಗಳು ಸಾಗುತ್ತಿದ್ದವು. ಈ ಬಗೆಯ ಒಂದು ಕಾಲುಹಾದಿಯಲ್ಲಿ ಸ್ವಲ್ಪ ಸಮಯ ಸಾಗುತ್ತಿದ್ದಂತೆಯೇ ರಸ್ತೆಯ ಎಡಬದಿಯಿಂದ ಹೆಬ್ಬುಲಿಯೊಂದರ ಭಯಂಕರ ಭಯಾನಕ ಗರ್ಜನೆ 'ಹ್ಹೂ್ರಂಕ್...!' ಎಂದು ಗಟ್ಟಿಯಾಗಿ ಕೇಳಿಬಂತು! ನನ್ನ ರಕ್ತ ಹೆಪ್ಪುಗಟ್ಟಿತು ! ಭಯದಿಂದ ಎದೆ 'ಢವ ಢವ ' ಎಂದು ಹೊಡೆದುಕೊಳ್ಳ ತೊಡಗಿತು.

ಎಲ್ಲರೂ ಗೊಂಬೆಗಳಂತೆ ನಿಂತೆವು. ಲಾಟೀನು ಹಿಡಿದ ಪೋಲೀಸಿನವನು ಕ್ಷಣಕಾಲ ಚಲಿಸದೆ ನಿಂತ. ಒಂದು ಕ್ಷಣದ ಬಳಿಕ ಮತ್ತೆ ಮುಂದೆ ಸಾಗಿದ ಎಲ್ಲರ ಧಮನಿ ಧಮನಿಗಳಲ್ಲಿ ಹರಿಯುವ ರಕ್ತ ಹೆಪ್ಪುಗಟ್ಟಿತ್ತು. ಹುಲಿಯ ಗರ್ಜನೆ ಮತ್ತೆ ಮತ್ತೆ ಕೇಳಿ ಬರುತ್ತಿತ್ತು. ಆದರೂ ನಾವು ನಿರಂತರವಾಗಿ ಮುನ್ನಡೆಯುತ್ತಿದ್ದೆವು. ಆಗ ಎದುರಿನಿಂದ ನದಿಯ ಕೊಳ್ಳದ ಹಾದಿಯ ತಗ್ಗಿನಿಂದ ಗಟ್ಟಿಯಾಗಿ ಕೇಳಿ ಬಂತು, ಬಯಲು ನಾಟಕದ ಹಾಡಿನ ಒಂದು ಮಟ್ಟು ! ಅದೇನು ಕಂಠ ! ಅದೇನು ಗತ್ತು ! ಆ ಕಗ್ಗತ್ತಲಲ್ಲಿ, ಅತ್ತಿತ್ತ ಪಸರಿಸಿದ್ದ ಕಾಡಿನ ನಡುವಿನ ಆ ವರದಾ ನದಿಯ ಹಳ್ಳ ಕೊಳ್ಳದ ದಾರಿಯಲ್ಲಿ ಅದಾವ ಮಹಾತ್ಮನೋ, ಉರಿಯುತ್ತಿದ್ದ ದೊಂದಿ ಹಿಡಿದುಕೊಂಡು ಸೈಂಧವನಂತೆ ಹಾಡುತ್ತಾ ನಮಗೆದುರಾದ. ಪೋಲೀಸರ ವಿಚಾರಣೆಗೆ ಅವನು ಲೀಲಾಜಾಲವಾಗಿ ಉತ್ತರ ನೀಡುತ್ತಾ - ''ಹೀಂಗೇ ಸಂತೆಗೆ ಹ್ವಾಗಿದ್ದೆವು ಮಾರಾಯ್ರೇ, ಹೊರಳಿ ಹಿಂದಕ್ಕೆ ಬರೋದು ತಡವಾತು. ಇದೇನು ಈ ಕತ್ತಲಲ್ಲಿ ನಿಮ್ಮ ಯಾತ್ರೆ ? '' ಎಂದು ಕೇಳಿ ನಮ್ಮ ಕತೆಯನ್ನು ತಿಳಿದುಕೊಂಡ.

ಅವನ ಬಾಯಿಂದ ಎಲೆಅಡಿಕೆ ರಸದಂತೆ, ಸಹಾನುಭೂತಿಯ ನುಡಿಗಳೂ ಧಾರಾಳವಾಗಿ ಹೊರಬೀಳುತ್ತಿದ್ದವು. ''ಅಯ್ಯಯ್ಯೋ ! ಈ ಕತ್ತಲಲ್ಲಿ ಅಲ್ಲಿಂದ ಇವರನ್ನೆಲ್ಲಾ ನಡೆಸ್ಕೊಂಡು ಬಂದ್ರಾ ! ಛೇ ಛೇ ! ಹೊಟ್ಟೆಗೆ ಏನಾದ್ರೂ ತಗೊಂಡಿದ್ರೋ, ಇಲ್ಲವೇ ಹಾಗೇ ಉಪವಾಸ ಕರೆದೊಯ್ಯುತ್ತಿದ್ದೀರೋ '' ಎಂದು. ನಾವು ಯಾರೂ ಒಂದು ತೊಟ್ಟು ನೀರನ್ನೂ ಕುಡಿಯದೆ ಬರುತ್ತಿರುವ ವಿಚಾರ ತಿಳಿದು ಆತ ಮಮ್ಮಲ ಮರುಗಿ ನುಡಿದ ''ಇಲ್ಲಾದ್ರೂ ಉಂಟೇ , ಬನ್ನಿ..... ಬನ್ನಿ ಇಲ್ಲೇ ಇದೆ ನಮ್ಮ ತೋಟದ ಮನೆ. ಏನಾದರೂ ಬಾಯಾರಿಕೆ ಪೂರೈಸಿಕೊಂಡು ಹೋಗುವಿರಂತೆ.'' ಎಂದು ಅಲ್ಲಿಗೆ ಸಮೀಪದಲ್ಲೇ ಇದ್ದ ಅವನ ತೋಟದ ಮನೆಗೆ ಅಕ್ಕರೆಯಿಂದ ಕರೆದೊಯ್ದ.

ಹೆಬ್ಬುಲಿ ಮತ್ತೊಮ್ಮೆ ಹಳ್ಳದ ಬಲಕ್ಕೆ ಗರ್ಜಿಸಿತು. ಅದು ಹಳ್ಳವನ್ನು ದಾಟಿ ಎಡದಂಡೆಯಿಂದ ಬಲದಂಡೆಗೆ ಬಂದಿರಬೇಕು ಎಂದು ನನಗೆ ಅನ್ನಿಸಿತು. ನಾವು ಹೋಗುತ್ತಿದ್ದದ್ದೂ ಈಗ ಬಲದಂಡೆಯ ಕಡೆಗೇ. ನಾನು ಕಾತುರದಿಂದ ವಿಚಾರಿಸಿದೆ.

''ಹುಲಿ ಈಗ ಬಲದಂಡೆಗೇ ಬಂದಂತೆ ಇದೆ !''

ಅದಕ್ಕೆ ಆ ಹವ್ಯಕ ಬ್ರಾಹ್ಮಣ ಉದಾಸೀನವಾಗಿ ಉತ್ತರಿಸಿದ, ''ಅದೆಲ್ಲೋ ಈಗ ಇಲ್ಲಿಂದ ನಾಲ್ಕು ಮೈಲಿ ದೂರ ಇರಬೇಕು. ಪ್ರಣಯ ಸಮಯವಲ್ಲವೇ ? ಹೆಣ್ಣು ಹುಲಿಗಾಗಿ ಗಂಡು ಗರ್ಜಿಸುತ್ತಿದೆ. ''

''ನಾಗವೇಣಿ ನಾ ಪೋಗಿ ಬರುವೆನೇ ನಗರಕೆ ! '' ಎಂದು ಇನ್ನೊಂದು ನಾಟಕದ ಮಟ್ಟನ್ನು ತನ್ನ ವಿಶಿಷ್ಟ ಕಂಠದಿಂದ ಹಾಡತೊಡಗಿದ. ಮತ್ತೆ ಮತ್ತೆ ನಿಗುರಿ ನಿಲ್ಲುತ್ತಾ ''ನಾ ಪೋಗಿ ಬರುವೆನೇ ! ..... ನಾ ಪೋಗಿ ಬರುವೆನೇ ! .... ನಾಗವೇಣಿ ನಾ ನಗರಿಗೆ ಪೋಗಿ ಬರುವೆನೇ !'' ಎಂದು ಹಾಡಿ ಹಾಡಿ ನಮ್ಮಿಂದ ಷಹಬ್ಬಾಸ್‌ಗಳನ್ನು ಗಿಟ್ಟಿಸಿಕೊಂಡ.

ಆತನದು ವಿಶಾಲವಾದ ಮನೆ. ದೊಡ್ಡ ತೋಟ. ಆತ ಶ್ರೀಮಂತ ಹವ್ಯಕ ಬ್ರಾಹ್ಮಣ. ಮಡದಿ, ಮಕ್ಕಳು, ಆಳು-ಕಾಳು, ಎತ್ತು-ದನ ಎಲ್ಲವೂ ಇದ್ದವು. ಆತನೂ ಏಳಡಿ ಎತ್ತರದ ಭವ್ಯವಾದ ಆಳು. ಅವನು ಮತ್ತು ಆತನ ಮಡದಿ ಮಕ್ಕಳು ನಮ್ಮ ಸೇವೆಗೆ ಟೊಂಕಕಟ್ಟಿ ನಿಂತರು. ಆ ರಾತ್ರಿಯಲ್ಲಿ ನಮಗೆ ಬಿಸಿ ಬಿಸಿ ಅನ್ನ, ಹಲಸಿನ ಸಾರು, ನಿಂಬೆ ಉಪ್ಪಿನಕಾಯಿನ ಊಟ ಹಾಕಿ, ಮೇಲೆ ಸ್ಟ್ರಾಂಗ್ ಕಾಫಿಯನ್ನು ಕೊಟ್ಟರು. ಅದನ್ನು ಕೃತಜ್ಞತೆಯಿಂದ ಕುಡಿದೆವು.

ನಮ್ಮ ಆ ಕರುಣಾಳು ಅಭ್ಯಾಗತನ ಅದ್ದೂರಿ ಔತಣ ಮುಗಿಸಿ ಅವನಿಗೆ ವಂದಿಸಿದ ಬಳಿಕ ಮತ್ತೆ ಗದ್ದೆಯ ತೆವರಿಗಳ ಮೇಲೆ ನಮ್ಮ ಪಾದಯಾತ್ರೆ ಮುಂದುವರಿಯಿತು.

ಇನ್ನು ಅರ್ಧಗಂಟೆಯಲ್ಲಿ ನಾವು ಒಂದು ಮೈಲಿ ಸಾಗಿರಬಹುದು. ಲಾಟೀನು ಹಿಡಿದು ಆ ಕಗ್ಗತ್ತಲಿನ ಗದ್ದೆಯ ಬಯಲಿನಲ್ಲಿ ಎಲ್ಲರಿಗೂ ಮೊದಲು ನಡೆದು ಹೋಗುತ್ತಿದ್ದ ಪೋಲೀಸ್ ಪೇದೆ ನಾವಿದ್ದೆಡೆಯಿಂದ ಸುಮಾರು ಒಂದು ಫರ್ಲಾಂಗು ದೂರದಲ್ಲಿ ಮುಂದೆ ಮುಂದೆ ಸಾಗುತ್ತಿದ್ದ. ಅವನ ಹಿಂದೆ ಒಬ್ಬೊಬ್ಬರಾಗಿ ಒಂದೆರಡು ಮಂದಿ ಪೋಲೀಸರು ಮತ್ತೆ ಸತ್ಯಾಗ್ರಹಿಗಳು ಇದ್ದರು. ಹೀಗೆ ೧೮ ಜನಗಳ ಸಾಲಿನ ಬಳಿಕ ಕೊನೆಯಲ್ಲಿ ಒಬ್ಬ ರೈಫಲ್ ಹಿಡಿದ ಪೋಲೀಸ್ ಪೇದೆ ಬರುತ್ತಿದ್ದ. ಅವನ ಮುಂದೆಯೇ ನಾನು ಬರುತ್ತಿದ್ದೆ.

ಅವನು ಇದ್ದಕ್ಕಿದ್ದಂತೆಯೇ ಕಾತರದಿಂದ ''ಸ್ವಾಮಿ ! .... ಸ್ವಾಮಿ '' ಎಂದು ಮುಲುಕಿದ. ನಾನು ಕೂಡಲೇ ನಿಂತು ಹಿಂತಿರುಗಿ ಕೇಳಿದೆ.

''ಏನಪ್ಪ !''

ಅವನು ಮತ್ತಿನ್ನೇನೂ ಮಾತನಾಡಲಿಲ್ಲ. ಎಡಗೈಯಿಂದ ತಮ್ಮ ಹೊಟ್ಟೆ ಹಿಡಿದುಕೊಂಡು ಆರ್ತನಾಗಿ ನನ್ನತ್ತ ನೋಡಿದ. ಅವನ ಬಲಗೈಯಲ್ಲಿದ್ದ ರೈಫಲ್ ಅನ್ನು ಹಠಾತ್ತನೆ ಮುಂದೆ ಚಾಚಿ, ನನ್ನ ಕೈಗೆ ಕೊಟ್ಟ. ನಾನು ಅದನ್ನು ಎಚ್ಚರಿಕೆಯಿಂದ, ಅಚ್ಚರಿಯಿಂದ ಎರಡು ಕೈಗಳಿಂದಲೂ ಪಡೆದೆ. ನನ್ನ ಕೈಗೆ ರೈಫಲ್ ಕೊಟ್ಟಿದ್ದೇ ತಡ, ಅವನು ತೆವರಿಯ ಮೇಲೆಯೇ ತುಸುದೂರ ಹಿಂದಕ್ಕೆ ಅವಸರವಸರವಾಗಿ ನಾಲ್ಕು ಹೆಜ್ಜೆ ಓಡಿಬಿಟ್ಟ. ಅದೇಕೆಂದು ನಾನು ಆಶ್ಚರ್ಯಚಕಿತನಾಗಿ ನೋಡುತ್ತಿದ್ದಂತೆ ಅವನು ಚಡ್ಡಿ ಬಿಚ್ಚಿ ಕುಳಿತ. ಏಕೆಂದು ನನಗೆ ಅರ್ಥವಾಯಿತು. ಮುಖ ಇನ್ನೊಂದೆಡೆಗೆ ತಿರುಗಿಸಿ, ರೈಫಲ್ ಹೆಗಲಿಗೇರಿಸಿ, ಮುಖ ಕಿವುಚಿ, ನಾನು ನಿರ್ವಾಹವಿಲ್ಲದೆ ತೆವರಿಯ ಮೇಲೆ ಕುಳಿತೆ. ''ಥರ್ರ್..... ಭರ್ರ್.... ಡಬಾರ್ ! '' ಎಂಬ ಅವನ ಕೋಡಿಬಿದ್ದ ಮಲವಿಸರ್ಜನೆಯ ಶಬ್ದ ಕಿವಿಯ ಮೇಲೆ ಬೀಳುತ್ತಿತ್ತು. ಹವ್ಯಕರ ಮನೆಯ ಬಿಸಿ ಬಿಸಿ ಊಟವನ್ನು ಅವನು ನಾಲ್ಕು ತುತ್ತು ಹೆಚ್ಚಾಗಿಯೇ ತಿಂದಿದ್ದನೋ ಏನೋ! ಬಡಪಾಯಿ ! ಹೀಗೆ ಅವನು ಆ ಮಹತ್ ಕಾರ್ಯದಲ್ಲಿ ಮಗ್ನನಾಗಿರುವಾಗ ನಾನು ನನ್ನ ಕೈಗೆ ಬಂದಿದ್ದ ರೈಫಲ್ ಅನ್ನು ಅತ್ತಿತ್ತ ತಿರುವಿ ಹಾಕಿ, ಕುತೂಹಲದಿಂದ ಬ್ಯಾರೆಲ್ ಬಿಚ್ಚಿ ನೋಡಿದೆ. ಅದು ಲೋಡ್ ಆಗಿತ್ತು !

ಅದನ್ನು ಕಂಡು ನನಗೆ ರೋಮಾಂಚನವಾಯಿತು ! ಏನೇನೋ ಅದ್ಭುತ ಸಾಧ್ಯತೆಗಳು ತಲೆಯಲ್ಲಿ ಮಿಂಚಿದವು. ಹೆಣ್ಣು, ಹಣ, ಅಧಿಕಾರಗಳು ಅಪಾಯಕಾರಿ! ಅಮಲೇರಿಸಿ ಬಿಡುತ್ತವೆ. ಅದರಲ್ಲೂ ಲೋಡೆಡ್ ರೈಫಲ್ ! ತಾನೊಬ್ಬ ಸರ್ವಶಕ್ತನೆಂಬ ಭ್ರಮೆಯನ್ನು ಇಂಥ ಸೂಕ್ಷ್ಮ ಸನ್ನಿವೇಶದಲ್ಲಿ ಉಂಟು ಮಾಡಿಬಿಡುತ್ತದೆ. ''ಫವರ್ ಕಮ್ಸ್ ಫ್ರಂ ದಿ ಬ್ಯಾರಲ್ ಆಫ್ ಎ ರೈಫಲ್ '' ಎಂದು ಮಾವೋ ಹೇಳಿಲ್ಲವೇ ?

ನಾನು ನನ್ನ ಕಲ್ಪನಾ ವಿಲಾಸದಲ್ಲಿ ಸ್ವಲ್ಪ ಕಾಲ ವಿಹರಿಸುತ್ತಿದ್ದಂತೆಯೇ ಪೋಲೀಸಿನವನು ತನ್ನ ಕಾರ್ಯ ಮುಗಿಸಿ ಪಕ್ಕದಲ್ಲೇ ಹರಿಯುತ್ತಿದ್ದ ಕಾಲುವೆಯ ನೀರಿನಲ್ಲಿ ಶುಚಿರ್ಭೂತನಾಗಿ, ತೆವರಿಯ ಮೇಲೆ ಬಂದು, ಚೆಡ್ಡಿ ಹಾಕಿಕೊಂಡು, ನನ್ನ ಬಳಿಗೆ ಓಡೋಡಿ ಬಂದು, ತನ್ನ ರೈಫಲ್‌ಗೆ ಕೈ ಚಾಚಿದ. ಆದರೆ ಈಗ ಅವನಿಗೆ ಒಂದು ದೊಡ್ಡ ಆಶ್ಚರ್ಯ ಕಾಯ್ದಿತ್ತು.

ನಾನು ಆರಾಮವಾಗಿ ಗದ್ದೆಯ ತೆವರಿಯ ಮೇಲೆ ಕುಳಿತಿದ್ದೆ. ಕೈಯಲ್ಲಿದ್ದ ರೈಫಲ್ ಅನ್ನು ಅವನ ಎದೆಗೆ ಗುರಿಯಿಟ್ಟು ಹಿಡಿದಿದ್ದೆ. ತೋರುಬೆರಳುಗಳನ್ನು ಟ್ರಿಗ್ಗರ್ ಮೇಲೆ ಇರಿಸಿದ್ದೆ. ದೃಷ್ಟಿಯನ್ನು ಮಾತ್ರ ಆಕಾಶದತ್ತ ಮಾಡಿ, ನೀಲನಭದ ಯಾವುದೋ ನಕ್ಷತ್ರವನ್ನು ದೃಷ್ಟಿಸುತ್ತಾ ನನ್ನಲ್ಲಿ ನಾನೇ ನಕ್ಕು ನಲಿಯುತ್ತಿದ್ದೆ. ಬಹುಶಃ ಹುಚ್ಚನ ನಗುವಿನ ಹೊಳೆಯುವ ಹಲ್ಲುಗಳಂತೆ, ನನ್ನ ಕಣ್ಣುಗಳೂ ಹೊಳೆಯುತ್ತಿರಬೇಕು !

ಲಗುಬಗೆಯಿಂದ ನನ್ನ ಕಡೆಗೆ ಆಡಿಯಿರಿಸುತ್ತಾ ಬಂದು, ತನ್ನ ರೈಫಲ್‌ಗೆ ಕೈ ಚಾಚಿ, ''ನಡೀರಿ ! .... ನಡೀರ್ರಿ ! ....ಹೋಗಾನ !''

ಎಂದು ನುಡಿಯುತ್ತಿದ್ದ ಪೋಲೀಸನ ಮಾತುಗಳು ಅವನ ಗಂಟಲಲ್ಲೇ ಉಡುಗಿದವು. ಅವನು ಭಯಭೀತನಾಗಿ ನಿಂತ. ಮತ್ತೊಮ್ಮೆ ಅವನಿಗೆ ಮಲಪ್ರವೃತ್ತಿ ಆಗುವುದೋ ಎನ್ನುವಂತೆ ಅವನು ಮುಖ ಮಾಡಿ ಕೈಗಳನ್ನು ಮೇಲಕ್ಕೆತ್ತಿ ನನ್ನ ಮುಂದೆ ಬೇಡುವವನಂತೆ ಅವುಗಳನ್ನು ಚಾಚುಚ್ತಾ,

''ಹ್ಹೇ ! ... ಹ್ಹೇ ! ಇಲ್ಲಿ ಕೊಡ್ರೀ ಸ್ವಾಮಿ ! ಹುಟುಗಾಟ ಆಡಬೇಡಿ !'' ಎಂದ. ನಾನೂ ಸಹ ಇನ್ನು ಹೆಚ್ಚು ಹುಡುಗಾಟ ಅಪಾಯಕರವೆಂದು ತಕ್ಷಣ ಅರಿತು,

''ಹೆದರಬೇಡಪ್ಪ ! ತಗೋ ನಿನ್ನ ರೈಫಲ್ '' ಎಂದೆ. ರೈಫಲ್ ಹಿಂತಿರುಗಿಸಿದೆ. ಅವನು ತವಕದಿಂದ ಅದನ್ನು ಹಿಂದಕ್ಕೆ ಪಡೆದು ಎದೆಗೆ ಅವಚಿಕೊಳ್ಳುತ್ತಾ,

''ಬಚ್ ಗಯಾ ಬಿಚಾರೆ ! ಅಮ್ಮಾಗೇ !'' ಎಂದು ಉದ್ಗಾರ ಮಾಡಿದ.

''ಹುಷಾರ್ .... ರೈಫಲ್ ಲೋಡ್ ಆಗಿದೆ ! '' ಎಂದು ಎಚ್ಚರಿಸಿದೆ. ಅವನು ಒಡನೆಯೇ ನಿಂತ. ಬ್ಯಾರೆಲ್ ಖಾಲಿ ಮಾಡಿದ. ಬುಲೆಟ್ ಜೇಬಿಗೆ ಸೇರಿಸಿದ.

''ಸಚ್ ಹೈ . ನಾನೆಂಥ ಬೆವಕೂಫ್ ಕಾಮ್ ಮಾಡಿದ್ದೆ ನೋಡಿ ಸಾಮಿ. ಟ್ರಯಲ್ ಲೋಡ್ ಮಾಡಿ ಮಾರ್ಚಿಂಗ್‌ನಲ್ಲೂ ಆನ್ ಮಾಡ್ದೆ ಬರ್ತಿದ್ದೆನಲ್ಲಾ, ನಿಮ್ಮ ಕೈಗೆ ಬೇರೆ ಕೊಟ್ಟಿದ್ದೆ. ಪರವರ್ದಿಗಾರ್ ಅಲ್ಲಾ ದೊಡ್ಡೋನು. ಆದ್ರೆ ನಂಗೊತ್ತಿತ್ತು. ನೀವು ಗಾಂಧಿ ಮನುಷ್ಯರು ಅಂತ '' ಎಂದು ಹೇಳಿದ. ನಾನು ತಟ್ಟನೆ ವಿನೋದಕ್ಕೆ ಹೇಳಿದೆ.

"ನಾನು ಕೇಡಿ ಆಗಿದ್ರೆ, ಆಗ ?"

"ನಂಗೇ ನೌಕ್ರೀನೂ ಹೋಗಾದು ; ಪ್ರಾಣಾನೂ ಹೋಗಾದು. ಹೋಗ್ಲಿ. ಈಗ ಹಿಂಗಾಯ್ತು ಅಂತ ನೀವು ಯಾರಿಗೂ ಹೇಳಬ್ಯಾಡಿ ಸಾಮಿ" ಎಂದು ಹಲ್ಲುಗಿಂಜಿದ.

"ಖಂಡಿತ ಹೇಳ್ತೀನಪ್ಪ ನಿಮ್ಮ ಅಮ್ಮಾಗೇ " ಎಂದೆ.

ಇಬ್ಬರೂ ಗಹಗಹಿಸಿ ನಕ್ಕೆವು. ಅವನ ಹೆಸರು ಅಜಿಮುದ್ದೀನ್ ಎಂದು. ನನ್ನ ಚನ್ನಗಿರಿಯ ಹಣ್ಣಿನ ಮತ್ತು ಹೂವಿನ ವ್ಯಾಪಾರಿ ಗಫೂರ್ ಮಗನೇ ಅವನು. ಇಬ್ಬರೂ ಸ್ನೇಹಿತರಾದೆವು.

ಕಡೆಗೆ ನಾವು ಸಾಗರ ಊರಿನ ಒಂದು ಉಪ-ಪೋಲೀಸ್ ಠಾಣೆ ತಲುಪಿದೆವು. ಆಗ ರಾತ್ರಿ ೨ ಗಂಟೆಯಾಗಿತ್ತು. ಬಚ್ಚಲಕಲ್ಲುಗಳಂತೆ ಉಬ್ಬುತಗ್ಗುಗಳಿದ್ದ ಆ ಠಾಣೆ ಕಲ್ಲು ನೆಲ ಸಿಕ್ಕಿದ್ದೇ ತಡ, ಹಂಸತೂಲಿಕಾತಲ್ಪದ ಮೇಲೆ ಮಲಗಿದಂಥ ಸುಖನಿದ್ರೆ ನಮ್ಮನ್ನಾವರಿಸಿತು.

* * * *

೭.

ಮೃಗಾವಸ್ಥೆಗೆ ದೂಡಿದರು

ಮಾರನೆಯ ದಿನವೇ ನಮ್ಮನ್ನು ಸಾಗರ ಕೋರ್ಟಿನಲ್ಲಿ ಹಾಜರ್ಪಡಿಸಿ, ಅಲ್ಲಿನ ತಾಲ್ಲೂಕು ಕಛೇರಿಗಳಲ್ಲಿದ್ದ ಸಬ್ ಜೈಲು ಎಂದು ಕರೆಯಲ್ಪಟ್ಟ ಒಂದು ಹೊಲಸು ಕೋಣೆಗೆ ಕರೆದೊಯ್ದರು. ದನಕರುಗಳ ಚಹರೆಪಟ್ಟಿ ಪಡೆಯುವಂತೆ ನಮ್ಮಲ್ಲಿ ಪ್ರತಿಯೊಬ್ಬರ ಹೆಸರು, ತಂದೆ, ಕುಲಗೋತ್ರಗಳನ್ನಲ್ಲದೆ, ಮೈಮೇಲಿನ ಪ್ರತಿಯೊಂದು ಮಚ್ಚೆ, ಕಲೆ ವಿಶಿಷ್ಟ ಗುರುತುಗಳನ್ನಲ್ಲದೆ, ಕೈ-ಕಾಲುಗಳ ಇಪ್ಪತ್ತು ಬೆರಳುಗಳ ಗುರುತುಗಳನ್ನೂ ಒಂದು ರಿಜಿಸ್ಟರಿನಲ್ಲಿ ದಾಖಲು ಮಾಡಿದರು. ಮಲ ಮೂತ್ರ ಗಳಿಗಾಗಿ ಒಂದು ಹೊಲಸು ಸೀಮೆ ಎಣ್ಣೆಯ ಖಾಲಿ ಟಿನ್ ಕೊಟ್ಟು ಕಬ್ಬಿಣದ ಸರಳುಗಳ ಬಾಗಿಲನ್ನುಹಠಾತ್ತನೆ ಹಾಕಿ ಬೀಗ ಜಡಿದರು.

''ರ್‍ರೀ.... ಸ್ವಲ್ಪ ತಡೀರ್‍ರಿ'' ಎಂದು ನಮ್ಮಲ್ಲಿ ಕೆಲವರು ಪೋಲೀಸರರಿಗೆ ಸ್ವಲ್ಪಕಾಲ ಬಾಗಿಲು ತೆಗೆದಿರಲು ಕೇಳಿಕೊಂಡೆವು.

''ನಾನು ಸ್ವಲ್ಪ ನೀರು ಕುಡಿಬೇಕು'' ಎಂದ ಒಬ್ಬ.

''ನಾನು ರೀಸರ್ಸ್‌ಗೆ ಹೋಗಬೇಕು '' ಎಂದ ಇನ್ನೊಬ್ಬ.

ಒಬ್ಬ ಪೋಲೀಸ್ ದಫೇದಾರ ಬಾಗಿಲ ಕಟಕಟೆಗೆ ಮುಖವಿಟ್ಟು ''ಎಲ್ಲಾ ಒಳಗೇ ! ಮೂಲೆ ಮಡಿಕೇಲಿ ನೀರಿದೆ. ಸೀಮೆಎಣ್ಣೆ ಟಿನ್‌ಇದೆ ನಿಮ್ಮ ಬಹಿರ್ದೆಸೆಗೆ. ಗಲಾಟೆ ಮಾಡಬೇಡಿ. ಇದು ತಾಲ್ಲೂಕು ಕಛೇರಿ. ಸಾಹೇಬ್ರುಗಳು ಇದ್ದಾರೆ'' ಎಂದು ಕಛೇರಿಯ ಓಣಿಯೊಂದರಲ್ಲಿ ಅಂತರ್ಧಾನನಾದ.

ನಾವು ಪ್ರಶ್ನಾರ್ಥವಾಗಿ ತುಸು ಬೆಪ್ಪಾಗಿ ತುಸು ವಿಸ್ಮಯಕಾರಿಯಾಗಿ ಒಬ್ಬರನ್ನೊಬ್ಬರು ಕ್ಷಣಕಾಲ ನೋಡಿಕೊಂಡೆವು. ಆ 'ಬ್ಲಾಕ್‌ಹೋಲ್ ಆಫ್ ಕಲ್ಕತ್ತಾ'ದಲ್ಲಿ ಒಂದು ಕ್ಷಣವೂ ಇರಲು ನಮ್ಮ ಮನಸ್ಸು ಒಪ್ಪಲಿಲ್ಲ. ಮರುಕ್ಷಣವೇ ನಮಗೆ ಉತ್ತರ ಸಿಕ್ಕಿತು.

ಸ್ವಾಮಿನಾಥನ್ ಆ ಖಾಲಿ ಸೀಮೆಎಣ್ಣೆ ಡಬ್ಬ ಹಿಡಿದು ಬಾಗಿಲಿನ ಕಬ್ಬಿಣದ ಕಂಬಿಗಳಿಗೆ ಎತ್ತಿ ಬಾರಿಸಿ, 'ಢಮಾರ್ ಢಮಾರ್ ' ಎಂದು ಬಾರಿಸುತ್ತಲೇ ಹೋದ. ನೀರಿನ ಗಡಿಗೆ ಹೊಲಸು ವಾಸನೆ ಹೊಡೆಯುತ್ತಿತ್ತು. ''ಥೂ'' ಎಂದು ಉಗಿದು ಅದನ್ನು ಬಾಗಿಲಿಗೆ ಗದೆಯಂತೆ ಹೊಡೆದೆವು. ಮಡಕೆ ಚೂರು ಚೂರಾಯಿತು. ಎಲ್ಲರೂ ಚಪ್ಪಾಳೆ ತಟ್ಟುತ್ತಾ ಕೇಕೆ ಹಾಕುತ್ತಾ, ಡಬ್ಬ ಬಡಿಯುತ್ತಾ ಹುಚ್ಚರಂತೆ ಕುಣಿದಾಡತೊಡಗಿದೆವು.

ತಾಲ್ಲೂಕು ಕಛೇರಿಯ ಗುಮಾಸ್ತರೊಬ್ಬರು, ಸಿಬ್ಬಂದಿ ಮತ್ತು ಸಾರ್ವಜನಿಕರು ನಮ್ಮ ಕೋಣೆಯ ಮುಂದೆ ಮೋಜಿನಿಂದ ಜಮಾಯಿಸಿಬಿಟ್ಟರು. ತಾಲ್ಲೂಕು ಕಛೇರಿಯ ಕೆಲಸವೇ ಸ್ಥಗಿತವಾಗಿ ಹೋಯಿತು.

ತಹಸೀಲ್ದಾರರು, ಶಿರಸ್ತೇದಾರರು, ಪೋಲೀಸ್ ಇನ್‌ಸ್ಪೆಕ್ಟರ್‌ಗಳು ಯಾರ್‍ಯಾರೋ ಬಂದು ಗಲಾಟೆ ಮಾಡಬೇಡಿ ಎಂದರೂ ನಾವು ಒಂದು ಕ್ಷಣವಾದರೂ ನಮ್ಮ ಬೊಂಬಡ ನಿಲ್ಲಿಸಲಿಲ್ಲ. ಸೀಮೆಎಣ್ಣೆ ಡಬ್ಬದ ಹೊಡೆತವಂತೂ, ರಣಢಂಗುರದಂತೆ ಕಿವಿಗಳಿಗೆ ಅಪ್ಪಳಿಸುತ್ತಿತ್ತು. ಜೊತೆಗೆ ತಮಿಳಿನ ಹಾಡು, ಕೇಕೆ, ಕುಣಿತ......

''ತಿಲ್ಲಾಂಲಂಗಡಿ ! ''... ತಿಲ್ಲಾಲಂಗಡಿ, ತಿಲ್ಲಾಲಂಗಡಿ ಲೇ ! ಲೇ ! ಲೇಯ್!!'' ಎಂದು ಎಲ್ಲರೂ ಚಪ್ಪಾಳೆ ಹಾಕಿಕೊಂಡು ಕುಣಿದು , ಕೇಕೆ ಹಾಕಿ ಕಿರುಚಿಕೊಳ್ಳುತ್ತಿದ್ದ ಆ ತಮಿಳು ಸಾಮೂಹಿಕ ಗರ್ಜನೆಯ ಗತ್ತಿನ ಗಾನವನ್ನು ಎಲ್ಲರೂ ಕೇಳುತ್ತಾ ನಿಂತುಬಿಟ್ಟರು.

ಯಾರೋ ಮೇಲಿನ ಅಧಿಕಾರಿಗಳು ತೀರ್ಮಾನಿಸಿರಬೇಕು. ಇನ್ನು ಕೆಲವೇ ನಿಮಿಷಗಳಲ್ಲಿ ನಮ್ಮನ್ನು ಆ ಪುಟ್ಟಕೋಣೆಯಿಂದ 'ಗಂಧದ ಕೋಠಿ' ಎಂದು ಕರೆಯುತ್ತಿದ್ದ ಅದರ ಬಳಿಯಲ್ಲೇ ಇದ್ದ ಮಂಗಳೂರು ಹೆಂಚಿನ ಗೋಡೌನ್‌ಗಳ ಸಾಲಿಗೆ ಕರೆದೊಯ್ದರು. ನಾವು ಮುಗಿಲು ಮುಟ್ಟುವಂತೆ ಘೋಷಣೆಗಳನ್ನು ಕೂಗುತ್ತಾ 'ಗಂಧದ ಕೋಠಿ'ಗೆ ಸಾಗಿದೆವು.

ಅಂದು ಸಾಗರದ ಸಂತೆ ಇರಬೇಕು. ಸಾವಿರಾರು ರೈತರು ಬೀದಿಯ ಇಕ್ಕೆಲದಲ್ಲೂ ಸೇರಿದ್ದರು. ಸ್ಥಳೀಯ ಕಾರ್ಯಕರ್ತನೊಬ್ಬ ಕೆಂಬಾವುಟವನ್ನು ನಮ್ಮ ಕೈಗಿತ್ತ. ಬಾಳೆಹಣ್ಣಿನ ಚಿಪ್ಪುಗಳು, ಬಿಸ್ಕತ್ ಪೊಟ್ಟಣಗಳು, ಚಾಕಲೇಟ್‌ಗಳನ್ನು ಹಿಡಿ ಹಿಡಿಯಾಗಿ ನಮ್ಮ ಕೈಗೆ ಜೇಬುಗಳಿಗೆ ತುರುಕಿ ನಮಗೆ ಜಯಕಾರ ಹಾಕಿದರು. ಪೋಲೀಸಿನವರಿಗೆ ಎಚ್ಚರಿಸಿದರು.

''ಪೋಲೀಸ್ ! ಅವರ ಮೈಮೇಲಿನ ಒಂದು ಕೂದಲನ್ನು ನೀವು ಮುಟ್ಟಿ ನಿಮ್ಮನ್ನು ಅಟ್ಟಾಡಿಸಿಕೊಂಡು ಹೊಡಿತೀವಿ. ಹುಷಾರ್ ! ಹುಷಾರ್ ! ಪೋಲೀಸರೇ ಹುಷಾರ್ ! ಇಂಕಿಲಾಬ್ ಜಿಂದಾಬಾದ್ ! ಉಳುವವನೇ ನೆಲದೊಡೆಯ ...'' ಎಂದು ಕೂಗುತ್ತಿದ್ದರು.

ನಮ್ಮೊಂದಿಗೆ ನೂರಾರು ಜನರು 'ಗಂಧದ ಕೋಠಿ' ಜೈಲಿಗೆ ಬಂದರು. ಪೋಲೀಸರು ನಮ್ಮನ್ನು ಒಳಗೆ ಕರೆದೊಯ್ದರು. ಅಲ್ಲಿನ ಪ್ರದೇಶ ಸ್ವಲ್ಪ ವಿಶಾಲವಾಗಿತ್ತು. ಗಂಧದ ಮರಗಳನ್ನು ಸಂಗ್ರಹಿಸಲು ಇದ್ದ ಉದ್ದುದ್ದದ ಉಗ್ರಾಣ. ಒಳಗೆಲ್ಲಾ ಕಂಬ, ತೊಲೆಗಳು - ಬೋದಿಗೆಗಳು ಯಥೇಚ್ಛವಾಗಿದ್ದವು. ಅಲ್ಲಿನ ಅಕ್ಕಪಕ್ಕದ ಉಗ್ರಾಣಗಳಲ್ಲಿ ನೂರಾರು ರೈತ ಕುಟುಂಬಗಳನ್ನೂ ಸೆರೆಯಾಳುಗಳಾಗಿ ತುಂಬಿದ್ದರು. ಗಂಡಸರು, ಹೆಂಗಸರು, ಮಕ್ಕಳು ಎಲ್ಲರೂ ಇದ್ದರು. ನಮ್ಮನ್ನು ಕಂಡು ಅವರೂ ಜಯಕಾರ ಹಾಕಿದರು. ಅವರನ್ನು ಕಂಡು ನಾವೂ ಜಯಕಾರ ಹಾಕಿದೆವು. ಇಡೀ ಗಂಧದ ಕೋಠಿ ''ಇಂಕಿಲಾಬ್ ಜಿಂದಾಬಾದ್ ! .... ಡಾ|| ಲೋಹಿಯಾ ಜಿಂದಾಬಾದ್ ! ... ಉಳುವವನೇ ನೆಲದೊಡೆಯ ! ....'' ಈ ಘೋಷಣೆಗಳಿಂದ ತುಂಬಿಹೋಯಿತು.

ಇಷ್ಟರಲ್ಲಿ ನನ್ನ ತಂಡದ ತಮಿಳು ಸಂಗಾತಿಗಳಲ್ಲಿ ನಾಲ್ಕಾರು ಜನರು, ಕಂಬಗಳನ್ನು ಅಡರಿ, ತೊಲೆಗಳ ಮೇಲೆ ಸಂಚರಿಸಿ, ಬೋದಿಗೆಯನ್ನು ಎತ್ತಿ, ಸೂರಿನ ಹಂಚುಗಳನ್ನು ತೆಗೆದು, ಕಟ್ಟಡದ ಮೇಲ್ಛಾವಣಿಯ ಮೇಲೆ ಮಂಗಗಳಂತೆ ಹತ್ತಿ ಕುಳಿತರು. ಪೋಲೀಸರು ಅವರನ್ನು ಕೆಳಗಿಳಿಯಿರಿ ಎಂದರೆ, ಉನ್ಮತ್ತರಂತೆ ಹೆಂಚಿನ ಮೇಲೆ ನರ್ತಿಸುತ್ತಿದ್ದರು.

''ಇಳಿತೀರೋ.... ಇಲ್ವೋ'' ಎಂದು ಪೋಲೀಸರು ದೊಣ್ಣೆ ತೋರಿಸಿ, ಅವರೆಡೆಗೆ ದೊಣ್ಣೆ ಬೀಸಿದರೆ ಅವರು ಮಂಗಳೂರು ಹಂಚುಗಳನ್ನು ಅವರೆಡೆಗೆ ತೂರುತ್ತಿದ್ದರು. ಇವರೊಡನೆ ಅಕ್ಕಪಕ್ಕದ ಬ್ಯಾರಕ್ಕುಗಳಲ್ಲಿದ್ದ ತರುಣ ರೈತ ಬಂಧಿಗಳು ಸೇರಿಕೊಂಡರು. ಈ ಗಡಿಬಿಡಿಯಲ್ಲಿ ಹೊರಗಿದ್ದ ರೈತ ಸಮೂಹವೂ ಸೇರಿ, ಪೋಲೀಸರಿಗೆ ಕಂಗೆಡಿಸಿಬಿಟ್ಟರು.

ಕೆಲವು ದಿನಗಳಿಂದ ಸತ್ಯಾಗ್ರಹ ನಡೆದೇ ಇರಲಿಲ್ಲವಾದ್ದರಿಂದ ರೈತರೂ ನಿರುತ್ಸಾಹಿಗಳಾಗಿದ್ದರು. ಜೈಲಿನಲ್ಲಿದ್ದವರು ಹೇಗೋ ಅಲ್ಲಿನ ಸಂಕಷ್ಟಗಳಿಗೆ ಹೊಂದಿಕೊಂಡಿದ್ದರು. ಜೈಲಿನ ಹೊರಗಿದ್ದವರೂ ಅಲ್ಲಿನ ಅನಿಶ್ಚಿತ ಪರಿಸ್ಥಿತಿಗೆ ಹೊಂದಿಕೊಂಡಿದ್ದರು. ಸತ್ಯಾಗ್ರಹ ಎನ್ನುವ ಅಹಿಂಸಾತ್ಮಕ ಮಾರ್ಗ ಹಿಡಿದು, ಗದ್ದೆಗೆ ಮಕ್ಕಳಾಟದಂತೆ ಸತ್ಯಾಗ್ರಹ ಮಾಡಲು ಇಳಿದು, ಜಮೀನ್ದಾರನ ಕಡೆಯ ಗೂಂಡಾಗಳಿಂದ ಮತ್ತು ಪೋಲೀಸರಿಂದ ಮಾತ್ರವಲ್ಲದೆ, ಊರಿನ ಹೊಲೆ-ಮಾದಿಗರಿಂದಲೂ ಹಿಗ್ಗಾಮುಗ್ಗಾ ಹೊಡೆಸಿಕೊಂಡು ಓಡಿ ಬರುವುದನ್ನು ರೈತರು ಮೆಚ್ಚುತ್ತಲೇ ಇರಲಿಲ್ಲ. ಹೊಡೆದು, ಹೊಡೆದು ರೈತರನ್ನು ಹೆದರಿಸಿ ಸತ್ಯಾಗ್ರಹ ನಿಲ್ಲಿಸುವಂತೆ ಮಾಡಲು ಜಮೀನ್ದಾರ ಮತ್ತು ಸರ್ಕಾರ ಯಶಸ್ವಿಯಾಗಿತ್ತು. ಸತ್ಯಾಗ್ರಹ ನಿಂತೇ ಹೋಯಿತು ಎಂದು ಗರ್ವದಿಂದ ಬೀಗಿ , ಬೇಕಾದರೆ ಕಾಂಗ್ರೆಸ್ ಅಧ್ಯಕ್ಷರೇ ಬರಲಿ, ಪತ್ರಕರ್ತರೇ ಬರಲಿ, ಎಂದು ಧೈರ್ಯವಾಗಿ ಪಂಥಾಹ್ವಾನ ಕೊಟ್ಟಿದ್ದಾಗ ನಾವು ಎಲ್ಲಿಂದಲೋ ಹಠಾತ್ತಾನೆ ಬಂದು ಸರ್ಕಾರದ , ಜಮೀನ್ದಾರರ ಗರ್ವಭಂಗ ಮಾಡಿದ್ದೆವು. ಈಗ ನಮ್ಮನ್ನು ಸಾಗರ ಸಂತೆಗೆ ಬಂದಿದ್ದ ರೈತ ಸಮುದಾಯ ಮತ್ತು ಗಂಧದ ಕೋಠಿಯಲ್ಲಿ ಸೆರೆಯಾಗಿದ್ದ ರೈತ ಕುಟುಂಬಗಳು ವೀರಾಧಿವೀರರಂತೆ ಕಾಣುತ್ತಿದ್ದರು. ತಮಗೆ ಹಳ್ಳಿಗಳಿಂದ ಬಂದಿದ್ದ ಸಿಹಿಪೂರಿ, ರೊಟ್ಟಿ, ಚಟ್ನಿ ಬುತ್ತಿಯೂಟವನ್ನು ಧಾರಾಳವಾಗಿ ನೀಡಿ ಸತ್ಕರಿಸುತ್ತಿದ್ದರು. ಇದಲ್ಲದೆ, ನಮ್ಮ ನಿರ್ಭಯ ಪುಂಡು ಪ್ರಕೃತಿ ಅವರಲ್ಲಿ ಸುಪ್ತವಾಗಿದ್ದ ಪುಂಡಾಟವನ್ನೂ ಪ್ರಚೋದಿಸುತ್ತಿತ್ತು.

ಇದನ್ನು ಕಂಡೋ ಏನೋ ಪೋಲೀಸರು ನಮ್ಮನ್ನು ರೈತರಿಂದ ಪ್ರತ್ಯೇಕ ಮಾಡಿ, ಪೋಲೀಸ್ ವ್ಯಾನಿನಲ್ಲಿ ಶಿವಮೊಗ್ಗ ಜಿಲ್ಲಾ ಬಂಧೀಖಾನೆಗೆ ಒಯ್ದರು. ಆಗಲೂ ವ್ಯಾನಿನ ಸುತ್ತಲೂ ನಿಂತ ರೈತ ಸಮೂಹ ಜಯಕಾರಗಳನ್ನು ಹಾಕುತ್ತಾ ಪೋಲೀಸರಿಗೆ ಎಚ್ಚರಿಕೆ ನೀಡಿತು.

''ಜೋಕೆ! ಅವರ ಮೈ ಮುಟ್ಟೀರ! ನಿಮ್ಮ ಚರ್ಮ ಸುಲಿದು ಬಿಟ್ಟೇವು! ... ಇಂಕಿಲಾಬ್ ಜಿಂದಾಬಾದ್ ! .... ಉಳುವವನೇ ನೆಲದೊಡೆಯ ! .... ಡಾ|| ಲೋಹಿಯಾ ಜಿಂದಾಬಾದ್ ! ..... ಮಹಾತ್ಮಗಾಂಧಿ ಕೀ ಜೈ ! ...'' ಎಂಬ ಘೋಷಣೆಗಳ ನಡುವೆ ನಾವು ಶಿವಮೊಗ್ಗದ ಕಡೆಗೆ ಸಾಗಿದೆವು.

ಸಾಗರ ಸಬ್‌ಜೈಲು ಪುಟ್ಟ ನರಕವಾದರೆ, ಶಿವಮೊಗ್ಗದ ಜಿಲ್ಲಾ ಕಾರಾಗೃಹ ಇನ್ನೊಂದು ದೊಡ್ಡ ನರಕವಾಗಿತ್ತು. ಕೈಕಾಲು ಆಡಿಸಲು, ಅಡ್ಡಾಡಲು ಹೆಚ್ಚು ಸ್ಥಳವಿತ್ತು. ಒಡನಾಡಲು ನೂರಾರು ಸಹಬಂಧಿಗಳಿದ್ದರು. ಮಲೆನಾಡಿನ ರೈತರೇ ಅಲ್ಲದೆ, ನಾಡಿನ ವಿವಿಧ ಪ್ರದೇಶಗಳಿಂದ ಜೀವನದ ವಿಭಿನ್ನ ಕ್ಷೇತ್ರಗಳಿಂದ ಬಂದ ಹಲವಾರು ವಿದ್ಯಾವಂತರೂ ಸುಸಂಸ್ಕೃತರೂ ಆದ ಜನರು ಅಲ್ಲಿದ್ದರು,

ಅಲ್ಲಿ ಹತ್ತಾರು ಬ್ಯಾರಕ್‌ಗಳು ಇದ್ದವು. ಒಂದೊಂದು ಬ್ಯಾರಕ್‌ನಲ್ಲಿಯೂ ೧೫-೨೦ ಸತ್ಯಾಗ್ರಹಿಗಳಿದ್ದರು. ಪ್ರತಿಯೊಬ್ಬರಿಗೂ ಮಲಗಲು ಈಚಲು ಚಾಪೆ, ತಲೆದಿಂಬು ಎಂದು ಕರೆಯಬಹುದಾಗಿದ್ದ ಒಂದು ಪುಟ್ಟ ಮರದ ತೌಡಿನ ಕೈಚೀಲ, ಒಂದು ಒರಟು ಕಂಬಳಿ, ಒಂದು ಅಲ್ಯೂಮಿನಿಯಂ ತಟ್ಟೆಲೋಟ, ಇವೇ ಪ್ರತಿ ಖೈದಿಯ ಸಮಸ್ತ ಸಂಪತ್ತು. ಮೇಲೆ ಒದು ಮಿಣಿಗುಟ್ಟುವ ಮಂಕುದೀಪ. ಪ್ರತಿಯೊಂದು ಬ್ಯಾರಕ್ಕಿಗೂ ಕಬ್ಬಿಣದ ಸರಳುಗಳ ಬಾಗಿಲು. ರಾತ್ರಿ ೮ ಗಂಟೆಯಿಂದ ಬೆಳಿಗ್ಗೆ ೬ ಗಂಟೆಯವರೆಗೂ ಅದಕ್ಕೆ ಬೀಗಮುದ್ರೆ.

ಇನ್ನು ಊಟದ ವ್ಯವಸ್ಥೆಯೋ ಅತಿ ಘೋರ. ಪ್ರತಿಯೊಬ್ಬರಿಗೂ ಒಂದು ಮಣ್ಣಿನ ಕುಡಿಕೆ ಮತ್ತು ಮಣ್ಣಿನ ಮುಚ್ಚಳ. ಆ ಮುಚ್ಚಳದಲ್ಲಿ ಒಂದು ಅರ್ಧ ಹಿಡಿ ಒರಟು ದಬ್ಬಣಸಾಲಾ ಅಕ್ಕಿ. ಅರ್ಧ ಹಿಡಿ ರಾಗಿ ಹಸಿಟ್ಟು ಒಂದೂವರೆ ಮೆಣಸಿನಕಾಯಿ, ಗೋಲಿಗಾತ್ರದ ಹುಣಿಸೆಹಣ್ಣು , ಒಂದು ಚಿಟಿಕೆ ಕರಿಉಪ್ಪು, ಒಂದು ಸಣ್ಣ ಕಟ್ಟು ಪುಳ್ಳೆಸೌದೆ. ಇಷ್ಟು ಪ್ರತಿದಿನ ಪ್ರತಿ ಖೈದಿಗೂ ದಿನದ ಪಡಿತರವಾಗಿ ಕೊಡುತ್ತಿದ್ದರು. ನಮ್ಮೆಲ್ಲರನ್ನೂ ಕ್ರಿಮಿನಲ್ ಅಪರಾಧಿಗಳೆಂದೇ ಪರಿಗಣಿಸಲಾಗಿತ್ತು.

ಹೀಗೆ ದೊರೆತ ಅಕ್ಕಿ, ರಾಗಿ ಹಸಿಟ್ಟು, ಮೆಣಸಿನಕಾಯಿ, ಹುಣಿಸೇಹಣ್ಣು, ಉಪ್ಪು ಇವುಗಳನ್ನೆಲ್ಲಾ ಒಟ್ಟುಗೂಡಿಸಿ ಬೆಳಗ್ಗೆಗೆ ಒಂದು ಹಿಡಿ ಅನ್ನವನ್ನೂ , ರಾತ್ರಿಗೆ ಒಂದೊಂದು ಬಟ್ಟಲು ರಾಗಿ ಗಂಜಿಯನ್ನೂ ತಯಾರು ಮಾಡಿ ಎಲ್ಲರೂ ಹಂಚಿಕೊಳ್ಳುತ್ತಿದ್ದೆವು.

ಯಾರಿಗೂ ಹೊಟ್ಟೆ ತುಂಬುತ್ತಿರಲಿಲ್ಲ. ದಾವಣಗೆರೆಯಿಂದ ಬಂದಿದ್ದ ಹದಿಹರೆಯದ ವಿದ್ಯಾರ್ಥಿಗಳು, ಯುವಕರಿಗಂತೂ ಅದು ಏನೇನೂ ಸಾಲುತ್ತಿರಲಿಲ್ಲ. ಅವರುಗಳು ಜೈಲಿನ ಅಂಗಳದಲ್ಲಿ ಗೋಡೆಯ ಪಕ್ಕದ ಸಾಲುಗಳಲ್ಲಿ ಬೆಳೆದಿದ್ದ ಗಿಡ ಗೆಂಟೆಗಳನ್ನೆಲ್ಲಾ ಮಿಡತೆಗಳಂತೆ ತಿಂದು ಮುಗಿಸಿದರು. ಪರಂಗಿ ಗಿಡಗಳ ಕಸುಗಾಯಿಗಳನ್ನೇ ಅಲ್ಲದೆ, ಅದರ ನೀಳ ಎಲೆ ತೊಟ್ಟುಗಳನ್ನೂ ತಿಂದು ಮುಗಿಸಿದರು. ಕೆಲವೇ ದಿನಗಳಲ್ಲಿ ಜೈಲಿನ ಆವರಣಗಳಲ್ಲಿ ಯಾವ ಹಸಿರೂ ಉಳಿಯದಂತೆ ಮೇಯ್ದು ಹಾಕಿದರು. ಹಸಿವು, ಹೊಟ್ಟೆನುಲಿ, ಹೊಟ್ಟೆನೋವು, ಭೇದಿಯೆಂದು ನೂರಾರು ಜನರು ನರಳತೊಡಗಿದರು. ಕಾರ್ಬೋನೇಟಿವ್ ಮಿಕ್ಚರ್ ಅನ್ನು ಕುಡಿಯುವುದು. ನೀರಿನ ಡಬ್ಬ ಹಿಡಿದು ಶೌಚಾಲಯದ ಕಡೆಗೆ ಓಡುವುದು ಜೈಲಿನ ನಿತ್ಯ ದೃಶ್ಯಗಳಾದವು.

ಸ್ನಾನಕ್ಕೆ ನೀರಿಲ್ಲ ; ಬಟ್ಟೆ ಒಗೆಯಲು ಸೋಪಿಲ್ಲ ; ಬದಲಾವಣೆ ಮಾಡಲು ಬೇರೆ ಇನ್ನೊಂದು ಜೊತೆ ಬಟ್ಟೆ ಇಲ್ಲ. ಮೈ ಒರೆಸಿಕೊಳ್ಳಲು ಒಂದು ಟವೆಲ್ ಇಲ್ಲ. ತಲೆಗೆ ಕ್ಷೌರವಿಲ್ಲ ; ಹಲ್ಲು ಉಜ್ಜಲು ಟೂಥ್‌ಪೌಡರ್ ಇಲ್ಲ . ಇವೆಲ್ಲ 'ಇಲ್ಲ' ಗಳ

ಹಾದಿಯ ಮೂಲಕ ಸತ್ಯಾಗ್ರಹಿಗಳು ಮೃಗಾವಸ್ಥೆಯನ್ನು ತಲುಪಿದರು. ಎಲ್ಲರಿಗೂ ತಲೆಯಲ್ಲಿ ಹೇನು, ಬಟ್ಟೆಯಲ್ಲಿ ಕೂರೆಗಳು ಬಿದ್ದು ಬಿಟ್ಟಿತು. ಮೈಯಲ್ಲಿ ಕಜ್ಜಿ ತುರಿ ರೋಗಗಳು ಕಾಣಿಸಿಕೊಂಡಿತು. ಕೆಲವರಂತೂ ಎಣ್ಣೆ ಕಾಣದ ಕೆದರಿದ ತಲೆಗೂದಲಿನಿಂದಲೂ ಜೂಲು ಜೂಲಾಗಿ ಹರಿದ ಚಿಂದಿ ಬಟ್ಟೆಗಳಿಂದಲೂ ಥೇಟ್ ಆದಿಮಾನವರಂತೆಯೇ ಆಗಿಬಿಟ್ಟರು.

ಕೆಲವು ಅದೃಷ್ಟವಂತರಿಗೆ ಅವರವರ ಮನೆಗಳಿಂದ ಏನಾದರೊಂದು ತಿಂಡಿ ಊಟ ಬರುತ್ತಿತ್ತು. ಆದರೆ ಎದುರಿಗೇ ಇರುತ್ತಿದ್ದ ಸಹ ಸತ್ಯಾಗ್ರಹಿಗಳನ್ನು ಬಿಟ್ಟು ಹೇಗೆ ತಾನೇ ತಾವೊಬ್ಬರೇ ಅದನ್ನು ತಿನ್ನಲು ಸಾಧ್ಯ ? ಕಡೆಗೆ ಒಂದೇ ಬ್ಯಾರಕ್‌ನಲ್ಲಿರುವ ಎಲ್ಲರಿಗೂ ಒಂದೊಂದು ತುತ್ತು ಉಪ್ಪಿಟ್ಟನ್ನೋ ಚಿತ್ರಾನ್ನವನ್ನೋ ಕೊಟ್ಟು ; ತಾವು ಏನೋ ಒಂದು ತುತ್ತು ಒಳ್ಳೆಯ ಆಹಾರ ತಿಂದೆವಲ್ಲಾ ಎಂದು ಅವರು ತೃಪ್ತಿಪಟ್ಟುಕೊಳ್ಳದೇ ವಿಧಿಯಿರಲಿಲ್ಲ. ಒಮ್ಮೊಮ್ಮೆ ಕಾಗೋಡಿನ ಕಡೆಯ ಯಾವುದಾದರೂ ಒಂದು ಹಳ್ಳಿಯಿಂದ ಎರಡು -ಮೂರು ಗಾಡಿ ಒಣಗಲು ರೊಟ್ಟಿ ಸಿಹಿಪೂರಿ, ಬುತ್ತಿಯನ್ನ ಉಪ್ಪಿನಕಾಯಿಗಳು ಬಂದು ಎಲ್ಲರಿಗೂ ಅರ್ಧರೊಟ್ಟಿಯೋ, ಒಂದು ಪೂರಿಯೋ, ಸಿಗುತ್ತಿತ್ತು. ಆದರೆ ಅತೃಪ್ತಿ ಹಸಿವಿನ ದಾವಾನಲ ಈ ಎಲ್ಲ ಉಪಚಾರಗಳಿಂದ ಹೆಚ್ಚು ಹೆಚ್ಚು ಭುಗಿಲೇಳತೊಡಗಿತೇ ವಿನಃ ತೃಪ್ತಿಯಂತೂ ಯಾರಿಗೂ ಆಗುತ್ತಿರಲಿಲ್ಲ.

ಪ್ರತಿದಿನ ಮಧ್ಯಾಹ್ನ ಸಭೆ ಸೇರುವುದು ವಾಡಿಕೆಯಾಗಿತ್ತು. ಜೈಲಿನಲ್ಲಿ ನಾವೇ ಒಂದು ಮಂತ್ರಿಮಂಡಲ ರಚಿಸಿಕೊಂಡಿದ್ದೆವು. ಅಡಿಗೆ ತಯಾರಿಸಿ ಹಂಚಿಕೆ ಮಾಡುವವನು ಫುಡ್ ಮಿನಿಸ್ಟರ್. ಖಾಯಿಲೆ ಕಸಾಲೆಗಳಿಗೆ ಔಷಧಿ ತರಿಸಿ ಕೊಟ್ಟು ಕಕ್ಕಸ್ಸುಗಳನ್ನು ತೊಳೆಸಿ, ಶುಚಿತ್ವ ಕಾಪಾಡುವವನು ಹೆಲ್ತ್ ಮಿನಿಸ್ಟರ್, ದಿನವೂ ಸ್ಟಡೀ ಕ್ಲಾಸಸ್ ನಡೆಸುವವನು ಎಜುಕೇಷನ್ ಮಿನಿಸ್ಟರ್. ಪುಂಡಾಟಗಳು ನಡೆಯದಂತೆ ಯಾರು ಎಲ್ಲೆಲ್ಲಿ ಮಲಗಬೇಕು ಎಂದೆಲ್ಲಾ ನೋಡಿಕೊಳ್ಳುವವನು ಹೋಮ್ ಮಿನಿಸ್ಟರ್ ಎಂದೆಲ್ಲಾ ಜವಾಬ್ದಾರಿಗಳನ್ನು ಹಂಚಿಕೊಳ್ಳುತ್ತಿದ್ದೆವು.

ಸಾಮಾನ್ಯವಾಗಿ ನಾನೇ ಎಜುಕೇಷನ್ ಮಿನಿಸ್ಟರ್ ಆಗಿರುತ್ತಿದ್ದೆ. ಏಕೆಂದರೆ ಆಗ ನಾನು ವಿಶೇಷವಾಗಿ ಪ್ರೊಫೆಸರ್ ಹ್ಯಾರಾಲ್ಡ್ ಲಾಸ್ಕಿಯವರ 'ಎ ಗ್ರಾಮರ್ ಆಫ್ ಪಾಲಿಟಿಕ್ಸ್' ಪ್ರೊ. ಜಿ.ಡಿ.ಹೆಚ್. ಕೋಲ್‌ರವರ 'ಎ.ಬಿ.ಸಿ. ಆಫ್ ಸೋಷಿಯಲಿಸಂ', ಜಾರ್ಜ್ ಬರ್ನಾಡ್ ಷಾರವರ 'ಫ್ಯಾಬಿಯನ್ ಸೋಷಿಯಲಿಸಂ' ಮೊದಲಾದ ಕೃತಿಗಳನ್ನೂ ಅನೇಕ ಪುರೋಗಾಮಿ ಚಿಂತಕರು, ಸಮಾಜವಾದಿ ಅಧ್ವರ್ಯುಗಳ ಪುಸ್ತಕಗಳನ್ನು ಆಸಕ್ತಿಯಿಂದ ವ್ಯಾಸಂಗ ಮಾಡಿದ್ದೆ. ಅವುಗಳಲ್ಲಿ ಅಡಗಿದ್ದ ವಿಶಿಷ್ಟ ಬೋಧನೆಗಳಿಂದ ಜಗತ್ತಿನ ಬಡತನ, ಅನ್ಯಾಯ, ರೋಗ, ರುಜಿನ, ಮೊದಲಾದ ಕೆಟ್ಟ

ಪರಿಸ್ಥಿತಿಯನ್ನು ಆಮೂಲಾಗ್ರವಾಗಿ ತೊಡೆದು ಹಾಕಬಹುದೆಂಬ ನಂಬಿಕೆ, ಹುಮ್ಮಸ್ಸು ಮುಗ್ಧತೆ ನನ್ನಲ್ಲಿತ್ತು. ಅವುಗಳ ಮೇಲೆ ಒಂದೆರಡು ಗಂಟೆಗಳ ಕಾಲ ನಿರರ್ಗಳವಾಗಿ ಮಾತನಾಡುವ ಸಾಮರ್ಥ್ಯವೂ ನನಗೆ ಇತ್ತು. ಶ್ರೀ ಸದಾಶಿವರಾಯರು ಸಾಮಾನ್ಯವಾಗಿ ಚೀಫ್ ಮಿನಿಸ್ಟರ್ ಆಗಿ ಇದ್ದುಕೊಂಡು ಪ್ರತಿಯೊಂದು ವಿಭಾಗವನ್ನೂ ಮನೆಯ ಯಜಮಾನರಂತೆ ಹಗಲಿರುಳೂ ಬಿಡುವಿಲ್ಲದೇ ನೋಡಿಕೊಳ್ಳುತ್ತಿದ್ದರು.

ಸತ್ಯಾಗ್ರಹಿಗಳಲ್ಲಿ ಬಹಳ ಜನರಿಗೆ ನಿತ್ರಾಣ, ಬಳಲಿಕೆ, ಹಸಿವು, ನಿಶ್ಶಕ್ತಿ ನಿರುತ್ಸಾಹಗಳೇ ಕಾಡುತ್ತಿತ್ತು. ಮುಕ್ಕಾಲು ಪಾಲು ಜನರು ಸ್ಟಡೀ ಕ್ಲಾಸ್‌ಗಳಿಗಾಗಲೀ, ಸಂಜೆ ಆಟಪಾಠಗಳಿಗಾಗಲೀ ಬರುತ್ತಿರಲಿಲ್ಲ. ಈಚಲು ಚಾಪೆಯ ಮೇಲೆ ಬಿದ್ದು ಕೊಂಡಿರುತ್ತಿದ್ದರು. ಮುಖದ ತುಂಬ ಒರಟು ಕಂಬಳಿ ಹೊದ್ದುಕೊಂಡು ಮಲಗೇ ಇರುತ್ತಿದ್ದರು. ಇಲ್ಲವೇ, ಮನೆ-ಮಠ-ಮಡದಿ-ಮಕ್ಕಳ ಬಗೆಗೆ ಚಿಂತಿಸುತ್ತಲೋ, ಪತ್ರ ಬರೆಯುತ್ತಲೋ ತಮ್ಮ ತಮ್ಮ ಜಗತ್ತಿನಲ್ಲಿಯೇ ಮಗ್ನರಾಗಿರುತ್ತಿದ್ದರು.

ಇದೆಲ್ಲಕ್ಕೂ ಮೂಲ ಕಾರಣ ಹಸಿವು, ಅಶುಚಿ, ಅನಾರೋಗ್ಯ ಮತ್ತು ನಿರಾಶಾಭಾವನೆಗಳೇ ಆಗಿದ್ದವು. ಇದನ್ನು ತೊಡೆದುಹಾಕಲು ಕೆಲವರು ವ್ಯಾಪಕ ಪುಂಡಾಟ ಮಾಡಲು ಯೋಚಿಸುತ್ತಿದ್ದರು. ಇನ್ನು ಕೆಲವರು ಹಜಾರಿಬಾಗ್ ಜೈಲಿನಿಂದ ಜಯಪ್ರಕಾಶ್ ನಾರಾಯಣ್‌ರಂತೆ ಜೈಲು ಗೋಡೆ ಹಾರಿ ತಪ್ಪಿಸಿಕೊಳ್ಳುವ ಯೋಜನೆ ರೂಪಿಸಿದರು. ಈ ಎಲ್ಲಾ ಬಗೆಯ ಆಲೋಚನೆಗಳನ್ನೂ ಸಹಾನುಭೂತಿಯಿಂದ ಅರಿತುಕೊಂಡ ಸದಾಶಿವರಾಯರು ಪಕ್ಕಾ ಗಾಂಧೀವಾದಿ. ಅವರು ಅಸಮ್ಮತಿಯಿಂದ ತಲೆ ಅಲ್ಲಾಡಿಸಿದರು. ಆದಕ್ಕೆ ಬದಲು ಉಪವಾಸ ಸತ್ಯಾಗ್ರಹದ ಮೂಲಕ ಪ್ರತಿಭಟನೆ ಮಾಡೋಣ. ಹೋರಾಟ ಮಾಡೋಣ ಎಂದು ಯೋಜನೆ ಹಾಕಿದರು. ಸರ್ವಸದಸ್ಯರ ಸಭೆಯಲ್ಲಿ ಅವರ ಗಾಂಧೀ ವಿಧಾನದ ಉಪವಾಸ ಸತ್ಯಾಗ್ರಹವೇ ಆಯ್ಕೆ ಆಯಿತು.

❊ ❊ ❊ ❊

೮.

ಪೋಲೀಸರ ಅಮಾನುಷ ವರ್ತನೆ

ಜೈಲಿನಲ್ಲಿ ನೂರಾರು ಸತ್ಯಾಗ್ರಹಿಗಳಿದ್ದರು. ಎಲ್ಲರೂ ಉಪವಾಸ ಮಾಡುವುದು ಬೇಡ. ದೃಢನಿರ್ಧಾರ ಮತ್ತು ಈ ಅಹಿಂಸಾಮಾರ್ಗದಲ್ಲಿ ಪೂರ್ಣ ನಂಬಿಕೆಯುಳ್ಳ ಆಯ್ದ ಹದಿನೈದು ಮಂದಿ ಸತ್ಯಾಗ್ರಹಿಗಳು ಮಾತ್ರ ಅಮರಣಾಂತ ಉಪವಾಸ ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತು. ಈ ತಂಡದ ನಾಯಕರೂ ಜಿ. ಸದಾಶಿವರಾಯರೇ ಆಗಿದ್ದರು. ಸರ್ವಶ್ರೀಗಳಾದ ಖಾದ್ರಿ ಶಾಮಣ್ಣ, ಎಸ್. ರಾಮಯ್ಯ. ಪಾಟೀಲ್ ವಕೀಲರು, ಎ. ಹೆಚ್.ಶಿವಾನಂದಸ್ವಾಮಿ, ಕ್ರಾಂತಿಲಾಲ್, ಎ.ವಿ. ಶ್ರೀನಿವಾಸ, ಶಾಮಐತಾಳ್, ಕುಪ್ಪಗದ್ದೆ ಮರಿಯಪ್ಪನವರು ಮೊದಲಾದವರು ಈ ಆಯ್ದ ತಂಡದಲ್ಲಿದ್ದರು. ಆ ಆಯ್ದ ಸತ್ಯಾಗ್ರಹಿಗಳ ತಂಡದಲ್ಲಿ ನಾನೂ ಒಬ್ಬನಾಗಿದ್ದೆ.

ನಾನು ಎಂದೂ ಉಪವಾಸ ಮಾಡಿದವನೇ ಅಲ್ಲ. ಆದ್ದರಿಂದ ಪ್ರಾರಂಭದಲ್ಲಿ ಹೆದರಿಕೆಯಾದರೂ, ನನ್ನಲ್ಲಿ ಉತ್ಸಾಹವಿತ್ತು. ಜೊತೆಗೆ ಸಂಗಾತಿಗಳೂ ಇದ್ದರು.

ಮೊದಲನೆಯ ದಿನ ಸ್ವಲ್ಪ ಕಷ್ಟವಾಯಿತು. ಎರಡನೆ ದಿನ ದೇಹ ಉಪವಾಸಕ್ಕೆ ಒಗ್ಗಿಕೊಂಡಿತು. ನಾವೆಲ್ಲರೂ ಉಪ್ಪು ಬೆರೆಸಿದ ನೀರನ್ನು ಆಗಾಗ್ಗೆ ಕುಡಿಯುತ್ತಿರ ಬೇಕೆಂದು ಸದಾಶಿವರಾಯರು ಎಚ್ಚರ ವಹಿಸಿದ್ದರು. ಇಲ್ಲದಿದ್ದರೆ ಕರುಳಿನ ಗೋಡೆಗಳು ಒಂದನ್ನೊಂದು ಕಚ್ಚಿಕೊಂಡು ಪ್ರಾಣಾಪಾಯ ಸಂಭವಿಸುತ್ತಿತ್ತು. ಪ್ರತಿಯೊಬ್ಬರೂ ಆಗಾಗ್ಗೆ ಈ ದ್ರಾವಣವನ್ನು ಕುಡಿಯುತ್ತಿರಬೇಕೆಂಬ ನಿಬಂಧನೆಯನ್ನು ಕಟ್ಟೆಚ್ಚರದಿಂದ ಪಾಲಿಸುವಂತೆ ಸದಾಶಿವರಾಯರು ನೋಡಿಕೊಳ್ಳುತ್ತಿದ್ದರು.

ನಮ್ಮಲ್ಲಿ ಅನೇಕರು ಅಡಿಗರ ಕವನಗಳನ್ನು ಸ್ಫೂರ್ತಿಯುತವಾಗಿ ಹಾಡುತ್ತಿದ್ದರು. ಡಿ.ಎಸ್. ಕರ್ಕಿಯವರ ಒಂದು ಕವನ ''ತಿಳಿ ನೀಲದಲ್ಲಿ ತಾ ಲೀನವಾಗಿ ಅವ ಹೋದ ದೂರ, ದೂರ ! '' ಎಂಬ ಕವನ ನಮ್ಮ ಅಂತಃಕರಣವನ್ನು ಹಿಂಡಿ ಹಿಪ್ಪೆ ಮಾಡಿಬಿಡುತ್ತಿತ್ತು. ಅಡಿಗರ ''ಕಟ್ಟುವೆವು ನಾವು'' ಹಾಡಿ ಉತ್ಸಾಹಗೊಳ್ಳು ತ್ತಿದ್ದೆವು. ''ಮೋಹನ ಮುರಳಿ '' ಯನ್ನು ಕೇಳಿ ವಿಸ್ಮಯಗೊಳ್ಳುತ್ತಿದ್ದೆವು. ಬೇಂದ್ರೆ ಯವರ ''ಕರುಡು ಕಾಂಚಾಣ '' ಹಾಡಿಗೆ ಚಪ್ಪಾಳೆ ತಟ್ಟುತ್ತಿದ್ದೆವು. ಈ ಗೀತೆಗಳೆಲ್ಲಾ ಸತ್ಯಾಗ್ರಹಿಗಳ ಬ್ಯಾರಕ್‌ನಿಂದ ಆಗಾಗ್ಗೆ ಭಾವಪರವಶತೆಯಿಂದ ಕೇಳಿ ಬರುತ್ತಿದ್ದ ರಣಗೀತೆಗಳಾಗಿದ್ದವು.

ಉಪವಾಸ ಸತ್ಯಾಗ್ರಹ ಹನ್ನೊಂದನೇ ದಿನಕ್ಕೆ ಕಾಲಿಸಿಸಿತು. ನಮ್ಮನ್ನೆಲ್ಲಾ ದೈಹಿಕವಾಗಿ ನಿಶ್ಶಕ್ತಿ ಆವರಸಿಕೊಂಡರೂ, ಭಾವನಾತ್ಮಕವಾಗಿ ಮತ್ತಾವುದೋ ದೊಡ್ಡ ಅದಮ್ಯ ಶಕ್ತಿ ನಮ್ಮಲ್ಲಿ ಮನೆ ಮಾಡಿಕೊಂಡಿತ್ತು. ಹೆಚ್ಚಿನ ಗೆಲುವಿನಿಂದ ಹೆಚ್ಚಿನ ಆನಂದದಿಂದ ದಿನಗಳೆಯತೊಡಗಿದೆವು.

ಆದರೆ ಎಲ್ಲರ ಆರೋಗ್ಯಸ್ಥಿತಿಯೂ ಒಂದೇ ರೀತಿಯಲ್ಲಿ ಇರಲಿಲ್ಲ. ವಯೋವೃದ್ಧರಾದ ಎಸ್ ರಾಮಯ್ಯನವರು ಉಪವಾಸದ ಬೇಗೆ ತಾಳಲಾರದೆ ಐದನೆಯ ದಿನವೇ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದರು. ಆನಂತರ ಕ್ರಾಂತಿಲಾಲ್ ಎಂಬ ಕಾಲೇಜು ವಿದ್ಯಾರ್ಥಿಯ ಆರೋಗ್ಯ ಕೆಟ್ಟಿತು. ಆತನಿಗೆ ಬಿಕ್ಕಳಿಕೆ ಪ್ರಾರಂಭವಾಗಿ ಬಿಟ್ಟಿತು. ಇದರಿಂದ ಆತನ ಪ್ರಾಣಕ್ಕೆ ಅಪಾಯ ಎಂದು ಜಿಲ್ಲಾ ವೈದ್ಯಾಧಿಕಾರಿ ನಿರ್ಧರಿಸಿ ಆತನನ್ನು ಮೆಗ್ಗಾನ್ ಹಾಸ್ಪಿಟಲ್‌ಗೆ ಕೊಂಡೊಯ್ಯಬೇಕೆಂದು ಆಜ್ಞಾಪಿಸಿದರು. ಪೋಲೀಸರು ಈ ಆಜ್ಞೆಯನ್ನು ಜಾರಿಗೊಳಿಸಲು ಬರುವಂತೆ ಸುದ್ದಿ ತಿಳಿದು ತರುಣ ಕ್ರಾಂತಿಲಾಲ್ ಅದನ್ನು ಪ್ರತಿಭಟಿಸಿದರು. ''ಪ್ರಾಣ ಹೋದರೂ ಚಿಂತೆಯಿಲ್ಲ! ನಾನು ಆಸ್ಪತ್ರೆಗೆ ಹೋಗುವುದಿಲ್ಲ. ಅಲ್ಲಿ ನನಗೆ ಬಲಾತ್ಕಾರವಾಗಿ ಆಹಾರ ಕೊಡುತ್ತಾರೆ. ನನ್ನ ವ್ರತಭಂಗ ಆಗುತ್ತದೆ. ನನ್ನನ್ನು ಪೋಲೀಸರು ಅನಾಮತ್ತಾಗಿ ಎತ್ತಿಕೊಂಡು ಹೋಗಲು ಬರುತ್ತಾರೆ. ಹಾಗೆ ಮಾಡಲು ಅವರಿಗೆ ಬಿಡಬೇಡಿ. ನನಗೆ ರಕ್ಷಣೆ ನೀಡಿ ! '' ಎಂದು ಅವರು ವಿನಂತಿಸಿಕೊಂಡರು. ಅವರ ವಿನಂತಿಗೆ ನಾವೆಲ್ಲರೂ ಸಮ್ಮತಿಸಿದೆವು.

ಪೋಲೀಸರು ಕ್ರಮ ಜರುಗಿಸಲು ಬಂದಾಗ ಪೋಲೀಸರಿಗೂ ಸತ್ಯಾಗ್ರಹಿಗಳಿಗೂ ಘರ್ಷಣೆ ಆಯಿತು. ಆಗ ಸಿಟ್ಟಿಗೆದ್ದ ಪೋಲೀಸರು ಪ್ರತಿ ಬ್ಯಾರೆಕ್ಕಿಗೂ ನುಗ್ಗಿ ಘೋಷಣೆಗಳನ್ನು ಕೂಗುತ್ತಿದ್ದ ಸತ್ಯಾಗ್ರಹಿಗಳನ್ನು ಹೊಡೆದರು. ಬಚ್ಚಲು ಮನೆ ಕಕ್ಕಸ್‌ಗಳಲ್ಲಿ ಸಿಕ್ಕಿಬಿದ್ದ ಕೆಲವರಿಗೆ ರಕ್ತ ಬರುವಂತೆ ಹೊಡೆದರು.

''ಜೈಲಿನಲ್ಲಿ ಲಾಠಿ ಚಾರ್ಜ್ !''

''ಉಪವಾಸ ಮಾಡುತ್ತಿರುವ ನಿಸ್ಸಹಾಯಕ ಸತ್ಯಾಗ್ರಹಿಗಳ ಮೇಲೆ ಲಾಠಿ ಚಾಜ್ ''

ಇದೊಂದು ಅನಾಗರೀಕ, ಕ್ರೂರ ಕ್ರಮವಲ್ಲದೆ ಮತ್ತೇನು ? ಈ ಸುದ್ಧಿ ಹೊರಗೆ ಕಾಳ್ಗಿಚ್ಚಿನಂತೆ ಹಬ್ಬಿತು. ಚಿತ್ರವಿಚಿತ್ರವಾಗಿ ಹರಡಿಕೊಂಡಿತು. ನಿಸ್ಸಹಾಯಕ, ನಿರಪರಾಧಿ ಉಪವಾಸ ಸತ್ಯಾಗ್ರಹಿಗಳ ಮೇಲೆ ಕ್ರೂರ ಲಾಠಿ ಪ್ರಹಾರ ! ನಾಲ್ಕಾರು ಸತ್ಯಾಗ್ರಹಿಗಳ ಸಾವು ! ಇತ್ಯಾದಿಯಾಗಿ ಉತ್ತ್ರೇಕ್ಷಯ ಸುದ್ದಿಗಳು ಶಿವಮೊಗ್ಗ ನಗರದಲ್ಲಿ ಹರಡಿ , ನಾಗರೀಕರು ಸಹಾನುಭೂತಿಯ ಮೆರವಣಿಗೆಯಲ್ಲಿ ಬಂದರು. ಜೈಲಿನ ಮುಂದೆ ಜಮಾಯಿಸಿ ಪ್ರತಿಭಟನೆ ನಡೆಸಿದರು. ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ನಾಚಿಕೆಗೇಡು ! ನಾಚಿಕೆಗೇಡು ! ಎಂದು ಇಡೀ ಹಳೆಯ ಮೈಸೂರು ಸಂಸ್ಥಾನವೇ ಸರ್ಕಾರಕ್ಕೆ ಧಿಕ್ಕಾರ ಹಾಕಿತು. ಶಿವಮೊಗ್ಗದ ಸಮಾಜವಾದಿ ಪಕ್ಷದ ಮುಂದಾಳುಗಳಾದ ಶಾಂತವೇರಿ ಗೋಪಾಲಗೌಡರು, ಎನ್.ಕೆ. ಸೀತಾರಾಮ ಐಯ್ಯಂಗಾರ್, ಎಸ್.ಎಸ್. ಭರಮಪ್ಪ ಮತ್ತಿತರರು ಜಿಲ್ಲಾಧಿಕಾರಿಗಳ ಮನೆಗೆ ತೆರಳಿ,

''ಕುಂಭಕರ್ಣ ಏಳು,ಏಳು! '' ಎಂದು ಕೂಗತೊಡಗಿದರು. ಜಿಲ್ಲಾಧಿಕಾರಿ ಊಟ ಮಾಡುತ್ತಿದ್ದ ಕೈಯಲ್ಲೇ ಹೊರೆಗೆದ್ದು ಬಂದ.

''ಏನಯ್ಯಾ ! ಊಟ ಮಾಡ್ತಿದ್ದಿಯಾ ? ನಾಚಿಕೆ ಆಗೋದಿಲ್ವೆ ನಿನಗೆ ! ಥೂ'' ಎಂದು ಕ್ಯಾಕರಿಸಿ ಉಗಿದರು. ಇದೇ ಬಗೆಯ ಛೀಮಾರಿ ದೇಶಾದ್ಯಂತ ಮೈಸೂರಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆ.ಸಿ. ರೆಡ್ಡಿಯವರೆಗೂ ತಲುಪಿತು.

ಇಷ್ಟರಲ್ಲಿ ಜೈಲಿನೊಳಗಣ ನಮ್ಮ ಉಪವಾಸ ಸತ್ಯಾಗ್ರಹ ೧೪ನೇ ದಿನ ತಲುಪಿತ್ತು. ಸರ್ಕಾರ ಇಡೀ ಸಾರ್ವತ್ರಿಕ ಭತ್ಸ್ಯ್ಸನೆಯ ಎದುರು ತೆಪ್ಪಗೆ ಇರುವುದು ಸಾಧ್ಯವಿರಲಿಲ್ಲ. ಆಗ ಕಾನೂನು ಮಂತ್ರಿಗಳಾಗಿದ್ದ ಶ್ರೀ ಕೆ.ಟಿ. ಭಾಷ್ಯಂ ಐಯ್ಯಂಗಾರ್ ಮತ್ತು ಇನ್‌ಸ್ಪೆಕ್ಟರ್ ಜನರಲ್ ಆಫ್ ಪ್ರಿಸನ್ಸ್ ಆಗಿದ್ದ ಶ್ರೀ ಲಕ್ಷ್ಮಣರಾವ್ ಪದಕಿ ಎನ್ನುವ ಅಧಿಕಾರಿ ಸ್ಥಳೀಯ ಡಿ.ಸಿ. , ಎಸ್.ಪಿ. ಮತ್ತು ಜಿಲ್ಲಾಧಿಕಾರಿಗಳೊಡನೆ ಜೈಲಿಗೆ ಭೇಟಿ ನೀಡಿದರು.

ಅಂದಿನ ಘಟನಾವಳಿಗಳು ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತೆ ಇವೆ.

ಉಪವಾಸ ಸತ್ಯಾಗ್ರಹ ಮಾಡುತ್ತಿದ್ದ ನಾವೆಲ್ಲರೂ ಬಲಭಾಗದ ಸಾಲಿನ ಮೂರನೇ ಬ್ಯಾರಕ್‌ನಲ್ಲಿ ಇದ್ದೆವು. ನಮ್ಮ ಬಳಿ ಬರುವವರು ಬಲಗಡೆ ಸಾಲಿನ ಎರಡು ಬ್ಯಾರಕ್‌ಗಳು ಮತ್ತು ಎಡಗಡೆ ಸಾಲಿನ ಎರಡು ಬ್ಯಾರಕ್‌ಗಳನ್ನು ದಾಟಿ ಬರಬೇಕಾಗಿತ್ತು. ಅದರಲ್ಲಿ ಇದ್ದವರು ದಾವಣಗೆರೆಯಿಂದ ಬಂದಿದ್ದ ಹದಿಹರೆಯದ ಹುಡುಗರ ಗುಂಪು. ಪೋಲೀಸರ ಲಾಠೀ ಪ್ರಹಾರಕ್ಕೆ ವಿಶೇಷವಾಗಿ ತುತ್ತಾಗಿದ್ದವರು ಇವರೇ.

ಕೆ.ಟಿ. ಭಾಷ್ಯಂ ಮತ್ತು ಲಕ್ಷ್ಮಣರಾವ್ ಪದಕಿ ಇತರ ಅಧಿಕಾರಿಗಳೊಡನೆ ಅವರಿದ್ದ ಬ್ಯಾರಕ್ಕಿನೊಳಕ್ಕೆ ಬಂದ ತಕ್ಷಣ ಅವರು ಆಶ್ಚರ್ಯ, ಅವಮಾನ ಮತ್ತು ಅಸಹ್ಯದಿಂದ ತಲ್ಲಣಿಸಿ ಹೋದರು. ಏಕೆಂದರೆ ಆ ಬ್ಯಾರಕ್ಕಿನಲ್ಲಿದ್ದ ಪ್ರತಿಯೊಬ್ಬ ಸತ್ಯಾಗ್ರಹಿಯೂ ಹರಿದ ಚೆಡ್ಡಿಗಳನದ್ನು ಧರಿಸಿ, ಬರಿಮೈಯಲ್ಲಿ ಬೆತ್ತಲೆಯಾಗಿ, ತಲೆ ಕೆದರಿಕೊಂಡು , ನಿಂತು ಪ್ರೇತಗಳಂತೆ ಹಾರಾಡಿ, ಕೂಗಾಡಿ,ಕುಣಿದಾಡುತ್ತಿದ್ದರು. ಕೈಯಲ್ಲಿ ಖಾಲಿಯಾಗಿದ್ದ ಅಲ್ಯೂಮಿನಿಯಂ ತಟ್ಟೆ-ಲೋಟಗಳನ್ನು ಒಂದಕ್ಕೊಂದು ಕುಟ್ಟುತ್ತಾ ಆಗ ತಾನೇ ಜನಪ್ರಿಯವಾಗಿದ್ದ ಒಂದು ತಮಿಳು ಸಮೂಹಗಾನ ''ತಿಲ್ಲಾಲಂಗಡಿ ! ತಿಲ್ಲಾಲಂಗಡಿ ! ತಿಲ್ಲಾಲಂಗಡಿ.... ಲೇ ! ಲೇ ಲೇಯ್ '' ಎಂದು ಕುಣಿದು, ಕೇಕೇ ಹಾಕಿ ನಗುತ್ತಿದ್ದರು. ತಟ್ಟೆಗಳನ್ನು ಲೋಟಗಳಿಂದ ತಾಳಬದ್ಧವಾಗಿ ಕುಟ್ಟಿ ಕುಟ್ಟಿ ಕುಣಿಯುತ್ತಿದ್ದರು. ಆ ದೊಡ್ಡ ಮನುಷ್ಯರನ್ನು ಹಂಗಿಸುವಂತೆ ಮುಖ - ಮೂತಿ ಮಾಡುತ್ತಿದ್ದರು. ಆಗ ಅವರ ಮೇಲೆ ಲಾಠಿ ಚಾರ್ಜ್ ಮಾಡುವ ಸ್ಥಿತಿಯಲ್ಲಿ ಪೋಲೀಸರು ಇರಲಿಲ್ಲ. ಆ ಬ್ಯಾರಕ್ಕಿನ ಬಾಗಿಲನ್ನು ಮುಂದಕ್ಕೆ ಎಳೆದುಕೊಂಡು ಅಲ್ಲಿ ಕಾವಲಿಗೆ ನಾಲ್ಕು ಪೋಲೀಸರನ್ನು ಹಾಕಿ, ನೇರವಾಗಿ ಉಪವಾಸ ಸತ್ಯಾಗ್ರಹಿಗಳಿದ್ದ ಬ್ಯಾರಕ್‌ಗೆ ಬಂದರು. ಅಲ್ಲಿ ನಾವೆಲ್ಲರೂ ನಮ್ಮ ನಮ್ಮ ಈಚಲು ಚಾಪೆಗಳ ಮೇಲೆ ಕುಳಿತುಕೊಂಡೇ ಇದ್ದೆವು. ನಾವುಗಳು ಯಾರೂ ಎದ್ದು ನಿಲ್ಲಲೂ ಇಲ್ಲ. ಬಂದ ಮಂತ್ರಿಗಳಿಗೆ, ಹಿರಿಯ ಅಧಿಕಾರಿಗಳಿಗೆ ಗೌರವ ಸೂಚಿಸಲೂ ಇಲ್ಲ. ನಾವು ಕುಳಿತೇ ಇದ್ದೆವು. ಅವರೆಲ್ಲರೂ ನಿಂತೇ ಇದ್ದರು.

ಕೆ.ಟಿ. ಭಾಷ್ಯಂರವರು ನಮ್ಮ ನಾಯಕರಾಗಿದ್ದ ಸದಾಶಿವರಾಯರ ಮುಂದೆ ಬಂದು ನಿಂತರು. ರಾಯರ ಸಹಾಯಕ್ಕೆ ಶಾದ್ರಿ ಶಾಮಣ್ಣನವರು ಅಣಿಯಾದರು.

ಕೆ.ಟಿ. ಭಾಷ್ಯಂ ಅಯ್ಯಂಗಾರ್‌ರವರು ಹಿರಿಯ ಕಾಂಗ್ರೆಸ್ ನಾಯಕರಲ್ಲೊಬ್ಬರು. ಸ್ವಾತಂತ್ರ್ಯ ಸೇನಾನಿಗಳು. ಅವರಿಗೆ ತುರಂಗವಾಸವೇನೂ ಹೊಸದಾಗಿರಲಿಲ್ಲ. ಬಹುಶಃ ಅವರೂ ಜೈಲಿನಲ್ಲಿದ್ದಾಗ ಉಪವಾಸ ಸತ್ಯಾಗ್ರಹ ಮುಂತಾದ ವ್ರತಗಳನ್ನು ಆಚರಿಸಿದ್ದರೋ ಏನೋ ! ಈಗ ಅವರು ಈಚಲು ಚಾಪೆಯ ಮೇಲೆ ೧೪ ದಿನಗಳ

ಉಪವಾಸದಿಂದ ದಣಿದಿದ್ದರೂ ಸಾತ್ವಿಕ ಬಲದಿಂದಎದ್ದು ಕುಳಿತಿದ್ದ ಸದಾಶಿವ ರಾಯರ ಕೃಶ ಶರೀರದ ಎದುರು ನಿಂತು, ವಿನಮ್ರವಾಗಿ ಕೇಳಿದರು.

''ರಾಯರೇ , ನಾನು ನಿಂತೇ ನಿಮ್ಮೊಡನೆ ಮಾತಾಡಲೇ ಅಥವಾ ತಮ್ಮ ದರ್ಭಾಸನವನ್ನು ಕೊಂಚ ಆಕ್ರಮಿಸಲೇ ? ''

ಸದಾಶಿವರಾಯುರ ಒಡನೆಯೇ ನುಡಿದರು. ''ಧಾರಾಳವಾಗಿ ಕುಳಿತುಕೊಳ್ಳಿ.''

ಶ್ರೀ ಕೆ.ಟಿ. ಭಾಷ್ಯಂ ಒಬ್ಬರೇ ಕಚ್ಚೆ ಪಂಚೆಧಾರಿಗಳಾಗಿದ್ದರು. ಒಡನೆಯೇ ಚಾಪೆಯ ಒಂದು ತುದಿಗೆ ಕುಳಿತರು. ಸದಾಶಿವರಾಯರು, ''ಕುಳಿತುಕೊಳ್ಳಿ, ಕುಳಿತುಕೊಳ್ಳಿ'' ಎಂದು ಇತರ ಅಧಿಕಾರಿಗಳಿಗೂ ಸೂಚಿಸಿದರು. ಆದರೆ ಅವರೆಲ್ಲರೂ ಗಂಜಿ ಹಾಕಿದ್ದ ಸೂಟ್, ಬೂಟ್‌ಧಾರಿಗಳಾಗಿದ್ದುದರಿಂದ , ಅವರಿಗೆ ಸದಾಶಿವರಾಯರ ಆಹ್ವಾನ ಕಸಿವಿಸಿಯನ್ನುಂಟು ಮಾಡಿತು. ಆಗ ಅಲ್ಲೇ ಇದ್ದ ಜೈಲರ್, ''ಕುರ್ಚಿಗಳನ್ನು ತನ್ನಿ, ಕುರ್ಚಿಗಳನ್ನು ! ಬೇಗ ! ಬೇ ಗ ! '' ಎಂದು ಕೂಗಿದ. ಬಂದ ಕುರ್ಚಿಗಳನ್ನು ''ಬೇಡ ! ಬೇಡ '' ಎಂದು ಹಿಂದಕ್ಕೆ ಕಳಿಸಿದರು ಭಾಷ್ಯಂ. ಎಲ್ಲಾ ಅಧಿಕಾರಿಗಳೂ ಅವರ ಹಿಂದೆ ಕೈಕಟ್ಟಿ ನಿಂತೇ ಇರುವುದು ಅನಿವಾರ್ಯವಾಯಿತು.

ಪರಿಸ್ಥಿತಿ ಬಿಗುವಿನಿಂದಲೇ ಕೂಡಿತ್ತು. ಪಕ್ಕದ ಬ್ಯಾರಕ್‌ನಿಂದ ದಾವಣಗೆರೆಯ ಹುಡುಗರು ಕೂಗು, ತಟ್ಟೆ ಬಡಿತ ತಾರಕಕ್ಕೇರಿತ್ತು. ಉಪವಾಸ ಸತ್ಯಾಗ್ರಹದಿಂದ ಅತಿಯಾಗಿ ಬಳಲಿದ್ದ ದೊಡ್ಡ ಹೊಟ್ಟೆಯ ಸೂಕ್ಷ್ಮ ಕರುಳಿನ ಮೂಲವ್ಯಾಧಿ ರೋಗಿಷ್ಠ ಖಾದ್ರಿ ಶಾವಣ್ಣನವರ ಕಣ್ಣುಗಳು ರೋಷದಿಂದ ಹೊಳೆಯುತ್ತಿದ್ದವು. ತಮ್ಮೆದುರು ಹಾಜರಾಗಿದ್ದ ಕಾನೂನು ಮಂತ್ರಿ ಕೆ.ಟಿ. ಭಾಷ್ಯಂ ಮತ್ತು ಲಕ್ಷ್ಮಣರಾವ್ ಪದಕಿ ಇವರಿಬ್ಬರನ್ನೂ ಅವರು ತಿರಸ್ಕಾರ ಮತ್ತು ಕೋಪಮಿಶ್ರಿತ ನೋಟದಿಂದ ಕೊಂದೇ ಹಾಕಿಬಿಡುತ್ತಾರೇನೋ ಎಂಬಂತೆ ನೋಡುತ್ತಿದ್ದರು.

ನೂರಾರು ಮಂದಿ ಸತ್ಯಾಗ್ರಹಿಗಳಿಗೆ ಕೊಡಬಾರದ ಕಷ್ಟನಷ್ಟಗಳನ್ನು ಉಂಟು ಮಾಡಿ ಹಿಂಸೆಯನ್ನು ನೀಡಿದ್ದ ನಿರ್ದಯ ಸರ್ಕಾರದ ಪ್ರತಿನಿಧಿಗಳಾಗಿದ್ದ ಅವರೆಲ್ಲರೂ ರಾಜ್ಯದ ಮಹಾಜನತೆಯ ಒತ್ತಡಕ್ಕೆ ಮಣಿದು ನಿರ್ವಾಹವಲ್ಲದೆ, ತಮ್ಮ ಮಾನ, ಮರ್ಯಾದೆ, ಸ್ಥಾನಗಳನ್ನು ಉಳಿಸಿಕೊಳ್ಳಲು ಇಲ್ಲಿಗೆ ಬಂದಿದ್ದರೇ ವಿನಃ ಮಾನವೀಯ ಅನುಕಂಪದಿಂದಾಗಲೀ, ಕರ್ತವ್ಯ ಪ್ರಜ್ಞೆಯಿಂದಾಗಲೀ ಅಲ್ಲ. ಅವರನ್ನು ಖಾದ್ರಿಯವರು ತಿರಸ್ಕಾರ ಮಿಶ್ರಿತ ಧ್ವನಿಯಲ್ಲಿ ಖಾರವಾಗೇ ಕೇಳಿದರು.

''ಇಷ್ಟು ದಿನಗಳ ಬಳಿಕ ತಮ್ಮ ಪಾದ ಇತ್ತ ಕಡೆಗೆ ಬಂದಿದೆ ! .... ಹದಿನಾಲ್ಕು ದಿನಗಳ ಉಪವಾಸವೇ ಸಾಕಾಯ್ತಲ್ಲಾ ? ಸದ್ಯ ನಮ್ಮ ಹೆಣಗಳು ಬೀಳುವ ಅಗತ್ಯ ಉಂಟಾಗಲಿಲ್ಲ ! ಅಲ್ಲವೇ ಮಹಾಸ್ವಾಮಿ '' ಎಂದರು.

ಖಾದ್ರಿಯವರ ಮಾತಿನ ಚಾಟಿ ಏಟು ಅತ್ಯಂತ ತೀಕ್ಷ್ಣವಾಗಿತ್ತು. ಶ್ರೀ ಕೆ.ಟಿ. ಭಾಷ್ಯಂ ಈ ಮಾತಿನಿಂದ ನಲುಗಿ , ತಲೆತಗ್ಗಿಸಿ, ಮೌನವಾದರು. ೧೪ ದಿನಗಳ ಕಾಲ ಉಪವಾಸ ಮಾಡಿದ್ದ ಸತ್ಯಾಗ್ರಹಿಗಳೆಲ್ಲರ ಉರಿನೋಟ ತಮ್ಮ ಮೇಲೆ ಬಿದ್ದಿದೆಯೆಂಬ ಪ್ರಜ್ಞೆಯಿಂದ ಅವರು ವಿಚಲಿತರಾಗಿದ್ದರು. ಅಧಿಕಾರಿಗಳ ವಿಚಾರವಾಗಿ ಏನೂ ಹೇಳುವುದಕ್ಕೆ ಆಗದು. ಏಕೆಂದರೆ ಅವರು ''ಡಿಹ್ಯೂಮನೈಸ್ಡ್'' ಆಗಿಬಿಟ್ಟಿರುತ್ತಾರೆ. ಆದರೆ ಭಾಷ್ಯಂರವರು ನಮ್ಮೆಲ್ಲರನ್ನೂ ಒಮ್ಮೆ ಕ್ಷಮಾಯಾಚನೆಯ ದೃಷ್ಟಿಯಿಂದ ನೋಡಿ ಎಲ್ಲರಿಗೂ ಕೈ ಮುಗಿದು, ''ತಡವಾಗಿದೆ ! ಕ್ಷಮಿಸಿ ! ಎಲ್ಲ ಲೋಪಗಳನ್ನೂ ಸರಿಪಡಿಸೋಣ'' ಎಂದರು. ಆದರೆ ಪಕ್ಕದ ಬ್ಯಾರಕ್‌ನಲ್ಲಿ ಆಗುತ್ತಿದ್ದ ಗದ್ದಲದಿಂದ ಲಕ್ಷ್ಮಣ್‌ರಾವ್ ಪದಕಿ ತೀವ್ರ ಅಸಮಾಧಾನಗೊಂಡಿದ್ದರು. ಶ್ರೀ ಕೆ.ಟಿ. ಭಾಷ್ಯಂ ಅವರು ಆಗ ಅಲ್ಲಿ ಇಲ್ಲದೇ ಹೋಗಿದ್ದರೆ ಪೋಲೀಸರಿಗೆ ಹೇಳಿ ಲಾಠಿ ಚಾರ್ಜ್ ಮಾಡಲು ಆಜ್ಞೆ ಮಾಡುತ್ತಿದ್ದರೋ ಏನೋ ! ಆದರೆ ಅವರು ಈಗ ಮಂತ್ರ ಶಕ್ತಿಗೆ ಕಟ್ಟುಬಿದ್ದ ಸರ್ಪದಂತೆ ನಿಸ್ಸಹಾಯಕರಾಗಿದ್ದರು. ತಮ್ಮ ಎರಡು ಕಿವಿಗಳನ್ನು ಕೈಗಳಿಂದ ಮುಚ್ಚಿಕೊಳ್ಳುತ್ತಾ ''ದಯವಿಟ್ಟು ಹೊರಗಿನ ಗದ್ದಲ ನಿಲ್ಲಿಸಿ'' ಎಂದು ಹೇಳಿದರು.

ನಿಜ, ಅದು ಗದ್ದಲವೇ ಸರಿ. ದಾವಣಗೆರೆಯ ಹುಡುಗರೊಡನೆ ಈಗ ಕೆ.ಜಿ.ಎಫ್ ಮತ್ತು ಕೋಲಾರದ ಕಾರ್ಮಿಕರೂ ಸೇರಿಕೊಂಡಿದ್ದರು. ಎಲ್ಲರೂ ಜೈಲಿನ ಛಾವಣಿ ಹಾರಿಹೋಗುವಂತೆ ಕೂಗಿ, ಕಿರುಚಿ, ತಟ್ಟೆ ಲೋಟ ಬಡಿಯುತ್ತಿದ್ದರು.

ಖಾದ್ರಿ ಶಾಮಣ್ಣನವರು ಶಿವಾನಂದಸ್ವಾಮಿಗಳ ಕಡೆಗೆ ನೋಡಿದರು. ಕೂಡಲೇ ಅವರ ಮನೋರಥವನ್ನು ಅರ್ಥಮಾಡಿಕೊಂಡ ಅವರು ತಮ್ಮಲ್ಲೇ ನಸುನಗುತ್ತಾ ನನ್ನ ಕಡೆಗೊಮ್ಮೆ ನೋಡಿ, ಹೊರಗೆ ನಡೆದರು. ನಾವೇ ಆ ಭೂತಚೇಷ್ಠೆಯ ಪ್ರಚೋದಕರಾಗಿದ್ದೆವು.

ಮರುಕ್ಷಣವೇ ಅವರ ಸಿಂಹಗರ್ಜನೆ 'ಸೈಲೆನ್ಸ್ !' ಎಂಬ ಕೂಗು ಹೊರಗೆ ಕೇಳಿ ಬಂತು. ಒಡನೆಯೇ ಆ ಪ್ರಳಯಾಂತಕ ಗದ್ದಲ ಅಡಗಿತು. ಇಡೀ ಜೈಲೇ ಗಪ್‌ಚುಪ್ ಆಗಿಹೋಯ್ತು. ಹೊರಗೆ ಗಿಡಗಳ ಮೇಲೆ ಗಾಳಿ ಸುಯ್ಯೆಂದು ಬೀಸುವುದೂ, ಹಕ್ಕಿಗಳ ಕಲರವ ನಾದವೂ ಕೇಳಿಬರತೊಡಗಿತು.

ಖಾದ್ರಿ ಶಾಮಣ್ಣ ತಮ್ಮ ಮಾತನ್ನು ಮುಂದುವರೆಸಿದರು.

''ಹಸಿದ ಕಂದಮ್ಮಗಳು ಹೊಟ್ಟೆ ಹಸಿದಾಗ ಏನು ಮಾಡುತ್ತವೆ , ಅಳುತ್ತವೆ ? ರಂಪ ರಾದ್ಧಾಂತ ಮಾಡುತ್ತವೆ. ಪಕ್ಕದ ಬ್ಯಾರಕ್ಕಿನ ಮಕ್ಕಳು, ಹಸುಗೂಸುಗಳಲ್ಲದಿರಬಹುದು. ಆದರೆ ಹದಿಹರೆಯ ವಿದ್ಯಾರ್ಥಿಗಳು. ನೀವೆಲ್ಲಾ ಬೆಳಿಗ್ಗೆಯೇ ಸ್ನಾನ ಮುಗಿಸಿ. ಶುಚಿಭೂರ್ತರಾಗಿ, ಪುಷ್ಕಳವಾಗಿ ಉಪಹಾರ ಕಾಫಿಗಳನ್ನು ಸೇವಿಸಿ,

ಸೊಗಸಾದ ಕಾರುಗಳಲ್ಲಿ ಇಲ್ಲಿಗೆ ಪಾದ ಬೆಳೆಸಿದ್ದೀರಿ ! ನಿಮಗೇನು ಗೊತ್ತಾಗಬೇಕು ಆ ಮಕ್ಕಳ ಸಂಕಟ ! ಬೆಲ್‌ಸನ್, ಅಸ್ವಿಚ್, ಈ ಯಾವ ನಾಜೀ ಕಾನ್‌ಸೆಂಟ್ರೇಷನ್ ಕ್ಯಾಂಪಿಗೂ ಕಡಿಮೆಯಿಲ್ಲದ ನರಕಗಳಲ್ಲಿ ನೀವು ಅವರನ್ನು ಇಟ್ಟಿದ್ದೀರಿ. ಬೆಳಿಗ್ಗೆ ಎದ್ದು ಹಲ್ಲು ಉಜ್ಜಲು ಒಂದು ಹಲ್ಲುಪುಡಿಯೇ ? ಸ್ನಾನ ಮಾಡಲು ಸೋಪೇ ? ಬಟ್ಟೆ ಬದಲಾಯಿಸಲು ಬೇರೊಂದು ಮಡಿ ಚಡ್ಡಿಯೇ ? ಕುಡಿಯಲು ಕಾಫಿಯೇ ? ತಿನ್ನಲು ತಿಂಡಿಯೇ ? ಉಣ್ಣಲು ದಿನಕ್ಕೊಂದು ಊಟವೇ ? ತಲೆಗೆ ಹೇರ್‌ಕಟ್ಟೇ ? ಎಣ್ಣೆಯೇ? ಕಡೆಗೆ ಒಂದು ಬಾಚಣಿಕೆಯೇ ? ಹೇನು-ಕೂರೆಗಳು ಅವರನ್ನು ಹೊರಗಿನಿಂದ ಆಕ್ರಮಿಸಿರುವಂತೆ ತಾಳ ಹಾಕುವ ಹಸಿದ ಹೊಟ್ಟೆ ಒಳಗಿನಿಂದ ಆವರಿಸಿಕೊಂಡಿದೆ. ರಾಜಕೀಯ ಖೈದಿಗಳಾಗಿ ನೀವೆಲ್ಲಾ ಜೈಲಿನಲ್ಲಿ ಅನುಭವಿಸಿದ ಸಣ್ಣಕ್ಕಿ , ಬೆಣ್ಣೆ, ತುಪ್ಪ ಇಲ್ಲಿಅವರಿಗೆ ಸಿಗುತ್ತಿಲ್ಲವಲ್ಲಾ ! ''

ಎಂದು ಹೇಳುತ್ತಿದ್ದಂತೆಯೇ ಕೆ.ಟಿ. ಭಾಷ್ಯಂಗೆ ಎಲ್ಲೋ ಮರ್ಮಾಘಾತ ವಾದಂತೆ ಆಗಿ ಅವರು ''ಅದೆಲ್ಲಾ ಬೇಡ ಈಗ ; ನಿಮಗೆ ಏನು ಬೇಕು ಕೇಳಿ !'' ಎಂದು ಕೇಳಿದರು.

''ನೋಡಿ ಮಂತ್ರಿಗಳೇ ! ಮನುಷ್ಯತ್ವ ಇರೋ ಯಾರಿಗಾದ್ರೂ ಇನ್ನೊಬ್ಬ ಮನುಷ್ಯ ಪ್ರಾಣಿಯ ದೈನಂದಿನ ಅಗತ್ಯಗಳೇನು ಎಂದು ಹೇಳುವ ಅಗತ್ಯವಿರುವುದಿಲ್ಲ! ಆದರೆ ಇದು ವಿಶೇಷ ಪರಿಸ್ಥಿತಿ. ಆದ್ದರಿಂದ ಬಿಡಿಸಿ ಹೇಳ್ತಾ ಇದ್ದೀನಿ ನೋಡಿ ! ನಿಮ್ಮ ಗೆಳೆಯರಾದ ಕಾಗೋಡು ಜಮೀನ್ದಾರರು ಹೇಳುತ್ತಾರಂತೆ. ನಾವೆಲ್ಲಾ ಹೊಟ್ಟೆಗೆ ಅನ್ನವಿಲ್ಲದೆ, ಜೈಲು ಕೂಳಿಗೆ ಆಸೆಪಟ್ಟು ಈ ಸತ್ಯಾಗ್ರಹಕ್ಕೆ ಬಂದಿದ್ದೇವೆ ಅಂತ. ಆದರೆ ವಿಚಾರ ಹಾಗಿಲ್ಲ, ನಾವೆಲ್ಲಾ ಸಮಾಜದ ಜಾಗೃತ ವರ್ಗದಿಂದ ಬಂದಿರುವವರು. ರಾಜಕೀಯ ಕಾರಣಕ್ಕಾಗಿ ಕಾರಾಗೃಹವಾಸ ಅನುಭವಿಸುತ್ತಿರುವವರು. ನಮ್ಮಲ್ಲಿ ವಕೀಲರು, ಪತ್ರಕರ್ತರು, ಕಾಲೇಜು ವಿದ್ಯಾರ್ಥಿಗಳು, ಕಾರ್ಮಿಕ ನಾಯಕರುಗಳು, ಪದವೀಧರರು, ಸ್ನಾತಕೋತ್ತರ ಪದವೀಧರರು ವಿವಿಧ ವೃತ್ತಿಗಳಲ್ಲಿರುವ ಪರಿಣಿತರು, ಲೇಖಕರು, ಕವಿಗಳು, ಸರ್ವೋದಯ ಕಾರ್ಯಕರ್ತರು, ರೈತ ಮುಖಂಡರು ಇದ್ದಾರೆ. 'ಇವರೆಲ್ಲರೂ ಜೀವನದ ಸಾಧಾರಣ'ಅನಿಮಲ್ ಕಂಪರ್ಟ್ಸ್' ಅನ್ನೂ ಸಾಧಾರಣ ಸೌಲಭ್ಯಗಳನ್ನೂ ಅನುದಿನವೂ ಪಡೆದಿದ್ದವರೇ...

ನಮ್ಮೆಲ್ಲರಿಗೂ ಬೆಳಿಗ್ಗೆ ಎದ್ದ ಕೂಡಲೇ ದಂತಮಜ್ಜನಕ್ಕೆ ಹಲ್ಲುಪುಡಿ, ಮೈ ತೊಳೆಯಲು ಮೈಸೋಪು, ಶುಭ್ರವಾದ ಟವೆಲ್, ಒಳ ಉಡುಪುಗಳು ಬೇಡವೇ ? ಬೆಳಗಿನ ಕಾಫಿ, ಸಮಾಚಾರ ಪತ್ರಿಕೆಗಳು, ಸ್ನಾನಕ್ಕೆ ಬಿಸಿ ನೀರು , ಟಾಯ್ಲೆಟ್ ಸೋಪ್, ತಲೆಗೆ ಎಣ್ಣೆ, ಬಾಚಣಿಗೆ, ಒಳಉಡುಪುಗಳು, ಹೊರ ಉಡುಪುಗಳು ಬೇಕು. ಬೆಳಿಗ್ಗೆ ೮ ಗಂಟೆಗೆಲ್ಲಾ ಉಪಹಾರ, ಮಧ್ಯಾಹ್ನ ಪುಷ್ಟಿಕರ ಊಟ, ಸಂಜೆಯ ಟೀ, ರಾತ್ರಿಯ

ಊಟ, ಖಾಯಿಲೆ ಇರುವವರಿಗೆ ಪಥ್ಯದ ಊಟ, ಔಷಧಿಗಳು ಬೇಕು. ನಮ್ಮಲ್ಲಿ ಅನೇಕರು ಧೂಮಪಾನಿಗಳಿದ್ದೇವೆ. ಎಲೆಯಡಿಕೆ, ತಂಬಾಕು ಹಾಕುವವರಿದ್ದೇವೆ. ವಾರಕ್ಕೊಮ್ಮೆಯಾದರೂ ವಿಶೇಷ ಊಟ , ಲೈಬ್ರರಿ ಪುಸ್ತಕಗಳು, ಅಂಚೆ ಕಾರ್ಡು ಕವರು ಮತ್ತು ಲೇಖನ ಸಾಮಗ್ರಿಗಳು.....'' ಹೀಗೆ ಪುಂಖಾನುಪುಂಖವಾಗಿ ಗೃಹ ಮತ್ತು ಕಾನೂನು ಮಂತ್ರಿಗಳಾಗಿದ್ದ ಕೆ.ಟಿ. ಭಾಷ್ಯಂ ಅವರ ಮುಂದೆ ಬೇಡಿಕೆಗಳನ್ನು ಇಟ್ಟರು.

ಖಾದ್ರಿ ಶಾಮಣ್ಣನವರ ಮುಖ ಉಗ್ರವಾಗಿತ್ತು. ಅದನ್ನುಕ್ಷಣಕಾಲ ಒಂದೇ ಸಮನೆ ನೋಡಿ ಶ್ರೀ ಕೆ.ಟಿ. ಭಾಷ್ಯಂ ಅಷ್ಟೇ ಉಗ್ರವಾಗಿ ಕೇಳಿದರು. ''ಏನೋ ಮುಖ್ಯವಾದುದನ್ನು ಮರೆತಿರುವಂತಿದೆಯಲ್ಲಾ?'' ಅದೇನೆಂದು ಖಾದ್ರಿ ಶಾಮಣ್ಣ ನವರು ತಬ್ಬಿಬ್ಬಾದರು. ಅವರ ಪೆಚ್ಚು ಮೋರೆ ನೋಡಿ, ಕೆ.ಟಿ. ಭಾಷ್ಯಂ ನಿರುದ್ವೇಗದಿಂದ ಪ್ರಶ್ನಿಸಿದರು. ತಮಿಳು ಭಾಷೆಯಲ್ಲಿ - ''ಸಕ್ಕರೆ ಪೊಂಗಲ್, ಪುಳಿಯೋಗರೆ, ತೇಂಗೊಳಲ್... ಇವುಗಳನ್ನು ಕೇಳಲು ಮರೆತಿರುವಂತಿದೆಯಲ್ಲಾ!''

ಅವರ ಮಾತಿನ ಹಾಸ್ಯ ಅರ್ಥ ಮಾಡಿಕೊಂಡ ಐಯ್ಯಂಗಾರ್ ಖಾದ್ರಿ ಶಾಮಣ್ಣನವರ ಮುಖದ ಉಗ್ರತೆ ಮಾಯವಾಯಿತು. ವಿಶಾಲ ನಗೆ ಅವರ ದಪ್ಪ ಮುಖದಲ್ಲಿ ಅರಳಿತು. ಅವರು ಗಹಗಹಿಸಿ ಜೈಲಿನ ಛಾವಣಿ ಹಾರಿಹೋಗುವಂತೆ ನಗುತ್ತಾ ತಮಿಳಿನಲ್ಲೇ ನುಡಿದರು.

''ಆಮ ! .... ಆಮ ! ಅದೂ ಇರಬೇಕಾದದ್ದೇ.... ಐಯ್ಯಂಗಾರ್ ಖೈದಿಗೆ ಐಯ್ಯಂಗಾರ್ ಮಂತ್ರಿಯ ಕೊಡುಗೆ !'' ಎಂದರು.

''ಕೇವಲ ಐಯ್ಯಂಗಾರಿ ಪುಳ್ಳೆಗಳಿಗೇ ಏಕೆ ? ಇಲ್ಲಿ ಇರೋ ಸಮಸ್ತ ಸತ್ಯಾಗ್ರಹಿಗಳಿಗೂ'' ಎಂದು ನುಡಿದರು ಭಾಷ್ಯಂ ಐಯ್ಯಂಗಾರ್‌ರವರು.

ಎಲ್ಲರೂ ಚಪ್ಪಾಳೆ ತಟ್ಟಿ ಅವರ ಮಾತನ್ನು ಸ್ವಾಗತಿಸಿದರು. ಉಪವಾಸ ಸತ್ಯಾಗ್ರಹ ಪ್ರತಿಯೊಂದು ಬೇಡಿಕೆಗಳನ್ನೂ ಅವರು ಒಪ್ಪಿಕೊಂಡರು. ಸ್ಥಳೀಯ ಕಾರ್ಯಕರ್ತರು ಅವಸರವಸರವಾಗಿ ಒದಗಿಸಿದ್ದ ಹಣ್ಣಿನ ರಸವನ್ನು ಭಾಷ್ಯಂ ಸ್ವಹಸ್ತದಿಂದ ಪ್ರತಿಯೊಬ್ಬರಿಗೂ ನೀಡಿದರು. ನಗೆ-ಘೋಷಣೆ -ವಿಜಯೋತ್ಸಾಹ ಗಳೊಡನೆ ನಮ್ಮ ಆದಿ ಮಾನವಾವಸ್ಥೆಗೆ ಮಂಗಳ ಹಾಡಿದೆವು. ನಾವೆಲ್ಲರೂ ರಾಜಕೀಯ ಖೈದಿಗಳೆಂದು ಪರಿಗಣಿಸಲ್ಪಟ್ಟೆವು. ನಾಲ್ಕು ಗೋಡೆಗಳ ನಡುವಣ ಬಂಧಿಗಳೇ ಆಗಿದ್ದರೂ ಮತ್ತೆ ಮನುಷ್ಯರಂತೆ ಬಾಳತೊಡಗಿದೆವು. ಖಾದ್ರಿ ಶಾಮಣ್ಣನವರ ಅಪ್ರತಿಮ ವಾದ ಸರಣಿ ಮತ್ತು ನಿರೂಪಣಾ ಶೈಲಿ ಅಮೋಘವಾಗಿತ್ತು. ಅದನ್ನು ಅರ್ಧ ಶತಮಾನದ ಬಳಿಕ ಕರಾರುವಾಕ್ಕಾಗಿ ಪುನರ್ನಿರ್ಮಿಸಲು ನಾನು ಅಶಕ್ತ.

ಆಗಿನ ಕಾಲಕ್ಕೆ ಅತ್ಯಂತ ಮೇಧಾವಿಗಳು, ಚಾಣಾಕ್ಷರು ಮತ್ತು ವಾಕ್ಚತುರರು ಎಂದು ಕೀರ್ತಿವೆತ್ತಿದ್ದ ಕೆ.ಟಿ. ಭಾಷ್ಯಂರವರನ್ನು ಅವರ ವಾದ ಸರಣಿ ಚಕಿತಗೊಳಿಸಿತ್ತು. ಅಪ್ರತಿಭರನ್ನಾಗಿಸಿತ್ತು. ಖಾದ್ರಿಯವರು ಪತ್ರಕರ್ತರಾಗದೆ, ಕ್ರಿಮಿನಲ್ ವಕೀಲರೇ ಆಗಿದ್ದರೆ ಬಹುಶಃ ಅವರು ಬಹುದೊಡ್ಡ ವಕೀಲರಾಗಿರುತ್ತಿದ್ದರು. ಅಷ್ಟು ಸೊಗಸಾಗಿ ಅವರು ಅಂದು ನಮ್ಮ ಬೇಡಿಕೆಗಳ ಪಟ್ಟಿ ಮಂಡಿಸಿದರು. ಅವರ ಪ್ರತಿಯೊಂದು ಬೇಡಿಕೆಯ ಹಿಂದೆಯೂ ಜಿ. ಸದಾಶಿವರಾಯರ ದೂರಾಲೋಚನೆ ಮತ್ತು ಅನುಭವ ಅಡಗಿದ್ದಿತ್ತು. ಕೆಲವು ಸತ್ಯಾಗ್ರಹಿಗಳು ಅದೃಷ್ಟ ಮಾಡಿದ್ದರೆಂದೇ ಹೇಳಬೇಕು. ಏಕೆಂದರೆ ಅವರು ಜೈಲಿನ ಅಮಾನುಷ ಪರಿಸ್ಥಿತಿ ಕಳೆದ ಬಳಿಕ ಅಲ್ಲಿಗೆ ಬಂದರು. ದಿನಗಳೆದಂತೆ ಹೆಚ್ಚು ಸತ್ಯಾಗ್ರಹಿಗಳು ದಸ್ತಗಿರಿಯಾಗಿ ಶಿವಮೊಗ್ಗ ಸೆರೆಮನೆಗೆ ಬರುತ್ತಿದ್ದರು.

❊ ❊ ❊ ❊

೯.

ಒಂದುಗೂಡಿದ್ದವರು ಅಗಲಿದೆವು

ತಲೆ ಮರೆಸಿಕೊಂಡು, ಭೂಗತರಾಗಿ ರೈತರ ಸಂಘಟನೆಯಲ್ಲಿ ಗ್ರಾಮಾಂತರಗಳಲ್ಲಿ ತಲ್ಲೀನರಾಗಿದ್ದ ನಾಯಕರುಗಳು ಒಬ್ಬೊಬ್ಬರಾಗಿ ದಸ್ತಗಿರಿಯಾಗಿ ಜೈಲಿಗೆ ಬರತೊಡಗಿದರು. ಶ್ರೀಯುತರುಗಳಾದ ಶಾಂತವೇರಿ ಗೋಪಾಲಗೌಡರು, ಚಿತ್ರದುರ್ಗದ ಗಂಡುಗಲಿ, ಗರುಡಶರ್ಮ, ಯು.ಆರ್. ಅನಂತಮೂರ್ತಿ, ಇವರೆಲ್ಲರೂ ಒಳಕ್ಕೆ ಬಂದರು. ಪ್ರತಿ ದಿನವೂ ಹತ್ತತ್ತು ಸತ್ಯಾಗ್ರಹಿಗಳು ತಂಡತಂಡವಾಗಿ ಜೈಲು ಸೇರುತ್ತಿದ್ದರು. ಶಿವಮೊಗ್ಗ ಜಿಲ್ಲಾ ಕಾರಾಗೃಹ ತುಂಬಿ ಗಿಜಗುಟ್ಟತೊಡಗಿತು.

ಪ್ರತಿದಿನ ನಸುಕಿನಲ್ಲೇ ಹತ್ತಾರು ಜನ ಸತ್ಯಾಗ್ರಹಿಗಳ ತಂಡ, ಬೆಳಗಿನ ತಾಳಗುಪ್ಪ ರೈಲಿನಲ್ಲಿ ಪೋಲೀಸರೊಡನೆ ಸಾಗರದ ಕೋರ್ಟಿಗೆ ವಿಚಾರಣೆಗಾಗಿ ಹೋಗುತ್ತಿದ್ದರು. ಅವರಿಗೆ ಬೆಳಗಿನ ೬ ಗಂಟೆಯೊಳಗೆ ತಿಂಡಿ ಕಾಫಿ ತಯಾರಿಸಿಕೊಡಬೇಕಾಗಿತ್ತು. ಏಳರಿಂದ ಎಂಟು ಗಂಟೆಯೊಳಗೆ ಇನ್ನುಳಿದ ನೂರಾರು ಸತ್ಯಾಗ್ರಹಿಗಳಿಗೆ ಬೆಳಗಿನ ಕಾಫಿ ತಿಂಡಿ, ಮಧ್ಯಾಹ್ನದಅಡಿಗೆ, ಸಂಜೆ ಲಘು ಉಪಹಾರ, ಟೀ ಮತ್ತೆ ರಾತ್ರಿ

ಎಲ್ಲರಿಗೂ ಊಟ. ಕೋರ್ಟಿಗೆ ಹೋಗಿದ್ದ ತಂಡದವರು ರಾತ್ರಿ ೧೦-೩೦ಕ್ಕೆ ಹಿಂತಿರುಗುತ್ತಿದ್ದರು. ಅವರೆಲ್ಲರಿಗೂ ಊಟ. ಇಷ್ಟು ಸಾಲದು ಎಂಬಂತೆ ಖಾಯಿಲೆ ಬಿದ್ದವರಿಗೆ ಪಥ್ಯದ ಊಟ - ಗಂಜಿ ... ಇತ್ಯಾದಿ ಎಲ್ಲವನ್ನು ಕ್ಲುಪ್ತಕಾಲದಲ್ಲಿ ಅತೃಪ್ತಿ ತಲೆದೋರದಂತೆ ವಿಚಕ್ಷಣೆಯಿಂದ ಹಂಚಿಕೆ ಮಾಡುವ ಹೊಣೆಗಾರಿಕೆ ಆಹಾರಮಂತ್ರಿಗೆ ಸೇರಿತ್ತು.

ನಾನು ಮಾತ್ರ ವಿದ್ಯಾಮಂತ್ರಿಯಾಗಿದ್ದುಕೊಂಡು ಎಲ್ಲರ ಮೆಚ್ಚುಗೆ ಗಳಿಸಿಕೊಂಡು ಪಾಠ ಪ್ರವಚನಗಳಲ್ಲಿ ತಲ್ಲೀನನಾಗಿದ್ದೆ. ಎ.ಹೆಚ್. ಶಿವಾನಂದಸ್ವಾಮಿ, ಹೆಲ್ತ್ ಮಿನಿಸ್ಟರ್ ಆಗಿ ಸಂಜೆಯ ಆಟ-ಪಾಠ-ವ್ಯಾಯಾಮಗಳಲ್ಲಿ ಆದಷ್ಟು ಸತ್ಯಾಗ್ರಹಿಗಳನ್ನು ತೊಡಗಿಸಿಕೊಳ್ಳುತ್ತಿದ್ದರು. ಆಗ ಒಮ್ಮೆ ನಾನು ಎಸೆದ ೧೮ ಪೌಂಡ್ ಕಬ್ಬಿಣದ ಗುಂಡು ಕ್ಷಣಿಕ ಬೇ-ಹುಷಾರಾದ ಶಿವಾನಂದಸ್ವಾಮಿಗಳ ಎದಗೆ 'ಡಬ್' ಎಂದು ಬಡಿಯಿತು. ಅವರು ತಮ್ಮ ಎದೆಗೆ ಅಪ್ಪಳಿಸಿದ ಆ ಗುಂಡನ್ನು ಎರಡೂ ಕೈಗಳಿಂದ ಹಿಡಿದು, ಎದೆಗೆ ಅವಚಿಕೊಂಡು, ನೆಲಕ್ಕೆ ಕುಸಿದು ಕುಕ್ಕರುಗಾಲಿನಲ್ಲಿ ಕುಳಿತುಕೊಂಡರು. ನಾವೆಲ್ಲಾ ಒಂದು ರಿಂಗ್ ಮಾಡಿಕೊಂಡು ವಿವಿಧ ವಿನ್ಯಾಸಗಲ್ಲಿ ಆ ೧೮ ಪೌಂಡ್ ಕಬ್ಬಿಣದ ಗುಂಡನ್ನು ಒಬ್ಬರಿಂದೊಬ್ಬರಿಗೆ ಎಸೆಯುತ್ತಿದ್ದು ಆರೇಳು ಕಟ್ಟಾಳುಗಲೇ ಇದ್ದೆವು. ಈಗ ನಾವೆಲ್ಲಾ ಭಯಗ್ರಸ್ತರಾಗಿ ಆಟ ನಿಲ್ಲಿಸಿ ಕಾತರದಿಂದ ಅವರ ಸುತ್ತಲೂ ನೆರೆದೆವು. ಅವರ ಬಾಯಿ, ಮೂಗು, ಕಣ್ಣುಗಳಲ್ಲಿ ರಕ್ತ ಕಿತ್ತುಕೊಳ್ಳಬಹುದು ಎಂದು ನಿರೀಕ್ಷಿಸಿ ಭಯದಿಂದ ಥರಥರ ನಡುಗುತ್ತಿದ್ದೆವು.

ಆದರೆ ಒಂದೆರಡು ನಿಮಿಷಗಳಲ್ಲೇ ಸ್ವಾಮಿಗಳು ಆ ಆಘಾತದಿಂದ ಚೇತರಿಸಿಕೊಂಡು, ಒಮ್ಮೆ ದೀರ್ಘವಾಗಿ ಉಸಿರೆಳೆದುಕೊಂಡು, ತಲೆಯನ್ನು ಮೇಲಕ್ಕೆತ್ತಿ ನಸುನಕ್ಕರು. ಅದನ್ನು ಕಂಡು ನನಗೆ ಹೋದ ಜೀವ ಬಂದಂತಾಯ್ತು. ಅವರು ಮೇಲೆದ್ದು ನಿಲ್ಲಲು ಹೋದರು. ಅವರ ಕೈಗಳಿಂದ ಆ ೧೮ ಪೌಂಡ್ ಕಬ್ಬಿಣದ ಗುಂಡನ್ನು ನಾನು ಪಡೆದುಕೊಂಡು ನೆಲಕ್ಕೆ ಹಾಕಿದೆ. ಅವರ ಎರಡೂ ತೋಳುಗಳನ್ನು ಹಿಡಿದು ಅವರು ಮೇಲೆದ್ದು ನಿಲ್ಲಲು ಸಹಕರಿಸಿದೆ. ನಮ್ಮ ಕಾತರಭರಿತ ನೋಟಗಳಿಂದ ವಿಚಲಿತರಾದ ಸ್ವಾಮಿಗಳು, ''ನನಗೆ ಏನೇನೂ ಆಗಿಲ್ಲ, ಗಾಬರಿಯಾಗಬೇಡಿ'' ಎಂದು ಹೇಳಿದ ಬಳಿಕ, ನಾವೆಲ್ಲಾ ಸಮಾಧಾನಗೊಂಡು ನಿಟ್ಟುಸಿರು ಬಿಟ್ಟೆವು.

ಇಲ್ಲಿ ಇನ್ನೊಂದು ವಿಚಾರವನ್ನು ತಿಳಿಸಬೇಕು. ಉಪವಾಸ ಸತ್ಯಾಗ್ರಹ ಯಶಸ್ವಿಯಾಗಿ ಮುಕ್ತಾಯಗೊಂಡ ಮೇಲೆ ನಾವು ಮತ್ತೆ ಮನುಷ್ಯರಾಗಿದ್ದೆವು. ಹಲ್ಲುಪುಡಿ, ಸೋಪ್, ಮೈಸೋಪು, ತಲೆಗೆ ಎಣ್ಣೆ, ಹೊಸ ಬಟ್ಟೆ, ವೃತ್ತಪತ್ರಿಕೆಗಳು, ಎಣ್ಣೆ - ಬೆಣ್ಣೆ, ತರಕಾರಿ, ಸಿಗರೇಟು ಎಲ್ಲವೂ ದೊರೆಯಿತು.

'ಸುಖ ಸಿರಿ ಸಂಪತ್ತು ದೌರ್ಬಲ್ಯಗಳಿಗೆ ದೂಡುತ್ತವೆ' ಎಂಬ ಸತ್ಯ ಕೂಡಲೇ ಪ್ರಕಟವಾಯಿತು. ಫುಡ್ ಮಿನಿಸ್ಟರ್ ಆಗಿದ್ದ ಒಬ್ಬ ಮೈಸೂರಿನ ತರುಣ ಸತ್ಯಾಗ್ರಹಿ ಮದಿರೆ, ಮದಿರಾಕ್ಷಿಯರ ಬಲೆಗೆ ಬಿದ್ದು ಸತ್ಯಾಗ್ರಹಿಗಳನ್ನು ವಂಚಿಸತೊಡಗಿದ. ಜೈಲು ಕಂಟ್ರಾಕ್ಟದಾರನ ಬದ್ಮಾಶ್‌ಗಿರಿಗೆ ಅವನು ಬಲಿಯಾದ.

'ಎ ಕ್ಲಾಸ್' ಖೈದಿಗಳಾಗಿದ್ದ ಸುಮಾರು ಮುನ್ನೂರು ನಾನ್ನೂರು ಸತ್ಯಾಗ್ರಹಿಗಳಿಗೂ ಸಾಕಷ್ಟು ಜೀವನೋಪಯೋಗೀ ವಸ್ತುಗಳೂ, ಬ್ಲೇಡ್, ಸಿಗರೇಟ್, ಟಾಲ್ಕಮ್ ಸೋಪ್ ಮೊದಲಾದ ಭೋಗ ವಸ್ತುಗಳೂ, ವಾರಕ್ಕೊಮ್ಮೆಯ ವಿಶೇಷ ಭೋಜನಕ್ಕಾಗಿ ಸಾಕಷ್ಟು ಬೆಣ್ಣೆ, ಸಕ್ಕರೆ ಇತ್ಯಾದಿ ವಸ್ತುಗಳೂ ಖೈದಿಗಳಿಗೆ ಕಾನೂನು ರೀತ್ಯಾ ಸರಬರಾಜು ಆಗುತ್ತಿತ್ತು. ಅದರಲ್ಲಿ ಬಹುಪಾಲು ಒಳ್ಳೆಯ ವಸ್ತುಗಳನ್ನು ಜೈಲು ಕಂಟ್ರಾಕ್ಟದಾರನಿಗೇ ಹಿಂದಕ್ಕೆ ಒಪ್ಪಿಸಿ, ಅವನಿಂದ ಹಣ ಪಡೆದು, ವಿಸ್ಕಿ ಬ್ರಾಂದಿಗಳನ್ನು ಪಡೆದು 'ಖಾಯಿಲೆ ! ಖಾಯಿಲೆ !' ಎಂದು ಮೆಗ್ಗಾನ್ ಆಸ್ಪತ್ರೆಗೆ ಪದೇ ಪದೇ ಭೇಟಿ ನೀಡುತ್ತಾ, ಅಲ್ಲಿನ ಕೆಲವು ನರ್ಸ್‌ಗಳೊಡನೆ ಸಂಬಂಧವಿರಿಸಿ ಕೊಂಡು ; ಜೈಲಿನಲ್ಲಿರುವ ಸತ್ಯಾಗ್ರಹಿಗಳಿಗೆ ಕಲ್ಲು ಮಣ್ಣಿನ ಆಹಾರ, ಕೆಟ್ಟ ತರಕಾರಿ, ಕಳಪೆ ಊಟ ಹಾಕಿಸತೊಡಗಿದ. ಜೈಲಿನಲ್ಲಿ ನಿತ್ರಾಣಗೊಂಡಿದ್ದ ಮತ್ತು ನಿಸ್ಸಹಾಯಕರಾಗಿದ್ದ ನೂರಾರು ರೈತರು, ವಿದ್ಯಾರ್ಥಿಗಳು ಈ ದುರ್ವರ್ತನೆಯಿಂದ ತಲ್ಲಣಿಸಿ ಹೋದರು. ಈ ಸಂಗತಿಯನ್ನು ಗಮನಿಸಿದ ಸದಾಶಿವರಾಯರು ಸಾಪ್ತಾಹಿಕ ಸಭೆಯಲ್ಲಿ ಈ ವಿಚಾರವನ್ನಿಟ್ಟು ಚರ್ಚಿಸಿ, ಕೂಡಲೇ ಖಾತೆಗಳ ಮರುಹಂಚಿಕೆ ಮಾಡಿದರು.

ಇದರ ಸುಳಿವು ತಿಳಿದೋ ಏನೋ ಅಂದಿನ ಸಭೆಗೆ ಬಾರದೆ ಫುಡ್ ಮಿನಿಸ್ಟರ್ ಆಗಿದ್ದವನು ಖಾಯಿಲೆ ಎಂದು ಮೆಗ್ಗಾನ್ ಆಸ್ಪತ್ರೆ ಸೇರಿದ್ದ. ಖಾತೆಗಳ ಮರುಹಂಚಿಕೆ ಆದ ಸುದ್ದಿ ತಿಳಿದೊಡನೆಯೇ ಆ ಮೈಸೂರಿನ ರೋಮಿಯೋ ಜೈಲಿನೊಳಕ್ಕೆ ಮತ್ತೆ ಬರಲು ಹೆದರಿ, ಮೆಗ್ಗಾನ್ ಆಸ್ಪತ್ರೆಯಿಂದಲೇ ಹೇಗೋ ಪಲಾಯನ ಮಾಡಿದ. ಮತ್ತೆ ಜೈಲಿಗೆ ಬರುವ ಸಾಹಸ ಮಾಡಲಿಲ್ಲ. ಅಲ್ಲಿ ತನಗೆ ಎಂಥ ಶಾಸ್ತಿ ಕಾದಿದೆ ಎಂದು ಅವನಿಗೆ ಗೊತ್ತಿತ್ತು ಎಂದು ಕಾಣುತ್ತದೆ.

ಅಂದಿನ ಸಭೆಯಲ್ಲಿ ಶ್ರೀ ಖಾದ್ರಿ ಶಾಮಣ್ಣನವರು, ಸದಾಶಿವರಾಯರು, ಶಿವಾನಂದಸ್ವಾಮಿಗಳು ಮತ್ತಿತರ ಅನೇಕ ಗಣ್ಯರು ನಾನೇ ಹೊಸ ಆಹಾರಮಂತ್ರಿ ಯಾಗಬೇಕೆಂದು ಸರ್ವಾನುಮತದಿಂದ ಸೂಚಿಸಿ, ನಾನೇ ಆ ಹುದ್ದೆಗೆ ಸೂಕ್ತವ್ಯಕ್ತಿ ಎಂದು ಆಯ್ಕೆ ಮಾಡಿಬಿಟ್ಟರು. ''ಬೇಡ ! ಬೇಡ ! ನನಗೆ ಆ ವಿಚಾರವಾಗಿ ಏನೇನೂ ಪರಿಶ್ರಮವಿಲ್ಲ'' ಎಂದು ಎಷ್ಟು ನಿರಾಕರಿಸಿದರೂ ಬಿಡದೆ, ''ನಾವೆಲ್ಲಾ ನಿನ್ನ ಬೆಂಬಲಕ್ಕೆ ಇರುತ್ತೇವೆ. ನೀನು ಈಗ ತೆಪ್ಪಗೆ ಒಪ್ಪಿಕೋ ! ಸಭೆಯಲ್ಲಿ ಇನ್ನೂ ಮಹತ್ವದ ವಿಚಾರಗಳು ತೀರ್ಮಾನವಾಗಬೇಕಾಗಿದೆ'' ಎಂದು ಒತ್ತಾಯ ಮಾಡಿದರು. ನಾನು

ಗತ್ಯಂತರವಿಲ್ಲದೆ ಪ್ರತಿಭಟಿಸುತ್ತಿದ್ದರೂ ಸಮ್ಮತಿಸಬೇಕಾಯಿತು. ಎಷ್ಟೇ ಆಗಲೀ ; ಕಾಮ್ರೇಡ್‌ಗಳ ಮಾತು ಮೀರಲು ಸಾಧ್ಯವೇ ?

ಈ ಜವಾಬ್ದಾರಿ ಜೈಲಿನಲ್ಲಿ ನನ್ನ ಜೀವನ ವಿಧಾನವನ್ನು ಸಂಪೂರ್ಣವಾಗಿ ಬದಲಾಯಿಸಿತು. ಪುಸ್ತಕ ಲೇಖನಿ ದೂರ ಸರಿದವು. ಸೌಟು - ಡಬರಿ - ಈಳಿಗೆ ಮಣೆಗಳು ಹತ್ತಿರ ಬಂದುವು. ಸುಖನಿದ್ರೆ ಕನಸಾಯಿತು. ಅಲಾರಂ ಗಡಿಯಾರ ಇಟ್ಟುಕೊಂಡು ಬೆಳಗಿನ ಝಾವ ೩ ಗಂಟೆಗೆ ಎದ್ದರೆ, ಹಾಸಿಗೆ ಅಲ್ಲ ಈಚಲು ಚಾಪೆ ಕಾಣಲು ರಾತ್ರಿ ೧೧ ಗಂಟೆ ಆಗುತ್ತಿತ್ತು. ಆದರೆ ಈ ಕಾರ್ಯವನ್ನು ಒಂದು ಸವಾಲ್ ಆಗಿ ಸ್ವೀಕರಿಸಿ ; ಬೆಸ್ಟ್ ಫುಡ್ ಮಿನಿಸ್ಟರ್ ಎಂಬ ಹೆಸರು ಪಡೆದೆ. ಬೇಗ ಈ ಹುದ್ದೆಯಿಂದ ತಪ್ಪಿಸಿಕೊಂಡು ಹೋಂ ಮಿನಿಸ್ಟರ್ ಆದೆ.

ಜೈಲಿನ ಒಳಗಡೆಯಾಗಲೀ, ಹೊರಗಡೆಯಾದಲೀ ಯಾವುದಾದರೂ ಸಾರ್ವಜನಿಕ ಹೊಣೆಗಾರಿಕೆಯನ್ನು ಹೊತ್ತಾಗ ಆ ಕರ್ತವ್ಯದ ಪಾಲನೆಯಲ್ಲಿ ಸಂಪೂರ್ಣವಾಗಿ ತಲ್ಲೀನನಾಗಿ ಬಿಡುವುದು ನನ್ನ ಸ್ವಭಾವ. ನನ್ನನ್ನು 'ಬೆಸ್ಟ್ ಫುಡ್ ಮಿನಿಸ್ಟರ್' ಎಂದೆಲ್ಲಾ ಹೊಗಳಿ ಹೊಗಳಿ ನನ್ನನ್ನು ಅಡಿಗೆ ಭಟ್ಟನನ್ನಾಗಿಯೇ ಮಾಡಿಬಿಟ್ಟಿದ್ದರು ನನ್ನ ಜೈಲಿನ ಸಂಗಾತಿಗಳು ! ಓದಿಲ್ಲ ಬರಹವಿಲ್ಲ ; ಕಡೆಗೆ ವೃತ್ತಪತ್ರಿಕೆಗಳನ್ನೂ ಓದುವಷ್ಟು ವಿರಾಮವಿರಲಿಲ್ಲ. ಬರೀ ಕೆಲಸ, ಕೆಲಸ, ಉಸ್ತುವಾರಿ, ಹಾಗೆ ಮಾಡು, ಹೀಗೆ ಮಾಡು ಎಂದು ಹತ್ತಾರು ಜನರ ಗ್ಯಾಂಗ್ ಕಟ್ಟಿ ದುಡಿಸಿಕೊಳ್ಳುವುದು, ದುಡಿಯುವುದು, ಇದೇ ನನ್ನ ದಿನಚರಿಯಾಗಿತ್ತು. ಸದಾಶಿವರಾಯರು, ಖಾದ್ರಿ ಶಾಮಣ್ಣನವರು, ಎ.ಎಚ್. ಶಿವಾನಂದಸ್ವಾಮಿಗಳು ಇವರ ನಿಕಟ ಸಂಪರ್ಕವಾದದ್ದೊಂದೇ ಲಾಭ.

❊ ❊ ❊ ❊

೧೦.

ತುಂಗಾಸ್ನಾನ ಮಾಡಿದ ಕಿನ್ನರರು

ಹೋಂ ಮಿನಿಸ್ಟರ್ ಆದ ಮೇಲೆ ಬಹು ಸ್ವಾರಸ್ಯ ಪ್ರಕರಣಗಳು ಗೊತ್ತಾದವು. ನಾನು ಎಲ್ಲಾ ಬ್ಯಾರಕ್ಕುಗಳಿಗೂ ಐಷಾರಾಮವಾಗಿ ಹೋಗುತ್ತಿದ್ದೆ. ಅನೇಕ ಸತ್ಯಾಗ್ರಹಿಗಳನ್ನು ಭೇಟಿಯಾಗುತ್ತಿದ್ದೆ. ಅವರ ಸಮಸ್ಯೆಗಳನ್ನು ಅರಿತುಕೊಳ್ಳುತ್ತಿದ್ದೆ. ಅವರ ಕಥೆಗಳನ್ನು ಕೇಳುತ್ತಿದ್ದೆ. ಅವರು ಹೇಗೆ ದಸ್ತಗಿರಿಯಾದರು, ಅವರ ಅನುಭವಗಳೇನು ಎಂದೆಲ್ಲಾ ಗೊತ್ತಾಗುತ್ತಿತ್ತು. ರಮ್ಯವಾದ, ಆಶ್ಚರ್ಯಕರವಾದ, ಸ್ಫೂರ್ತಿದಾಯಕವಾದ ಕೆಲವು ಸಂಗತಿಗಳು ತಿಳಿದುವು. ಅಸಹ್ಯಕರವಾದ ಮತ್ತೆ ಕೆಲವು ಸಂಗತಿಗಳೂ ತಿಳಿದುವು.

ನಾನು ಮತ್ತೆ ಜೈಲಿನಲ್ಲಿ ವ್ಯಾಸಂಗ ಗೋಷ್ಠಿಗಳನ್ನು ಪುನರ್ವ್ಯವಸ್ಥೆ ಮಾಡಲು ಸಾಧ್ಯವೇ ಆಗಲಿಲ್ಲ. ಕೋರ್ಟಿನ ವ್ಯವಹಾರ ಚುರುಕಾಯಿತು. ಮೊದಲು ತಿಂಗಳು ಎರಡು ತಿಂಗಳಿಗೊಮ್ಮೆ ಬೀಳುತ್ತಿದ್ದ ಕೋರ್ಟಿನ ಹಿಯರಿಂಗ್‌ಗಳು ಈಗ ಬೇಗ ಬೇಗ ನಿಗದಿಯಾಗುತ್ತಿದ್ದುವು. ಸಾಗರಕ್ಕೆ ಓಡಾಟ ಹೆಚ್ಚಾಯಿತು.

ದಾವಣಗೆರೆಯ ಕೆ. ವೀರಭದ್ರಪ್ಪ ಎಂಬ ಸಮಾಜವಾದಿ ನಾಯಕರು ಮತ್ತು ಸತ್ಯಾಗ್ರಹಿಗಳು ನಮ್ಮ ವಕಾಲತ್ತು ವಹಿಸಿಕೊಳ್ಳಲು ಪ್ರತಿ ಹಿಯರಿಂಗ್‌ಗೂ ಬರುತ್ತಿದ್ದರು. ನಮ್ಮ ಪಾಡಿಗೆ ನಾವು ಶಿವಮೊಗ್ಗಕ್ಕೆ ಬೆಳಗಿನ ಝಾವ ಎದ್ದು, ಸಿದ್ಧರಾಗಿ, ಪೋಲೀಸ್ ವ್ಯಾನಿನಲ್ಲಿ ರೈಲ್ವೇ ಸ್ಟೇಷನ್ನಿಗೆ ಹೋಗುತ್ತಿದ್ದೆವು. ಅಲ್ಲಿಂದ ಸಾಗರಕ್ಕೆ ರೈಲಿನಲ್ಲಿ ಪ್ರಯಾಣ. ಆನಂತರ ಕೋರ್ಟಿಗೆ ಹಾಜರಿ. ಆನಂತರ ಶಿವಮೊಗ್ಗಕ್ಕೆ ಹಿಂತಿರುಗುತ್ತಿದ್ದೆವು.

ಸಾಗರಕ್ಕೆ ಭೇಟಿಗಳು ಹೆಚ್ಚಾಗುತ್ತಾ ಹೋದುವು. ಜೈಲಿನಲ್ಲಿದ್ದ ಸತ್ಯಾಗ್ರಹಿಗಳ ಸಂಖ್ಯೆ ಕಡಿಮೆಯಾಗುತ್ತಾ ಹೋಯಿತು. ಒಂದು ದಿನ ನಮ್ಮ ತಂಡವನ್ನು ಪೋಲೀಸರು ಸಾಗರ ಕೋರ್ಟಿಗೆ ಕರೆದೊಯ್ದರು. ವಕೀಲ ಕೆ.ವೀರಭದ್ರಪ್ಪನವರೂ ಬಂದಿದ್ದರು. ನಾಲ್ಕಾರು ನಿಮಿಷ ಕೋರ್ಟಿನಲ್ಲಿ ಮಾತುಕತೆಯಾಯ್ತು. ಹಠಾತ್ತನೆ ನ್ಯಾಯಾಧೀಶರು ನಮ್ಮೆಲ್ಲರನ್ನೂ ಬಿಡುಗಡೆ ಮಾಡಿಬಿಟ್ಟರು. ಪೋಲೀಸರು ನಮ್ಮನ್ನು ಬಿಟ್ಟು ತಮ್ಮ ಪಾಡಿಗೆ ತಾವು ಹೋಗಿಬಿಟ್ಟರು.

ಕ್ಷಣಕಾಲ ನಾವು ಅಪ್ರತಿಭರಾದೆವು. ಈ ಹಠಾತ್ ಬಿಡುಗಡೆಯನ್ನು ನಾವು ನಿರೀಕ್ಷಿಸಿಯೇ ಇರಲಿಲ್ಲ. ನಮ್ಮ ಬಟ್ಟೆ ಬರೆಗಳು ಜೈಲಿನಲ್ಲೇ ಇದ್ದುವು. ನಮ್ಮ ಊರುಗಳು ನೂರಾರು ಮೈಲಿ ದೂರದಲ್ಲಿದ್ದುವು. ನಮ್ಮ ಬಳಿ ಹಣವಿರಲಿಲ್ಲ. ನಮ್ಮ ಹೊಟ್ಟೆಗಳು ಹಸಿಯುತ್ತಿದ್ದುವು.

''ಏನಾದ್ರೂ ಮಾಡಿಕೊಳ್ಳಿ, ಎಲ್ಲಾದರೂ ಹೋಗಿ... ನಿಮಗೆ ಗುಡ್‌ಬೈ ! '' ಎಂದು ಬಿಟ್ಟರು ಪೋಲೀಸರು. ಅವರೊಡನೆ ನಾವೂ ರೈಲ್ವೇ ನಿಲ್ದಾಣಕ್ಕೆ ಬಂದೆವು.

''ನಿಮ್ಮ ಟಿಕೆಟ್‌ಗಳನ್ನು ನೀವೇ ತೆಗೆದುಕೊಳ್ಳಬೇಕು '' ಎಂದು ಪೋಲೀಸರು ಆರಾಮವಾಗಿ ರೈಲು ಹತ್ತಿದರು. ನಾವು ಅವರಿಗಿಂತಲೂ ಆರಾಮವಾಗಿ ಅಂದರೆ ಟಿಕೆಟ್ ಲೆಸ್ ಟ್ರಾವಲರ್ಸ್ ಆಗಿ ರೈಲು ಹತ್ತಿ ಶಿವಮೊಗ್ಗ ಸೇರಿದೆವು. ಆಗಲೇ ರಾತ್ರಿ ಎಂಟು ಗಂಟೆಯಾಗಿತ್ತು. ಸ್ಟೇಷನಿನ್ನನ ಪ್ಲಾಟ್‌ಫಾರಂನಲ್ಲೇ ಪೋಲೀಸ್ ದಫೇದಾರ್ ಹೇಳಿದ. ''ನಾವು ವ್ಯಾನ್‌ನಲ್ಲಿ ನಿಮ್ಮ ಕೂರಿಸುವಹಾಗಿಲ್ಲ. ನೀವು ನಡೆದೇ ಜೈಲಿಗೆ ಬರಬೇಕು. ಅಲ್ಲಿ ಸಹ ನಿಮ್ಮನ್ನು ಒಳಗೆ ಬಿಡೋಲ್ಲ''

''ಆಯ್ತು... ಆಯ್ತು . ಈಗ ಹೊರಕ್ಕೇ ಹೋಗೋಣ'' ಎನ್ನುತ್ತಾ ನಮ್ಮ ಗುಂಪಿನವರೆಲ್ಲಾ ಒಟ್ಟಿಗೇ ಆಲರ್ಟ್ ಆಗಿರುವಂತೆ ಹೇಳಿ ಟಿಕೆಟ್ ಕಲೆಕ್ಟರ್ ಬಳಿ ಬಂದೊಡನೆಯೇ

'ಇಂಕಿಲಾಬ್ ! .... ' ಎಂದು ಕೂಗಿದೆ.

ಹದಿನಾರು ರಾಕ್ಷಸ ಗಂಟಲುಗಳು ಒಟ್ಟಾಗಿ ಕೂಗಿದುವು. ... 'ಜಿಂದಾಬಾದ್!'

ಇಡೀ ರೈಲ್ವೇ ನಿಲ್ದಾಣ ಬೆಕ್ಕಸ ಬೆರಗಾಗಿ ನಿಂತಿತು ! ನಾನು ಮತ್ತು ನಮ್ಮತಂಡ ಪಿರಂಗಿಯ ಗುಂಡಿನಂತೆ ರೈಲ್ವೇ ಗೇಟನ್ನು ದಾಟಿ, ಪೋಲೀಸ್ ವ್ಯಾನ್ ಹತ್ತಿ ಕುಳಿತು ಕೊಂಡೆವು. ಪೋಲೀಸಿನವರು ತೆಪ್ಪಗೆ ನಮ್ಮನ್ನು ಜೈಲಿಗೆ ಕರೆದೊಯ್ದರು. ಜೈಲಿನ ಒಳಕ್ಕೆ ಹೋದೆವು. ಅಲ್ಲಿ ನಮಗೆ ಕೊನೆಯ ಊಟವಾಯ್ತು. ಎಲ್ಲರೂ ಇಷ್ಟು ದಿನ ಸಂಗಾತಿಗಳಾಗಿದ್ದ ಜನರಿಂದ ಬೀಳ್ಕೊಂಡು ಹೊರಕ್ಕೆ ಬಂದೆವು. ಭಾವೋದ್ವೇಗದ ಕೆಲವು ಕಡೆಯ ಕ್ಷಣಗಳು ಮಾತ್ರ ಚಿರಸ್ಮರಣೀಯ.

ರಾತ್ರಿ ಶಿವಮೊಗ್ಗ ಪೇಟೆ ಮಲಗುವ ವ್ಯವಸ್ಥೆ ಮಾಡಿಕೊಳ್ಳುತ್ತಿತ್ತು. ನಾವು ನೇರವಾಗಿ ರಾಮಣ್ಣ ಶೆಟ್ಟಿ ಪಾರ್ಕಿನ ಮುಂದೆ ಇದ್ದ ತುಂಗಾನದಿಯ ಮರುಳು ದಂಡೆಗೆ ಬಂದೆವು. ಒಂದು ಟವೆಲ್ಲಿನ ತುಂಬಾ ಹಾಕಿಸಿಕೊಂಡು ಬಂದಿದ್ದ ಕಡಲೆಕಾಯಿ ತಿನ್ನುತ್ತಾ ತುಂಗಾ ನದಿಯ ಮರಳು ದಂಡೆಯ ಮೇಲೆ, ಜುಳು ಜುಳು ಹರಿಯುವ ನದಿಯ ಶಾಖೆಗಳ ಮಧ್ಯೆ, ಹೊಳೆಯುವ ನಕ್ಷತ್ರಗಳ ಕೆಳಗೆ ಇಡೀ ರಾತ್ರಿ ಹಾಡುತ್ತಾ ಕುಣಿಯುತ್ತಾ ಜಲಕ್ರೀಡೆಯಾಡುತ್ತಾ ಕಳೆದೆವು. ಮರಳು ದಿನ್ನೆಗಳ ಮೇಲೆ, ಕಿನ್ನರರಂತೆ ಕಾಲಕಳೆದು ಅಲ್ಲೇ ಮಲಗಿ ನಿದ್ರೆ ಹೋದೆವು.

ಮಾರನೆಯ ಪ್ರಾತಃಕಾಲ ಬಳಿಯಲ್ಲೇ ಇದ್ದ ಪಾರ್ಟಿ ಆಫೀಸಿಗೆ ಹೋದೆವು. ಅಣ್ಣಯ್ಯ ಎಂದೇ ಜನಪ್ರಿಯರಾಗಿದ್ದ ವೈ.ಆರ್. ಪರಮೇಶ್ವರಪ್ಪ ಅಲ್ಲಿ ನಮಗಾಗಿ ಕಾಯುತ್ತಿದ್ದರು.

ಒಂದು ಸಣ್ಣ ಸಭೆ ಮಾಡಿದೆವು. ಸತ್ಯಾಗ್ರಹ ಸಮಾಪ್ತಗೊಳ್ಳುತ್ತಿತ್ತು. ಆದರೆ ಮೂಲ ಸಮಸ್ಯೆ ಕೊನೆಗೊಂಡಿರಲಿಲ್ಲ. ಭಯೋತ್ಪಾದನೆಯ ಉಗ್ರತೆ ತಗ್ಗಿತ್ತು ಆದರೆ ಪರಸ್ಪರ ನಂಬಿಕೆ, ದ್ವೇಷ ಮಾಯವಾಗಿರಲಿಲ್ಲ. ಕ್ರೌರ್ಯದ ಬೀಡಾಗಿದ್ದ ಕಾಗೋಡು ಈಗ ಧೈರ್ಯ, ಆತ್ಮವಿಶ್ವಾಸಗಳ ನೆಲೆವೀಡಾಗಿತ್ತು. ಅಹಿಂಸೆಯ ಕವಚ ತೊಟ್ಟ ಗೇಣಿದಾರರ ಅಭೇದ್ಯ ಕೋಟೆಯಾಗಿತ್ತು.

ಅವಿವೇಕ, ದರ್ಪ ಮತ್ತು ಅಟ್ಟಹಾಸದಿಂದ ಹಿಂಸಾರತಿಯಲ್ಲಿ ಸರ್ಕಾರ ಮತ್ತು ಜಮೀನ್ದಾರರು ನಿರತರಾಗಿದ್ದರೂ ಸಹ ರೈತರು ಅತ್ಯಂತ ಶಾಂತಿ ಮತ್ತು ಸಹನೆಯನ್ನು ಪ್ರದರ್ಶಿಸಿದ್ದರು. ಶ್ರೇಷ್ಠ ಮಟ್ಟದ ನಾಯಕ ಶ್ರೀ ಶಾಂತವೇರಿ ಗೋಪಾಲ ಗೌಡರಿಂದ ಈ ಪವಾಡ ಸಾಧ್ಯ . ಅವರು ಅಹಿಂಸೆಯ ಕಡಿವಾಣವನ್ನು ಸ್ವಲ್ಪ ಸಡಿಲಿಸಿದ್ದರೂ ಸಾಕಾಗಿತ್ತು ; ಇಡೀ ಮಲೆನಾಡು ಹಿಂಸೆ, ಪ್ರತಿಹಿಂಸೆ, ರಕ್ತಪಾತಗಳ ಬೀಡಾಗಿ ಮತ್ತೊಂದು ತೆಲಂಗಾಣವೋ, ಸಿಂಹಳವೋ ಆಗಿ ಪರಿವರ್ತನೆಗೊಳ್ಳುತ್ತಿತ್ತು. ಜಮೀನ್ದಾರರ ಮನೆಗಳು ಬೆಂಕಿಯ ಕೆನ್ನಾಲಿಗೆಗೆ ಆಹುತಿಯಾಗುತ್ತಿದ್ದುವು. ಗೇಣಿದಾರರು ಮತ್ತು ಜಮೀನ್ದಾರರ ರಕ್ತಸಿಕ್ತ ದೇಹಗಳು ಮಲೆನಾಡಿನ ಗದ್ದೆಗಳಲ್ಲಿ

ತೋಟಗಳಲ್ಲಿ ಹೆಣಗಳಾಗಿ ಇಟ್ಟಾಡುತ್ತಿದ್ದವು. ಹಿಂಸಾರತಿಯ ಆರಂಭಕ್ಕೆ ಹೆಚ್ಚು ಶ್ರಮ ಬೇಡ. ರಕ್ತಕ್ಕೆ ಆ ರಕ್ತಬೀಜಾಸುರನ ಗುಣವಿದೆ. ಒಂದು ತೊಟ್ಟು ರಕ್ತ ಚೆಲ್ಲಿದರೆ ಸಾಕು. ಒಂದು ಬಳ್ಳ ರಕ್ತವನ್ನು ಪ್ರತೀಕಾರವಾಗಿ ಬೇಡುತ್ತದೆ. ಒಂದು ಗುಡಿಸಲಿಗೆ ಬೆಂಕಿ ಇಟ್ಟರೆ ಸಾಕು ಒಂದು ಹಳ್ಳಿಯೇ ಹತ್ತಿ ಉರಿಯುತ್ತದೆ. ಆದರೆ ಈ ಅವಘಡದಿಂದ ಮಲೆನಾಡನ್ನು ಪಾರು ಮಾಡಿದ ಮಹಾತ್ಮ ಆ ಶಾಂತವೇರಿಯ ಅಶಾಂತ ಸಂತ ಗೋಪಾಲಗೌಡರು. ಇನ್ನೂ ಶಾಸಕರೂ ಆಗದೆ, ತಮ್ಮ ಎಳೆ ಯೌವ್ವನದಲ್ಲೇ ಯಾವ ಪ್ರೌಢನಾಯಕನಿಗೂ ಇಲ್ಲದೆ ಇರುವ ದೂರಾಲೋಚನೆ, ಹೊಣೆಗಾರಿಕೆ ಮತ್ತು ಶಾಂತಿ ಪ್ರಿಯತೆಗಳನ್ನು ಕಟ್ಟುನಿಟ್ಟಾಗಿ ಪ್ರದರ್ಶನ ಮಾಡಿ ; ಅಹಿಂಸಾ ಮಾರ್ಗದ ಆಚರಣೆಗಾಗಿ ತಮ್ಮ ಪ್ರಾಣಾರ್ಪಣೆಗೂ ಸಿದ್ಧರಾಗಿದ್ದ ಅವರು ಮಲೆನಾಡಿನ ಮಹಾತ್ಮರೇ ಸರಿ. ಅವರ ಚಿನ್ನದ ಪುತ್ಥಳಿಯನ್ನು ಪ್ರತಿಷ್ಠಾಪಿಸಿ, ದಿನವೂ ಪೂಜೆ ಸಲ್ಲಿಸಿದರೂ ಸಹ, ಇಂದು ಶಾಂತಿ, ಸಮೃದ್ಧಿ ಮತ್ತು ಸಿರಿಸಂಪದಗಳಲ್ಲಿ ಮೈಮರೆತಿರುವ ಮಲೆನಾಡಿನ ರೈತರು ಶ್ರೀ ಶಾಂತವೇರಿ ಗೋಪಾಲಗೌಡರ ಋಣವನ್ನು ತೀರಿಸಲಾರರು.

❊ ❊ ❊ ❊

೧೧.

ಶ್ರೀಮನ್ನಾರಾಯಣಾ ಗೋವಿಂದಾ.. ಗೋವಿಂದ... ಬೊಂಬೋಂಬೋ

ಸತ್ಯಾಗ್ರಹದಲ್ಲಿ ಭಾಗವಹಿಸಿದ ಉತ್ಸಾಹೀ ತರುಣರಲ್ಲಿ ಒಬ್ಬೊಬ್ಬರ ಅನುಭವಗಳು ಒಂದೊಂದು ತೆರವಾಗಿದ್ದವು. ನನ್ನ ಅನುಭವ ಒಂದು ರೀತಿಯಲ್ಲಿ ಇದ್ದರೆ, ಶ್ರೀಯುತ ಗಂಡುಗಲಿಯ ಅನುಭವ ಬೇರೆ ರೀತಿಯದಾಗಿತ್ತು ; ಗರುಡಶರ್ಮರ ಅನುಭವ ಇನ್ನೊಂದು ರೀತಿಯದಾಗಿತ್ತು. ಒಂದೊಂದೂ ಸ್ವಾರಸ್ಯಕರ. ಆದರೆ ಎನ್.ಕೆ. ಸೀತಾರಾಮ ಐಯ್ಯಂಗಾರರ ಅನುಭವ ಎಲ್ಲರ ಅನುಭವಕ್ಕಿಂತ ಭಿನ್ನವಾಗಿತ್ತು. ಕೋಲಾಹಲಕರವಾಗಿತ್ತು.

ಅವರು ಟೀ ಕಂಪನಿಯೊಂದರಲ್ಲಿ ಏಜೆಂಟರಾಗಿದ್ದರಲ್ಲದೆ, ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಕಾಲದಿಂದಲೇ ಪಕ್ಷಕ್ಕಾಗಿ ದುಡಿದ ಮತ್ತು ಪ್ರತ್ಯೇಕ ಸಮಾಜವಾದಿ ಪಕ್ಷವನ್ನು ಕಟ್ಟಿ ಬೆಳೆಸಿದ ಒಬ್ಬ ಸ್ಥಾಪಕ ಸದಸ್ಯರೂ ಆಗಿದ್ದರು.

ಅವರನ್ನೊಮ್ಮೆ ಪೋಲೀಸರು ದಸ್ತಗಿರಿ ಮಾಡಿದರು. ಕೈಗೆ ಬೇಡಿ ತೊಡಿಸಿ ಸಾಗರ ಸಬ್ ಜೈಲಿಗೆ ಕರೆದುಕೊಂಡು ಬರುತ್ತಿದ್ದರು. ಗಂಥದ ಕೋಠಿಗಲ್ಲ ; ತಾಲ್ಲೂಕು ಆಫೀಸಿನಲ್ಲಿದ್ದ ಸಬ್ ಜೈಲಿಗೆ. ಕಛೇರಿಯ ಪ್ರವೇಶದಲ್ಲೇ ತುಸುದೂರದಲ್ಲಿ ಲಂಟಾನಾ ಮೆಳೆಗಳು ಬೆಳೆದಿದ್ದವು. ಅದರ ಆಚೆಗೆ ಹಸಿರು ಬೆಳೆದ ಹೊಲ. ಅಲ್ಲಿಂದ ಸುಮಾರು ಒಂದು ಫರ್ಲಾಂಗು ದೂರದಲ್ಲಿ ತಾಳಗುಪ್ಪಕ್ಕೆ ಹೋಗುವ ರೈಲ್ವೆ ದಾರಿ ಇತ್ತು.

ಇನ್ನೇನು ಜೈಲಿನ ದ್ವಾರ ಸಿಗುತ್ತದೆ ಎನ್ನುವಾಗ ಐಯ್ಯಂಗಾರ್‌ರವರು ಪೋಲೀಸಪ್ಪನ ಕಡೆಗೆ ದೈನ್ಯನಾಗಿ ನೋಡಿ, ಎರಡು ಬೆರಳು ತೋರಿಸಿದರು. ಅವನು ಪಾಪ ಒಳ್ಳೆಯ ಮನುಷ್ಯ ! ಕೂಡಲೇ ಅರ್ಥ ಮಾಡಿಕೊಂಡ. ಲಂಟಾನಾ ಮೆಳೆ ಇತ್ತು. ಬಳಿಯಲ್ಲೇ ಹೊಲದಲ್ಲಿ ನೀರಿನ ಕಟ್ಟೆ ಅವನಿಗೆ ತಕ್ಷಣ ಕಂಡದ್ದು ಇಷ್ಟೆ. ಐಯ್ಯಂಗಾರರಿಗೂ ಕಂಡಿದ್ದೂ ಇಷ್ಟೆಯಂತೆ ! ಅವರು ತಮ್ಮ ಮಹತ್ಕಾರ್ಯ ಕೈಗೊಳ್ಳುವ ಮುನ್ನ ಪೋಲೀಸಪ್ಪನಿಗೆ ವಿನಂತಿಸಿಕೊಂಡರಂತೆ.

''ನೀನು ಬೇಡಿ ಹಾಕಿ ಸರಪಳಿ ಹಿಡಿದುಕೊಂಡಿದ್ದರೆ ನಾನು ಹೇಗಪ್ಪಾ ನಂಬರ್ ಟೂಗೆ ಹೋಗೋದು ? ಅಲ್ಲಿವರ್ಗೆ ದಯೆ ತೋರೋ ನನ್ನಪ್ಪಾ ! ಸ್ವಲ್ಪ ಜೈನು ಬಿಡ. ನಾನೇನು ಓಡಿಹೋಗೋಲ್ಲ. ನನ್ನ ಕೆಲಸ ಮುಗಿದ ತಕ್ಷಣ ಕಟ್ಟೆಗೆ ಹೋಗಿ , ನೀರು ಮುಟ್ಟಿ ನಿನ್ನ ವಶಕ್ಕೆ ಬರ್ತೀನಿ ಕಣಪ್ಪ ! '' ಸರಿ ; ಪೋಲೀಸಪ್ಪ ಒಮ್ಮೆ ಐಯ್ಯಂಗಾರರ ಕಡೆಗೆ ನೋಡಿದ. ಅವನಿಗೆ ವಿಶ್ವಾಸ ಬಂತೋ, ದಯೆ ಬಂತೋ ಗೊತ್ತಿಲ್ಲ.

''ಹ್ಞು ಬೇಗ ನಂಬರ ಟೂ ಮುಗಿಸಿಬನ್ನಿ'' ಎಂದು ಅಲ್ಲೆ ಲಂಟಾನಾ ಮೆಳೆಯ ಆಚೆಗೆ ಇದ್ದ ಒಂದು ಕಲ್ವರ್ಟನ ಸೇತುವೆ ಕಟ್ಟೆ ಮೇಲೆ ಕುಳಿತ. ಅವನ ಪಕ್ಕಕ್ಕೆ ಯಾರೋ ಒಬ್ಬ ಪರಿಚಯಸ್ಥ ಬಂದು ಕುಳಿತ. ಅವನಿಂದ ಒಂದು ಸಿಗರೇಟು ಪಡೆದು ಪೋಲೀಸಪ್ಪ ಸಿಗರೇಟು ಹಚ್ಚಿದ. ಆಳವಾಗಿ ಹೊಗೆ ಎಳೆದು ಆಘ್ರಾಣಿಸುತ್ತಾ ಹಾಯಾಗಿ ಧೂಮಪಾನ ಮಾಡತೊಡಗಿದ.

ಇತ್ತ ಐಯ್ಯಂಗಾರ್ 'ನಂಬರ್ ಟೂ' ಮುಗಿಸಿ ಕಟ್ಟೆ ಕಡೆಗೆ ಅಡಿಯಿರಿಸಿ, ಅದರ ನೀರಿನಲ್ಲಿ ಶುಚಿರ್ಭೂತರಾಗಲು ಕುಳಿತರು. ಆಗ ಶಿವಮೊಗ್ಗದ ಕಡೆಯಿಂದ ತಾಳಗುಪ್ಪಕ್ಕೆ ಹೋಗುವ ರೈಲು ಸಾಗರ ನಿಲ್ದಾಣದ ಕಡೆಗೆ ಹೋಗುತ್ತಿತ್ತು. ಸಿಗ್ನಲ್ ಬಿದ್ದಿರಲಿಲ್ಲ. ಸಿಗ್ನಲ್ ಬಳಿ ನಿಂತು ದೊಡ್ಡದಾಗಿ ಒಮ್ಮೆ ಶೀಟಿ ಹಾಕಿತು.

ಅದನ್ನು ಪೋಲೀಸಪ್ಪ ಕೌತುಕದಿಂದ ನೋಡಿದ. ಆದರೆ ಅದಕ್ಕೂ ದೊಡ್ಡ ಕೌತುಕ ಅವನಿಗೆ ಕಾದಿತ್ತು. ಮರುಕ್ಷಣದಲ್ಲೇ ಒಬ್ಬ ವ್ಯಕ್ತಿ ಆ ನಿಂತಿದ್ದ ರೈಲಿನ ಕಡೆಗೆ ಹೊಲಗದ್ದೆಗಳ ಮೂಲಕ ನಾಗಾಲೋಟದಲ್ಲಿ ಮಿಂಚಿನ ವೇಗದಲ್ಲಿ ಓಡಿ ಹೋಗುತ್ತಿರುವುದು ಕಾಣಿಸಿತು. ಆತ ಯಾರಿರಬಹುದು ಎಂದು ಪೋಲೀಸಪ್ಪ 'ನಂಬರ್ ಟೂ'ಗೆ ತೆರಳಿದ್ದ ತನ್ನ ಖೈದಿಯಿದ್ದ ಕಡೆಗೆ ಕೌತುಕದಿಂದ ದೃಷ್ಟಿ ಬೀರಿದ. ಆದರೆ ಆತ ಅಲ್ಲಿ ಎಲ್ಲಿದ್ದಾನೆ ? ಅವನು ತಾತ್ಕಾಲಿಕವಾಗ ಸಿಗ್ನಲ್ ಕಂಬದ ಬಳಿ ನಿಂತಿದ್ದ ರೈಲಿನ ಕಡೆಗೆ ಜಿಂಕೆಯಂತೆ ಓಡುತ್ತಿದ್ದಾನೆ. ಅವನೇ ನನ್ನ ಖೈದಿ ಎಂದು ಕ್ಷಣಾರ್ಧದಿಂದ ಅರಿತ ಪೋಲೀಸಪ್ಪನ ಹೃದಯ ಬಾಯಿಗೆ ಬಂದಿತು.

''ಲೇ ! ಲೇಯ್ ! ನನ್ನ ಮನಗೇ ನಿಲ್ಲೋ ನಿಲ್ಲೋ '' ಎಂದು ಐಯ್ಯಂಗಾರರ ಬೆನ್ನು ಹತ್ತಿದ. ಹಳ್ಳಕೊಳ್ಳ ಕಲ್ಲು-ಮುಳ್ಳು ಕಳ್ಳಿಬೇಲಿ, ಚರಂಡಿಗಳು ಇವುಗಳನ್ನು ಯಾವುದನ್ನೂ ಲೆಕ್ಕಿಸದೆ ಐಯ್ಯಂಗಾರ್ ಓಡುತ್ತಿದ್ದರು. ಅವರನ್ನು ಹಿಡಿಯಲು ಪೋಲೀಸಪ್ಪ ಓಡುತ್ತಿದ್ದ. ಅಷ್ಟರಲ್ಲೇ ಸಿಗ್ನಲ್ ಬಿತ್ತು. ರೈಲು ಜೋರಾಗಿ ಶೀಟಿ ಹಾಕಿತು. ಮರುಕ್ಷಣದಲ್ಲೇ ಸಾಗರ ರೈಲ್ವೇ ನಿಲ್ದಾಣದ ಕಡೆಗೆ 'ಚುಕ್.....ಭೂಕ್... ಚುಕ್ ... ಭೂಕ್' ಎಂದು ಹೊಗೆಯುಗುಳುತ್ತಾ ರೈಲು ಚಲಿಸತೊಡಗಿತು.

ಐಯ್ಯಂಗಾರ್ ರೈಲಿನ ಕಡೆಗೆ ನೋಡಿದರು. ಅದು ಇನ್ನೂ ನೂರು ಅಡಿ ದೂರದಲ್ಲಿತ್ತು. ಹಿಂತಿರುಗಿ ನೋಡಿದರು. ಪೋಲೀಸಪ್ಪ ಇನ್ನೂರು ಅಡಿ ದೂರದಲ್ಲಿದ್ದಾನೆ. ''ಅಯ್ಯೋ ವಿಧಿಯೇ ! ಕೊನೆಗೂ ಕೈ ಕೊಟ್ಟೆಯಾ '' ಎಂದು ತಮ್ಮ ಕೆಟ್ಟ ಹಣೆಬರಹವನ್ನು ಹಳಿದುಕೊಳ್ಳುತ್ತಾ ನಿಟ್ಟುಸಿರುಬಿಟ್ಟರು. ಹತಾಶರಾಗಿ ತಮ್ಮ ಓಟವನ್ನು ಸ್ವಲ್ಪ ನಿಧಾನ ಮಾಡಿದರು. ಆದರೆ ಅದರಿಂದ ಪೋಲೀಸಪ್ಪ ಉತ್ತೇಜಿತನಾದ. ದೇವರು ದೊಡ್ಡವನು ನನ್ನನ್ನು ಉಳಿಸಿದ. ನನ್ನ ನೌಕರಿ ಉಳಿಸಿದ ಎಂದು ಇಮ್ಮಡಿಸಿದ ವೇಗದಿಂದ 'ಲೇ ! ಲೇಯ್ ! ನಿಲ್ಲೋ ನಿಲ್ಲೋ ನನ್ನ ಮಗನೇ' ಎಂದು ಅಬ್ಬರಿಸುತ್ತಾ ಮುನ್ನುಗ್ಗಿ ಬಂದ. ಅಷ್ಟರಲ್ಲೇ ಗರಬಡಿದವರಂತೆ ನಿಂತು ಬಿಟ್ಟಿದ್ದ ಐಯ್ಯಂಗಾರರಿಗೆ ಪವಾಡ ಸದೃಶ ದೃಶ್ಯವೊಂದು ಕಂಡಿತು. ರೈಲು ಹಠಾತ್ತನೆ ನಿಂತಿತ್ತು. ಯಾಕೋ ಏನೋ ? ಅಂತೂ ನಿಂತಿತ್ತು !

ಅದನ್ನು ನೋಡುತ್ತಲೇ ಸೀತಾರಾಮ ಐಯ್ಯಂಗಾರರಿಗೆ ಹೋದ ಜೀವ ಬಂದಂತಾಯ್ತು. ಹನುಮಂತ ಲಂಕೆಗೆ ಹಾರಿದಂತೆ ತಾವು ನಿಂತ ಕಡೆಯಿಂದ ರೈಲಿನ ಕಡೆಗೆ ಹಾರಿ ಒಂದೇ ಸಮನೆ ಒಂದೇ ಉಸುರಿನಲ್ಲಿ ಓಡಿದರು. ಅಷ್ಟರಲ್ಲಿ ರೈಲು ಮತ್ತೆ ಚಲಿಸಲಾರಂಭಿಸಿತ್ತು. ಅದನ್ನು ಲೆಕ್ಕಿಸದೆ ಐಯ್ಯಂಗಾರರು ಛಲ ಬಿಡದೆ ಪುರುಷ ಮೃಗದ ಮುಂದೆ ಓಡಿದ ಭೀಮಸೇನನಂತೆ ಓಡಿ ಬಂದು ರೈಲಿನ ಕಟ್ಟ ಕಡೆಯ ಡಬ್ಬಿಯ ಫುಟ್‌ಬೋರ್ಡ್‌ಗೆ ಹಾರಿ, ಅದರ ಬಾಗಿಲು ತೆರೆದು ಒಳಗೆ ಸೇರಿಕೊಂಡರು. ಕೆಳಗೆ ನಿಂತು ಗಟ್ಟಿಯಾಗಿ ಶೀಟಿ ಊದುತ್ತಾ ಹುಚ್ಚನಂತೆ ಕೈ ಬಾಯಿ ಆಡಿಸುತ್ತಿದ್ದ ಪೋಲೀಸಪ್ಪ ಕುತೂಹಲದಿಂದ ಕಣ್ಣು ಹಾಯಿಸಿದಾಗ ರೈಲ್ವೇ ಗಾರ್ಡ್ ಕಣ್ಣಿಗೆ ಬಿದ್ದ !

ಸಾಗರದ ರೈಲ್ವೇ ನಿಲ್ದಾಣ ಕೇವಲ ಅರ್ಧಮೈಲಿ ಫಾಸಲೆಯಲ್ಲಿತ್ತು. ಸಿಗ್ನಲ್ ಇಂದ ಸ್ಟೇಷನ್‌ಗೆ ಬರುವುದಕ್ಕೆ ರೈಲಿಗೆ ಎಷ್ಟು ಸಮಯ ಬೇಕು ? ಇದ್ದ ಒಂದೆರಡು ನಿಮಿಷದಲ್ಲಿ ಐಯ್ಯಂಗಾರರ ತಲೆ ಚುರುಕಾಗಿ ಓಡಿತು. ಡಬ್ಬಿಯಲ್ಲಿದ್ದ ಪ್ರಯಾಣಿಕರು ತಮ್ಮನ್ನೇ ನೋಡುತ್ತಿದ್ದಾರೆ. ಕೈಯಲ್ಲಿ ಕೋಳಾ ಇದೆ ! ಸರಪಳಿ ಇದೆ ! ರೈಲ್ವೆ ನಿಲ್ದಾಣದಲ್ಲಿ ಪೋಲೀಸರು ಇರುತ್ತಾರೆ. ಈ ಎಲ್ಲ ಅಪಾಯಗಳು ಅಲ್ಲಿ ಕಾದಿವೆ. ಅದಕ್ಕೇನು ಮಾಡಲಿ ? ಎದು ಅವರು ತೀವ್ರವಾಗಿ ಚಿಂತಿಸತೊಡಗಿದರು. ಅಷ್ಟರಲ್ಲಿ

ರೈಲು ಸಾಗರ ರೈಲ್ವೆ ನಿಲ್ದಾಣವನ್ನು ಪ್ರವೇಶಿಸುತ್ತಿತ್ತು. ಆಗ ಮತ್ತೊಂದು ರೈಲು ಶೀಟಿ ಹಾಕಿತು. ಅದನ್ನು ಕೇಳಿ ಐಯ್ಯಂಗಾರರ ಕಿವಿ ನಿಗುರಿತು ! ಓಹೋ ! ಇನ್ನೊಂದು ರೈಲು. ತಾಳಗುಪ್ಪದಿಂದ ಶಿವಮೊಗ್ಗಕ್ಕೆ ಹೋಗುತ್ತಿರುವ ರೈಲು. ಸಾಗರದಲ್ಲಿ ಜಂಕ್ಷನ್ ಆಗಿವೆ! ನಾನು ಇರುವ ರೈಲು ಸಾಗರ ಸ್ಟೇಷನ್ ಪ್ರವೇಶಿಸಿದ ಬಳಿಕ ಅದು ವಿರುದ್ಧ ದಿಕ್ಕಿನಲ್ಲಿ ಶಿವಮೊಗ್ಗಕ್ಕೆ ಹೊರಡುತ್ತದೆ. ಎಂದೆಲ್ಲಾ ನೆನಪಿಗೆ ಬಂದಿದ್ದೇ ತಡ ಐಯ್ಯಂಗಾರ್ ರೈಲಿನಿಂದ ಕೆಳಕ್ಕೆ ಹಾರಿ, ಉರುಳುರುಳಿ ಮೇಲೆದ್ದು ನಿಂತರು. ಸುತ್ತಲೂ ದೃಷ್ಟಿ ಬೀರಿದರು. ಸಾಗರ ರೈಲ್ವೇ ನಿಲ್ದಾಣ ಇನ್ನೂ ನೂರು ಗಜ ಮಾತ್ರ ಇತ್ತು. ತಾವು ಬಂದಿದ್ದ ರೈಲು ಫ್ಲಾಟ್‌ಫಾರಂಗೆ ಹೋಗಿ ನಿಂತುಕೊಂಡಿತ್ತು. ಶಿವಮೊಗ್ಗಕ್ಕೆ ಹೋಗಲಿದ್ದ ರೈಲು ತಾವು ನಿಂತಿದ್ದ ತೋಟದ ಕಡೆಗೆ ನಿಂತಿತ್ತು. ಒಂದೇ ನಿಮಿಷದಲ್ಲಿ ಆ ರೈಲು ಹೊರಟಿತು. ಐಯ್ಯಂಗಾರ್ ಆ ರೈಲಿನ ಕಡೆಗೆ ಓಡಿದರು. ಅದು ಸ್ಪೀಡ್ ಪಿಕಪ್ ಮಾಡುವ ಮೊದಲೇ ಯಾವುದೋ ಒಂದು ಡಬ್ಬಿಗೆ ಹಾರಿಕೊಂಡರು. ರೈಲು ವೇಗ ವೇಗವಾಗಿ ಚಲಿಸತೊಡಗಿತು. ಐಯ್ಯಂಗಾರರ ತಲೆಯೂ ವೇಗವೇಗವಾಗಿ ಓಡತೊಡಗಿತು. ಪೋಲೀಸರ ಸಾಧನ ಸಂಪತ್ತಿನ ಪರಿಜ್ಞಾನ ಅವರಿಗಿತ್ತು. ಮುಂದಿನ ರೈಲ್ವೇ ನಿಲ್ದಾಣದಲ್ಲೇ ರೈಲು ನಿಲ್ಲಿಸಿ ತಮ್ಮನ್ನು ತಲಾಷ್ ಮಾಡಿ ಬಂಧಿಸುವುದು ಶತಃಸಿದ್ಧ. ಕೈಯಲ್ಲಿ ಹತ್‌ಖಡಿ ಬೇರೆ ಇದೆ. ಇದನ್ನು ಮುಚ್ಚಿಕೊಳ್ಳಲು ಆಗುವುದೇ ಇಲ್ಲ ಎಂದು ನಿಟ್ಟುಸಿರಿಟ್ಟರು. ಮಾರನೆಯ ರೈಲ್ವೇ ನಿಲ್ದಾಣ ಸಮೀಪವಾಗುತ್ತಿರುವಾಗಲೇ ರೈಲ್ವೇ ಡಬ್ಬಿಯಿಂದ ಪಕ್ಕದ ತೋಟಕ್ಕೆ ಜಿಗಿದು ಬಿಟ್ಟರು !

ಐಯ್ಯಂಗಾರರ ಲೆಕ್ಕಾಚಾರ ಸರಿಯಿತ್ತು. ಪಕ್ಕದ ರೈಲ್ವೇ ನಿಲ್ದಾಣದಲ್ಲಿ ಹತ್ತಾರು ನಿಮಿಷ ಆ ರೈಲನ್ನು ನಿಲ್ಲಿಸಿ, ಒಂದು ಇಡೀ ಪೋಲೀಸ್ ವ್ಯಾನು ತುಂಬ ಇದ್ದ ಪೋಲೀಸ್ ಸಿಬ್ಬಂದಿ, ಆ ರೈಲನ್ನೂ ಒಂದು ಅಂಗುಲ ಜಾಗ ಬಿಡದಂತೆ ಜಾಲಾಡಿ ಬಿಟ್ಟರು. ಆಗ ಐಯ್ಯಂಗಾರರು ಆಗಲೇ ಕಾಡುಬಿದ್ದು ಮುಂದೆ ಮುಂದೆ ಸಾಗುತ್ತಿದ್ದರು.

ಆಗ ಇನ್ನೂ ಮಹಾತ್ಮಾಗಾಂಧಿ ವಿದ್ಯುದಾಗಾರದಿಂದ ಬೆಂಗಳೂರಿನವರೆಗೂ ಎರಡು ಮೂರು ಸಾಲಿನ ಹೈಟೆನ್ಷನ್ ಪವರ್ ಲೈನ್‌ಗೆ ಕಾಡು ಕಡಿದಿದ್ದರು. ಕಾಡಿನ ಮಧ್ಯೆ ಸುಮಾರು ನೂರು ಅಡಿ ಅಗಲದ ರಸ್ತೆಯಂಥ ಪವರ್ ಲೈನ್ ನಿರ್ಮಾಣವಾಗುತ್ತಿತ್ತು. ಅದರಲ್ಲಿ ಸಿಬ್ಬಂದಿ ಓಡಾಡಬಹುದಾದ ಒಂದು ಒರಟು ಹಾದಿಯೂ ಇತ್ತು. ಆ ಹಾದಿ ಹಿಡಿದು ಐಯ್ಯಂಗಾರ್ ಶಿವಮೊಗ್ಗ ಅಭಿಮುಖವಾಗಿ ನಡೆಯುತ್ತಾ ಸಾಗಿದರು. ಅವರ ನೌಕರಿ, ಅವರ ಟೀ ಗೋಡೌನ್, ಅವರ ಹಣಕಾಸಿನ ವ್ಯವಹಾರಗಳು, ಅವರ ಹೆಂಡತಿ, ಅವರ ಮಕ್ಕಳು ಎಲ್ಲರೂ ಅವರ ಕಣ್ಣಮುಂದೆ ಬಂದು ಹೋಗುತ್ತಿದ್ದರು. ಕತ್ತಲಾಗುತ್ತಿತ್ತು. ಕಾಲುಗಳು ನಿತ್ರಾಣಗೊಳ್ಳುತ್ತಿದ್ದುವು. ಹೊಟ್ಟೆ ಹಸಿದು ಕೂಗಿಕೊಳ್ಳುತ್ತಿತ್ತು. ಮುಂದೆ ಹೆಜ್ಜೆ ಇಡುವುದೇ ಅಸಾಧ್ಯ ಎನ್ನಿಸಿತು. ಆಗ ರಾತ್ರಿಯಲ್ಲಿ

ಕತ್ತಲು ಆವರಿಸಿಕೊಂಡಿತು. ಹಾವು, ಚೇಳು, ಕಾಡುಮೃಗಗಳು ಇವುಗಳಾವುದನ್ನು ಲೆಕ್ಕಿಸದೆ ಒಂದು ಮರದ ಹತ್ತಿ ಮಲಗಿಬಿಡೋಣವೇ ಎಂದು ಯೋಚಿಸುತ್ತಿದ್ದಂತೆ ದೂರದಲ್ಲಿ ಒಂದು ಬೆಂಕಿ ಕಾಣಿಸಿತು. ಐಯ್ಯಂಗಾರ್ ಅತ್ತ ಧಾವಿಸಿದರು.

ಬೆಂಕಿ ಹತ್ತಿರವಾದಂತೆ ಅಲ್ಲಿ ಒಂದು ಕ್ಯಾನ್‌ವಾಸ್ ಟೆಂಟ್ ಗೋಚರಿಸಿತು. ಅಲ್ಲಿ ಒಬ್ಬ ಬೆಂಕಿ ಕಾಯಿಸಿಕೊಳ್ಳುತ್ತಾ ಕುಳಿತಿದ್ದ. ಐಯ್ಯಂಗಾರ್ ಎಚ್ಚರಿಕೆಯಿಂದ ಅವನನ್ನು ಸಮೀಪಿಸಿದರು. ಟೆಂಟಿನೊಳಗೆ ಯಾರಾದರೂ ಇದ್ದಾರೋ ಇಲ್ಲವೋ ಗೊತ್ತಾಗುತ್ತಿರಲಿಲ್ಲ. ಅಲ್ಲಿ ಬೆಂಕಿ ಕಾಯಿಸಿಕೊಳ್ಳುತ್ತಾ ಕುಳಿತಿದ್ದ ವ್ಯಕ್ತಿ ಯಾರೆಂದು ಸಹ ಗೊತ್ತಾಗುತ್ತಿರಲಿಲ್ಲ. ಆದರೆ ಅವೆಲ್ಲಾ ಎಚ್ಚರಿಕೆಗಳು ಅಪ್ರಸ್ತುತವಾಗಿದ್ದುವು.

ಸುತ್ತಲೂ 'ಗವ್....' ಎನ್ನುವ ಕಗ್ಗತ್ತಲೆ ! ಜುSಯ್ ಜುSಯ್ ಜುSಯ್‌ಗುಟ್ಟುವ ಕಗ್ಗಾಡು. ಎದುರಿಗೊಂದು ಬೆಂಕಿ. ಒಬ್ಬ ಏಕಾಂಗಿ ಮನುಷ್ಯ. ಒಂದು ಕ್ಯಾನ್‌ವಾಸ್ ಗುಡಾರ. ಇಷ್ಟು ಸಾಕಾಗಿತ್ತು. ಐಯ್ಯಂಗಾರರಿಗೆ ತಾನು ಭೂಲೋಕದಲ್ಲೇ ಸುರಕ್ಷಿತವಾಗಿದ್ದೇನೆ ಎಂದು ಮನದಟ್ಟು ಮಾಡಿಕೊಡಲು. ಅವರು ಆ ಬೆಂಕಿಯ ಬಳಿ ನಡೆದು ಬಂದರು. ಬಂದವರೇ ಉಸ್ಸೆಂದು ಕುಸಿದು ಕುಳಿತರು.

ಆ ವ್ಯಕ್ತಿ ಇವರನ್ನೇ ಕುತೂಹಲದಿಂದ ನೋಡುತ್ತಿದ್ದ. ಖಾಕಿ ಪ್ಯಾಂಟ್, ಒಂದು ಹಳೆಯ ಫ್ಲಾನೆಲ್ ಓವರ್‌ಕೋಟು ಧರಿಸಿ, ತಲೆಗೆ ಮಂಕಿಕ್ಯಾಪ್ ಹಾಕಿ, ಎದುರಿಗೆ ಉರಿಯುತ್ತಿದ್ದ ಬೆಂಕಿಗೆ ಪಕ್ಕದಲ್ಲಿ ಪೇರಿಸಿ ಇಟ್ಟುಕೊಂಡಿದ್ದ ಒಣಗಲು ಕಡ್ಡಿ ಪುಳ್ಳೆಗಳನ್ನು ಹಾಕುತ್ತಿದ್ದ. ಅವನು ಈಗ ಸ್ವಲ್ಪ ಹೆಚ್ಚಿಗೆಯಾಗೇ ಒಣಗಿದ ಎಲೆಗಳನ್ನು ಬೆಂಕಿಗೆ ಹಾಕಿ, ಉರಿ ದೊಡ್ಡದು ಮಾಡಿದ. ಬೆಳಕು ಹೆಚ್ಚಿಸಿದ. ಐಯ್ಯಂಗಾರರನ್ನು ನೋಡಿದ. ಅಷ್ಟರಲ್ಲಿ ಐಯ್ಯಂಗಾರ್ ಮಿತಿ ಮೀರಿದ ಆಯಾಸ, ದಣಿವುಗಳಿಂದ ನೆಲದ ಮೇಲೆ ಅಂಗಾತವಾಗಿ ಉರುಳಿ ಬಿದ್ದಿದ್ದರು.

''ನೀ....ರು, ನೀ....ರು '' ಎಂದು ಮಾತನಾಡಲು ಮಾತ್ರ ಅವರಿಗೆ ಸಾಧ್ಯವಾಯಿತು. ಆ ವ್ಯಕ್ತಿ ಐಯ್ಯಂಗಾರರಿಗೆ ಒಂದು ಹಳೆಯ ಡಬ್ಬದಲ್ಲಿ ಕುಡಿಯಲು ನೀರು ಕೊಟ್ಟ. ಐಯ್ಯಂಗಾರ್ ಆ ನೀರನ್ನು ಅಮೃತದಂತೆ ಗಟಗಟನೆ ಕುಡಿದರು. ಡಬ್ಬವನ್ನು ಅವನಿಗೆ ಹಿಂತಿರುಗಿಸಿ ; ಎರಡು ಕೈ ಜೋಡಿಸಿ ಅವನಿಗೆ ನಮಸ್ಕರಿಸಿ, ''ನಿನ್ನ ಹೊಟ್ಟೆ ತಣ್ಣಗಿರಲಣ್ಣ ! '' ಎಂದು ಮತ್ತೆ ನೆಲಕ್ಕೆ ಉರುಳಿದರು. ಅವರಿಗೆ ತುಂಬಾ ಆಯಾಸವಾಗಿತ್ತು.

ಬವಳಿ ಬಂದಂತೆ ಕಣ್ಣು ಮುಚ್ಚಿಕೊಂಡರು. ಹತ್ತಾರು ನಿಮಿಷ ಅವರಿಗೆ ಜ್ಞಾನವೇ ಇರಲಿಲ್ಲ. ಮತ್ತೆ ಕಣ್ಣು ಬಿಟ್ಟಾಗ ಆ ವ್ಯಕ್ತಿ ಇವರನ್ನು ಎಬ್ಬಿಸಿ, ''ತಗೋ, ಕುಡಿ'' ಎಂದು ಲೋಟ ಬಿಸಿ ಬಿಸಿ ಕಾಫಿ ಡಿಕಾಕ್ಷನ್ ನೀಡಲು ಮುಂದಾಗಿದ್ದ. ಆದನ್ನೂ

ಐಯ್ಯಂಗಾರ್ ಕುಡಿದರು. ಆ ವ್ಯಕ್ತಿ ಕೆ.ಇ.ಬಿ. ಗೆ ಸೇರಿದ ಒಬ್ಬ ನೌಕರ. ಲೈನ್ ಎಳೆಯುವ ಮುಂಚೆ ಕಬ್ಬಿಣದ ಟವರ್ ಕಂಬಗಳ ನಿರ್ಮಾಣ ಕಾರ್ಯ ನಡೆಯಬೇಕಾಗಿತ್ತು. ಆ ಕಾರ್ಯತಂಡದೊಂದಿಗಿದ್ದ ಒಬ್ಬ ವಾಚ್‌ಮನ್. ಇನ್ನೇನು ರಿಟೈರ್ ಆಗುವ ವಯಸ್ಸು. ಆತ ಕೇಳಿದ.

''ಏನಯ್ಯಾ ನಿನ್ನ ಕೈಕೊಳ ? ಯಾವ ಜೈಲಿನಿಂದ ತಪ್ಪಿಸಿಕೊಂಡು ಬಂದಿದ್ದೀಯಪ್ಪ ?''

ಐಯ್ಯಂಗಾರ್ ತಾವು ಡಾ|| ಲೋಹಿಯಾ ಜೊತೆಯಲ್ಲಿ ಸಾಗರ ರೈಲ್ವೇ ಸ್ಟೇಷನ್ ರಿಟೈರಿಂಗ್ ರೂಮಿನಲ್ಲಿ ಮಲಗಿದ್ದಾಗ ಪೋಲೀಸರು ದಾಳಿ ಮಾಡಿ, ಡಾ|| ಲೋಹಿಯಾ, ಮುಲ್ಕಾ ಗೋವಿಂದರೆಡ್ಡಿ, ಎಂ.ಪಿ. ಈಶ್ವರಪ್ಪ, ಖಾದ್ರಿ ಶಾಮಣ್ಣ ಮೊದಲಾದವರನ್ನು ಆರೆಸ್ಟ್ ಮಾಡಿದ್ದ ಸಂದರ್ಭದಲ್ಲಿ ಅಲ್ಲೇ ಇದ್ದ ನೀರಿನ ಟ್ಯಾಂಕ್ ಹತ್ತಿ ತಪ್ಪಿಸಿ ಕೊಂಡಿದ್ದನ್ನೂ ; ಅಂದಿನಿಂದ ತಮ್ಮನ್ನು ಪೋಲೀಸರು ಬಂಧನಕ್ಕೆ ಒಳಪಡಿಸಲು ಹುಡುಕುತ್ತಲೇ ಇದ್ದದ್ದನ್ನೂ ; ಕಡೆಗೆ ಸಾಗರ ಸಂತೆಯಲ್ಲಿ ಪೋಲೀಸರ ಕೈಗಿ ಸಿಕ್ಕಿಬಿದ್ದು ಪೋಲೀಸ್ ಲಾಕಪ್ಪಿಗೆ ಸಾಗಿಸುತ್ತಿರುವ ತಾವು ತಪ್ಪಿಸಿಕೊಂಡಿದ್ದನ್ನೂ ಸೂಕ್ಷ್ಮವಾಗಿ ತಿಳಿಸಿ, ತಮ್ಮ ಉದ್ಯೋಗ, ವ್ಯವಹಾರ, ಪತ್ನಿ-ಸುತರು ಶಿವಮೊಗ್ಗದಲ್ಲಿ ಇರುವುದನ್ನೂ ತಿಳಿಸಿದರು.

''ರುಸ್ತುಂ ಕಣಪ್ಪಾ ನೀನು ! ರುಸ್ತುಂ'' ಎಂದು ಭುಜ ತಟ್ಟಿದ ಆ ವೃದ್ಧ ನೌಕರ. ಆ ಕರುಣಾಳು ಕೊಟ್ಟ ರೊಟ್ಟಿ ತಿಂದು ಅವನ ಗುಡಾರದಲ್ಲೇ ಮಲಗಿದರು. ಬೆಳಗಾಗುವುದರೊಳಗೇ ಆ ವೃದ್ಧ ಐಯ್ಯಂಗಾರರನ್ನು ತಟ್ಟಿ ಮೇಲೆಬ್ಬಿಸಿದ.

''ನೋಡು ; ನೀನು ಈಗ ಇಲ್ಲಿ ಇರಬೇಡ . ನಮ್ಮ ಜನ, ಆಫೀಸರ್‌ಗಳು ಬಂದು ಬಿಡ್ತಾರೆ. ಕೈಗೆ ಕೋಳ ಬಿದ್ದಿರೋ ನಿನ್ನ ನೋಡಿದ್ರೆ, ಅವ್ರು ಸುಮ್ಕೆ ಇದ್ದಾರಾ? ಮೊದಲು ಹೋಗಿ ಅದನ್ನು ಎಲ್ಲಾದ್ರೂ ಕಮ್ಮಾರನ ಹತ್ರ ತೆಗೆಸಿ ಹಾಕಿಸಿಬಿಡು. ಈಗ ಇಲ್ಲಿಂದ ಗಾಡಿ ಬಿಡು ! '' ಎಂದು ಅವರನ್ನು ಕಳಿಸಿಕೊಟ್ಟ.

ಐಯ್ಯಂಗಾರ್ ಅಲ್ಲಿಂದ ಹೊರಬಿದ್ದರು. ಆಕಾಶದೆಡೆಗೆ ನೋಡುತ್ತಾರೆ. ಆಗಲೇ ಆಳೆತ್ತರ ಸೂರ್ಯ ಮೇಲೇರಿದ್ದಾನೆ. ಒಂದು ನರಪ್ರಾಣಿಯೂ ಆ ನೀರವ ಕೆ.ಇ.ಬಿ. ಪವರ್‌ಲೈನ್‌ನಲ್ಲಿ ಇಲ್ಲ. ಮುಂದೆ ಯಾವ ಗ್ರಾಮ ಸಿಗುತ್ತದೋ ಗೊತ್ತಿಲ್ಲ. ಇಕ್ಕೆಲಗಳಲ್ಲೂ ಕಡಿದುರುಳಿಸಿರುವ ಮರ-ಗಿಡಗಳೇ ಕೋಟೆ ಗೋಡೆಯಂತೆ ನಿಂತಿವೆ. ಮಧ್ಯ ಇರುವ ಪ್ರದೇಶ ಮಾತ್ರ ಸಾಗುತ್ತಿದ್ದಂತೆ ದೂರದಲ್ಲಿ ಹೊಗೆ ಏಳುತ್ತಿರುವುದು ಕಾಣಿಸಿತು. ಹಳ್ಳಿಯೇನಾದರೂ ಇರಬಹುದು ಎಂದು ಐಯ್ಯಂಗಾರ್ ಅತ್ತ ನಡೆದರು. ಈ ಪವರ್‌ಲೇನ್ ಬಿಟ್ಟು ಸುಮಾರು ೨ ಫರ್ಲಾಂಗ್ ಬಂದಿರಬಹುದು. ಅಷ್ಟರಲ್ಲೇ

ಒಂದು ಹಳ್ಳಿ ಸಿಕ್ಕಿತು. ಆಗಲೇ ದನಕರುಗಳು ಕಾಡಿನ ಕಡೆಗೆ ಹೊರಟಿದ್ದವು. ನಾಲ್ಕಾರು ಜನರು ನೀರು ಹೊತ್ತು ತರುತ್ತಿದ್ದರು. ಐಯ್ಯಂಗಾರ್ ತಮ್ಮ ನೆಟ್ ಬನಿಯನ್ ಬಿಚ್ಚಿ ಕೈ ಕೋಳಾ ಮುಚ್ಚಿಕೊಂಡಿದ್ದರು. ಬರೀ ಷರಟು ಪ್ಯಾಂಟು ಧರಿಸಿದ್ದರು. ಊರ ಹೊರಗಿನಲ್ಲೇ ಒಂದು ಕುಲುಮೆ ಕಾಣಿಸಿತು. ಹೊಲಗದ್ದೆಗಳಿಗೆ ಹೊರಡುವ ರೈತರು ಒಬ್ಬಿಬ್ಬರು ಆಗಲೇ ತಮ್ಮ ಕುಡುಗೋಲು, ಕುಳಗಳನ್ನು ಹಣಿಸಿಕೊಳ್ಳುತ್ತಿದ್ದರು. ಕುಲುಮೆಯ ಮಾಲೀಕನನ್ನು ಅವರು ಪಕ್ಕಕ್ಕೆ ಕರೆದರು. ತಮ್ಮ ಪ್ಯಾಂಟ್ ಜೇಬಿನಲ್ಲಿ ಎಚ್ಚರಿಕೆಯಿಂದ ಇಟ್ಟುಕೊಂಡಿದ್ದ ನೋಟಿನ ಕಂತೆಯಿಂದ ಹತ್ತು ರೂಪಾಯಿ ನೋಟನ್ನು ಅವನ ಕೈಗಿತ್ತರು. ರೈತರು ಅತ್ತ ದೂರ ಸರಿದ ಬಳಿಕ ತಮ್ಮ ಕೈಕೋಳಾ ತೆಗೆಸಿಕೊಂಡರು. ಅದನ್ನು ಪಕ್ಕದಲ್ಲೇ ಇದ್ದ ಪಾಳುಬಾವಿಗೆ ಎಸೆದು, ಬಳಿಯಲ್ಲೇ ಇದ್ದ ಗುಡಿಸಲು ಹೋಟೆಲಿನಲ್ಲಿ ಅಪ್ಪು ದೋಸೆ ಕಾಫಿ ಸೇವಿಸಿ, ಮತ್ತೆ ಕೆ.ಇ.ಬಿ. ಪವರ್ ಲೇನಿಗೆ ಬಂದು, ಶಿವಮೊಗ್ಗದ ಕಡೆಗೆ ಸಾಗತೊಡಗಿದರು.

ಅವರು ಸರಿಯಾಗಿ ಇನ್ನೂ ಅರ್ಧ ಮೈಲಿ ಆ ಹಾದಿಯಲ್ಲಿ ಸಾಗಿರಲಿಲ್ಲ. ಹಳ್ಳಿಯ ಸರಹದ್ದು ಮುಗಿದಿತ್ತು. ಕಾಡು ಪ್ರಾರಂಭವಾಗಿತ್ತು. ಅಷ್ಟರಲ್ಲಿ ಗಟ್ಟಿಯಾಗಿ ಪೋಲೀಸರ ಶೀಟಿ ಕೇಳಿಬಂದು. ದೂರದಲ್ಲಿ ಹಳ್ಳಿಯ ಕಡೆಯಿಂದ ಒಬ್ಬ ಪೋಲೀಸಿನವನು ಅವರ ಕಡೆಗೆ ಓಡಿ ಬರುತ್ತಿದ್ದಾನೆ! ಆಗಾಗ್ಗೆ ಶೀಟಿಯನ್ನು ಊದಿ, ''ನಿಂತ್ಕೋ ನಿಂತ್ಕೋ.... ನಿಂತ್ಕೊಳ್ಳೋ!'' ಎಂದು ಕೂಗಿಕೊಳ್ಳುತ್ತಿದ್ದಾನೆ.

ಬೇಡಿ ಕಳಚಿಕೊಂಡೆನಲ್ಲಾ ಎಂದು ಹಾಯಾಗಿ ನಿಟ್ಟುಸಿರುಬಿಡುತ್ತಿದ್ದಂತೆಯೇ, ಈ ಪೀಡೆ ಬೆನ್ನು ಹತ್ತಿದನಲ್ಲಪ್ಪ! ನಾನು ಆ ಹೋಟೆಲ್ಲಿಗೆ ಹೋಗಿದ್ದೇ ತಪ್ಪಾಯ್ತು. ಎಲ್ಲ ಹಳ್ಳಿ ಹೋಟೆಲುಗಳೂ ಸೋಮಾರಿಕಟ್ಟೆಗಳೇ ಎಂಬ ಮಾತು ನಿಜವಾಗಿತ್ತು. ಅಲ್ಲಿಗೆ ಬಂದಿದ್ದ ಪೋಲೀಸನಿಗೆ ಯಾರೋ ಸುದ್ದಿ ಕೊಟ್ಟಿದ್ದಾರೆ. ಈಗೇನು ಮಾಡಲು ಸಾಧ್ಯವಿಲ್ಲ. ಕಾಲಿಗೆ ಬುದ್ಧಿಹೇಳಬೇಕು ಎಂದು ಐಯ್ಯಂಗಾರ್ ವೇಗವೇಗವಾಗಿ ಓಡತೊಡಗಿದರು.

ಐಯ್ಯಂಗಾರ್ ಮುಂದೆ. ಪೋಲೀಸ್‌ನವನು ಹಿಂದೆ. ಓಡುತ್ತಾ ಓಡುತ್ತಾ ಸುಮಾರು ಅರ್ಧಮೈಲು ಕಾಡಿನೊಳಕ್ಕೆ ಬಂದರು. ಐಯ್ಯಂಗಾರ್ ಸುಸ್ತಾದರು. ಪೋಲೀಸ್ ತೆಳ್ಳಗಿದ್ದ. ಜಿಂಕೆಯಂತೆ ಓಡುತ್ತಿದ್ದ. ಅವನ ಕೈಗೆ ತಾನು ಸಿಕ್ಕಿಕೊಳ್ಳುವುದು ಖಂಡಿತ ಎಂದು ಅವರಿಗೆ ಮನದಟ್ಟಾಯಿತು. ಅವರು ದೀರ್ಘವಾಗಿ ನಿಟ್ಟುಸಿರಿಟ್ಟು ಆ ಪವರ್‌ಲೇನನ ನಡುವೆ ಕಡಿಯದೆ ಬಿದ್ದಿದ್ದ ಒಂದು ಬೃಹತ್ ಬೂರುಗದ ಮರದ ಕಾಂಡವನ್ನು ಒರಗಿ ನಿಂತರು. ತನ್ನೆಡೆಗೆ ವಿಜಯೋತ್ಸಾಹದಿಂದ ಓಡಿ ಬರುತ್ತಿದ್ದ ಆ ಸಣಕಲು ಪೋಲೀಸನನ್ನು ಅವಲೋಕಿಸುತ್ತಾ ನಿಂತರು. ಕೈಕೈ ಮಿಲಾಯಿಸಿದರೆ ಅವನನ್ನು ತಾನು ಸುಲಭವಾಗಿ ಮಣಿಸಬಲ್ಲೆ ಎಂದು ಮನಗಂಡರು ''ಬಾ.... ನನ್ನ

ಮಗನೇ ಬಾ !'' ಎಂದುಕೊಳ್ಳುತ್ತಾ ಆ ಮರದ ಬೃಹತ್ ಕಾಂಡವನ್ನು ಇನ್ನೂ ಆರಾಮವಾಗಿ ಒರಗಿಕೊಂಡು ನಿಂತು, ಆ ಪೋಲೀಸನವನನ್ನು ಎದುರು ನೋಡತೊಡಗಿದರು. ತಮ್ಮ ಕೈಗಳಲ್ಲಿ ಏನೂ ಇಲ್ಲದಿದ್ದರೂ, ಏನೋ ಭಯಂಕರವಾದ ಆಯುಧವಿರುವಂತೆ ಎರಡು ಕೈಗಳನ್ನೂ ತಮ್ಮ ಬೆನ್ನ ಹಿಂದೆ ಇಟ್ಟುಕೊಂಡು, ಅವನನ್ನೇ ಅವುಡುಗಚ್ಚಿ ನೋಡುತ್ತಾ ''ಬಾ.... ಬಾ ! ನನ್ನ ಮಗನೇ ಬಾ ! ನಿನಗೆ ಗ್ರಹಚಾರ ಕಾಯ್ದಿದೆ. ಬಾ ! ಹತ್ತಿರ ಬಾ ! ಇನ್ನೂ ಹತ್ತಿರ ಬಾ ! '' ಎದುಗಟ್ಟಿಯಾಗಿ ಹೇಳುತ್ತಾ ಅವನಿಗೆ ಸ್ವಾಗತ ಕೋರತೊಡಗಿದರು.

ಪೋಲೀಸಿನವನು ಅವರಿದ್ದ ಮರದ ಕೆಳಗೆ ಹದಿನೈದು ಅಡಿ ದೂರದಲ್ಲಿ ನಿಂತುಅವರನ್ನೇ ಆಶ್ಚರ್ಯದಿಂದ ನೋಡುತ್ತಾ ಒಂದೆರಡು ಹೆಜ್ಜೆ ಮುಂದೆ ಬಂದ. ಐಯ್ಯಂಗಾರರನ್ನು ನೋಡಿದ. ಆಳು ಘನವಾಗಿದ್ದಾರೆ. ಒಳ್ಳೆ ಸೈಂಧವ. ಆತ ಮೇಲೆ ಬಿದ್ದರೆ ನಾನು ಚಿಂದಿಯಾಗಿ ಬಿಡುತ್ತೇನೆ. ಮೇಲಾಗಿ ಕೈಯನ್ನು ಬೇರೆ ಬೆನ್ನ ಹಿಂದೆ ಇಟ್ಟುಕೊಂಡಿದ್ದಾನೆ. ಕೈಯಲ್ಲಿ ಏನಿದೆಯೋ ? ಪಿಸ್ತೂಲೋ ? ಚಾಕುವೋ ? ಇಲ್ಲವೇ ಬಾಂಬೋ ! ಎಂಬ ಯೋಚನೆ ಬಂದೊಡನೆಯೇ ಅವನು ಅಲ್ಲೇ ತಟ್ಟನೆ ನಿಂತ. ತನ್ನನ್ನು ಬಲಿ ತೆಗೆದುಕೊಳ್ಳಲು ಕಾಯ್ದಿರುವ ಯಮದೂತನಂತೆ ಐಯ್ಯಂಗಾರ್ ಆ ಪೋಲೀಸಿನವನಿಗೆ ತೋರಿ ಬಂದರು. ಅವನು ಹಠಾತ್ತನೆ ದುಸ್ವಪ್ನದಿಂದ ಎಚ್ಚರಗೊಂಡವನಂತೆ ಹಿಂದಕ್ಕೆ ತಿರುಗಿ ನೋಡಿದ. ಐಯ್ಯಂಗಾರಿಯದು ರಾಕ್ಷಸ ಗಂಟಲು ''ಲೇಯ್ ! '' ಎಂದು ಕೆಳಗೆ ಬಿದ್ದಿದ್ದ ಒಂದು ದಪ್ಪ ಕಲ್ಲನ್ನು ಕೈಗೆತ್ತಿಕೊಂಡು ಅವನತ್ತ ಬೀರಿದರು. 'ಸುಯ್' ಎಂದು ಅವನಕಿವಿಯ ಪಕ್ಕದಲ್ಲೇ ಹೋಗಿ ೧೦ ಅಡಿ ಮುಂದೆ ನೆಲಕ್ಕೆ ಬಿತ್ತು. ಅದರ ಏಟು ಏನಾದರೂ ಬಿದ್ದಿದ್ದರೆ ಅವನು ಅಲ್ಲೇ ಗೊಟಕ್ ಎನ್ನುತ್ತಿದ್ದ. ಆದರೆ ಪುಣ್ಯವಶಾತ್ ಆ ಏಟು ಬೀಳಲ್ಲಿ. ಅವನು ''ಬದುಕಿದೆನೇ ಬಡಜೀವ! ''ಎಂದು ಹಿಂದಕ್ಕೆ ತಿರುಗಿ ಓಟಕಿತ್ತ. ಈಗ ಅಟ್ಟಿಸಿಕೊಂಡು ಹೋಗುವುದು ಐಯ್ಯಂಗಾರರ ಸರದಿಗೆ ಬಂದಿತು. ಪೋಲೀಸ್ ಜಿಂಕೆಯಂತೆ ಅಲ್ಲಿಂದ ದೂರ -ದೂರಕ್ಕೆ ಪಲಾಯನ ಮಾಡಿದ. ಐಯ್ಯಂಗಾರರ ಬಳಿ ಪಿಸ್ತೂಲ್ ಇರಬಹುದು. ಅದು ದೂರದಲಿಂದಲೇ ನನ್ನನ್ನು ಬಲಿ ತೆಗೆದುಕೊಳ್ಳಬಹುದು ಎಂದು ಹೆದರಿ ಅವನು ಜಿಂಕೆಯಂತೆ ದೂರದೂರಕ್ಕೆ ನೆಗೆದು ಪಲಾಯನ ಮಾಡಿದ. ಅವನನ್ನು ಅತ್ತ ಓಡಿಸಿದ್ದೇ ತಡ , ಐಯ್ಯಂಗಾರ್ ಇತ್ತ ಕಂಬಿಕಿತ್ತರು. ಹೀಗೆ ಓಡಿ, ಓಡಿ, ಮೋಟಾರ್ ಸೈಕಲ್, ಲಾರಿ ಮೊದಲಾದ ಅನೇಕ ವಾಹನಗಳ ಪಡಿಪಾಟಲು ಮೂಲಕ ಪ್ರಯಾಣ ಮಾಡಿ ಶಿವಮೊಗ್ಗ ಸೇರಿಕೊಂಡರು. ಪೋಲೀಸರ ಕೈಯಿಂದ ತಪ್ಪಿಸಿಕೊಂಡರು.

ಮತ್ತೆ ಅವರನ್ನು ನಾವು ಕಂಡದ್ದು ಒಂದೆರಡು ತಿಂಗಳ ಬಳಿಕ. ಒಮ್ಮೆ ಸಾಗರ ಕೋರ್ಟಿಗೆ ವಿಚಾರಣೆಗೆ ಹೋಗಲು ನನ್ನನ್ನೂ ಖಾದ್ರಿ ಶಾಮಣ್ಣನವರನ್ನೂ ನಮ್ಮ

ತಂಡದ ಸ್ವಾಮಿನಾಥನ್, ರಾಮಚಂದ್ರನ್ ಮೊದಲಾದ ಇಪ್ಪತ್ತು ಮೂವತ್ತು ಬಂಧಿಗಳನ್ನು ಪೋಲೀಸರು ಶಿವಮೊಗ್ಗ ಜೈಲಿನಿಂದ ಶಿವಮೊಗ್ಗ ರೈಲ್ವೇ ನಿಲ್ದಾಣಕ್ಕೆ ಪೋಲೀಸ್ ವ್ಯಾನಿನಕಲ್ಲಿ ಕರೆದು ತರುತ್ತಿದ್ದರು. ಶಿವಮೊಗ್ಗದಿಂದ ಸಾಗರಕ್ಕೆ ಹೋಗುವ ಬೆಳಗಿನ ಷಟಲ್ ರೈಲಿನಲ್ಲಿ ಪ್ರಯಾಣಿಕರ ಒತ್ತಡವೇ ಇರುತ್ತಿರಲಿಲ್ಲ. ಈಡೀ ರೈಲ್ವೇ ಡಬ್ಬಿಯೇ ನಮ್ಮದಾಯಿತು. ರೈಲು ಹೊರಡಲು ಇನ್ನೂ ಅರ್ಧ ಗಂಟೆಯೇ ಉಳಿದಿತ್ತು. ಅದೆಲ್ಲಾ ಯಥೇಚ್ಛ ವಿರಾಮದ ಕಾಲ. ಜನಸಂದಣಿ ಕಡಿಮೆ ಇದ್ದ ಕಾಲ. ಆಗಿನ ಸನ್ನಿವೇಶವನ್ನು ಈಗ ಊಹಿಸಿಕೊಳ್ಳುವುದು ಕಷ್ಟ. ಇದು ಇಕ್ಕಟ್ಟಿನ ಕಾಲ. ಅವಸರದ ಯುಗ. ಒಬ್ಬರನ್ನೊಬ್ಬರು ನಂಬದೇ ಇರುವ ಕಾಲ. ಬೇರೆಯವರಲ್ಲಿ ಆಸಕ್ತಿ ತೋರಿಸದ ಕಾಲ. ತಮ್ಮ ಚಿಂತೆಯಲ್ಲೇ ಮಗ್ನರಾಗಿರುವ ಕಾಲ. ಅಂದಿನ ಪ್ರಶಾಂತತೆ ಈಗೆಲ್ಲಿ ಬರಬೇಕು ?

ಜೈಲಿನಿಂದ ಹೊರಜಗತ್ತಿಗೆ ಬಂದು, ರೈಲ್ವೇ ಡಬ್ಬಿಯಲ್ಲಿ ಆರಾಮವಾಗಿ ಕಿಟಕಿಯಲ್ಲಿ ತಲೆ ತೂರಿಸಿ ಕುಳಿತು, ಪ್ಲಾಟ್‌ಫಾರಂನಲ್ಲಿ ಕಡಲೆಕಾಯಿ ಮಾರುತ್ತಾ ಬಂದ ಹುಡುಗರಿಂದ ಅರ್ಧರ್ಧ ಸೇರು ಕಡಲೆಕಾಯಿ ಹಾಕಿಸಿಕೊಂಡು ಸಂತೋಷವಾಗಿ ಹರಟುತ್ತಾ ಕಡಲೆಕಾಯಿ ಸುಲಿದು ಬಾಯಿಗೆ ಹಾಕಿಕೊಂಡು, ಅದರ ಸವಿಯನ್ನು ಆಸ್ವಾದಿಸುತ್ತಾ ಕುಳಿತಿರುವಾಗ, ಪ್ಲಾಟ್‌ಫಾರಂ ಮೇಲೆ ಏನೋ 'ಥಂ' ಎನ್ನುವ ಸಣ್ಣ ಶಬ್ದವಾಯಿತು. ಮತ್ತೆ ಮತ್ತೆ ಆ ಶಬ್ದ ಕೇಳಿಸಿತು. ಅದೇನೆಂದು ಗಮನಿಸಿದರೆ ದಾಸಯ್ಯನೊಬ್ಬನ ಜಾಗಟೆಯ 'ಥಣ್.... ಥಣ್' ಎಂಬ ಶಬ್ದ. ಒಂದೆರಡು ಬಾರಿ ಮೆಲ್ಲನೆ ಅವನ ಜಾಗಣೆ ಶಬ್ದ ಮಾಡಿದ ಬಳಿಕ ಅದು ಮೌನವಾಯಿತು. ಸರಿ ಬಿಡು ; ಯಾರೋ ದಾಸಯ್ಯನಲ್ಲವೇ ಎಂದು ಎಲ್ಲರೂ ತಮ್ಮ ತಮ್ಮ ಹವ್ಯಾಸಗಳಲ್ಲಿ ಮಗ್ನರಾದರು. ಆದರೆ ಆ ದಾಸಯ್ಯ ಖಾದ್ರಿ ಶಾಮಣ್ಣನವರು ಕುಳಿತಿದ್ದ ಕಿಟಕಿಯ ಬಳಿಗೆ ಬಂದು ಕೇಳಿದ, ''ಈ ರೈಲು ಅರಸಾಳಿಗೆ ಹೋಗ್ತದಾ ರಾಯರೇ ?''

''ಹೌದಪ್ಪ.... ಹೋಗ್ತದೆ'' ಎಂದು ಖಾದ್ರಿ,ಕಡಲೆಕಾಯಿ ಒಂದನ್ನು ಸುಲಿದು ಬಾಯಿಗೆ ಹಾಕಿಕೊಳ್ಳುತ್ತಾ . ದಾಸಯ್ಯ ಮತ್ತೆ ಕೇಳಿದ,

''ರಾಯರೇ, ಈ ರೈಲು ಅಲ್ಲಿ ನಿಲ್ತದಾ .... ? ''

''ಹೌದು ನಿಲ್ತದೆ ದಾಸಯ್ಯ, ಇದು ಷಟಲ್ ! ''ಎನ್ನುತ್ತಿದ್ದಂತೆಯೇ, ದಾಸಯ್ಯ ಅವರಿಗೆ ಕಣ್ಣು ಹೊಡೆದ ! ಕೂಡಲೇ ಖಾದ್ರಿಯವರು ಉಸಿರು ಕಟ್ಟಿದವರಂತೆ ಬಾಯಿಯ ಮೇಲೆ ಆಶ್ಚರ್ಯದಿಂದ ಕೈ ಇರಿಸಿಕೊಂಡು ಉಸುರಿದರು.

''ಲೇ ... ಸೀತಾರಾಮ ಐಯ್ಯಂಗಾರೀ !''

''ಹುಷ್'', ಎಂದು ಬಾಯಿ ಮೇಲೆ ಬೆರಳಿಟ್ಟು ಎಚ್ಚರಿಸಿದ ಐಯ್ಯಂಗಾರಿ.

ಅತ್ತಿತ್ತ ಎಚ್ಚರಿಕೆಯಿಂದ ನೋಡಿದ. ಯಾವ ಪೋಲೀಸರೂ ಬಳಿಯಿರಲಿಲ್ಲ. ಅವರು ದೂರದ ಬಾಗಿಲ ಬಳಿ ನಿಂತು ಬೀಡಿ ಸೇದುತ್ತಿದ್ದರು.

ದಾಸಯ್ಯ ತನ್ನ ತಾಮ್ರದ ಪಾತ್ರೆಯಿಂದ ಒಂದು ಚೀಟಿಯನ್ನು ತೆಗೆದು ಖಾದ್ರಿಯವರ ಕೈಗೆ ಕೊಟ್ಟ. ಖಾದ್ರಿಯವರು ಅದನ್ನು ಓದಿ ಹುಬ್ಬೇರಿಸಿದರು, ಅತ್ತಿತ್ತ ಎಚ್ಚರಿಕೆಯಿಂದ ನೋಡಿ ಗಬಕ್ಕನೆ ತಮ್ಮ ಜೇಬಿಗೆ ಸೇರಿಸಿದರು.

ಐಯ್ಯಂಗಾರ್ ಗರುಡಗಂಬದ ದಾಸಯ್ಯನ ವೇಷವನ್ನು ಎಷ್ಟು ಸೊಗಸಾಗಿ ಹಾಕಿದ್ದರೆಂದರೆ ಅವರನ್ನು ಪತ್ತೆ ಹಚ್ಚುವುದು ಅಸಾಧ್ಯವೇ ಆಗಿತ್ತು. ಬಣ್ಣದ ದೊಡ್ಡ ಪೇಟ, ಭಯಂಕರವಾದ ತ್ರಿಪುಂಡ್ರನಾಮ, ಬರಿ ಮೈ, ಕೈತೋಳುಗಳಿಗೆಲ್ಲಾ ನಾಮದ ಪಟ್ಟಿಗಳು, ಸೊಂಟದಲ್ಲಿ ಇಳಿಬಿದ್ದ ಬನವಾಸಿ, ಎಡಗೈಯಲ್ಲಿ ಜಾಗಟೆ-ದಂಡ, ಬಲ ಮಗ್ಗುಲಲ್ಲಿ ಇಳಿಬಿಟ್ಟ ಜೋಳಿಗೆ, ಶಂಖು. ಎಲ್ಲಾ ಸಂಪೂರ್ಣ ! ಅವರನ್ನು ಐಯ್ಯಂಗಾರ್ ಎಂದು ಪತ್ತೆ ಹಚ್ಚುವುದು ಯಾರಿಗೂ ಅಸಾಧ್ಯವಾಗಿತ್ತು.

ಅವರಿಬ್ಬರ ಸಂಭಾಷಣೆ ತಮಿಳು ಭಾಷೆಯಲ್ಲಿ ನಾಲ್ಕಾರು ನಿಮಿಷ ನಡೆಯುತ್ತಿರುವಂತೆಯೇ ರೈಲು ಶೀಟಿ ಹಾಕಿತು. ಅವರಿದ್ದೆಡೆಯ ಬಾಗಿಲ ಬಳಿಗೆ ನಾಲ್ಕಾರು ಪೋಲೀಸರು ಬಂದು ರೈಲು ಡಬ್ಬಿಗೆ ಹತ್ತಿಕೊಂಡರು. ಐಯ್ಯಂಗಾರರನ್ನು ನೋಡಿ, ''ರೈಲು ಹೊರಡ್ತಾ ಇದೆ. ಬರಲ್ವೇನೋ ದಾಸಯ್ಯ ?'' ಎಂದು ಕೇಳಿದರು. ಅವರಿಗೆಲ್ಲಾ ಐಯ್ಯಂಗಾರ್ ದೀರ್ಘದಂಡ ನಮಸ್ಕಾರ ಹಾಕಿ, ಕೈಯಲ್ಲಿ ಹಿಡಿದಿದ್ದ ಜಾಗಟೆಯನ್ನು ಹೊಡೆಯುತ್ತಾ ಬಲಗೆಯಿಂದ ಶಂಖ ಹಿಡಿದು,

''ಭೋಂ ಭೋಂ ಭೊಂ !..... ಭ್ರೋಂ !!'' ಎಂದು ಶಂಕನಾದ ಮೊಳಗಿಸಿದರು. '''ಶ್ರೀಮನ್ನಾರಾಯಣಾ ಗೋವಿಂದ.... ಗೋವಿಂದ !''ಎನ್ನುತ್ತಿರುವಂತೆ ರೈಲು ಶಿವಮೊಗ್ಗ ಪ್ಲಾಟ್ ಫಾರಂ ಬಿಟ್ಟಿತು. ಪೋಲೀಸರು ಆ ದಾಸಯ್ಯನನ್ನು ನೋಡಿ ಗಹಗಹಿಸಿ ನಗುತ್ತಿದ್ದರು. ದಾಸಯ್ಯನೂ ತನ್ನಲ್ಲಿ ತಾನೇ ನಗುತ್ತಾ ಗಟ್ಟಿಯಾಗಿ ಶಂಖವನ್ನು ಊದುತ್ತಿದ್ದ.

❊ ❊ ❊ ❊

೧೨.

ಅರಿ ಭಯಂಕರ, ಅಹಿಂಸೆಯ ದೈತ್ಯ -ಗರುಡಶರ್ಮ

ಸತ್ಯಾಗ್ರಹದ ಮುಂಚೂಣಿಯಲ್ಲಿ ಗರುಡಶರ್ಮ ಎಂಬ ಸತ್ಯಾಗ್ರಹಿಯೊಬ್ಬರಿದ್ದರು. ಅವರು ಶ್ರೀ ವಿನೋಭಾಭಾವೆಯವರ ಭೂದಾನ - ಜೀವನದಾನ ಚಳುವಳಿಗೆ ತಮ್ಮನ್ನು ತಾವೇ ಅರ್ಪಿಸಿಕೊಂಡಿದ್ದವರು. ಅದಕ್ಕೆ ಮುಂಚೆ ಮಹಾತ್ಮಾ ಗಾಂಧೀಜಿಯವರ ಆಶ್ರಮದಲ್ಲಿ ಅವರು ಇದ್ದು ತಮ್ಮ ಮುಂದಿನ ದೇಶಪ್ರೇಮದ ಹೋರಾಟಗಳಿಗೆ ತಯಾರಿ ಪಡೆದುಕೊಂಡಿದ್ದರು. ಅವರ ಹೆಸರನ್ನು ಕೇಳಿದ್ದೆ . ಆದರೆ ಕಣ್ಣಾರೆ ಕಂಡಿರಲಿಲ್ಲ.

ನಾನು ದಸ್ತಗಿರಿಯಾಗಿ ಒಂದು ತಿಂಗಳ ಬಳಿಕ ಅವರೂ ಜೈಲಿಗೆ ಬಂದರು. ಅಲ್ಲಿಯವರೆಗೆ ಅವರು ಕಾಗೋಡಿನ ಸುತ್ತಮುತ್ತಣ ಕಾಡುಮೇಡುಗಳಲ್ಲಿ ಅಲೆದಾಡುತ್ತಾ ಹತ್ತಾರು ಗ್ರಾಮಗಳಲ್ಲಿ ಹರಿದುಹೋಗಿದ್ದ ಗೇಣಿದಾರ ರೈತರನ್ನು ಸತ್ಯಾಗ್ರಹಕ್ಕೆ ಅಣಿಗೊಳಿಸುತ್ತಿದ್ದರು.

ಅವರನ್ನು ಸ್ವಲ್ಪ ವರ್ಣಿಸುವುದು ಅಗತ್ಯ. ಏಕೆಂದರೆ ಈ ಆಧುನಿಕ ಕಾಲದಲ್ಲಿ ಅಂಥವರನ್ನು ಒಮ್ಮೆ ನಾವು ಬಿಟ್ಟು ಬಿಟ್ಟರೆ, ಮತ್ತವರು ನಮಗೆ ದೊರೆಯುವುದೇ ಇಲ್ಲ. ಅಷ್ಟು ದುರ್ಲಭವಾದ, ಅಪರೂಪದ ವ್ಯಕ್ತಿ ಅವರು.

ಸುಮಾರು ಏಳು ಅಡಿ ಎತ್ತರದ ಸೈಂಧವಮೂರ್ತಿ. ಅರೆನೆರೆತ ಕೆದರಿದ ತಲೆಗೂದಲು. ಅದೇ ಸ್ಥಿತಿಯ ಗಡ್ಡ. ದೇಹಕ್ಕೆ ಹೋಲಿಸಿದರೆ ಸಣ್ಣದೇ ಎನ್ನಬಹುದಾದ ತಲೆ . ಪಿಳಿಪಿಳಿ ಹೊಳೆಯುವ ಸೀಳು ಕಣ್ಣುಗಳು. ಹೊಗೆಸೊಪ್ಪಿನಿಂದ ಕಪ್ಪಿಟ್ಟ ಹಲ್ಲುಗಳು. ಆದರೆ ಯಾವುದೋ ವಿಲಕ್ಷಣ ನಗು ಯಾವಾಗಲೂ ಮುಖದಲ್ಲಿ ಕಣ್ಣುಗಳಲ್ಲಿ, ತುಟಿಗಳ ಮೇಲೆ ಇರುತ್ತಿತ್ತು. ಅವರು ಜಗತ್ತಿನ ಮೇಲೆ ಸಿಟ್ಟಾಗಿದ್ದರೋ, ಇತರ ಜನರನ್ನು ಕಂಡು ತಿರಸ್ಕಾರದಿಂದ ತಮ್ಮಲ್ಲಿ ತಾವೇ ನಕ್ಕು ನಲಿಯುತ್ತಿದ್ದರೋ ಯಾವುದೂ ಗೊತ್ತಾಗುತ್ತಿರಲಿಲ್ಲ. ಒಂದು ದೊಡ್ಡ ಕಂಬಳಿಯ ಮಡಿಲಲ್ಲಿ ಕೇಂದ್ರ ಪ್ರದೇಶದಲ್ಲಿ ತಲೆ ಹಿಡಿಸುವಂತೆ ತೂತು ಮಾಡಿ ಅದರಲ್ಲಿ ತಮ್ಮ ತಲೆ ತೂರಿಸಿಬಿಟ್ಟರೆ ಆಯ್ತು ಅವರ ಡ್ರೆಸ್. ಹೌದೌದು ! ಒಳಗೆ ಒಂದು ಲಂಗೋಟಿಯನ್ನೂ ಹಾಕಿ ಕೊಳ್ಳುತ್ತಿದ್ದರು.. ! ಅಲ್ಲಿಗೂ ಅವರ ಸಮವಸ್ತ್ರ ಸಂಪೂರ್ಣವಾಗುತ್ತಿರಲಿಲ್ಲ. ಕೈಯಲ್ಲೊಂದು ಹತ್ತಡಿ ಎತ್ತರದ ದಪ್ಪ ದೊಣ್ಣೆ ! ಕಾಲಿಗೆ ಒಂದು ಒರಟು ಚಪ್ಪಲಿ. ಕಂಕುಳಲ್ಲಿ ಬುದ್ಧಿಜೀವಿಗಳ ಒಂದು ತೂಗುಚೀಲ. ಆದರೆ ಜೋಳಿಗೆಯಲ್ಲ ! ಅದರಲ್ಲಿ ಏನೇನೂ ಇರುತ್ತಿರಲಿಲ್ಲ ಖಾಲಿ ! .... ಖಾಲಿ!

ನನ್ನ ಎದುರಿಗೆ ಬಂದೊಡನೆಯೇ ಅವರು ನನ್ನ ಎದೆ ಮುಟ್ಟಿ ಹಿಂದಕ್ಕೆ ತಳ್ಳಿ ನಿಲ್ಲಿಸಿದರು. ಹೊಡೆದಾಟಕ್ಕೆ ಬೀಳುವವರಂತೆ !

ನಾನು ಗಾಬರಿಯಾಗೇ ನಿಂತೆ ! ಹೆದರಿಕೆಯೇನೂ ಆಗಲಿಲ್ಲ. ಅವರ ಬಗೆಗೆ ನನಗೆ ಗೌರವವಿತ್ತು. ನಂಬಿಕೆಯಿತ್ತು. ಅವರು ಹಠಾತ್ತನೇ ಕೇಳಿದರು. ''ಸಿಗರೇಟ್ ಸಿಗರೇಟ್ ತೆಗಿ !!'' ನಾನು ಆಶ್ಚರ್ಯಚಕಿತನಾದೆ. ಅವರಿಗೆ ಏನಾದರೂ ಸೇವೆ ಮಾಡುವ ಅವಕಾಶ ದೊರೆಯಿತಲ್ಲಾ ಎಂದು ಸಂತೋಷವುಂಟಾಯ್ತು. ಆಗ ನಾನು ಸಿಗರೇಟು ಸೇದುತ್ತಿರಲಿಲ್ಲ. ನನ್ನ ಬಳಿ ಸಿಗರೇಟ್ ಇರಲಿಲ್ಲ. ಆದರೂ ಸಹ ಅವರ ಕೋರಿಕೆ ಈಡೇರಿಸಲು ಒಡನೆಯೇ ಪಕ್ಕದಲ್ಲಿದ್ದ ಗೆಳೆಯನೊಬ್ಬನಿಂದ ಒಂದು ಸಿಗರೇಟು ಪಡೆದು ಅವರಿಗೆ ಕೊಟ್ಟೆ. ಅವರು ಅದನ್ನು ಪಡೆದು

''ಇನ್ನೊಂದು '' ಎಂದರು.

ಇನ್ನೊಂದು ಸಿಗರೇಟನ್ನೂ ಕೊಟ್ಟೆ. ಅವರು ಲೋಕಾರೂಢಿಯಾಗಿ ಏನನ್ನೋ ಮಾತನಾಡುತ್ತಾ ಸಿಗರೇಟನ್ನು ತುಂಡು ತುಂಡಾಗಿ ಮುರಿದು, ಕಾಗದವನ್ನು ಪ್ರತ್ಯೇಕಿಸಿ ಅವುಗಳ ಹೊಗೆಸೊಪ್ಪನ್ನು ಅಂಗೈಗೆ ಹಾಕಿ ತಿಕ್ಕಿ ತಿಕ್ಕಿ ಗುಳುಕ್ಕೆಂದು ಬಾಯಿಗೆ ಎಸೆದು ಕೊಂಡರು. ಬಾಯಿ ಮುಚ್ಚಿಕೊಂಡು ತಂಬಾಕನ್ನು ಅಗಿಯುತ್ತಲೇ ಏನೇನೋ ಮಾತನಾಡಿದರು. ಆದರೆ ಆಶ್ಚರ್ಯಚಕಿತನಾಗಿದ್ದ ನಾನು ಬಿಟ್ಟ ಬಾಯಿಯಿಂದ ಅವರನ್ನೇ ನೋಡುತ್ತಿದ್ದೆ ! ಅವರು ಬಾಯಿಯಿಂದ ತಂಬಾಕಿನ ರಸ ಸುರಿಸುತ್ತಾ ಏನೇನೋ ಕೇಳುತ್ತಿದ್ದರು, ಹೇಳುತ್ತಿದ್ದರು.

''ನಿನಗೆ ಕೆಂಗಲ್ ಸಿಕ್ಕಿದ್ದನಂತೆ ! ಒಡೆಯರ್ ಸಿಕ್ಕಿದ್ದನಂತೆ ! ರಾಸ್ಕಲ್‌ಗಳು ! ನಿಮಗೇಕ್ರೋ ಗಾಂಧಿ ಟೋಪಿಗಳು. ಅದು ಬೇರೆ ಕೇಡು ! ಎಂದು ಅವನ್ನ ಕಿತ್ಕೋಬೇಕಾಗಿತ್ತು ನೀನು. ಆಗ ಭೇಷ್ ಎನ್ನುತ್ತಿದ್ದೆ ನಾನು '' ಎಂದು ಅವರು ಹೇಳುತ್ತಿದ್ದಂತೆ ಧಾರಾಳವಾಗಿ ಅವರ ಬಾಯಿನ ತಂಬಾಕಿನ ಎಂಜಲ ಮಳೆ ನನ್ನ ಮುಖಕ್ಕೆ ಸಿಡಿಯಿತು. ನಾನು ಅದನ್ನು ಒರೆಸಿಕೊಳ್ಳುತ್ತಾ ಇನ್ನು ಅವರೊಡನೆ ಹೆಚ್ಚು ಮಾತನಾಡಿದರೆ ನನ್ನ ಗತಿ ಗಂಗಮ್ಮನ ಪಾಲೇ ಆಗುತ್ತದೆ ಎಂದುಕೊಂಡೆ.

''ಬರ್ತೀನಿ.... ಕೆಲಸ ಇದೆ '' ಎಂದು ಅವರ ಕೈಯಿಂದ ತಪ್ಪಿಸಿಕೊಂಡು ಅಲ್ಲಿಂದ ಓಡಿದೆ. ನಲ್ಲಿಯಲ್ಲಿ ಮುಖ ತೊಳೆದುಕೊಂಡು ಬಾಯಿ ಮುಕ್ಕಳಿಸಿ ಶುಚಿರ್ಭೂತನಾಗಿ ಅಡಿಗೆ ಮನೆಗೆ ಹೋದೆ.

ಅವರು ಮಧ್ಯಾಹ್ನ ಊಟಕ್ಕೆ ಬಂದರು. ಊಟದ ಸಮಯ ನಿಜವಾಗಿಯೂ ಅನಂದಮಯ ಸಮಯ. ಎಲ್ಲರೂ ಒಮ್ಮೆಗೆ ಸಿಕ್ಕಿಬಿಡುತ್ತಿದ್ದರು. ಮೆಡಿಕಲ್ ಡಯಟ್‌ನಲ್ಲಿದ್ದವರು ಅಡಿಗೆ ಮನೆಗೇ ಬಂದು ಬಿಡುತ್ತಿದ್ದರು. ಉಳಿದವರು ಜೈಲಿನ ಅಂಗಳದಲ್ಲಿ ಮದುವೆಯ ಊಟಕ್ಕೆ ಕುಳಿತ ಸಾಲುಗಳಂತೆ ನೂರಾರು ಜನರು ಕುಳಿತಿರುತ್ತಿದ್ದರು. ಗೆಳೆಯರನ್ನು ಮಾತನಾಡಿಲು, ಚುಡಾಯಿಸಲು ಬೇಕಾದಷ್ಟು ಅವಕಾಶವಿರುತ್ತಿತ್ತು. ಆ ದಿನ ನಾನೇ ಸಾರನ್ನು ಬಡಿಸುತ್ತಿದ್ದೆ. ಗರುಡಶರ್ಮರ ಎಲೆಯ ಮುಂದೆ ಸಾರಿನ ಬಕೆಟ್ ಸೌಟುಗಳೊಡನೆ ನಾನು ಬಂದೊಡನೆಯೇ ಅವರು ಏನೋ ಹೇಳಿದರು.

''ಝಾಡಿಸಿ ಝಡಿಯೋ ಜಗದ್ಗುರುವೇ. ತಳ ಮುಟ್ಟಿ ಬರಲಿ !'' ಎಂದು ಹೇಳಿದಂತಿತ್ತು. ನನಗೆ ಅವರ ಬೇಡಿಕೆ ಅರ್ಥವಾಯಿತು. ತಳದಲ್ಲಿರುವ ತರಕಾರಿಯ ಹೋಳುಗಳ ಒಂದು ಪ್ರತ್ಯೇಕ ಸೌಟನ್ನೇ ತುಂಬಿಸಿ ಅವರಿಗೆ ಬಡಿಸಿದೆ.

''ಸಾಕು ಸಾಕು ! ಭರ್ಜರಿಯಾಗೇ ಝಾಡಿಸಿಬಿಟ್ಟೆ ಜಗದ್ಗುರು !'' ಎಂದು ನನ್ನನ್ನು ಮೆಚ್ಚಿಕೊಂಡು ತಲೆದೂಗಿ ಊಟ ಮಾಡತೊಡಗಿದರು.

ಎಲೆಯ ಮೇಲೆ ಬಡಿಸಿದ್ದ ಅನ್ನಸಾರು, ಪಲ್ಯ, ಉಪ್ಪಿನಕಾಯಿ, ಎಲ್ಲವನ್ನೂ ಒಟ್ಟಿಗೆ ಕಲಸಿ, ಅವರು ಊಟ ಮಾಡುತ್ತಿದ್ದರು. ನಾನು ಆಶ್ಚರ್ಯದಿಂದ ಅವರೆದುರು ನಿಂತು ಹುಬ್ಬೇರಿಸಿ ನೋಡಿದಾಗ ''ಎಲ್ಲಾ ಸ್ಟಾರ್ಚ್ ಅಲ್ಲವೇ ! ಹೇಗಿದ್ರೂ ಹೊಟ್ಟೆಯಲ್ಲಿ ಎಲ್ಲಾ ಒಟ್ಟಾಗಿ ಬಿಡ್ತವೆ. ಇಲ್ಲೇ ಒಟ್ಟು ಮಾಡಿಬಿಟ್ಟು ನುಂಗಿ ಬಿಡೋಣ! ಜೈ ಜಗತ್ !'' ಎಂದರು.

ನಾನೂ 'ಜೈ ಜಗತ್' ಎಂದು ನಕ್ಕು ಮುಂದೆ ಸಾಗಿದೆ.

ಇಂಜಿನಿಯರಿಂಗ್ ಪದವೀಧರ, ಕಟ್ಟಾ ಗಾಂಧಿವಾದಿ, ಆಜನ್ಮ ಬ್ರಹ್ಮಚಾರಿ ದಿಟ್ಟ ಹೋರಾಟಗಾರ, ಬಾಳಿನ ಅಗತ್ಯಗಳನ್ನು ಅತ್ಯಂತ ಕನಿಷ್ಠ ಮಟ್ಟಕ್ಕೆ ಇಳಿಸಿಕೊಂಡಿದ್ದ ಜಿತೇಂದ್ರಿಯ ಶ್ರೀ ಗರುಡಶರ್ಮ ಈ ಲೋಕದ ಜನರಿಗೆ ವಿಲಕ್ಷಣ ವ್ಯಕ್ತಿಯಂತೆ ಕಾಣಬಹುದು. ಆದರೆ ಅವರ ಹೃದಯದಲ್ಲಿ ತುಡಿಯುತ್ತಿದ್ದ ದೇಶಪ್ರೇಮ, ದೇಶ ಸೇವೆ, ದೀನ-ದಲಿತರ ಉದ್ಧಾರದ ಹಂಬಲ, ಅಸೀಮ ತ್ಯಾಗ ಇವುಗಳನ್ನು ನೆನೆದರೆ ನಾವು ಕುಬ್ಜರಂತೆ ಕಾಣಿಸಿಕೊಳ್ಳುತ್ತೇವೆ.

ಅಂಥವರು ಹಾಗೆ ಬದುಕಿದ್ದ ಕಾರಣದಿಂದಲೇ, ಅವರು ಬ್ರಿಟಿಷ್ ಸರ್ಕಾರ ದೊಡನೆ ರಾಜಿಯಿಲ್ಲದೆ ಹೋರಾಟ ನಡೆಸಲು ಸಾಧ್ಯವಾಯಿತು. ಇಂದಿನ ದೇಶಭಕ್ತರು ಏರ್‌ಕಂಡೀಷನ್ ಛೇಂಬರ್‌ಗಳಲ್ಲಿ, ಮಂತ್ರಿ ಮಹೋದಯರುಗಳಾಗಿ ಕುಳಿತು ಕೊಳ್ಳಲು ಸಾಧ್ಯವಾಯಿತು.

ಪೌರಾಣಿಕ ಯುಗದಲ್ಲಿ ಶಿವನಿಗೆ ಅವನ ಅಣತಿಗಳನ್ನು ನೆರವೇರಿಸಲು ವೀರಭದ್ರನಿದ್ದ. ಅವನು ದಕ್ಷಬ್ರಹ್ಮನ ಯಜ್ಞವನ್ನು ಧ್ವಂಸ ಮಾಡಿ ಅವನ ರುಂಡವನ್ನು ಚಂಡಾಡಿದ. ರಾಮಾಯಣದ ಕಾಲದಲ್ಲಿ ಅವನ ಅಣತಿಗಳನ್ನು ಪಾಲಿಸಲು ಆಂಜನೇಯನಿದ್ದ. ಅವನು ಲಂಕಾಪಟ್ಟಣವನ್ನು ಸುಟ್ಟು ರಾವಣನಿಗೆ ಮಣ್ಣು ಮುಕ್ಕಿಸಿ ಅವನ ಸರ್ವನಾಶಕ್ಕೆ ಹೆದ್ದಾರಿ ನಿರ್ಮಿಸಿದ. ಹಾಗೆಯೇ ಗರುಡಶರ್ಮ ಮಹಾತ್ಮ ಗಾಂಧಿಯ ಅಣತಿಯನ್ನು ಪಾಲಿಸಲು ಬಾಲಬ್ರಹ್ಮಚಾರಿಯಾಗಿ, ವೀರವಿರಾಗಿಯಾಗಿ, ನಂಬಲಸಾಧ್ಯವಾದ ಸಾಹಸ, ಬಲಿದಾನಗಳನ್ನು ಮಾಡಿದ್ದರು.

ಒಂದು ವೇಳೆ ಅವರಿಗೆ ವಿಧಾನಸೌಧ ತೋರಿಸಿ ಅಲ್ಲಿ ಯಾರು ಯಾರು ಇದ್ದಾರೆ? ಹೇಗೆ ಅಲ್ಲಿಗೆ ಬಂದರು ? ಏಕೆ ಅಲ್ಲಿಗೆ ಬಂದರು ? ಈಗ ಅವರು ಏನೇನು ಮಾಡುತ್ತಿದ್ದಾರೆ ಎಂದು ವಿವರಿಸಿ ಹೇಳಿದ್ದರೆ, ಆಗ ಗರುಡಶರ್ಮರು ಏನು ಮಾಡುತ್ತಿದ್ದರು ಎಂದು ಹೇಳುವುದು ಕಷ್ಟ.

ಯುದ್ಧ ಮುಗಿದ ಬಳಿಕ ಸೈನಿಕರನ್ನು ಬ್ಯಾರಕ್‌ಗಳಿಗೆ ಕಳಿಸಿಬಿಡುತ್ತಾರೆ. ಹೊರಗೆ ಬಿಡುವುದಿಲ್ಲ. ಹಾಗೆಯೇ ಒಂದು ದೇಶದ ಸ್ವಾತಂತ್ರ್ಯ ಹೋರಾಟ ಮುಗಿದ ಬಳಿಕ ದರಿದ್ರನಾರಾಯಣನ ಚರುಪನ್ನುಂಡು ಅಳಿಯದೆ ಉಳಿದ ಸ್ವಾತಂತ್ರ್ಯ ಹೋರಾಟ ಗಾರರು ಬಹುಕಾಲ ಬದುಕಿದರೆ ಆಳರಸರೆದುರಿಗೆ ಕಾಲಿನ ಕಸವಾಗುತ್ತಾರೆ. ಇದೆಲ್ಲವನ್ನೂ ತಿರಸ್ಕರಿಸಿ ವೃದ್ಧಾಶ್ರಮವೊಂದರಲ್ಲಿ ಸಲ್ಲೇಖನ ವ್ರತ ಹಿಡಿದು ಯತಿಯಂತೆ ಸತ್ತ ಗರುಡಶರ್ಮರಿಗಿಂತ ಉತ್ತಮ ನಿದರ್ಶನ ಈ ಮಾತಿಗೆ ಬೇಕೇ ?

❊ ❊ ❊ ❊

೧೩.

ಶಾಂತವೇರಿಯ ಅಶಾಂತ ಸಂತ

ಗೋಪಾಲಗೌಡರ ಅನುಭವವೇ ಬೇರೆಯದಾಗಿತ್ತು. ಅವರು ಕಾಗೋಡಿನ ಸುತ್ತಮುತ್ತಲೂ ಇದ್ದ ಸಣ್ಣ ದೊಡ್ಡ ಗ್ರಾಮಗಳಲ್ಲಿ ಆಯ್ದ ಕೆಲವು ಗೇಣಿದಾರರೊಡನೆ ಸಂಚರಿಸುತ್ತಾ ಸತ್ಯಾಗ್ರಹಕ್ಕಾಗಿ ಗೇಣಿದಾರರನ್ನು ಸಂಘಟಿಸುತ್ತಿದ್ದರು. ರಾಜ್ಯ ಮಟ್ಟದಲ್ಲಿ ಪಕ್ಷದ ಪದಾಧಿಕಾರಿಗಳೆಲ್ಲರೂ ಈಗಾಗಲೇ ಸೆರೆಮನೆವಾಸದಲ್ಲೋ ಭೂಗತರಾಗಿಯೋ, ಜಾಮೀನಿನ ಮೇಲೆಯೋ ಇದ್ದದ್ದರಿಂದ ; ಕೇಂದ್ರ ಪಕ್ಷದೊಂದಿಗೆ ಕಾಗದ ಪತ್ರಗಳ ವ್ಯವಹಾರವಿರಿಸಿಕೊಂಡಿದ್ದರೇ ವಿನಃ ಬೇರಿನ್ನಾರ ಜೊತೆಗೂ ಹೆಚ್ಚಿನ ಪತ್ರ ವ್ಯವಹಾರಗಳು ಅವರಿಗೆ ಇರಲಿಲ್ಲ.

ಹೀಗೆ ಅವರೊಮ್ಮೆ ಕಾಗೋಡಿನ ಪಕ್ಕದ ಹಳ್ಳಿಯೊಂದರಲ್ಲಿ ತಂಗಿದ್ದು ಬೆಳಿಗ್ಗೆ ಎದ್ದು, ಪ್ರಾತರ್ವಿಧಿಗಳನ್ನು ಬಯಲಿನಲ್ಲಿ ಪೂರೈಸಿಕೊಂಡು ಬಂದು, ತಾವು ಉಳಿದುಕೊಂಡಿದ್ದ ಮನೆಯ ಕಟ್ಟೆಯ ಮೇಲೆ ತಮ್ಮ ಸಮಸ್ತ 'ಸೆಕ್ರೆಟೇರಿಯೇಟ್' , 'ವಾರ್ಡ್‌ರೋಬ್' ಮತ್ತು 'ಟ್ರಜರಿ' ಆಗಿದ್ದ 'ಹೋಲ್ಡಾಲ್' ಅನ್ನು ಬಿಚ್ಚಿ ಪತ್ರ ವ್ಯವಹಾರಕ್ಕೆ ತೊಡಗಿದರಂತೆ.

ಆಗ ಬೀದಿಯಲ್ಲಿ ಕೆಲವು ರೈತರು 'ಯಾನ್ ಬಂತು.... ಪೋಲೀಸ್ ಯಾನ್!' ಎಂದು ಗಿಡುಗನನ್ನು ಕಂಡ ಕೋಳಿಪಿಳ್ಳೆಗಳಂತೆ ಗಾಬರಿಯಿಂದ ಓಡೋಡಿ, ದಿಕ್ಕಾಪಾಲಾಗಿ ಚದುರಿ ಅತ್ತಿತ್ತ ಓಡತೊಡಗಿದರಂತೆ.

ಇವರಿಗೆ ಆಶ್ರಯ ನೀಡಿದ್ದ ಗೇಣಿದಾರ ಮುದುಕಿ, ಇವರ ಹೋಲ್ಡಾಲ್ ಅನ್ನು ಗಡಿಬಿಡಿಯಿಂದ ಸುತ್ತಿ ಮನೆಯೊಳಗೆ ಅವರನ್ನು ಕರೆದೊಯ್ದು, ಮನೆಯ ಬಾಗಿಲನ್ನು ಮುಚ್ಚಿ ಬೀಗ ಹಾಕಿ ಹೊರ ನಡೆದಳಂತೆ.

ಕಾಗೋಡಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಪೋಲೀಸರ ಪೆಟ್ರೋಲಿಂಗ್ ತೀವ್ರ ತರವಾಗಿತ್ತು. ಎಷ್ಟೇ ಜಾಲಾಡಿಸಿ, ಶೋಧಿಸಿದರೂ ಸತ್ಯಾಗ್ರಹಿಗಳು ಪೋಲೀಸರ ಕೈಗೆ ಸಿಗುತ್ತಿರಲಿಲ್ಲ. ಆದರೆ ಸತ್ಯಾಗ್ರಹ ಮಾತ್ರ ನಡೆಯುತ್ತಲೇ ಹೋಗುತ್ತಿತ್ತು. ಅವರು ಬೇಲಿ ಕಿತ್ತು ಉಳಲು ಪ್ರಯತ್ನ ಮಾಡುತ್ತಿರುವಾಗ ಪೋಲೀಸರಿಗೆ ಸಿಕ್ಕಿ ಬೀಳುತ್ತಿದ್ದರೇ ವಿನಃ ಅದಕ್ಕೆ ಮುಂಚೆ ಪೋಲೀಸರ ಕೈಗೆ ಸಿಕ್ಕಿ ಬೀಳುತ್ತಿರಲಿಲ್ಲ.

ಈ ಕಾರಣದಿಂದ ಅವರ ಇಂದಿನ ಶೋಧನೆ ತೀವ್ರವಾಗಿತ್ತು. ಅವರು ಗ್ರಾಮದ ಪ್ರತಿಯೊಂದು ಮನೆಯನ್ನೂ ಜಾಲಾಡಿಸುತ್ತಾ ಹೋದರು.

ಇತ್ತ ಗೋಪಾಲಗೌಡರು, ಇದ್ದಕ್ಕಿದ್ದಂತೆಯೇ ಕತ್ತಲೆಯ ಕೊಂಪೆಯಾದ ಆ ಮನೆಯ ನಡುಮನೆಗೆ ಬಂದರು. ಆ ಮನೆಗೆ ಒಂದು ಅಟ್ಟ ಇರುವುದು ಕಾಣಿಸಿತು. ಅಲ್ಲೇ ಒಂದು ಏಣಿಯೂ ಇತ್ತು. ಗೋಪಾಲಗೌಡರು ಅಟ್ಟವನ್ನು ಹತ್ತಿ ನೋಡಿದರು. ಅದರಲ್ಲಿ ಅಕ್ಕಿ ತುಂಬುವ ಒಂದು ವಾಡೆ ಇದ್ದದ್ದು ಕಂಡು ಬಂತು. ಅದರ ಹಿಂದೆ ಅಡಗಿ ಕುಳಿತರು.

ಇಡೀ ಗ್ರಾಮದೊಳಗೆಲ್ಲಾ ಮನೆಮನೆಗಳಲ್ಲಿ ಶೋಧನೆ ನಡೆಸುತ್ತಿದ್ದ ಪೋಲೀಸರು ಗದ್ದಲ, ಕಿರಿಚಾಟ, ಬೂಟುಗಾಲುಗಳ ಸದ್ದು ಅವರು ಅಡಗಿದ್ದ ಮನೆಯ ಕಡೆಗೇ ಬರುತ್ತಿತ್ತು.

ಇಷ್ಟು ಹೊತ್ತಿಗೆ ಗೌಡರು ಆ ಮನೆಯ ಅಟ್ಟದಿಂದ ತಪ್ಪಿಸಿಕೊಂಡು ಹೋಗುವ ನಾನಾ ಮಾರ್ಗಗಳನ್ನು ಪರೀಕ್ಷಿಸಿ ನೋಡಿ, ಅದು ನಿರರ್ಥಕವೆಂದು ತೀರ್ಮಾನಿಸಿ, ವಾಡೆಯ ಹಿಂದೆ ನಿಸ್ಸಹಾಯಕರಾಗಿ ಅಡಗಿ ಕುಳಿತಿದ್ದರು.

ಕ್ಷಣಗಳು ವೇಗವೇಗವಾಗಿ ಸಾಗುತ್ತಿದ್ದವು. ಪೋಲೀಸರ ಬೂಟುಗಾಲುಗಳ ಸಪ್ಪಳ ಹತ್ತಿರ ಬರುತ್ತಿತ್ತು. ಕೊನೆಗೆ ಅವರಿದ್ದ ಮನೆಯ ಮುಂದೆ ಒಬ್ಬ ಪೋಲೀಸ್ ಅಧಿಕಾರಿ ನಿಂತು ಕಿರುಚುತ್ತಿದ್ದ.

''ಈ ಮನೆಗೆ ಯಾರು ಬೀಗ ಹಾಕಿರೋರು, ಬೀಗ ತೆಗೀತಿರೋ ಇಲ್ಲ ಈಗಲೇ

ಬೀಗ ಹೊಡೆದು ಹಾಕಬೇಕೋ ! ಯಾರದು ಮನೆ ? ಬೀಗ ತೆಗಿರಿ !'' ಎಂದು ಅಬ್ಬರಿಸತೊಡಗಿದ.

ಒಡನೆಯೇ ಆ ಮನೆಯ ಯಜಮಾನಿ ಮುದುಕಿಗೆ ಅರ್ಥವಾಯಿತು. ಇನ್ನು ಬೀಗದಿಂದ ಯಾವ ಪ್ರಯೋಜವೂ ಇಲ್ಲಎಂದು ! ಆಕೆ ಸದ್ದಿಲ್ಲದೆ ಜನರ ಮಧ್ಯದಿಂದ ನಡೆದು ಬಂದು ಆ ಮನೆಯ ಬೀಗ ತೆಗೆದಳು.

ಪೋಲೀಸರು ಬೇಟೆ ನಾಯಿಗಳಂತೆ ಮನೆಯೊಳಕ್ಕೆ ನುಗ್ಗಿದರು. ಗೋಪಾಲ ಗೌಡರು ಅಡಗಿದ್ದ ಅಟ್ಟ ಕತ್ತಲಲ್ಲಿ ಮುಳುಗಿತ್ತು ಅವರು ಎದ್ದು ನಿಂತು ಎಲ್ಲವನ್ನೂ ಎಚ್ಚರಿಕೆಯಿಂದ ನೋಡುತ್ತಿದ್ದರು. ಒಬ್ಬ ಪೋಲೀಸ್ ಪೇದೆ ಇವರಿದ್ದ ಜಾಗವನ್ನೇ ದಿಟ್ಟಿಸಿ ನೋಡಿದ. ಕತ್ತಲಲ್ಲಿ ಇವರು ಕಾಣಲಿಲ್ಲ. ಆದರೆ ಗೌಡರು ಸದ್ದಿಲ್ಲದೆ ನಿಂತ ಹೆಜ್ಜೆಯಲ್ಲಿ ನಿಂತಂತೆಯೇ ಕುಸಿದು ನೆಲಕ್ಕೆ ಕುಳಿತರು.

ಎಲ್ಲವೂ ಸ್ತಬ್ಧವಾಯಿತು. 'ಬದುಕಿದೆಯಾ ಬಡಜೀವ' ಎಂದು ಗೌಡರು ನಿಟ್ಟುಸಿರು ಬಿಟ್ಟರು. ಮನೆಯಿಂದ ಪೋಲೀಸರು ನಿರ್ಗಮಿಸಿದರು ಎಂದುಕೊಂಡರು. ಮನೆ ಎಲ್ಲವೂ ನಿಶ್ಶಬ್ಧವಾಗಿತ್ತು. ಪೋಲೀಸಿನವರು ಎಲ್ಲರೂ ಹೋಗಿದ್ದಾರೋ ಏನೋ ಎಂದು ನೋಡಲು ಗೌಡರು ವಾಡೆಯ ಹಿಂದಿನಿಂದ ಸ್ವಲ್ಪ ತಲೆ ಎತ್ತಿ ನೋಡಿದರು. ಅವರಿಗೆ ಆಶ್ಚರ್ಯ ಕಾಯ್ದಿತ್ತು.

ಕಟ್ಟಕಡೆಗೆ ಉಳಿದಿದ್ದ ಒಪ್ಪ ಪೋಲೀಸ್ ಪೇದೆ ಸದ್ದಿಲ್ಲದಂತೆ ಕುತೂಹಲದಿಂದ ಅಟ್ಟಕ್ಕೆ ಹಾಕಿದ್ದ ಏಣಿಯನ್ನು ಮುಕ್ಕಾಲು ಪಾಲು ಏರಿ, ಅಟ್ಟದ ಒಳಭಾಗವನ್ನು ನೋಡಲು ಕತ್ತು ಮುಂದೆ ಮಾಡಿದ್ದ. ಅವನು ಗೌಡರನ್ನು ಕಂಡಿದ್ದೇ ತಡ, ಏಣಿಯ ಮೇಲೆ ನಿಂತುಕೊಂಡೇ ಎರಡೂ ಕೈಗಳನ್ನು ಮೇಲಕ್ಕೆತ್ತಿ

''ಹೋ ! ಹೋ! ಹೋಯ್ ! ಏಯ್'' ಎಂದು ಭೀತಿಯಿಂದ ಕೂಗಿಕೊಳ್ಳ ತೊಡಗಿದ. ಇನ್ನು ಅಡಗಿ ಪ್ರಯೋಜನವಿಲ್ಲವೆಂದು ಗೌಡರು ಪೂರ್ತಿಯಾಗಿ ಎದ್ದು ನಿಂತರು.

ಅಷ್ಟರಲ್ಲಿ ಇನ್ನಿತರ ಪೋಲೀಸರು ಮನೆಯೊಳಕ್ಕೆ ಧಾವಿಸಿದ್ದರು. ಅದನ್ನು ಕಂಡು ಧೈರ್ಯ ಪಡೆದ ಪೋಲೀಸ್ ಪ್ಯಾದೆ.

''ಅಟ್ಟ ಹತ್ತಿ ಕುಳಿತುಕೊಂಡ್ರೆ ಬಿಡ್ತೀವ ! ಇಳೀರ್ರಿ ಕೆಳಕ್ಕೆ ! '' ಎಂದು ಜೋರು ಮಾಡಿದ.

''ಮೊದಲು ನೀನು ಇಳಿಯಪ್ಪ. ನಾನು ಬರ್ತೀನಿ '' ಗೌಡರು ಎಂದರು.

ಪೋಲೀಸಿನವನು ಹೆಮ್ಮೆಯಿಂದ ಬೀಗುತ್ತಾ ಅವರನ್ನೇ ಕಣ್ಣಲ್ಲಿ ಕಣ್ಣಿಟ್ಟು

ನೋಡುತ್ತಾ ಒಂದೊಂದೇ ಹೆಜ್ಜೆಯನ್ನು ಏಣಿಯ ಮೆಟ್ಟಿಲ ಮೇಲೆ ಇಡುತ್ತಾ ಕೆಳಗಿಳಿದ. ಅವನ ಹಿಂದೆಯೇ ಗೋಪಾಲಗೌಡರೂ ಅಟ್ಟದಿಂದ ಕೆಳಕ್ಕಿಳಿದು ಬಂದರು.

ಒಡನೆಯೇ ಅವರು ತಮ್ಮ ಮೈ-ಕೈಗಳನ್ನು ನೋಡಿಕೊಂಡರು. ಜೇಡರ ಬಲೆಯ ಕಪ್ಪು ಇಲ್ಲಣ ಕಸ -ಕಡ್ಡಿಗಳು ತಲೆ ತೋಳುಗಳಿಗೆ ಹತ್ತಿದ್ದುವು. ಅಲ್ಲೆ ಇದ್ದ ಸಣ್ಣ ಕನ್ನಡಿಯಲ್ಲಿ ತಮ್ಮ ಮುಖವನ್ನು ನೋಡಿಕೊಂಡರು. ತಲೆ -ಮುಖಗಳಿಗೂ ಕಪ್ಪು ಇಲ್ಲಣದ ಎಸಳುಗಳು ಹತ್ತಿಕೊಂಡಿದ್ದವು. ವಿಜಯೋತ್ಸಾಹದಿಂದ ಬೀಗುತ್ತಿದ್ದ ಪೋಲೀಸ್ ಜಮಾದಾರ್ ಕೇಳುತ್ತಿದ್ದ.

''ಏನು ? ಹಳ್ಳಿ ಹಳ್ಳಿಗಳಲ್ಲಿ 'ಸಬರ' ಮಾಡ್ತೀರಾ ? '' ಅವನ ಮಾತು ಕೇಳಿ ಗೋಪಾಲಗೌಡರಿಗೆ ನಗು ಬಂತು. ''ಸಬರ ಅಲ್ಲವೋ ಮಾರಾಯ ! ಶಿಬಿರ ಮೊದಲು ಕನ್ನಡ ಸರಿಯಾಗಿ ಮಾತಾಡೋದು ಕಲ್ತುಕೊಳ್ಳಪ್ಪ.''

''ಇಕ್ಲಿ. ಈಗ ಹೇಳು..... ಬೇರೆಯವರೆಲ್ಲಾ ಎಲ್ಲಿದ್ದಾರೆ ? ಹೇಳು ಹೇಳು ! ಬೇಗ ಹೇಳು !''

ಅಷ್ಟರಲ್ಲಿ ಯಾರೋ ಒಂದು ಚೆಂಬು ನೀರು ತಂದುಕೊಟ್ಟರು. ಗೋಪಾಲಗೌಡರು ಪೋಲೀಸಿನವನ ಮಾತಿಗೆ ಕಿವಿಗೊಡದೆ ತಮ್ಮ ಮುಖ ಕೈಕಾಲುಗಳನ್ನು ಸ್ವಚ್ಛಮಾಡಿಕೊಳ್ಳತೊಡಗಿದರು.

ಅವರ ಮುಂದೆ ತಾನು ಸುಮ್ಮನೆ ಕಂಠಶೋಷಣೆ ಮಾಡಿಕೊಳ್ಳುವುದಕ್ಕಿಂತ ತಾನೇ ಇತರರು ಎಲ್ಲಿದ್ದಾರೆ ಎಂದು ಹುಡುಕುವುದು ಉತ್ತಮ ಎಂಬ ಪರಿಜ್ಞಾನ ಆ ಪೋಲೀಸನವನಿಗೆ ಉಂಟಾಯಿತು, ಎಂದು ಕಾಣುತ್ತದೆ.

ಮೈ-ಕೈ, ಕೂದಲು, ಕಚ್ಚೆಪಂಚೆ ಇವುಗಳ ಸ್ವಚ್ಛತೆ ಕಡೆಗೆ ಗೌಡರು ಗಮನಹರಿಸಿ ಬಿಟ್ಟರೆ ಆಯ್ತು. ಪೋಲೀಸರೇ ಬರಲಿ ! ಭೂಕಂಪವೇ ಆಗಲಿ ! ಅವರು ಆ ಪ್ರಸಾಧನ ಪರಿಶ್ರಮದಿಂದ ಹೊರಬರುವುದು ಬಳಿಯಿದ್ದವರು ಕಾಯ್ದು ಕಾಯ್ದು ಸಾಕಾದ ಬಳಿಕವೇ. ಈ ಅನುಭವ ಬಂದ ಒಡನೆಯೇ ಪೋಲೀಸರು ಮನೆಯನ್ನೆಲ್ಲಾ ಮತ್ತೊಮ್ಮೆ ತಾವೇ ಶೋಧಿಸತೊಡಗಿದರು. ನಡುಮನೆಯ ಮೂಲೆಯಲ್ಲಿ ಎರಡು ವಾಡೆಗಳು ಒಂದರ ಪಕ್ಕದಲ್ಲಿ ಒಂದು ಇದ್ದವು. ಅವೆರಡು ವಾಡೆಗಳನ್ನೂ ಒಂದು ದೊಡ್ಡ ಪಂಚೆಯಿಂದ ಮುಚ್ಚಲಾಗಿತ್ತು. ಪೋಲೀಸಿನವರಿಗೆ ಒಂದು ವಾಡೆಯ ಮೇಲೆ ಮನುಷ್ಯನ ತಲೆಬುರುಡೆಯಂತೆ ಏನೋ ಕಾಣಿಸಿತು. ''ಇನ್ನೊಂದು ಬೇಟೆ ಸಿಕ್ಕಿತು !'' ಎಂದು ಪೋಲೀಸಿನವನು ''ಲೇಯ್ !'' ಎಂದು ಉದ್ಗಾರ ಮಾಡಿದ. ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ವಾಡೆಯ ಮೇಲಿದ್ದ ಪಂಚೆಯನ್ನು ಅತ್ತ ಸರಿಸಿದ. ಅದರ ಕೆಳಗೆ ಇಟ್ಟಿದ್ದ ಒಂದು ಗುಂಡು ಹಲಸಿನಹಣ್ಣು ! ಮನುಷ್ಯನ ತಲೆಯಲ್ಲ . ನಿರಾಶೆಯಿಂದ 'ಛೇ !'

ಎಂದ. ಆದರೆ ಮರುಕ್ಷಣವೇ ಅದನ್ನು ಕೈಯಿಂದ ಎತ್ತಿ ಹಣ್ಣಾಗಿದೆಯೇ , ವಾಸನೆ ಬರುತ್ತಿದೆಯೇ ಎಂದು ಪರೀಕ್ಷಿಸಲು ಮೂಸಿ ನೋಡಿದ, 'ಕಸುಗಾಯಿ !' ನಿರಾಶನಾಗಿ ಅದನ್ನು ನೆಲಕ್ಕೆಸೆದ. ಅದು ಉರುಳುತ್ತಾ ಹೋಗಿ ವಾಡೆಯ ತಳಕ್ಕೆ ಬಡಿದು, ಅದಕ್ಕೆ ಮುಚ್ಚಿದ್ದ ಬಿಳಿ ಪಂಚೆಯನ್ನು ಅತ್ತ ಸರಿಸಿತು !

ಪೋಲೀಸಿನವನು ನೋಡುತ್ತಾನೆ ! ವಾಡೆಗೆ ಎರಡು ಕಾಲು ಬಂದಿದೆ ! ಅವನು ಆಶ್ಚರ್ಯದಿಂದ ಮುನ್ನುಗ್ಗಿ ಪಂಚೆಯನ್ನು ಎಳೆಯುತ್ತಾನೆ. ವಾಡೆಗೆ ಒತ್ತಿಕೊಂಡು ನಿಂತಿದ್ದಾರೆ. ಮಂಡಗಳಲೆಯ ಹೊಸೂರು ರಾಮನಾಯ್ಕರು ! ಅವರು ಅಲ್ಲಿ ಅಡಗಿದ್ದುದು ಗೋಪಾಲಗೌಡರಿಗೂ ಗೊತ್ತಿರಲಿಲ್ಲ.

ಇಬ್ಬರನ್ನೂ ದಸ್ತಗಿರಿ ಮಾಡಿ ಸಾಗರಕ್ಕೆ ಕರೆದೊಯ್ದರು ಪೋಲೀಸಿನವರು. ಗೋಪಾಲಗೌಡರ ಸಂಗಾತಿಗಳು ಅವರ ಸೆಕ್ರೆಟರಿಯಟ್ ಅನ್ನು ಪೋಲೀಸರ ಕೈಗೆ ಸಿಕ್ಕದಂತೆ ಕಾಪಾಡಿ, ಸಾಗರಕ್ಕೆ ರವಾನಿಸಿದರು.

ಗ್ರಾಮಸ್ಥರು ಅವರ ಸುತ್ತಲೂ ಸೇರಿದರು. ಅವರು ಪೋಲೀಸ್ ವ್ಯಾನ್ ಹತ್ತುತ್ತಿದ್ದಂತೆ ಜಯಕಾರಗಳು ಮೊಳಗಿದುವು.

''ಇಂಕಿಲಾಬ್ ಜಿಂದಾಬಾದ್ !''

''ಉಳುವವನೇ ನೆಲದೊಡೆಯ !''

''ಡಾ|| ಲೋಹಿಯಾ ಜಿಂದಾಬಾದ್ !''

''ಗೋಪಾಲಗೌಡ ಜಿಂದಾಬಾದ್ !''

''ಕಾಗೋಡು ಸತ್ಯಾಗ್ರಹ ಜಿಂದಾಬಾದ್ !''

ಹೀಗೆ ಗೋಪಾಲಗೌಡರು, ವಿಪರೀತ ಶ್ರಮದ ಬಳಿಕ ಶಿವಮೊಗ್ಗ ಜೈಲಿಗೆ ಬಂದರು. ಅಲ್ಲಿ ಅವರಿಗೆ ವಿಶ್ರಾಂತಿಯೇನೋ ದೊರೆಯಿತು. ಆದರೆ ಮಾನಸಿಕವಾಗಿ ಭಾವನಾತ್ಮಕವಾಗಿ ಅವರು ಚಿಂತಾಕ್ರಾಂತರಾಗಿಯೇ ಇದ್ದರು. ಬಡ ಗೇಣಿದಾರರು ಮುಂದೆ ಹೇಗೆ ಸತ್ಯಾಗ್ರಹವನ್ನು ನಡೆಸಿಕೊಂಡು ಹೋಗುತ್ತಾರೆ ? ಯಾವಾಗ ತಮ್ಮ ತಮ್ಮ ಜಮೀನುಗಳನ್ನು ಹಿಂದಕ್ಕೆ ಪಡೆದುಕೊಳ್ಳುತ್ತಾರೆ ? ಯಾವಾಗ ಜಮೀನನ್ನು ಉಳುಮೆ ಮಾಡಿ, ತಮ್ಮ ಕುಟುಂಬದ ಪೋಷಣೆ ಮಾಡುತ್ತಾರೆ ? ಎಂದಿಗೆ ಅವರ ಮೇಲಿನ ದೌರ್ಜನ್ಯಗಳು ನಿಲ್ಲುತ್ತವೆ ? ಯಾವಾಗ ಈ ಸೆರೆಮನೆವಾಸದಿಂದ ಬಿಡುಗಡೆ ಯಾಗಿ ತಮ್ಮ ಮನೆ-ಮಠ, ಹೆಂಡಿರು-ಮಕ್ಕಳೊಡನೆ ಶಾಂತಿಯಿಂದ ಬದುಕುತ್ತಾರೆ? ಮುಂದೇನು ? ಮುಂದೇನು? ಎಂಬುದೇ ಅವರ ಧಾವಂತವಾಗಿತ್ತು. ದೈಹಿಕವಾಗಿ ಆಮಶಂಕೆ, ನಿತ್ರಾಣಗಳಿಗೆ ಒಳಗಾಗಿ ಅವರು ಸಾಧಾರಣವಾಗಿ ತಮ್ಮ ಈಚಲು

ಚಾಪೆಯಲ್ಲೇ ಮಲಗಿರುತ್ತಿದ್ದರು. ಸದಾಶಿವರಾಯರು ಅವರನ್ನು ಪ್ರೀತಿಯ ತಮ್ಮನಿಗಿಂತಲೂ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ಅವರಿಗೆ ಬೇಕಾದ ಗಂಜಿ, ಸಪ್ಪೆಸಾರು, ಔಷಧಿಗಳು ಎಲ್ಲವನ್ನೂ ಕಾಲಕಾಲಕ್ಕೆ ಒದಗಿಸುತ್ತಿದ್ದರು. ಅವರ ಸುತ್ತಲೂ ಬಾ.ಸು. ಕೃಷ್ಣಮೂರ್ತಿ, ಯು.ಆರ್. ಅನಂತಮೂರ್ತಿ ಮೊದಲಾದವರು ಸೇರಿ ಅಡಿಗರ, ಬೇಂದ್ರೆಯವರ, ಡಿ.ಎಸ್. ಕರ್ಕಿಯವರ, ಕುವೆಂಪುರವರ ಮಧುರ, ವೀರ, ಧೀರ ಗೀತೆಗಳನ್ನು ಗುನುಗುತ್ತಿದ್ದರು. ಖಾದ್ರಿ ಶಾಮಣ್ಣನವರಿಗೆ ಸೀತಾರಾಮ ಐಯ್ಯಂಗಾರ್ ಒದಗಿಸುತ್ತಿದ್ದ ಪತ್ರಗಳನ್ನು ಅವರು ತಂದು ಗೋಪಾಲಗೌಡರಿಗೆ ತೋರಿಸುತ್ತಿದ್ದರು. ಪಕ್ಷದ ಪೊಲಿಟ್‌ಬ್ಯೂರೋ ಅವರ ಸುತ್ತಲೂ ಸೇರುತ್ತಿತ್ತು. ತೀರ್ಮಾನಗಳು ಸಂದೇಶಗಳು ಹೊರಗಿನ ಸಂಗತಿಗಳು ಅಲ್ಲಿ ಚರ್ಚೆಯಾಗುತ್ತಿದ್ದವು. ಸೆರೆಮನೆಯಲ್ಲಿದ್ದರೂ ಈಚಲು ಚಾಪೆಯ ಮೇಲೆ ಮಲಗೇ ಇದ್ದರೂ ಅವರ ಸೆಕ್ರೆಟರೀಯೇಟ್ ಸದಾ ಎಡೆಬಿಡದೆ ಕಾರ್ಯ ಪ್ರವೃತ್ತವಾಗಿರುತ್ತಿತ್ತು. ಅವರು ರಾಜ ವಂಶದಲ್ಲಿ ಜನಿಸಿದವರು. ದಟ್ಟದಾರಿದ್ರ್ಯದಲ್ಲಿ ವಿಧಿ ಅವರನ್ನು ಬೇಕೆಂದೇ ಹುಟ್ಟಿಸಿತ್ತು. ಬಾಳಿನುದ್ದಕ್ಕೂ ಕಷ್ಟಕಾರ್ಪಣ್ಯಗಳನ್ನೇ ಸರಮಾಲೆ ಹೆಣೆದಿತ್ತು ಏಕೆ ? ತನ್ನ ಸಹಮಾನವರ ಬನ್ನ-ಬವಣೆಗಳನ್ನು ಅಂತಃಕರಣಪೂರ್ವಕವಾಗಿ ಅರ್ಥ ಮಾಡಿಕೊಳ್ಳಲಿ ಎಂದು. ನಾನು 'ಫುಡ್ ಮಿನಿಸ್ಟರ್‌ಗಿರಿ' ಬಿಟ್ಟಿದ್ದನ್ನು ಅಭಿನಂದಿಸಿದರು.

''ನೀನು ಚೆನ್ನಾಗಿ ಓದಿಕೊಂಡಿದ್ದೀಯೆ. ನೀನು ಅದೃಷ್ಟವಂತ. ಒಳ್ಳೆಯ ತಂದೆತಾಯಿಗಳು ನಿನಗೆ ಸಿಕ್ಕಿದರು. ಕಾಲೇಜು ಓದಿ ಪದವಿ ಪರೀಕ್ಷೆಯನ್ನು ಮುಗಿಸಿ ಬಂದಿದ್ದೀಯೆ. ನನಗೆ ಆ ಅದೃಷ್ಟ ದೊರೆಯಲಿಲ್ಲ. ಈಗ ನೀನು ತಿಂಡಿಪೋತರ ಹೊಗಳಿಕೆಗೆ ಮರುಳಾಗಿ ಅಡಿಗೆಭಟ್ಟನಾಗಿ ಬಿಡಬೇಡ. ನೀನು ವಿದ್ಯಾಮಂತ್ರಿ ಯಾಗಿದ್ದಾಗ ಜೈಲಿನಲ್ಲಿ ನಡೆಯುತ್ತಿದ್ದ ಮದ್ಯಾಹ್ನದ ಸ್ಟಡೀ ಕ್ಲಾಸಸ್ ಎಷ್ಟು ಉದ್ಬೋಧಕವಾಗಿರುತ್ತಿದ್ದವು. ಹಾರಾಲ್ಡ್ ಲಾಸ್ಕಿ, ಸಿ.ಇ.ಎಂ. ಜೋಡ್, ಜಿ.ಡಿ.ಹೆಚ್. ಕೋಲ್.... ಇವರ ಕೃತಿಗಳ ಗಂಧವೇ ಇಲ್ಲಿ ಯಾರಿಗೂ ಇರಲಿಲ್ಲ. ಜಗತ್ತಿನ ಉದಾತ್ತ ಚಿಂತಕರ ವಿಚಾರದ ನೆರಳೂ ಇಲ್ಲಿ ಬಿದ್ದಿರಲಿಲ್ಲ. ನೀನು ನಮ್ಮೆಲ್ಲರಿಗೆ ಅದರ ಅರಿವನ್ನು ಉಂಟು ಮಾಡಿಕೊಟ್ಟೆ. 'ಫಿಲಿಫ್ ಸ್ಪ್ರ್ಯಾಟ್' ಎಂಬ ಮಹನೀಯರು ಯಾರೋ ನನಗೆ ಗೊತ್ತಿಲ್ಲ. ಆದರೆ ಅವರು ನಾಗಭೂಷಣ ನಮ್ಮ ಪಾರ್ಟಿ ಅಧ್ಯಕ್ಷ ಆಗಿದ್ದಾಗ ಬಳೇಪೇಟೆಯ ಮೂರನೇ ಅಂತಸ್ತಿನ ಲೈಟಿಲ್ಲದ ಹರಕು ಚಾಪೆಯ ಆಫೀಸಿನಲ್ಲಿ ನಡೆಸುತ್ತಿದ್ದ ವ್ಯಾಖ್ಯಾನಗಳು ಅಮೋಘವಾಗಿರುತ್ತಿದ್ದವು ಎಂಬುದನ್ನು ಕೇಳಿದ್ದೇನೆ. ಆತ ಹುಟ್ಟಿನಿಂದ ಇಂಗ್ಲೀಷ್‌ಮನ್, ನಿಷ್ಠೆಯಿಂದ ಲೆಫ್ಟಿಸ್ಟ್, ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಕಾರಾಗೃಹಗಳಿಂದ ತಪ್ಪಿಸಿಕೊಂಡು ; ಆತ ಅಜ್ಞಾತವಾಗಿ ಎಸ್.ಎನ್. ಹೊಸಾಳಿಯವರ 'ಮೈಸಿಂಡಿಯಾ' ಇಂಗ್ಲಿಷ್ ವಾರಪತ್ರಿಕೆಯಲ್ಲಿ ದುಡಿಯುತ್ತಿದ್ದರು. ನಿಮಗೆ ಪಾಠ

ಹೇಳಿಕೊಟ್ಟ ಬಳಿಕ ಹಳೆಯ ಸೀಮೆಎಣ್ಣೆ ದೀಪ ಹಚ್ಚಿದ ಮುರುಕಲು ಸೈಕಲ್ ಹತ್ತಿ ಕಂಟೋನ್ಮೆಂಟ್ ಕಡೆಗೆ ಹೊರಟು ಬಿಡುತ್ತಿದ್ದರು ಎಂದು ನೀನು ಹೇಳುವುದನ್ನು ನಾನು ಕೇಳಿದ್ದೇನೆಯೇ ಹೊರತು ನಾನು ಅವರನ್ನು ನೋಡಿಲ್ಲ. ಅವರು ಧನ್ಯರು. ಜಗತ್ತಿನ ದುಡಿಮೆಗಾರರ ನಿಜವಾದ ಗುರುಗಳು. ಮಾರ್ಕ್ಸ್, ಏಂಜಲ್ಸ್, ಗಾಂಧಿ ಮೊದಲಾದ ಮಹಾನ್ ಚಿಂತಕರ, ಸಾಧಕರ ಅಮರ ಸಂದೇಶಗಳನ್ನು ಜಗತ್ತಿಗೆ ಪ್ರಸಾರ ಮಾಡುವ ಅಮರ ಪ್ರಚಾರಕರು. ಸಮಾಜವಾದದ ಸಂತರು. ಅವರು ಆ ಪಕ್ಷ ಈ ಪಕ್ಷ ಎಂದು ದುಡಿದವರಲ್ಲ . ದುಡಿಮೆಗಾರರ ಜಗತ್ತನ್ನು ನ್ಯಾಯ-ಸಮಾನತೆಗಳ ತಳಹದಿಯ ಮೇಲೆ ಸ್ಥಾಪಿಸಲು ದುಡಿದ ಭೂಲೋಕದ ದೇವತೆಗಳು ! ನೀನು ಈ ಹೋಂ ಮಿನಿಸ್ಟರ್‌ಗಿರಿಯನ್ನು ಬಿಡು. ಮತ್ತೆ ವಿದ್ಯಾಮಂತ್ರಿಯಾಗು. ಸ್ಟಡೀ ಕ್ಲಾಸ್‌ಗಳನ್ನು ಪ್ರಾರಂಭಿಸು'' ಎಂದೆಲ್ಲಾ ಬುದ್ಧಿ ಹೇಳುತ್ತಿದ್ದರು.

ಗೋಪಾಲಗೌಡರಿಗೆ ಕುಶಾಗ್ರಮತಿ ಇತ್ತು. ಅವರ ಒಳನೋಟ ನನ್ನನ್ನು ಎಚ್ಚರಿಸಿತ್ತು. ಮತ್ತೆ ನಾನೆಂದೂ ನನ್ನ ಹಿರಿಯ ಸಂಗಾತಿಗಳ ಪ್ರಶಂಸೆಗೆ ಮರುಳಾಗಿ, ಸಕ್ಕರೆ ಪೊಂಗಲ್, ಪುಳಿಯೋಗರೆ, ತೇಂಗೊಳಲ್‌ಗಳನ್ನು ಅತ್ಯಂತ ಆಸಕ್ತಿಯಿಂದ ತಯಾರಿಸಿ ಜೈಲಿನಲ್ಲಿದ್ದ ಸಂಗಾತಿಗಳಿಗೆ ಒದಗಿಸುವ ಕಾರ್ಯಕ್ಕೆ ಕೈ ಹಾಕಲಿಲ್ಲ. ಮತ್ತೆ ನನ್ನ ವ್ಯಾಸಂಗ, ಪಾಠ ಪ್ರವಚನಗಳ ಕಡೆಗೆ ಗಮನ ಹರಿಸಿದೆ.

ಅವರು ಜೈಲಿನಲ್ಲಿ ನನಗೆ ಹೇಳಿದ 'ಅಕ್ಬರಾಯಣ' ಕತೆಯನ್ನು ನಾನು ಈಗಲೂ ನೆನೆಸಿಕೊಂಡು ಬಿದ್ದು ಬಿದ್ದು ನಗುತ್ತೇನೆ.

ನಾವು ಜೈಲು ಸೇರಿರುವುದು ನಮ್ಮ 'ಯುದ್ಧಭೂಮಿ'ಯ ದಣಿವನ್ನು ಪರಿಹರಿಸಿಕೊಳ್ಳುವುದಕ್ಕೆ. ಸಿದ್ಧಾಂತ ಜ್ಞಾನವನ್ನು ಸ್ಪಷ್ಟಪಡಿಸಿಕೊಳ್ಳುವುದಕ್ಕೆ. ನಮ್ಮ ಸಾಮರ್ಥ್ಯವನ್ನು ಅಧಿಕಗೊಳಿಸಿಕೊಳ್ಳುವುದಕ್ಕೆ. ದುಡಿಯುವ ವರ್ಗದ ಪರವಾಗಿ ಹೂಡಬೇಕಾಗಿರುವ ಮುಂದೆ ಬರುವ ಹೋರಾಟಗಳನ್ನು ಎದುರಿಸಲು ಸರ್ವಸಾಮರ್ಥ್ಯ ಗಳಿಸಿಕೊಳ್ಳುವುದಕ್ಕೆ ; ಹೊಟ್ಟೆಬಾಕರಾಗುವುದಕ್ಕಲ್ಲ ! ಹೊಗಳು ಭಟ್ಟರಾಗುವುದಕ್ಕಲ್ಲ ! ಇಂಥ ಜನರಿಂದಲೂ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕು. ಮುಂದಿನ ಹೋರಾಟಗಳಿಗೆ ಅಣಿಗೊಳ್ಳಬೇಕು. ಎಷ್ಟು ಕೋಟಿ ಮುಗ್ಧರು, ನಿಸ್ಸಹಾಯಕರು, ಕಡು ಬಡವರು, ಭೂ ಹೀನರು, ನೌಕರಿ ಹೀನರು, ಅನ್ಯಾಯ - ದೌರ್ಜನ್ಯಕ್ಕೆ ಒಳಗಾದ ಸ್ತ್ರೀಯರು, ಅಸಡ್ಡೆಗೆ ಒಳಗಾಗಿರುವ ಮಕ್ಕಳು -ವೃದ್ಧರು ಈ ದೇಶದಲ್ಲಿ ನಿನ್ನಂಥ ನನ್ನಂಥ ನಿಸ್ವಾರ್ಥ ಕಾರ್ಯಕರ್ತರಿಗಾಗಿ ತುದಿಗಾಲಿನಲ್ಲಿ ಕಾಯ್ದು ನಿಂತಿದ್ದಾರೆ. ಅವರನ್ನು ನಿರಾಶೆಗೊಳಿಸುವುದನ್ನು ನಾನು ಕನಸುಮನಸಿನಲ್ಲೂ ಊಹಿಸಿಕೊಳ್ಳಲಾರೆ !

''ಈಗ ನೋಡು, ನೀನು ಎಂಥ ಕೆಲಸ ಮಾಡಿ ಇಲ್ಲಿಗೆ ಬಂದಿದ್ದೀಯ ! ನಿನ್ನ ಮೇಲೆ ನಿನ್ನ ತಂದೆ ತಾಯಿ ಎಷ್ಟು ನಿರೀಕ್ಷೆಗಳನ್ನಿರಿಸಿಕೊಂಡು ನಿನ್ನನ್ನು ಓದಿಸಿದ್ದಾರೆ. ಪದವೀಧರನನ್ನಾಗಿ ಮಾಡಲು ಯತ್ನಿಸಿದ್ದಾರೆ. ಗೆಜೆಟೆಡ್ ಉದ್ಯೋಗಿಯಾಗಲು ವ್ಯವಸ್ಥೆ ಮಾಡಿದ್ದಾರೆ. ಆದರೆ ನೀನು ಮಾಡಿರುವುದೇನು ? ಅವರ ಸೇವೆಯನ್ನು ನಿರ್ಲಕ್ಷಿಸಿ, ನಿನ್ನ ಸುಖವನ್ನು ನಿನ್ನ ಭವಿಷ್ಯವನ್ನು ನಿರ್ಲಕ್ಷಿಸಿ ; ಇದ್ಯಾವುದೋ ಹೋರಾಟಕ್ಕೆ ಬಂದು, ಈ ಜೈಲು ಸೇರಿದ್ದೀಯ. ಏಕೆ ? ನಿನ್ನ ಸ್ವಂತ ಸುಖಕ್ಕಿಂತ, ನಿನ್ನ ಸ್ವಂತ ಭವಿಷ್ಯಕ್ಕಿಂತ, ನಿನ್ನ ತಂದೆ-ತಾಯಿ-ಅಕ್ಕ-ತಂಗಿ-ತಮ್ಮಂದಿರ ಭವಿಷ್ಯಕ್ಕಿಂತ ಈ ದುಡಿಯುವ ಶ್ರಮವರ್ಗದ ಸೇವೆ ಅದಕ್ಕಿಂತಲೂ ದೊಡ್ಡದು ; ಅದಕ್ಕಿಂತಲೂ ಅಧಿಕ, ಎಂದು ನಂಬಿರುವುದರಿಂದ ಅಲ್ಲವೇ ? 'ನೀನು' 'ನಾನು' ಮೂರ್ಖರೆಂದು ಜಗತ್ತು ಕರೆಯುತ್ತದೆ. ಈ ಮಹತ್ಕಾರ್ಯ ನಮ್ಮದು. ಈ ಆದರ್ಶ ನಮ್ಮದು. ಪ್ರಾಣ ಹೋಗಲಿ, ಆ ಆದರ್ಶವನ್ನು ನಾವು ಬಿಡದೆ ಇರಬೇಕು '' ಎಂದು ಭಾವಾವೇಶದಿಂದ ನನಗೆ ಹೇಳುತ್ತಿದ್ದರು. ಯೌವ್ವನದ ಮಾಂತ್ರಿಕ ; ಬದುಕಿನ ಮಹಾಸಾಗರದ ಉತ್ತುಂಗ ವೀಚಿಗಳ ದೈತ್ಯಶಕ್ತಿಯ ಭೋರ್ಗರೆತ ಆರ್ಭಟಗಳೇ ನಮ್ಮನ್ನು ಕೈಬೀಸಿ ಕರೆಯುತ್ತಿತ್ತು. ಮಂತ್ರಮುಗ್ಧಗೊಳಿಸುತ್ತಿತ್ತು !

❊ ❊ ❊ ❊

೧೪.

ಹ್ಯಾಂಡ್‌ಷೇಕ್ ಗ್ರ್ಯಾಂಡ್ ಮಾಸ್ಟರ್ -ಕಾಗೋಡು ಕೃಷ್ಣ

'ಸಿದ್ಧಾಂತ' , 'ಹೋರಾಟ', 'ರಣತಂತ್ರ' ಮೊದಲಾದ ಪಾಠಪ್ರವಚನಗಳಿಗಿಂತ ಆಟದ ಮೈದಾನದಲ್ಲಿ ಸಂಗಾತಿಗಳೊಡನೆ ಕುಣಿದಾಡುವುದೇ ನನಗೆ ಮೆಚ್ಚಿಗೆಯಾಗಿತ್ತು. ಅದರಲ್ಲೂ ಕಬ್ಬಡ್ಡಿ ಹದಿನೆಂಟು ಪೌಂಡ್ ಕಬ್ಬಿಣದ ಗುಂಡು ಎಸೆತ, ಲಾಂಗ್‌ಜಂಪ್, ಹೈಜಂಪ್, ಪಿರಮಿಡ್ ಬಿಲ್ಡಿಂಗ್, ಸಾಮು ಹೊಡೆಯುವುದು, ದಂಡ, ಬಸ್ಕಿ ಇಂಥದ್ದರಲ್ಲೇ ಜೈಲಿನ ಯುವ ಸಂಗಾತಿಗಳೊಡೆ ಕುಣಿದು ಕುಪ್ಪಳಿಸುವುದು ನನಗೆ ಬಹುಪ್ರಿಯವಾಗಿರುತ್ತಿತ್ತು.

ಮತ್ತಿನ್ನಾವ ಇಂಡೋರ್ ಗೇಮ್‌ಗಳಿಗೂ ನಮಗೆ ಅವಕಾಶವಿರಲಿಲ್ಲ. ಇದ್ದ ಅವಕಾಶಗಳಲ್ಲೇ ನಾವು ಸ್ವತಂತ್ರರಾಗಿರುವ ಎಷ್ಟೋ ವ್ಯಕ್ತಿಗಳು ಕರುಬುವಂತೆ ಸೊಗಸಾಗಿ ಆಡುತ್ತಿದ್ದೆವು. ನಮ್ಮಲ್ಲಿ ಕೆಲವರು 'ಎ-ಓನ್' ಜಿಮ್ನಾಸ್ಟಿಗಳು ಇದ್ದರು. ವೈಟ್ ಲಿಪ್ಟರ್ಸ್ ಇದ್ದರು.

ಕಾಗೋಡಿನ ಹತ್ತಿರದ ಯಾವುದೋ ಗ್ರಾಮಗಳಿಂದ ಇಬ್ಬರು ತರುಣರು ಬಂದಿದ್ದರು. ಕಗ್ಗಲ್ಲಿನಲ್ಲಿ ಕಡೆದ ಪುತ್ಥಳಿಗಳಂತೆ ಇದ್ದರು. ಮೈಕೈಯೆಲ್ಲಾ ಕಬ್ಬಿಣದ ಗಟ್ಟಿ. ಅವರಲ್ಲೊಬ್ಬ ಕೃಷ್ಣ ಎಂಬ ಹೆಸರಿನ ಯುವಕನಿದ್ದ. ಅವನು

'ಹ್ಯಾಂಡ್‌ಷೇಕ್'ಎಕ್ಸ್‌ಫರ್ಟ್. ಯಾರಾದರೂ ಮೈಮರೆತು ಅವನ ಮುಷ್ಠಿಗೆ ತಮ್ಮ ಅಂಗೈ ಕೊಟ್ಟು ಹ್ಯಾಂಡ್ ಷೇಕ್ ಮಾಡಲು ಹೋದರೆ ಅವರ ಅಂಗೈನ ಗೆಣ್ಣಿನ ಬೆರಳುಗಳು ಪುಡಿಪುಡಿಯಾಗಿ ಬಿಡುತ್ತಿದ್ದವು. ಷೇಕ್‌ಹ್ಯಾಂಡ್ ಮಾಡಿದರೆ ಭುಜದ ಕೀಲು ಕಳಚಿ ಹೋಗುತ್ತಿತ್ತು. ಅವನ ಸಂಗಾತಿ ಅವರ ಹೆಸರು ಮರೆತಿದೆ. ಅವನ ಮುಷ್ಠಿಯೂ ಅಷ್ಟೆ. ಆದರೆ ಇವರಿಬ್ಬರಲ್ಲಿ ಕೃಷ್ಣ ಹೆಚ್ಚು ಪ್ರವೀಣ.

ಯಾರಾದರೂ ತಮ್ಮ ಬಲ, ಅಧಿಕಾರಗಳ ದೆಸೆಯಿಂದ ಗರ್ವಪಡುತ್ತಿದ್ದರೆ ಅವರ ಗರ್ವಭಂಗಕ್ಕಾಗಿ ಕೃಷ್ಣನನ್ನು ಶಿವಾನಂದಸ್ವಾಮಿ ಪ್ರಯೋಗಿಸುತ್ತಿದ್ದರು. ವಿಶೇಷವಾಗಿ ಜೈಲಿಗೆ ಭೇಟಿ ನೀಡುತ್ತಿದ್ದ ಸರ್ಕಾರಿ ಅಧಿಕಾರಿಗಳ ಮೇಲೆ ಈ ಪ್ರಯೋಗ ಜಾಸ್ತಿಯಾಗಿರುತ್ತಿತ್ತು. ಒಮ್ಮೆ ಜೈಲಿನ ರೋಗಿಗಳನ್ನು ಸರಿಯಾಗಿ ಚಿಕಿತ್ಸೆ ಮಾಡದೇ ಇದ್ದ ಡಿಸ್ಟ್ರಿಕ್ಟ್ ಸರ್ಜನ್ ಮೇಲೆ ಈ ಪ್ರಯೋಗ ಮಾಡಿಸಿದೆವು. ಅವನು ಮತ್ತೆ ಜೈಲಿಗೆ ಬಂದಾಗ ಯಾರೊಡನೆಯೂ ಹ್ಯಾಂಡ್‌ಷೇಕ್ ಮಾಡಲು ಹೋಗುತ್ತಿರಲಿಲ್ಲ. ಕೃಷ್ಣನನ್ನು ನೋಡಿದ ಒಡನೆಯೇ 'ನಮಸ್ಕಾರವಪ್ಪಾ .... ನಮಸ್ಕಾರ !' ಎಂದು ಕೈ ಮುಗಿದು ಬಿಡುತ್ತಿದ್ದ ! ಕೃಷ್ಣನ ಹ್ಯಾಂಡ್‌ಷೇಕ್‌ನ ಮಹಿಮೆ ಅಷ್ಟು ಅದ್ಭುತವಾಗಿತ್ತು.

ನಾವು ಉಪವಾಸ ಸತ್ಯಾಗ್ರಹ ಮಾಡಿದ್ದಾಗ, ಸಂಧಾನಕ್ಕೆ ಬಂದಿದ್ದ ಎಸ್.ಪಿ., ಡಿ.ಸಿ., ಲಕ್ಷ್ಮಣರಾವ್ ಪದಕಿ ಇವರೆಲ್ಲರಿಗೂ ಕೃಷ್ಣ ಹ್ಯಾಂಡ್‌ಷೇಕ್ ಕೊಡುತ್ತೇನೆ. ನನಗೆ ಟೈ ಕಟ್ಟಿ ಸ್ವಾಗತ ಮಾಡಲು ನಿಲ್ಲಿಸಿ ಎಂದು ಕೇಳಿಕೊಂಡಿದ್ದ. ಆಗ ಅದೆಲ್ಲಾ ಹುಡುಗಾಟ ಬೇಡ ಎಂದು ಹೇಳಿ ಅವರ ಕಿಡಿಗೇಡಿತನವನ್ನು ನಾವು ತಡೆಹಿಡಿದಿದ್ದೆವು.

ಆದರೆ ಜೈಲಿನಿಂದ ಹೊರಗೆ ಸಾಗರದ ಕೋರ್ಟಿಗೆ ಹೋಗಿಬರಲು ಅವನನ್ನು ಕರೆದೊಯ್ದಾಗ ಅವನಿಗೆ ಹೊರಗಿನ ಅಧಿಕಾರಿಗಳಿಗೆ ಷೇಕ್‌ಹ್ಯಾಂಡ್ ಮಾಡಲು ಸಂಪೂರ್ಣ ಸ್ವಾತಂತ್ರ್ಯ ನೀಡಿರುತ್ತಿದ್ದೆವು. ಅವನು ನನ್ನ ಕಡೆಗೋ, ಶಿವಾನಂದ ಸ್ವಾಮಿಗಳ ಕಡೆಗೋ, ಖಾದ್ರಿಶಾಮಣ್ಣನವರ ಕಡೆಗೋ ನೋಡಿ ಕಣ್ಣಿನಿಂದಲೇ ಅಪ್ಪಣೆ ಬೇಡುತ್ತಿದ್ದ. ನಾವು ಅವನು ಆಯ್ಕೆ ಮಾಡಿದ್ದ 'ಮಿಕ'ವನ್ನು ಅವಲೋಕಿಸಿ, ಅಗತ್ಯವೆಂದು ಕಂಡುಬಂದರೆ ನಮ್ಮ ಕಣ್ಣಿಂದಲೇ ಅಪ್ಪಣೆ ಕೊಡುತ್ತಿದ್ದೆವು. ಕೃಷ್ಣ ಹ್ಯಾಂಡ್‌ಷೇಕ್ ಮಾಡಿಬಿಡುತ್ತಿದ್ದ. ನೋಡುವವರ ಕಣ್ಣಿಗೆ ಹ್ಯಾಂಡ್‌ಷೇಕ್ , ಪಡೆಯುವವನ ಕೈಗೆ, ಮೊಳಕೈಗೆ, ಭುಜಕ್ಕೆ ಎಲೆಕ್ಟ್ರಿಕ್‌ಷಾಕ್ ! ಬೆರಳುಗಳ ಫ್ರಾಕ್ಚರ್, ಭುಜ ಡಿಸ್‌ಲೋಕೇಷನ್ ! ಶಿಕ್ಷೆ ಫಸ್ಟ್ ಗ್ರೇಡಿನದೋ, ಸೆಕೆಂಡ್ ಗ್ರೇಡಿನದೋ, ಥರ್ಡ್ ಗ್ರೇಡಿನದೋ, ಎಂದು ನಮ್ಮ ಬೆರಳುಗಳಿಂದ ಸೂಚಿಸಿದರೆ ಸಾಕು, ಅವನು ಅದನ್ನು ಹ್ಯಾಂಡ್‌ಷೇಕ್ ಮೂಲಕ ಜಾರಿ ಮಾಡಿಬಿಡುತ್ತಿದ್ದ.

ಇದು ಯಾವ ಸೀಮೆಯ ಮಾರ್ಷಿಯಲ್ ಆರ್ಟೋ, ಅಂತೂ ಕೃಷ್ಣ ಅದರಲ್ಲಿ 'ಗ್ರ್ಯಾಂಡ್ ಮಾಸ್ಟರ್' ಆಗಿದ್ದ. ಅವನ ಎದೆ ಸೀಳಿದರೂ ಎರಡಲ್ಲ, ಒಂದು ಅಕ್ಷರವೂ

ಇರಲಿಲ್ಲ. ಆದರೆ ವಿದ್ಯಾವಂತರು ಮಾತ್ರ ಆಚರಿಸುತ್ತಿದ್ದ ಷೇಕ್‌ಹ್ಯಾಂಡ್ ಸಭ್ಯಾಚಾರದ ಆಚರಣೆಯನ್ನು ಅವನು ಪರಿಪೂರ್ಣ ಕಲೆಯಂತೆ 'ತಲೆಕೆಳಗಾಗಿ' ಮೈಗೂಡಿಸಿ ಕೊಂಡಿದ್ದ. ಸೂಟ್ ಹಾಕಿ, ಟೈ ಕಟ್ಟಿ ಅಟೆನ್‌ಷನ್ ಭಂಗಿಯಲ್ಲಿ ಕಾಲು ಜೋಡಿಸಿ ನೆಟ್ಟಗೆ ನಿಂತು, ತನ್ನ ಮೋಹಕವಾದ ಮೂವತ್ತೆರಡು ಬಿಳಿ ಹಲ್ಲುಗಳನ್ನು ಕಿರಿದು, ನಸುನಗುತ್ತಾ ಅವನು ತನ್ನ ಬಲಗೈಯನ್ನು ಮುಂದೆ ಚಾಚಿ, 'ಹೌ ಡು ಯು ಡೂ' ಎಂದು ಕೈ ಕುಲುಕಿದರೆ ಸಾಕು. ಅವನ ಕೃಪೆಗೆ ಪಾತ್ರನಾದವನು ಮೂರು ದಿನ ಬಲಗೈಗೆ ಗುಡ್‌ಬೈ ಹೇಳಬೇಕಾಗಿರುತ್ತಿತ್ತು. ಇಂಥವನನನ್ನುನನ್ನ ಅಂಗರಕ್ಷಕನನ್ನಾಗಿ ನಾನು ಹೋಂ ಮಿನಿಸ್ಟರ್ ಆಗಿದ್ದಾಗ ಪಡೆದಿದುದಕ್ಕೆ ಕಾರಣವೂ ಇತ್ತು.

ಅವನು ಊಟಕ್ಕೆ ಕುಳಿತರೆ ಒಂದು ಬಾರಿಗೆ ಇಪ್ಪತ್ತು ಚಪಾತಿಗಳಾದರೂ ಬೇಕಾಗುತ್ತಿತ್ತು. ಅಡಿಗೆ ಮನೆಯ ಸಣ್ಣ ಕೆಲಸವೊಂದನ್ನು ಕೊಟ್ಟು ಅವನಿಗೆ ಪ್ರತ್ಯೇಕವಾಗಿ ಊಟ ಮಾಡುವ ವ್ಯವಸ್ಥೆಯನ್ನು ನಾನು ಮಾಡಿಕೊಟ್ಟಿದ್ದೆ. ಇದೇ ರೀತಿ ಪ್ರತ್ಯೇಕ ಊಟದ ವ್ಯವಸ್ಥೆ ಬೇಕಾಗಿದ್ದ ಬಕಾಸುರರು ಇನ್ನೂ ನಾಲ್ಕಾರು ಜನರು ಇದ್ದದ್ದರಿಂದ, ಅದೇನೂ ಅಸಾಧ್ಯ ಮಹತ್ಕಾರ್ಯವಾಗಿರಲಿಲ್ಲ. ಆದರೆ ಒಮ್ಮೆ ಊಟವಾದ ಬಳಿಕವೂ ಅವನು ಹ್ಯಾಪಮೋರ ಹಾಕಿಕೊಂಡು ಖಿನ್ನನಾಗಿದ್ದುದನ್ನು ಕಂಡು ಕಾರಣವನ್ನು ಅರ್ಥಮಾಡಿಕೊಂಡು ಪ್ರತ್ಯೇಕ ಊಟದ ವ್ಯವಸ್ಥೆ ಪ್ರಾರಂಭ ಮಾಡಿದವನೇ ನಾನು. ಆದ್ದರಿಂದ ನನ್ನ ಮೇಲೆ ಅವನಿಗೆ ಹೆಚ್ಚು ಪ್ರೀತಿ ಮತ್ತು ನಿಷ್ಠೆ ಉಂಟಾಗಿತ್ತು. ಕೆಲವು ಇಕ್ಕಟ್ಟಿನ ಸಂದರ್ಭದಲ್ಲಿ ನಾನು ಅವನನ್ನು ಬಳಸಿ, ದುಷ್ಟತನವನ್ನು ದಮನ ಮಾಡಿದ್ದೇನೆ. ಶಿಷ್ಟರಿಗೆ ಅಗತ್ಯವಾಗಿದ್ದ ರಕ್ಷಣೆ ನೀಡಿದ್ದೇನೆ. 'ಹೋಂ ಮಿನಿಸ್ಟರ್' ಆದ ಮನುಷ್ಯನ ಕರ್ತವ್ಯವೇ ಅದಲ್ಲವೇ ? ಈ ಪ್ರಕರಣದ ವಿವರಗಳು ಸ್ವಾರಸ್ಯಕರವಾಗಿದ್ದರೂ ನಾನು ಅವುಗಳನ್ನು ಬಯಲುಗೊಳಿಸುವುದಿಲ್ಲ.

* * * *

೧೫.

ನೇಗಿಲು ಹಿಡಿದ ಡಾ. ಲೋಹಿಯಾ

''ತನ್ನ ಉಳಿವು ಮತ್ತು ಬೆಳವಣಿಗೆಗಾಗಿ ಸ್ವಾತಂತ್ರ್ಯದ
ವೃಕ್ಷ ಆಗಾಗ್ಗೆ ಹುತಾತ್ಮರ ರಕ್ತವನ್ನು ಕೋರುತ್ತದೆ. ...!''

''ಸ್ವಾತಂತ್ರ್ಯ ಪುಗಸಟ್ಟೆ ಪದಾರ್ಥವಲ್ಲ. ಪ್ರಜಾಪ್ರಭುತ್ವ ವೃತ್ತಿ ರಾಜಕಾರಣಿಗಳ ಆಡುಂಬೊಲವಲ್ಲ. ಅಧಿಕಾರ ಜಾತೀಯ ರಾಜಕಾರಣಿಗಳ ಸ್ವಾರ್ಥಸಾಧನೆಗಲ್ಲ. ಸ್ವಾಂತಂತ್ರ್ಯದ ಮೂಲ ಸೂತ್ರಗಳಾದ ಜಾತ್ಯತೀತತೆ, ಸರ್ವಸಮಾನತೆ ಮತ್ತು ಸಾರ್ವಭೌಮತೆಯನ್ನು ಅಲಕ್ಷ್ಯ ಮಾಡಿದಾಗ, ಅದರ ಹಿಂದೆಯೇ ಘೋರ ಗುಲಾಮಗಿರಿ ಅಡಗಿ ಕುಳಿತಿರುತ್ತದೆ. ಅದು ನಮ್ಮನ್ನು ಕಬಳಿಸಲು ಸದಾ ಕಟ್ಟೆಚ್ಚರದಿಂದ ಕಾಯ್ದಿದೆ. ಹೊಂಚು ಹಾಕುತ್ತಿದೆ. ''

''ಆದ್ದರಿಂದ ಭಾರತೀಯ ಸದಾ ಜಾಗೃತರಾಗಿರಬೇಕು. ಭಾರತೀಯರು ಸ್ವಾತಂತ್ರ್ಯವನ್ನೂ, ಪ್ರಜಾಪ್ರಭುತ್ವವನ್ನೂ ತಮ್ಮ ಎರಡು ಕಣ್ಣುಗಳಂತೆ ಕಾಪಾಡಿಕೊಳ್ಳಬೇಕು. ಅನ್ಯಾಯ ; ಎಲ್ಲಾ ಬಗೆಯ ಅನ್ಯಾಯ, ಅದು ಸಣ್ಣದೇ ಆಗಿರಲಿ, ದೊಡ್ಡದೇ ಆಗಿರಲಿ, ಅದರೊಡನೆ ಹೋರಾಡಬೇಕು '' ಎಂದು ಡಾ|| ರಾಮ ಮನೋಹರ ಲೋಹಿಯಾ ದೆಹಲಿಯ ರಾಜಘಾಟಿನಿಂದ ೧೯೫೧ರಲ್ಲಿ ಕರೆ

ನೀಡಿದ್ದರು. ಆಗ ಅವರಿಗೆ ತಿಳಿದಿರಲಿಲ್ಲ ! ಹೀಗೆ ಕರೆ ನೀಡಿದ ಕೆಲವೇ ತಿಂಗಳುಗಳೊಳಗೆ ತಾವೇ ಕಾಗೋಡಿಗೆ ಬಂದು ಇಂಥ ಕಾರ್ಯವನ್ನು ನೆರವೇರಿಸಿ ಕಾರಾಗೃಹ ಸೇರಬೇಕಾಗುತ್ತದೆ ಎಂದು !

ಸ್ವಾತಂತ್ರ್ಯದೊಡನೆ ರಾಜಕೀಯ ನ್ಯಾಯ ಸ್ಥಾಪನೆಯಾಗಬಹುದು. ಆದರೆ ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ಸ್ಥಾಪನೆ ಆಗಿಬಿಡುವುದಿಲ್ಲ. ದೀಪದ ಕೆಳಗೇ ಕತ್ತಲೆ ಇರುವಂತೆ ಸ್ವಾತಂತ್ರ್ಯ ಜ್ಯೋತಿಯ ತಳದಲ್ಲೇ ಗುಲಾಮಗಿರಿ ಇರಬಹುದು. ಕಾಗೋಡು ಎಂಬ ಕುಗ್ರಾಮದಲ್ಲಿ ಮತ್ತು ಅದರ ಸುತ್ತಣ ಪ್ರದೇಶದಲ್ಲಿ ಈ ಬಗೆಯ ಪರಂಪರಾಗತ ಗುಲಾಮಗಿರಿ ಅಲ್ಲಿನ ಭೂಮಾಲೀಕನಿಂದ ಸೃಷ್ಟಿಯಾಗಿತ್ತು. ಸ್ವಾತಂತ್ರ್ಯನಂತರವೂ ಅವನ ದಬ್ಬಾಳಿಕೆ , ದೌರ್ಜನ್ಯ ಉಳಿದುಕೊಂಡು ಬಂದಿತ್ತು. ಅದನ್ನು ಅಲ್ಲಿನ ಗೇಣಿದಾರರು ಸುವ್ಯವಸ್ಥಿತರಾಗಿ ಪ್ರತಿಭಟಿಸಿದ್ದರು. ಅಹಿಂಸಾತ್ಮಕವಾಗಿ ಸತ್ಯಾಗ್ರಹ ಹೂಡಿದ್ದರು. ತಮಗೆ ನ್ಯಾಯ ದೊರಕಿಸಿ ಕೊಡಿ ಎಂದು ಜಮೀನ್ದಾರನಿಗೆ, ಸರ್ಕಾರಕ್ಕೆ ಮತ್ತು ಇಡೀ ದೇಶಕ್ಕೆ ಮೊರೆಯಿಟ್ಟಿದ್ದರು. ಆದರೆ ಯಾರೂ ಇವರ ಮೊರೆಯನ್ನು ಕಿವಿಯ ಮೇಲೆ ಹಾಕಿಕೊಂಡಿರಲಿಲ್ಲ . ಈ ಸಂಗತಿ ಡಾ|| ಲೋಹಿಯಾರವರಿಗೆ ತಿಳಿಯಿತು.

ಆಗ ಅವರು ಅಂತರರಾಷ್ಟ್ರೀಯ ಸಮಾಜವಾದಿ ಸಮ್ಮೇಳನಕ್ಕಾಗಿ ಜರ್ಮನಿಯ ಫ್ರಾಂಕ್‌ಫರ್ಟ್ ಎಂಬಲ್ಲಿಗೆ ಹೋಗಬೇಕಾಗಿತ್ತು. ಅಮೆರಿಕದ ಪ್ರಿನ್ಸ್‌ಟನ್ ವಿಶ್ವ ವಿದ್ಯಾಲಯದಲ್ಲಿ ನೊಬೆಲ್ ಪಾರಿತೋಷಕ ವಿಜೇತ ಆಲ್ಬರ್ಟ್ ಐನ್‌ಸ್ಟೀನ್ ಅವರನ್ನು ಭೇಟಿ ಮಾಡಬೇಕಾಗಿತ್ತು ಮತ್ತು ವಿಶ್ವದಅನೇಕ ರಾಷ್ಟ್ರಗಳಿಗೆ ಹೋಗಿ ಬರುವ ಕಾರ್ಯಕ್ರಮಗಳಿದ್ದುವು. ಆದರೂ ಇದೊಂದನ್ನೂ ಲೆಕ್ಕಿಸದೆ ಅವರು ಕಾಗೋಡಿಗೆ ಧಾವಿಸಿ ಬಂದರು.

ಅಲ್ಲಿನ ನಿಷ್ಕಪಟ ಕಾಡಿನ ಮಕ್ಕಳು ಅನ್ಯಾಯದ ವಿರುದ್ಧ ಹೂಡಿದ್ದ ಅಹಿಂಸಾತ್ಮಕ ಸಮರದಿಂದ ಅವರು ಪುಳಕಿತರಾಗಿದ್ದರು. ಅವರಂತೆಯೇ ಸ್ಥಳೀಯ ಕಾರ್ಯಕರ್ತರೂ ಅವರ ಆಗಮನದ ಸುದ್ದಿ ಕೇಳಿಯೇ ರೋಮಾಂಚನಗೊಂಡಿದ್ದರು. ಸಡಗರ ಸಂಭ್ರಮ ಉತ್ಸಾಹ ಕಾರ್ಯಕರ್ತರ ನರನಾಡಿಗಳಲ್ಲಿ ಹರಿಯಿತು.

ಶಿವಮೊಗ್ಗ ರೈಲು ನಿಲ್ದಾಣದಲ್ಲಿ ತಮ್ಮನ್ನು ಸ್ವಾಗತಿಸಲು ಬಂದಿದ್ದ ಸ್ಥಳೀಯ ಕಾರ್ಯಕರ್ತರುಗಳಾಗಿದ್ದ ಶ್ರೀಯುತ ಎನ್.ಕೆ. ಸೀತಾರಾಮ ಐಯ್ಯಂಗಾರ್, ಖಾದ್ರಿ ಶಾಮಣ್ಣ, ವೈ.ಆರ್. ಪರಮೇಶ್ವರಪ್ಪ, ಮುಲ್ಕಾ ಗೋವಿಂದ ರೆಡ್ಡಿ ಶಿವಾನಂದಸ್ವಾಮಿ ಎಂ.ಪಿ. ಈಶ್ವರಪ್ಪ ಮತ್ತು ಶ್ರೀ ಶಾಂತವೇರಿ ಗೋಪಾಲಗೌಡರು ಅವರಿಗೆ ಇದುವರೆಗೆ ನಡೆದಿದ್ದ ಸತ್ಯಾಗ್ರಹದ ವಿವರಗಳ ವರದಿ ನೀಡಿದರು.

''ಜಮೀನ್ದಾರರ ದೌರ್ಜನ್ಯ ಮತ್ತು ಸರ್ಕಾರದ ದಮನಕ್ರಿಯೆ ಮುಂದುವರೆಯುತ್ತಿದೆ. ದಿನವೂ ಸತ್ಯಾಗ್ರಹಿಗಳು ತಂಡತಂಡವಾಗಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಮೇಲೆ ಘೋರ ಅತ್ಯಾಚಾರಗಳು ನಡೆಯುತ್ತಿವೆ. ಹಳ್ಳಿಗಳಲ್ಲಿ ಹೆಂಗಸರು ಮಕ್ಕಳನ್ನು ಹೊಡೆದು ಬಡಿದು ಭಯಾನಕ ಪರಿಸ್ಥಿತಿ ನಿರ್ಮಾಣವಾಗಿದೆ. ಇದುವರೆಗೆ ಸುಮಾರು ಮುನ್ನೂರು ಬಡ ಗೇಣಿದಾರರು ಸೆರೆಮನೆ ಸೇರಿದ್ದಾರೆ. ಈ ಸ್ಥಿತಿಯಲ್ಲಿ ತಾವು ಆಗಮಿಸಿದ್ದೀರಿ. ಇನ್ನು ಮುಂದೆ ತಮ್ಮ ಆದೇಶದಂತೆ ನಾವು ನಡೆಯುತ್ತೇವೆ.'' ಎಂದಾಗ ಅವರಿಗೆ ಆಶ್ಚರ್ಯ ಕಾದಿತ್ತು.

''ಏನು ಹೇಳಿದಿರಿ ? ನಾನು ನಾಯಕನಾಗಿ ಬಂದಿಲ್ಲ. ನಾನು ಪಕ್ಷದ ಸಾಮಾನ್ಯ, ಕಾರ್ಯಕರ್ತನಾಗಿ ಬಂದಿದ್ದೇನೆ. ಸತ್ಯಾಗ್ರಹ ಸಮರಕ್ಕೆ ನಾನು ಇಳಿಯಬೇಕೆಂದು ನೀವು ಆದೇಶಕೊಟ್ಟರೆ ಧುಮುಕುತ್ತೇನೆ'' ಎಂದು ತಿಳಿಸಿದರು.

ಸ್ಥಳೀಯ ಕಾರ್ಯಕರ್ತರು ತಬ್ಬಿಬ್ಬಾದರು. ವಿಶ್ವದಾದ್ಯಂತ ಕಾರ್ಯಕ್ರಮಗಳನ್ನಿಟ್ಟುಕೊಂಡಿರುವ ಮಹಾಪುರುಷರೊಬ್ಬರು ತಮಗೆ ಬೆಂಬಲ ವ್ಯಕ್ತಪಡಿಸಲು ಬಂದರೆ ಅವರ ಮೇಲೆಯೇ ನಮ್ಮ ಭಾರ ಹೊರಿಸಿ ಬಿಡುವುದೇ ? ಬೇಡವೇ ? ಎಂಬ ವಿಚಾರವಾಗಿ ತೀವ್ರ ಚರ್ಚೆ ಜಿಜ್ಞಾಸುಗಳು ನಡೆದವು. ಕೊನೆಗೆ ರಣರಂಗ ತಲುಪುವವರೆವಿಗೂ ಯಾವುದೇ ತೀರ್ಮಾನ ಬೇಡ. ಸಾಗರ ತಲುಪಿದ ಬಳಿಕ ಈ ವಿಚಾರ ಇತ್ಯರ್ಥ ಮಾಡೋಣ ಎಂದುಕೊಂಡರು. ಮಹಾದಂಡನಾಯಕರೊಬ್ಬರು ಸಾಮಾನ್ಯ ಸೈನಿಕನಿಗೆ ''ನಾನೇನು ಮಾಡಬೇಕು ಆರ್ಡರ್ ಮಾಡು'' ಎಂದು ಹೇಳಿದಂತಾಯಿತು. ಅವರ ಶಿಸ್ತು, ಕರ್ತವ್ಯ ನಿಷ್ಠೆ ಮತ್ತು ಕಾರ್ಯಕರ್ತನೊಬ್ಬನಲ್ಲಿರಬೇಕಾದ ನೇರ ನಡತೆ ಮತ್ತು ದೀಕ್ಷಾ ಮನೋಭಾವಗಳಿಂದ ಅವರೆಲ್ಲರೂ ಬೆಕ್ಕಸಬೆರಗಾದರು.

ಡಾ॥ ಲೋಹಿಯಾರವರನ್ನು ಒಳಗೊಂಡ ಕಾರ್ಯಕರ್ತರ ದೊಡ್ಡ ತಂಡವೇ ಸಾಗರಕ್ಕೆ ಬಂದಿತು. ಉತ್ಸಾಹ, ಕಾರ್ಯತತ್ಪರತೆ, ನಿಶ್ಚಿತ ಗುರಿಯುಳ್ಳ ಯುವಕರು ; ಹಿರಿಯ ಮಾರ್ಗದರ್ಶಕ, ಗುರು, ಆದರ್ಶಪುರುಷ, ಹಲವು ಹೋರಾಟಗಳ ಕಲಿ, ಮಹಾತ್ಮರ ನೆಚ್ಚಿನ ಶಿಷ್ಯರಾಗಿದ್ದ ಸಿಡಿಲಮರಿ ಡಾ॥ ಲೋಹಿಯಾರೊಡನೆ ಸಾಗರ ಸೇರಿದೊಡನೆ ಅಲ್ಲಿನ ವಾತಾವರಣವೇ ಆಹ್ಲಾದಮಯವಾಯ್ತು. ಸುಪ್ತಸಂಭ್ರಮ, ಉತ್ಸಾಹಗಳಿಂದ ಎಲ್ಲರೂ ತುಡಿಯುತ್ತಿದ್ದರು. ೧೨-೬-೧೯೫೧ ರಾತ್ರಿ ಡಾ॥ ಲೋಹಿಯಾ ಸಾಗರದ ಪ್ರವಾಸಿ ಮಂದಿರದಲ್ಲಿ ತಂಗಿದರು. ಕಾರ್ಯಕರ್ತರು ಅವರ ಸುತ್ತ ನೆರೆದರು. ನೂರಾರು ರೈತರು ತಂಡೋಪತಂಡವಾಗಿ ಪ್ರವಾಸಿ ಮಂದಿರದತ್ತ ಬರತೊಡಗಿದರು. ಆಗ ಡಾ॥ ಲೋಹಿಯಾ ತಾವು ಖುದ್ದಾಗಿ ನಾಳೆ ಬೆಳಿಗ್ಗೆಯೇ ಕಾಗೋಡಿಗೆ ತೆರಳಿ ಸತ್ಯಾಗ್ರಹ ನಡೆಸುವುದಾಗಿ ಪ್ರಕಟಿಸಿದರು. ಕಾರ್ಯಕರ್ತರೂ , ರೈತರೂ ಬೆಕ್ಕಸಬೆರಗಾಗಿ ಉತ್ಸಾಹದಿಂದ ಸಂಭ್ರಮದಿಂದ ನಲಿದಾಡಿದರು. ಅವರಿಗೆ ಆ ಇಡೀ ರಾತ್ರಿಯೇ ಹಗಲಿನಂತಾಯಿತು.

ಅಲ್ಲಿನ ಪೋಲೀಸ್ ಮುಖ್ಯಾಧಿಕಾರಿಗೆ ಡಾ|| ಲೋಹಿಯಾ ಒಂದು ಪತ್ರದ ಮುಖೇನ ತಮ್ಮ ನಿರ್ಧಾರ ತಿಳಿಸಿದರು.

''ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರ ಸರ್ಕಾರ ಸನ್ ೧೯೭೮ನೇ ಇಸ್ವಿಯಲ್ಲಿಯೇ ಗೇಣೀ ಕಾನೂನನ್ನು ಶಾಸನವಾಗಿ ಜಾರಿಗೆ ತಂದಿದೆ. ಅದರಲ್ಲಿ ಗೇಣಿದಾರನ ಉಳುಮೆಯ ಹಕ್ಕು ರಕ್ಷಿಸಲ್ಪಟ್ಟಿದೆ. ಆದರೂ ಸಹ ಗೇಣೀದಾರ ಜಮೀನನ್ನು ಉಳಲು ಕಾಲಿಟ್ಟೊಡನೆ ಪೋಲೀಸರು ಅತಿಕ್ರಮಣವೆಂದು ಅವನನ್ನು ದಸ್ತಗಿರಿ ಮಾಡುತ್ತಿರುವುದು ಅಕ್ರಮ ಮತ್ತು ಕಾನೂನು ಬಾಹಿರ. ಕಾಗೋಡಿನ ಗೇಣೀದಾರರ ಉಳುಮೆಯ ಹಕ್ಕಿನ ರಕ್ಷಣೆ ಮಾಡುವುದಕ್ಕಾಗಿ , ನಾನು ಅವರೊಡನೆ, ಅವರ ಬೆಂಬಲಿಗನಾಗಿ, ಅವರ ಭೂಮಿಗೆ ಕಾಲಿಡುತ್ತೇನೆ.ನೀವು ಇದುವರೆಗೂ ಅವನನ್ನೇ ಜಮೀನಿನಿಂದ ದೂರ ಇಟ್ಟಿದ್ದೀರಿ. ಅಲ್ಲದೆ, ಅವನ ಜಮೀನಿನ ಮೇಲೆ ಅತಿಕ್ರಮಣ ಮಾಡಿದ್ದೀರಿ. ಕಾನೂನು ಪ್ರಕಾರ ತಪ್ಪು ಮಾಡಿದ್ದೀರಿ. ನಾನು ಇಲ್ಲಿ ಗೇಣಿದಾರನ ಉಳುಮೆಯ ಹಕ್ಕಿನ ರಕ್ಷಣೆಗಾಗಿಯೂ ಬಂದಿದ್ದೇನೆ. ಇಲ್ಲಿನ ಕಾನೂನಿನ ರಕ್ಷಣೆಗಾಗಿಯೂ ಬಂದಿದ್ದೇನೆ. ಗೇಣಿದಾರರನ್ನು ಜಮೀನಿಗೆ ಪ್ರವೇಶ ಮಾಡದಂತೆ ನೀವು ತಡೆದದ್ದೇ ಆದ ಪಕ್ಷದಲ್ಲಿ ಅದು ಕಾನೂನಿನ ಉಲ್ಲಂಘನೆಯಾಗುತ್ತದೆ. ಪೋಲೀಸರು ತಪ್ಪಿತಸ್ಥರಾಗುತ್ತೀರಿ. ನಾಳೆ ಮುಂಜಾನೆಯಲ್ಲೇ ಗೇಣಿದಾರರೊಡನೆ ಜಮೀನಿಗೆ ಪ್ರವೇಶಿಸಿ ಉಳುಮೆ ಕಾರ್ಯ ಕೈಗೊಳ್ಳುತ್ತೇನೆ '' ಎಂದು ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿಬಿಟ್ಟರು. ಆ ಪತ್ರವನ್ನು ಸಾಗರ ಪೋಲೀಸ್ ವಿಭಾಗಾಧಿಕಾರಿಗೆ ಶ್ರೀ ಎನ್.ಕೆ. ಸೀತಾರಾಮ ಅಯ್ಯಂಗಾರ್ ಖುದ್ದಾಗಿ ಹೋಗಿ ಕೊಟ್ಟು ಬಂದರು.

ಸಾಗರದ ನಾಗರೀಕರಿಗೆ ಮಾರನೆಯ ದಿನ ಅತ್ಯಂತ ಸಂಭ್ರಮದ ದಿನ. ಡಾ|| ಲೋಹಿಯಾ ಸಾಗರದ ಜೈಲಿಗೆ ಭೇಟಿಯಿತ್ತರು. ಅಲ್ಲಿನ ಕಾರಾಗೃಹದಲ್ಲಿದ್ದ ನೂರಾರು ರೈತರ ಕುಟುಂಬಗಳನ್ನು ಭೇಟಿ ಮಾಡಿದರು. ಅವರ ಕೆಚ್ಚು ಅನ್ಯಾಯದ ವಿರುದ್ಧ ಹೋರಾಟ ಮಾಡುವ ಮನೋಭಾವ, ತ್ಯಾಗ ಮತ್ತು ಬಲಿದಾನಗಳನ್ನು ಮುಕ್ತಕಂಠ ದಿಂದ ಪ್ರಶಂಸಿಸಿದರು.

ಕಾರಾಗೃಹದಲ್ಲಿ ನಲುಗಿಹೋಗಿದ್ದ ನಿಷ್ಕಪಟ ರೈತರಲ್ಲಿ ವಿದ್ಯುತ್ ಸಂಚಾರ ವಾದಂತಾಯಿತು. ಅವರಿಗೆಲ್ಲಾ ಡಾ|| ಲೋಹಿಯಾ ಧೈರ್ಯ ಹೇಳಿದರು. ''ಕಾಲ ನಮ್ಮ ಕಡೆಗಿದೆ. ಇತಿಹಾಸ ನಮ್ಮ ಕಡೆಗಿದೆ. ಫಲವನ್ನು ನಾವು ಕೊಯ್ಲು ಮಾಡಿಕೊಳ್ಳಬೇಕು. ನ್ಯಾಯ ಮತ್ತು ಸ್ವಾತಂತ್ರ್ಯಗಳನ್ನು ಯಾರೂ, ಎಲ್ಲೂ ಆಳರಸರು ಮತ್ತು ಪಟಟಭದ್ರ ಹಿತಾಸಕ್ತಿಗಳು, ಯಾವ ಕಾಲದಲ್ಲೂ ದುಡಿಯುವ ವರ್ಗಗಗಳಿಗೆ ಬಳುವಳಿಯಾಗಿ ಕೊಟ್ಟಿಲ್ಲ. ಎಲ್ಲೆಲ್ಲಿ ನ್ಯಾಯ ಮತ್ತು ಸ್ವಾಂತಂತ್ರ್ಯಗಳು ಅವರಿಗೆ ದೊರಕಿದೆಯೋ ಅಲೆಲ್ಲಾ ಅವರು ಹೋರಾಟ ಮಾಡಿಯೇ ದಕ್ಕಿಸಿಕೊಂಡಿದ್ದಾರೆ. ತಮ್ಮ

ಕೈ ವಶ ಮಾಡಿಕೊಂಡಿದ್ದಾರೆ. ಅನುಭವಿಸಿದ್ದಾರೆ. ಈ ದಿಕ್ಕಿನತ್ತ ನೀವೂ ಅಡಿಯಿರಿಸಿರುವದು ನನಗೆ ಆನಂದ ತಂದಿದೆ'' ಎಂದು ಅವರನ್ನು ಅಭಿನಂದಿಸಿದರು, ಹುರಿದುಂಬಿಸಿದರು.

ಅವರ ಜಯಕಾರಗಳ ಬೀಳ್ಕೊಡುಗೆಯೊಂದಿಗೆ ಸಾಗರದ ಗಾಂಧೀ ಮೈದಾನಕ್ಕೆ ಬಂದು, ಅಲ್ಲಿ ಸೇರಿದ್ದ ಬೃಹತ್ ಸಾರ್ವಜನಿಕ ಸಭೆಯಲ್ಲಿ ರೈತರ ಮೇಲೆ ನಡೆಯುತ್ತಿದ್ದ ಅನ್ಯಾಯ ಮತ್ತು ದೌರ್ಜನ್ಯಗಳನು ಖಂಡಿಸಿದರು. ರೈತ ಸಮುದಾಯದೊಡನೆ ಅಲ್ಲಿಂದ ಕಾಗೋಡಿಗೆ ತೆರಳಿದರು.

ಕಾಗೋಡಿನ ಸತ್ಯಾಗ್ರಹ ತಾಣದಲ್ಲಿ ಸುತ್ತಮುತ್ತಣ ಗ್ರಾಮಗಳಿಂದ ರೈತರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಕಿಕ್ಕಿರಿದು ಸೇರಿದ್ದರು. ಕಾಗೋಡಿನ ಸತ್ಯಾಗ್ರಹ ತಾಣದ ಬಳಿಯಲ್ಲಿರುವ ಅಶ್ವತ್ಥಕಟ್ಟೆ ಅಂದು ಡಾ|| ಲೋಹಿಯಾರವರ ಸಂಪರ್ಕದಿಂದ ಒಂದು ಐತಿಹಾಸಿಕ ಅಶ್ವತ್ಥಕಟ್ಟೆಯಾಗಿ ಪರಿಣಮಿಸಿತು. ದಿನಾಂಕ ೧೩-೬-೧೯೫೧ರಂದು ಡಾ|| ಲೋಹಿಯಾರವರು ಅಶ್ವತ್ಥಕಟ್ಟೆಯ ಮೇಲೆ ನಿಂತು ಸುತ್ತಲೂ ನೆರೆದಿದ್ದ ಸಹಸ್ರ ಸಹಸ್ರ ಸಂಖ್ಯೆಯ ರೈತರು ಗೇಣಿದಾರರನ್ನು ಉದ್ದೇಶಿಸಿ ಮಾತನಾಡಿದರು.

ಸರ್ಕಾರ ವಿಶೇಷ ಪೋಲೀಸ್ ಪಡೆಯನ್ನು ಅಂದು ಅಲ್ಲಿಗೆ ಕರೆಸಿತ್ತು. ರಿಸರ್ವ್ ಪೋಲೀಸರ ದಂಡು ಒಡೆಯನ ಹೊಲಕ್ಕೆ ಅಡ್ಡಗೋಡೆಯಂತೆ ಬಂದೂಕುಧಾರಿಗಳಾಗಿ ನಿಂತಿದ್ದರು. ಡಾ|| ಲೋಹಿಯಾ ಅವರನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಅವರು ವಿಧಿಸಿದ್ದ ಪ್ರತಿಬಂಧಕ ಆಜ್ಞೆಯನ್ನೂ ಲೆಕ್ಕಿಸಲಿಲ್ಲ. ರೈತ ಸಮುದಾಯವನ್ನುಉದ್ದೇಶಿಸಿ,

''ನಿಮ್ಮ ಹೋರಾಟ ನ್ಯಾಯಕ್ಕಾಗಿ ನಡೆಯುತ್ತಿರುವ ಹೋರಾಟ, ಸತ್ಯಕ್ಕಾಗಿ ನಡೆಯುತ್ತಿರುವ ಹೋರಾಟ. ಧರ್ಮಕ್ಕಾಗಿ ನಡೆಯುತ್ತಿರುವ ಹೋರಾಟ, ಕೇವಲ ನಿಮ್ಮ ಉಳುಮೆಯ ಹಕ್ಕನ್ನು ರಕ್ಷಿಸಿಕೊಳ್ಳಳು ನಡೆಯುತ್ತಿರುವ ಹೋರಾಟವಲ್ಲ, ಉಳುಮೆಯ ಹಕ್ಕನ್ನು ನಿಮಗೆ ನೀಡಿರುವ ೧೮೭೮ನೇ ಇಸ್ವಿಯ ಗೇಣಿ ಕಾನೂನನ್ನೂ ರಕ್ಷಿಸಲು ನಡೆಯುತ್ತಿರುವ ಹೋರಾಟ. ನಿಮ್ಮ ಹಕ್ಕು ಇರುವ ಜಮೀನಿಗೆ ನೀವು ಪ್ರವೇಶ ಮಾಡುವುದು ಹೇಗೆ ಕಾನೂನು ಬಾಹಿರವಾಗುತ್ತದೆ ? ಈ ಭೂಮಿಯನ್ನು ಉಳುಮೆ ಮಾಡುವುದು ಹೇಗೆ ಕಾನೂನುಬಾಹಿರವಾಗುತ್ತದೆ ? ನಾನು ಇಲ್ಲಿ ಈಗ ಹೇಳುತ್ತಿದ್ದೇನೆ ಕೇಳಿ ! ಆ ಜಮೀನಿಗೆ ಪ್ರವೇಶಿಸಲು ಮತ್ತು ಅಲ್ಲಿ ಉಳುಮೆ ಮಾಡಲು ತಡೆ ಒಡ್ಡುತ್ತಿರುವ ಸರ್ಕಾರ ಕಾನೂನಿನ ಪ್ರಕಾರ ನಡೆಯುತ್ತಿಲ್ಲ. ಆದ್ದರಿಂದ ಸ್ವತಂತ್ರ ಭಾರತದ ಪ್ರಜೆಗಳಾಗಿ ಅಂಥ ಸರ್ಕಾರದ ಆಜ್ಞೆಗಳನ್ನು ಧಿಕ್ಕರಿಸುವುದು ನಮ್ಮ ಕರ್ತವ್ಯ. ಬನ್ನಿ ! ..... ನಮ್ಮ ಹಕ್ಕಿನ ಜಮೀನಿಗೆ ನಾವು ಪ್ರವೇಶ ಮಾಡಿ, ಭೂಮಾತೆಯ ಸೇವೆಯನ್ನು ಮಾಡೋಣ ! '' ಎಂದು ರೈತರರ ಉಳುಮೆ ಹಕ್ಕಿನ ಭೂಮಿಯ ಕಡೆಗೆ ಅಡಿಯಿರಿಸಿದರು. ಅವರನ್ನು ರೈತ ಸಮುದಾಯ,

''ಇಂಕಿಲಾಬ್ ಜಿಂದಾಬಾದ್ !''

''ಮಹಾತ್ಮಾಗಾಂಧೀ ಜಿಂದಾಬಾದ್ ! ''

''ಉಳುವವನೇ ನೆಲದೊಡೆಯ !''

''ಡಾ|| ಲೋಹಿಯಾ ಜಿಂದಾಬಾದ್ !''

''ಮಹಾತ್ಮಾ ಗಾಂಧೀ ಕೀ ಜೈ !''

ಎಂದು ವೀರಾವೇಶದಿಂದ ಘೋಷಣೆಗಳನ್ನು ಕೂಗುತ್ತಾ, ಅವರನ್ನು ಹಿಂಬಾಲಿಸಿದರು. ಜಮೀನಿನ ಸುತ್ತಲೂ ಬೇಲಿಯಂತೆ ನಿಂತಿದ್ದ ಬಂದೂಕುಧಾರಿ ರಿಸರ್ವ್ ಪೋಲೀಸ್ ಪಡೆ ದಿಗ್ಭ್ರಾಂತಿಯಿಂದ ನಿಂತಲ್ಲೇ ನಿಶ್ಚೇಷ್ಟಿತರಾಗಿ ನಿಂತರು.

ಡಾ|| ಲೋಹಿಯಾ ಜಮೀನಿಗೆ ಹಾಕಿದ್ದ ಬೇಲಿಯನ್ನು ಕಿತ್ತೊಗೆದರು. ರೈತರ ಉಳುಮೆಯ ಹಕ್ಕಿನ ಭೂಮಿಯಲ್ಲಿ ಕಾಲಿರಿಸಿದರು. ಸಿದ್ಧವಾಗಿ ನಿಲ್ಲಿಸಿದ್ದ ಎತ್ತುಗಳನ್ನು ಕಟ್ಟಿದ್ದ ನೇಗಿಲನ್ನು ಭೂಮಿಗೆ ಹೂಡಿದರು. ಜಮೀನನ್ನು ಉಳುಮೆ ಮಾಡಿದರು. ಜೊತೆಯಲ್ಲಿ ಅವರನ್ನುಹಿಂಬಾಲಿಸಿದ್ದ ಸಹಸ್ರಾರು ರೈತರ ಜಯಘೋಷ ಮುಗಿಲು ಮುಟ್ಟಿತು. ಡಾ|| ಲೋಹಿಯಾ ಮಣ್ಣಿನ ಮಕ್ಕಳೊಡನೆ, ತಾವೂ ಮಕ್ಕಳಾಗಿ , ನಕ್ಕು ನಲಿಯುತ್ತಾ ಗೇಣೀದಾರರ ಭೂಮಿಯನ್ನು ನೇಗಿಲಿನಿಂದ ಉಳುಮೆ ಮಾಡಿದರು.

ಅವರು ಹೀಗೆ ಆಡಲು ಬಿಡಬಾರದು. ಅವರನ್ನು ದಸ್ತಗಿರಿ ಮಾಡಬೇಕು ಎಂದು ನಿಯೋಜಿಸಿದ್ದ ವಿಶೇಷ ಪೋಲೀಸ್ ಪಡೆ ಆ ಅಪಾರ ಜನಸ್ತೋಮ ಕಂಡು ತಲ್ಲಣಿಸಿ, ತೆಪ್ಪಗೆ ನಿಂತರು. ಅವರಿಗೆ ತಮ್ಮ ಬೆಂಬಲಿಗರೊಂದಿಗೆ ಇದ್ದ ಡಾ|| ಲೋಹಿಯಾರವನ್ನು ಮುಟ್ಟುವ ಧೈರ್ಯ ಉಡುಗಿ ಹೋಗಿತ್ತು.

ಆದರೆ ಪೋಲೀಸು ಪೋಲೀಸರೇ. ಸರ್ಕಾರ ಸರ್ಕಾರವೇ. ತಾನೇ ತಪ್ಪು ಮಾಡುತ್ತಿದ್ದರೂ ಸರ್ಕಾರ ಸರ್ಕಾರವೇ. ತಾನೇ ಕಾನೂನು ಮುರಿಯುತ್ತಿದ್ದರೂ ಪೋಲೀಸು ಪೋಲೀಸೇ. ಅಲ್ಲದೇ ಪೋಲೀಸರ ಇನ್ನೊಂದು ವಿಶೇಷ ಗುಣವಿದೆ. ಅದೇ ಅವರ ಗುಪ್ತಗಾಮಿತ್ವ, ನಿಶಾಚರತ್ವ, ಹಗಲು ಮಾಡಲಾಗದ ಕೆಲಸಗಳನ್ನು ಅವರು ರಾತ್ರಿ ಮಾಡುತ್ತಾರೆ. ಇಂಥ ಕಾರ್ಯಾಚರಣೆಗಳೆಲ್ಲ ಕಳವು, ಕೊಲೆ, ಸುಲಿಗೆಗಳನ್ನು ಮಾಡುವ ಅಪರಾಧಿಗಳ ವಿಚಾರದಲ್ಲಿ ಅಗತ್ಯವಾಗಿರುತ್ತದೆ. ಆದರೆ ಆಜ್ಞೆಗಳನ್ನು ಧಿಕ್ಕರಿಸುವ ಯಾರೇ ಆಗಿರಲಿ ಅವರು ಅಪರಾಧಿಗಳೇ ಎಂಬುದು ಅವರ ತರ್ಕ. ಪೋಲೀಸರು ಸರ್ಕಾರದ ಆಜ್ಞಾಪಾಲಕರು ತಾನೇ. ಅವರು ಅಂದಿನ ರಾತ್ರಿಯಾಗುತ್ತಲೇ ಕಾರ್ಯಪ್ರವೃತ್ತರಾದರು. ರೈಲ್ವೇ ವಿಲ್ದಾಣದಲ್ಲಿ ಡಾ|| ಲೋಹಿಯಾ ತಂಗಿದ್ದರು. ಅವರೊಡನೆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಖಾದ್ರಿ ಶಾಮಣ್ಣ, ಮುಲ್ಕಾ ಗೋವಿಂದರೆಡ್ಡಿ, ಎಂ.ಪಿ. ಈಶ್ವರಪ್ಪ ಮೈಸೂರಿನ ಬಿ. ಶ್ರೀಕಂಠಪ್ಪ ಇವರುಗಳನ್ನು

ಬಂಧಿಸಿದರು. ಸಾಗರದ ತಾಲ್ಲೂಕು ಕಛೇರಿ ಪಕ್ಕದ 'ಬ್ಲಾಕ್ ಹೋಲ್ ಆಫ್ ಕಲ್ಕತ್ತಾ' ಆದ ಲಾಕಪ್ಪಿಗೆ ಕರೆದೊಯ್ದರು. ಇಡೀ ರಾತ್ರಿಯನ್ನು ಡಾ|| ಲೋಹಿಯಾ ಆ ನರಕಸದೃಶ ಕೋಣೆಯಲ್ಲೇ ಕಳೆದರು.

ಮಾರನೆಯ ದಿನ ಮುಂಜಾನೆಯಲ್ಲಿ ಯಾರೋ ಬಾಗಿಲು ಬಳಿ ಸದ್ದು ಮಾಡಿದಂತಾಯ್ತು. ಯಾರೆಂದು ನೋಡಿದರೆ ಅವರು ಶ್ರೀ ಎನ್.ಕೆ. ಸೀತಾರಾಮ ಐಯ್ಯಂಗಾರ್ ಮತ್ತು ಲೋಕಪಾಲ್ ! ಅವರು ಸಾಗರ ರೈಲ್ವೇ ನಿಲ್ದಾಣದಲ್ಲೇ ನಿನ್ನೆ ರಾತ್ರಿ ಡಾ|| ಲೋಹಿಯಾರೊಡನೆ ಇದ್ದರು. ಆದರೆ ಪೋಲೀಸರು ಬಂದಾಗ ಹೇಗೋ ಪೊಲೀಸರ ದೃಷ್ಟಿಯಿಂದ ಪಾರಾಗಿ ಅಲ್ಲಿದ್ದ ನೀರಿನ ಟ್ಯಾಂಕ್ ಮೇಲಕ್ಕೆ ಹತ್ತಿ ಬಂಧನದಿಂದ ತಪ್ಪಿಸಿಕೊಂಡಿದ್ದರು. ಅವರಿಬ್ಬರೂ ಡಾ|| ಲೋಹಿಯಾರವರನ್ನು ಸಂಪರ್ಕಿಸಲು ಅಲ್ಲಿಗೆ ಬಂದಿದ್ದರು. ಖಾದ್ರಿ ಶಾಮಣ್ಣನವರೊಡನೆ ಪಿಸುಮಾತಿನಲ್ಲಿ ಮಾತನಾಡುತ್ತಿದ್ದರು. ಅವರಿಗೆ ಭಯ, ರಾತ್ರಿಯೆಲ್ಲಾ ಲಾಕಪ್ಪಿನ ಹೊಲಸು ನೆಲದ ಮೇಲೇ ನಿದ್ರೆ ಹೋಗಿದ್ದ ಡಾ|| ಲೋಹಿಯಾ ಇನ್ನೂ ನಿದ್ರೆ ಮಾಡುವಂತೆ ಕಾಣಿಸಿದ್ದರು. ಅವರನ್ನು ಎಲ್ಲಿ ಎಚ್ಚರಗೊಳಿಸಿಬಿಡುತ್ತೇವೋ ಎಂಬ ಭೀತಿಯಿಂದ ಐಯ್ಯಂಗಾರ್ ಖಾದ್ರಿಯವರೊಂದಿಗೆ ಪಿಸುಮಾತಿನಲ್ಲಿ ಸಂಭಾಷಿಸುತ್ತಿದ್ದರು. ಅದು ಡಾ|| ಲೋಹಿಯಾರ ಕಿವಿಗೆ ಬಿತ್ತು. ಯಾರೋ ಹೊಸಬರ ಧ್ವನಿ. ಕಣ್ಣು ಬಿಡುತ್ತಾರೆ ಸೀತಾರಾಮ ಐಯ್ಯಂಗಾರ್ ಮತ್ತುಲೋಕನಾಥ್ ! ಡಾಕ್ಟರ್ ಸಾಹೇಬರಿಗೆ ಆಶ್ಚರ್ಯವಾಯಿತು. ಅವರು ಕೇಳಿದರು.

''ಏನು ನೀವೂ ದಸ್ತಗಿರಿಯಾಗಿ ಬಿಟ್ಟಿರಾ ? ''

''ಇಲ್ಲ, ನಾವು ಸೆಂಟ್ರಿಯ ಮನವೊಲಿಸಿ, ಕೆಲವು ಕ್ಷಣ ನಮ್ಮ ಅಗತ್ಯಗಳೇನು ಎಂದು ತಿಳಿಯಲು ಬಂದಿದ್ದೇವೆ '' ಎಂದು ಅವರು ಹೇಳಿದರು.

ಒಡನೇ ಡಾ|| ಸಾಹೇಬರು ನುಡಿದರು, ''ಅಚ್ಛಾ ! ಐಸೆ ಕರೋ, ಕೆಲವು ಕೇಬಲ್‌ಗಳನ್ನು ಜರ್ಮನಿಗೆ ಮತ್ತು ಅಮೆರಿಕಾಗಳಿಗೆ ಕಳಿಸಬೇಕು. ಅಲ್ಲಿಗೆ ಸುದ್ದಿ ಮುಟ್ಟಿಸಬೇಕು'' ಎಂದು ಹೇಳಿ ಅಲ್ಲಿ ವಿಳಾಸಗಳನ್ನೂ ಅಲ್ಲಿಗೆ ಕಳಿಸಬೇಕಾಗಿದ್ದ ಕೇಬಲ್ ಸಂದೇಶಗಳನ್ನೂ ಹೇಳುತ್ತಾ ಹೋದರು. ಖಾದ್ರಿ ಶಾಮಣ್ಣನವರು ಅದನ್ನೆಲ್ಲಾ ಬರೆದು, ಐಯ್ಯಂಗಾರರ ಕೈಗೆ ಕೊಟ್ಟು ಅವರನ್ನು ಅಲ್ಲಿಂದ ರವಾನಿಸಿದರು. ಡಾ|| ಲೋಹಿಯಾ ಮತ್ತೆ ಆ ಜೈಲಿನ ಕಲ್ಲು ನೆಲದ ಮೇಲೆ ನಿರ್ಲಿಪ್ತರಾಗಿ ಮಲಗಿದರು ಅವರ ಮನಸ್ಸು ಅಂತರರಾಷ್ಟ್ರೀಯ ಸಮಾಜವಾದಿ ಸಮ್ಮೇಳನದಲ್ಲಿ ಮಾಡಬೇಕಾಗಿದ್ದ ಭಾಷಣದ ರೂಪುರೇಷೆಗಳನ್ನು ಕುರಿತು ಆಲೋಚಿಸುತ್ತಿತ್ತು. ಹೇಬಿಯಸ್ ಕಾರ್ಪಸ್ ವಿಧಿ ಹಳೆಯ ಮೈಸೂರು ಸಂಸ್ಥಾನದಲ್ಲಿ ಇದುವರೆಗೂ ಪ್ರಯೋಗವೇ ಆಗಿಲ್ಲ. ಅದರ

ಪ್ರಯೋಗದಿಂದ ಕಾಗೋಡಿನಲ್ಲಿ ಅಕ್ರಮವಾಗಿ ಬಂಧಿತರಾಗಿರುವ ನಿರ್ಭಾಗ್ಯ ಗೇಣಿದಾರರನ್ನು ಜೈಲಿನಿಂದ ಬಿಡುಗಡೆಗೊಳಿಸುವುದು ಸಾಧ್ಯವೇ ಎಂದು ಚಿಂತಿಸುತ್ತಿತ್ತು.

ಮಾರನೆಯ ದಿನ ಸಾಗರ ಕೋರ್ಟಿನಲ್ಲಿ ಡಾ|| ಲೋಹಿಯಾರವರನ್ನು ಹಾಜರು ಪಡಿಸಿದರು. ಕೋರ್ಟು ವಿಚಾರಣೆಯಲ್ಲಿ ಅವರನ್ನು ಜೂನ್ ೨೦ನೇ ತಾರೀಖಿನವರೆಗೆ ಜುಡಿಷಿಯಲ್ ಕಸ್ಟಡಿಯಲ್ಲಿಡಲು ಆಜ್ಞೆಪಡಿಸಿತು.

ಪೋಲೀಸರು ಡಾ|| ಲೋಹಿಯಾರವರನ್ನು ಮೂರನೇ ದರ್ಜೆ ರೈಲ್ವೆ ಡಬ್ಬಿಯಲ್ಲಿ ಬೆಂಗಳೂರಿಗೆ ಕರೆತಂದರು. ಆದರೆ ಆಗಿನ ಕಾಲಕ್ಕೆ ಭವ್ಯ ಇಂಗ್ಲೀಷ್ ಮಾದರಿಯ ಗೆಸ್ಟ್‌ಹೌಸ್ ಆಗಿದ್ದ 'ಕ್ರೆಸೆಂಟ್ ಹೌಸ್'ಗೆ ಕರೆದೊಯ್ದರು.

ಅಂದಿನ ಕ್ರೆಸೆಂಟ್ ಹೌಸ್ ಅನ್ನು ಮತ್ತು ಅಲ್ಲಿದ್ದ ಮಂಚಗಳು, ಫರ್ನಿಚರ್, ಕ್ರಾಕರಿ, ಡಿನ್ನರಿ ಪ್ಲೇಟ್‌ಗಳನ್ನು ಕಪ್ಪು ಸಾಸರ್, ಸ್ಪೂನ್‌ಗಳನ್ನು ನೋಡಬೇಕಾಗಿತ್ತು ! ಹಾಸಿಗೆಯ ಮೇಲೆ ಕುಳಿತರೆ ಸಾಕು, ಗೇಣಿನಷ್ಟು ಒಳಕ್ಕೆ ಹೋಗಿ ಮೇಲೆ ಪುಟಿಯುತ್ತಿತ್ತು. ನಿಜವಾದ ಹಂಸತೂಲಿಕಾತಲ್ಪಗಳು ! ಇಂಗ್ಲೀಷ್ ಸೋಫಾಗಳೂ ಅಷ್ಟೇ. ನಿಜವಾದ ಸಾಮ್ರಾಜ್ಯಶಾಹಿ ವೈಭವದಿಂದ ಅದು ಟಿಪ್‌ಟಾಪ್ ಆಗಿತ್ತು. ಆದರೆ ಅಂಥ ವೈಭವಯುತ ಭೋಗ ಜೀವನದ ಹಿಂದೆ ಬಡವರ ಬೆವರು, ಕಣ್ಣೀರು, ರಕ್ತ ಅಡಗಿದೆ ಎಂದಬ ಸತ್ಯದ ಅರಿವಿದ್ದ ಡಾಕ್ಟರ್ ಸಾಹೇಬರು ''ಯೇ ಠೀಕ್ ನಹಿ.... ಮುರ್ಝೆ ತುಮ್ಹಾರಾ ಜೈಲ್ ಕೋ ಲೇ ಚಲೋ'' ಎಂದರು. ಆಗ ಅವರನ್ನು ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಕರೆತಂದು ಬಂಧನದಲ್ಲಿಟ್ಟರು. ಅವರೊಡನೆ ಬಂಧಿತರಾಗಿದ್ದ ಮುಲ್ಕಾ ಗೋವಿಂದರೆಡ್ಡಿ ಮತ್ತಿತರರೂ ಸೆಂಟ್ರಲ್ ಜೈಲಿನ ನಿವಾಸಿಗಳಾದರು.

ಬೆಂಗಳೂರಿನ ಎ.ಕೆ. ಅನಂತಕೃಷ್ಣ , ಬಾಟಾ ಸುಬ್ರಹ್ಮಣ್ಯಂ , ಸಂಜೀವರಾವ್ ಮತ್ತಿತರ ಸಂಗಾತಿಗಳು ಡಾ|| ಲೋಹಿಯಾರವರ ಅಣತಿಯಂತೆ ಭಾರತದ ಮತ್ತು ವಿಶ್ವದ ಅನೇಕ ತಾಣಗಳಿಗೆ ಸಂದೇಶಗಳನ್ನು ರವಾನಿಸಿದರು. ಜೂನ್ ೨೦ರಂದು ತಮ್ಮನ್ನು ವಿಚಾರಣೆಗೆ ಒಳಪಡಿಸಲು ಮತ್ತೆ ಖುದ್ದಾಗಿ ಸಾಗರಕ್ಕೆ ಒಯ್ಯಬಾರದು ; ಅದರ ಅಗತ್ಯವಿಲ್ಲ ಎಂದು ಹೈಕೋರ್ಟಿಗೆ ಮನವಿ ಸಲ್ಲಿಸಿದರು. ಆದರೆ ಆ ಮನವಿಯನ್ನು ಹೈಕೋರ್ಟ್ ತಿರಸ್ಕಾರ ಮಾಡಿತು. ಜೂನ್‌೨೦ರಂದು ಸಾಗರದ ಕೋರ್ಟಿನಲ್ಲಿ ಹಾಜರಾಗಲು ಪೋಲೀಸರೆ ಮತ್ತೆ ಅವರನ್ನೂ ಅವರೊಡನೆ ಬಂಧಿತರಾಗಿದ್ದ ೯ ಮಂದಿಯನ್ನೂ ಬೆಂಗಳೂರಿನಿಂದ ಕರೆದೊಯ್ಯಿತು. ತಾವು ೨೯ ಜನ ಸಾತ್ಯಗ್ರಹಿಗಳ ಮೇಲೆ ಮೊಕದ್ದಮೆ ಹೂಡಿ ಬಂಧಿಸಿರುವುದಾಗಿಯೂ, ಅವರಲ್ಲಿ ಕೇವಲ ೯ ಮಂದಿ ಮಾತ್ರ ಹಾಜರಾಗಿ, ಉಳಿದ ೨೦ ಮಂದಿ ಸತ್ಯಾಗ್ರಹಿಗಳು

ತಪ್ಪಿಸಿಕೊಂಡು ತಪ್ಪಿಸಿಕೊಂಡು ಬಿಟ್ಟಿದ್ದಾರೆಂದೂ ಕೋರ್ಟಿಗೆ ನಿವೇದಿಸಿಕೊಂಡಿತು. ಆಗ ಕೋರ್ಟ್ ಡಾ|| ಲೋಹಿಯಾ ಅವರ ಮೇಲಿದ್ದ ಕೇಸನ್ನು ಜುಲೈ ೩ನೇ ತಾರೀಖಿಗೆ ಮುಂದಕ್ಕೆ ಹಾಕಿದರು. ಅವರನ್ನು ಪೋಲೀಸರು ಮತ್ತೆ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಕರೆತಂದರು.

ಆದರೆ ಕಾಗೋಡಿನಲ್ಲಿ ನಡೆದಿದ್ದ ಡಾ|| ಲೋಹಿಯಾರವರ ಬಂಧನ ರಾಷ್ಟ್ರೀಯ ಅಂತರರಾಷ್ಟ್ರೀಯವಾಗಿ ಅಲೆಗಳನ್ನು ಎಬ್ಬಿಸಿತ್ತು. ಭಾರತದ ಸರ್ಕಾರಕ್ಕೆ ಮತ್ತು ಮೈಸೂರು ಸರ್ಕಾರಕ್ಕೆ ಅಪಕೀರ್ತಿಯ ಕಳಂಕ ಹತ್ತಿಕೊಳ್ಳುವುದು ಶತಸ್ಸಿದ್ಧ ವಾಗಿತ್ತು. ಅದನ್ನು ಮನಗಂಡು ಸರ್ಕಾರ ಜೂನ್ ೨೨ರಂದು ಹಠಾತ್ತನೆ ಡಾ|| ರಾಮ ಮನೋಹರ ಲೋಹಿಯಾರವರನ್ನು ಜೈಲಿನಿಂದ ಬಿಡುಗಡೆ ಮಾಡಿತು. ಅವರ ಮೇಲೆ ಹಾಕಿದ್ದ ಅತಿಕ್ರಮ ಪ್ರವೇಶ ಮೊದಲಾದ ಆಪಾದನೆಗಳೆಲ್ಲವನ್ನೂ ಹಿಂದಕ್ಕೆ ತೆಗೆದುಕೊಂಡರು.

ಡಾ|| ಲೋಹಿಯಾರವರ ಗೆಳೆಯ ಲೋಕ ಎಷ್ಟು ವಿಸ್ತಾರ ಎನ್ನುವುದನ್ನು ಸರ್ಕಾರ ಮನಗಂಡಿತ್ತು. ಗಾಂಧಿ, ನೆಹರೂ, ಸುಭಾಷ್ ಇವರುಗಳನ್ನು ಬಿಟ್ಟರೆ ಲೋಹಿಯಾ ಅವರಷ್ಟೇ ಎತ್ತರದ ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿದ್ದ ಭಾರತೀಯ ನಾಯಕರಾಗಿದ್ದರು. ಅವರನ್ನು ಮಾನ ಮರ್ಯಾದೆ ಇರುವ ಯಾವ ನಾಗರೀಕ ಸರ್ಕಾರವೂ ಜೈಲಿನಲ್ಲಿ ಅಡಗಿಸಿ ಇಡಲು ಸಾಧ್ಯವಿರಲಿಲ್ಲ. ಆದ್ದರಿಂದ ಅವರನ್ನು ಏಕಪಕ್ಷೀಯವಾಗಿ ಬಿಡುಗಡೆ ಮಾಡಿಬಿಟ್ಟಿತು.

ಕೂಡಲೇ ಡಾಕ್ಟರ್ ಸಾಹೇಬರು ಬೆಂಗಳೂರಿನಲ್ಲಿ ಒಂದು ಪತ್ರಿಕಾಗೋಷ್ಠಿ ನಡೆಸಿದರು. ಸರ್ಕಾರ ಅದುವರೆಗೂ ಸುಳ್ಳಿನ ಕಂತೆಯನ್ನೇ ನಿರೂಪಿಸಿತ್ತು. ಜನರನ್ನು ತಪ್ಪು ದಾರಿಗೆ ಎಳೆದಿತ್ತು. ಈಗ ಆ ಕಟು ಸತ್ಯವನ್ನು ಡಾ|| ಲೋಹಿಯಾ ಜಗತ್ತಿಗೆ ತಿಳಿಸಿದರು.

''ರೈತರು ಎಂದೂ ತಾವು ಗೇಣಿ ಕೊಡುವುದಿಲ್ಲ ಎಂದು ಹೇಳಿರಲಿಲ್ಲ. ತಾವಾಗಿಯೇ ಜಮೀನಿನ ಸಾಗುವಳಿಯನ್ನು ನಿಲ್ಲಿಸಿರಲಿಲ್ಲ. ಅವರ ಸಾಗುವಳಿ, ಅವರ ದನಕರುಗಳ ಮೇಲೆ , ಅವರ ವ್ಯವಸಾಯ ಉಪಕರಣಗಳ ಮೇಲೆ, ಧಾಳಿಯಿಟ್ಟು ಪೈಶಾಚಿಕ ಹಿಂಸಾಚಾರ ನಡೆಸಿದವರೂ ಜಮೀನ್ದಾರರೇ. ಪೋಲೀಸರ ಬೆಂಬಲ ಅವರಿಗೆ ದೊರೆಯಿತು.''

ಇದೊಂದು ಘೋರ ಅನ್ಯಾಯ.

''ಇಂಥ ಅನ್ಯಾಯಗಳು ಸಣ್ಣವಿರಲಿ, ದೊಡ್ಡವಿರಲಿ, ಪ್ರಜೆಗಳು ಪ್ರತಿಭಟಿಸ ಬೇಕು. ಎದುರಿಸಿ ಹೋರಾಡಬೇಕು. ಆಗಲೇ ಪ್ರಜಾಪ್ರಭುತ್ವ ಈ ನೆಲದಲ್ಲಿ ಆಳವಾಗಿ

ನೆಲೆ ನಿಲ್ಲುವುದು. ಅನ್ಯಾಯಕ್ಕೆ ತಲೆ ಬಾಗುವ ಜನರು ಪ್ರಜಾಪ್ರಭುತ್ವವನ್ನು ರಕ್ಷಿಸಿಕೊಳ್ಳಲಾರರು. ಈ ದೃಷ್ಟಿಯಿಂದ ಕಾಗೋಡಿನ ದೀನ ಗೇಣಿದಾರರು ಕೆಚ್ಚೆದೆಯ ಕಲಿಗಳು. ಇಡೀ ಸ್ವತಂತ್ರ್ಯ ಭಾರತವೇ ಅವರನ್ನು ಅಭಿನಂದಿಸಬೇಕು. ಕಾಗೋಡಿನ ಮಾಸ್ತಿಯಮ್ಮ ಮತ್ತು ಕೆಂಚಪ್ಪನಂಥ ಮುಗ್ಧ ಧೀರರ ಕೆಚ್ಚಿನ ಹೋರಾಟ ಚಿರಸ್ಮರಣೀಯ. ಪ್ರಜಾಪ್ರಭುತ್ವದ ಅಂಬೆಗಾಲಿಡುತ್ತಿರುವ ಭಾರತೀಯರು, ಪ್ರಜಾಪ್ರಭುತ್ವವನ್ನು ಉಳಿಸಬೇಕಾದರೆ, ಬೆಳೆಸಬೇಕಾದರೆ, ಅವರು ಮೊಟ್ಟಮೊದಲು ಕಲಿಸಬೇಕಾದ ಪಾಠ ಅನ್ಯಾಯದ ವಿರುದ್ಧ ಹೋರಾಡುವುದನ್ನು! ಈ ಕಾರ್ಯವನ್ನು ಖುದ್ದಾಗಿ ಮಾಡಲು ನನಗೆ ಕಾಗೋಡಿನ ಈ ವೀರರು ಅವಕಾಶ ಮಾಡಿಕೊಟ್ಟರು. ಅವರಿಗೂ ಈ ಸುಂದರ ಮೈಸೂರು ರಾಜ್ಯಕ್ಕೂ ನಾನು ಕೃತಜ್ಞ'' ಎಂದರು. ''ನನ್ನ ಮೇಲಿನ ಆಪಾದನೆಗಳು ಹಿಂದಕ್ಕೆ ಪಡೆದು ನನ್ನೊಬ್ಬನನ್ನು ಮಾತ್ರ ಜೈಲಿನಿಂದ ಬಿಡುಗಡೆ ಮಾಡಿ, ನನ್ನಡೊನೆ ಅದೇ ಆಪಾದನೆಗಳಿಗೆ ಒಳಗಾಗಿ ದಸ್ತಗಿರಿಯಾಗಿರುವ ಇತರ ಸಂಗಾತಿಗಳನ್ನು ಹಾಗೆ ಜೈಲಿನಲ್ಲಿ ಬಂಧನದಲ್ಲಿ ಇರಿಸಿಕೊಂಡಿರುವುದು ಯಾವ ಸೀಮೆಯ ನ್ಯಾಯ. ಕಾನೂನಿನ ಮುಂದೆ ಎಲ್ಲರೂ ಸಮಾನರಲ್ಲವೇ ? ಇಂದೆಂಥ ಪ್ರಜಾಪ್ರಭುತ್ವ ? ಇದೆಂಥ ಕಾನೂನು ? '' ಎಂದು ಸರ್ಕಾರವನ್ನು ಛೇಡಿಸಿರುವುದನ್ನೂ ಅವರು ಮರೆಯಲಿಲ್ಲ.

ಜುಲೈ ಮೂರರಂದೇ ಜರ್ಮನಿಯ ಫ್ರಾಂಕಫರ್ಟಿನಲ್ಲಿ ಸಮಾಜವಾದಿಗಳ ಅಂತರರಾಷ್ಟ್ರೀಯ ಸಮ್ಮೇಳನವಿತ್ತು. ಡಾ|| ಲೋಹಿಯಾ ವಿಶಾಲ ಜಗತ್ತಿನೆಡೆಗೆ ಅಡಿಯಿರಿಸಿದರು. ಇತ್ತ ಪೋಲೀಸರ ದೌರ್ಜನ್ಯ, ಅತ್ಯಾಚಾರಗಳು ಕಾಗೋಡು ಗ್ರಾಮದಲ್ಲಿ ಹೆಚ್ಚಾದವು. ಕೇವಲ ಮಾತುಗಳಿಂದ ಎಲ್ಲಾದರೂ ಸರ್ಕಾರಗಳು ತಮ್ಮ ನಡತೆಯನ್ನು ತಿದ್ದಿಕೊಳ್ಳುವುದೇನು ? ಎಂಥ ಸತ್ಪುರುಷರೇ ಹೇಳಲಿ, ಅವರ ಹಿತವಚನ ಆಳರಸರ ಕಿವಿಗೆ ಬೀಳುತ್ತದೆಯೇನು ? ಅದರ ರುದ್ರನರ್ತನ ಮುಂದುವರೆಯಿತು.

ಮುಂದಿನ ದಿನಗಳಲ್ಲಿ ಅವರೂ ಅನೇಕ ಭೂಮಾಲೀಕ ಗುಂಡಾ ಪಡೆಗಳೂ ಒಟ್ಟಾಗಿ ಸೇರಿ ಕಾಗೋಡಿನ ಸುತ್ತಮುತ್ತಣ ವಾತಾವರಣವನ್ನು ಭಯಾನಕಗೊಳಿಸಿದರು. ಅಲ್ಲಿಗೆ ಆಗ ನಮ್ಮ ತಂಡದ ಪ್ರವೇಶವಾಯಿತು.

* * * *

ಉಪಸಂಹಾರ

ವಿವಿಧ ಬಗೆಯ ಶ್ರೀಸಾಮಾನ್ಯರನ್ನು ಕಾಗೋಡು ಸತ್ಯಾಗ್ರಹ ತನ್ನ ಕಡೆಗೆ ಸೆಳೆದುಕೊಂಡಿತ್ತು. ಅವರಲ್ಲಿ ಹೆಚ್ಚಿನ ಜನರು ವಿದ್ಯಾರ್ಥಿಗಳು, ಯುವಜನರು. ಅವರೆಲ್ಲರಿಗೂ ತಮ್ಮ ಪ್ರತಿಭೆ, ಶಕ್ತಿ ಮತ್ತು ದುಡಿಮೆಗಳನ್ನು ಸರಿಯಾಗಿ ತಮ್ಮ ತಾಯ್ನಾಡು ಬಳಸಿಕೊಳ್ಳುತ್ತದೆ ಎಂಬ ನಂಬಿಕೆಯಿತ್ತು. ಅದಕ್ಕೋಸ್ಕರವೇ ಅವರು ತಾಯ್ನಾಡಿನ ಸೇವೆಗೆ ತುದಿಗಾಲಲ್ಲಿ ನಿಂತಿರುತ್ತಿದ್ದರು. ತಮ್ಮ ನಾಯಕರ ಬಗೆಗೆ ಹೆಮ್ಮೆಯಿಂದ ಬೀಗುತ್ತಿದ್ದರು. ಯಾರಾದರೂ ಅಮೇರಿಕನ್ ಅಥವಾ ರಷ್ಯನ್ ದೇಶದ ಅಧಿಕಾರಿಗಳು ಇಲ್ಲಿಗೆ ಬಂದರೆ ಖಾದಿಯ ಪ್ಯಾಂಟು ಬುಷ್ ಶರಟು ಧರಿಸಿ, ಕಾಲಿಗೆ ಚಪ್ಪಲಿ ಹಾಕಿಕೊಂಡು ತಲೆಗೆ ಗಾಂಧಿ ಟೋಪಿ ಧರಿಸಿ ಎಲ್ಲರಿಗೂ ಕೈಮುಗಿಯುತ್ತಾ 'ದಿ ಲ್ಯಾಂಡ್ ಆಫ್ ಗ್ಯಾಂಡೀ....' 'ದಿ ಲ್ಯಾಂಡ್ ಆಫ್ ಗ್ಯಾಂಡೀ' ಎಂದು ನಮಸ್ಕಾರ ನಮಸ್ತೇ ಎಂದು ಭಾರತೀಯತೆಗೆ ಗೌರವ ಸಲ್ಲಿಸುತ್ತಿದ್ದರು. ಅಹಿಂಸಾತ್ಮಕ ಸತ್ಯಾಗ್ರಹದ ಹೋರಾಟದ ಮೂಲಕ ಸ್ವಾತಂತ್ರ ಸಾಧಿಸಿದ್ದ ಭಾರತದ ಅಪೂರ್ವ ಸಾಧನೆಯ ಬಗೆಗೆ ಅಪಾರ ಮೆಚ್ಚುಗೆ ಎಲ್ಲಾ ವಿದೇಶೀಯರಿಗೂ ಇತ್ತು. ಇನ್ನು ನವ ಯುವಕರಾಗಿದ್ದ ನಮಗೆ ಇರುವುದಿಲ್ಲವೇ ? ಹಾಲು, ಜೇನಿನ ಹೊಳೆಯೇ ಭಾರತದಲ್ಲಿ ಹರಿಯುತ್ತದೆ ಎಂದು ಮುಗ್ಧ ನಂಬಿಕೆ ನಮ್ಮೆಲ್ಲರದಾಗಿತ್ತು.

ಈ ನಂಬಿಕೆಯೇ ನೂರಾರು ಯುವಜನರು ಕಾಗೋಡಿನ ಹೋರಾಟಕ್ಕೆ ಯಾವ 'ಕರೆ ಮತ್ತು ಒತ್ತಾಯಗಳೂ' ಇಲ್ಲದೆ ಸ್ವಯಂ ಸ್ಫೂರ್ತಿಯಿಂದ ನುಗ್ಗಿ ಬರಲು ಕಾರಣವಾಗಿತ್ತು. ಎಂಥೆಂಥಾ ಪ್ರತಿಭಾವಂತರು ಅಲ್ಲಿಗೆ ನುಗ್ಗಿ ಬಂದಿದ್ದರು ! ಸ್ವತಂತ್ರ ಭಾರತದ ನೌಕಾದಳದಲ್ಲಿ ಅಡ್ಮಿರಲ್ ಹುದ್ದೆಗೆ ತರಬೇತಿ ಪಡೆದಿದ್ದ ಸಿ.ಜಿ.ಕೆ. ರೆಡ್ಡಿ, ಸಾಬರ್ಮತಿ ಆಶ್ರಮದಲ್ಲಿ ಗಾಂಧೀಜಿಯವರ ಸೇವೆ ಸಲ್ಲಿಸಿದ್ದ ಖಾದ್ರಿ ಶಾಮಣ್ಣ, ದಾವಣಗೆರೆಯ ಪ್ರಸಿದ್ಧಿ ವಕೀಲರಾದಗ್ದಿ ಕೆ. ವೀರಭದ್ರಪ್ಪ ಮತ್ತು ಶ್ರೀಮಂತ ಉದ್ಯಮಪತಿಯಾಗಿದ್ದ ಎ.ಹೆಚ್. ಶಿವಾನಂದಸ್ವಾಮಿ, ಚಿತ್ರದುರ್ಗದ ಪ್ರಖ್ಯಾತ ಮನೆತನದ ಮುಲ್ಕಾ ಗೋವಿಂದರೆಡ್ಡಿ, ಶಿವಮೊಗ್ಗ ನಗರದಲ್ಲಿ 'ಅಣ್ಣಯ್ಯ' ನೆಂದೇ ಹೆಸರಾಗಿದ್ದು, ಸಮಾಜವಾದೀ ಸಂಘಟನೆಗೆ 'ಬಲರಾಮ ' ಬಲ ನೀಡಿದ್ದ ವೈ.ಆರ್. ಪರಮೇಶ್ವರಪ್ಪ, ಮುಂದೊಮ್ಮೆ ಜ್ಞಾನಪೀಠ ಪ್ರಶಸ್ತಿಯನ್ನೆ ಪಡೆಯಲಿದ್ದ ಯು.ಆರ್. ಅನಂತಮೂರ್ತಿ, ಸ್ವಾತಂತ್ರ್ಯ ಚಳುವಳಿಗಾಗಿ ತಮ್ಮ ನೂರಾರು ಎಕರೆ ತೋಟ

ತುಡಿಕೆಗಳನ್ನು ಧಾರೆ ಎರೆದುಕೊಟ್ಟ ಗುಬ್ಬಿಗೆ ಸದಾಶಿವರಾವ್, ಯಶಸ್ವೀ ತಮಿಳು - ಕನ್ನಡ ಚಿತ್ರದ ತಯಾರಕರಾಗಿ ಸೂಟ್‌ಕೇಸಿನಲ್ಲಿ ನೋಟಿನ ಕಂತೆಗಳನ್ನು ತುಂಬಿಕೊಂಡು, ವಿಮಾನದಲ್ಲೇ ಓಡಾಡುತ್ತಿದ್ದ ಎ.ಎನ್. ಗಂಡುಗಲಿ, ಸ್ವಾತಂತ್ರ್ಯ ಹೋರಾಟದಲ್ಲಿ ಅಪಾರ ತ್ಯಾಗ ಬಲಿದಾನಗಳನ್ನು ಮಾಡಿ ತಮ್ಮ ಪ್ರಾಣವನ್ನೇ ಫಣಕ್ಕೊಡ್ಡಿ, ದುಷ್ಟರಿಗೆ ಸೆಡ್ಡು ಹೊಡೆದು ನಿಂತ ವೀರಾಗ್ರಣಿ ಹೆಚ್. ಗಣಪತಿಯಪ್ಪ, ಕುಪ್ಪಗದ್ದೆ ಮರಿಯಪ್ಪ, ಶಾಂತವೇರಿ ಗೋಪಾಲಗೌಡ, ಡಾ|| ರಾಮಮನೋಹರ ಲೋಹಿಯಾ ..... ಹೀಗೆ ಒಬ್ಬರೇ, ಇಬ್ಬರೇ , ನೂರಾರು ಮಂದಿ ದೇಶದ ಮೂಲೆ ಮೂಲೆಗಳಿಂದ ಬಂದು ಸೇವೆ ಸಲ್ಲಿಸಿದ್ದರು. ಅವರ ತ್ಯಾಗ ಬಲಿದಾನಗಳಿಗೆ ಬೆಲೆ ಕಟ್ಟಲು ಸಾಧ್ಯವೇ ?

ಇವರುಗಳು ವೆಚ್ಚಕ್ಕೆ ಹೊನ್ನಾದ ತಮ್ಮ ಉದ್ಯೋಗ ಉದ್ದಿಮೆಗಳನ್ನು ಕಳೆದುಕೊಂಡರು. ಬೆಚ್ಚನೆಯ ಮನೆ ಮಠಗಳನ್ನು ಬಿಟ್ಟು ಬಂದರು. ಇಷ್ಟೆಯರಿತು ನಡೆವ ಸತಿ ಸುತರುಗಳನ್ನು ತೊರೆದು ಬಂದರು. ಸುಖಸಂಸಾರದಲ್ಲಿ ಆನಂದದಲ್ಲಿ ಬಾಳಿ ಸ್ವರ್ಗಕ್ಕೆ ಕಿಚ್ಚನ್ನಿಕ್ಕುವ ಬದಲು, ಕಾಗೋಡಿನ ಅಗ್ನಿ ಕುಂಡಕ್ಕೆ ಧುಮುಕಿ ತಮ್ಮ ಬದುಕಿಗೆ ಬೆಂಕಿಯಿಟ್ಟುಕೊಂಡರು. ಹೋರಾಟದ ಜೀವನಕ್ಕೆ ತಮ್ಮನ್ನು ತಾವೇ ಅರ್ಪಿಸಿಕೊಂಡರು. ಭೂಗತ ಕಾರ್ಯಕರ್ತರಾಗಿ ಕಾಡು ಮೇಡುಗಳಲ್ಲಿ, ತಮಗಾಗಿ ಬೇಟೆ ನಾಯಿಗಳಂತೆ ಹುಡುಕಾಡುತ್ತಿದ್ದ ಪೋಲೀಸರ ಕಣ್ಣು ತಪ್ಪಿಸಿ ಬಾಳತೊಡಗಿದರು. ಮೈಯೆಲ್ಲಾ ಕಣ್ಣಾಗಿ ಕಲ್ಲು ಮುಳ್ಳುಗಳ ಕಾಡು ಹಾದಿಯಲ್ಲಿ, ಹಳ್ಳ - ಕೊಳ್ಳಗಳಲ್ಲಿ , ಕೊಚ್ಚೆ - ಕೆಸರುಗಳಲ್ಲಿ ಬಳಲಿದರು. ಮಳೆ-ಗಾಳಿ, ಹಸಿವು-ನೀರಡಿಕೆಗಳಿಗೆ ತುತ್ತಾಗಿ ಕಾಡು ಮನುಷ್ಯರಂತೆ ಅಲೆದಾಡಿದರು. ಉಪವಾಸ - ವನವಾಸ ಅವರ ನಿತ್ಯ ನೇಮವಾಯಿತು. ಆದರೂ ಅವರು ಧೃತಿಗೆಡಲಿಲ್ಲ. ಹೆಜ್ಜೆ ಹೆಜ್ಜೆಗೂ ಅಪಾಯಗಳು, ಗಂಡಾಂತರಗಳು, ಅನಿಶ್ಚಿತತೆಗಳೇ ಕಾಡಿದ್ದರೂ ಎದೆಗೆಡದ ದುಡಿದರು. ಪೋಲಿಸರ ದೌರ್ಜನ್ಯಕ್ಕೆ ಹೆದರಿ ಗುಡ್ಡ-ಬೆಟ್ಟ, ಪೊದೆ- ಪೊಟರೆಗಳಲ್ಲಿ ಅಡಗಿಕೊಂಡಿದ್ದ ಭಯಗ್ರಸ್ಥ ಗೇಣಿದಾರರನ್ನು ಸಂಪರ್ಕಿಸಿದರು. ಅವರಿಗೆ ಧೈರ್ಯ ತುಂಬಿದರು. ಬೆಂಬಲ ನೀಡಿ ಹುರಿದುಂಬಿಸಿ ಹೋರಾಟಕ್ಕೆ ಸಜ್ಜುಗೊಳಿಸಿ ತಮ್ಮೊಡನೆ ರಣಾಂಗಣಕ್ಕೆ ಕರೆದುತಂದರು. ಅವರೊಡನೆ ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದರು. ಇದೇನು ಅಲ್ಪ ಸಾಹಸವೇ , ಸಾಮಾನ್ಯ ಸಾಧನೆಯೇ ? ಜಗತ್ತೇ ಮೆಚ್ಚಿಕೊಳ್ಳುವಂಥ ವೀರ ದೀಕ್ಷೆ. ವೀರ ಸಂಕಲ್ಪಗಳು ಅಲ್ಲವೇ ? ಇಂಥ ಬಳುವಳಿಯನ್ನು ಅವರು ಗೇಣಿ ದಾರರಿಗೆ ನೀಡಿದರು. ಈ ಬಗೆಯ ಧೀರ ಸೋದರರರನ್ನು ಪಡೆದ ನಾವೇ ಧನ್ಯರು ಎಂದು ಕೃತಜ್ಞತಾ ಭಾವದಿಂದ ಆ ಗೇಣೀದಾರರು ಇವರನ್ನು ಅಪ್ಪಿಕೊಂಡರು. ಹೆಜ್ಜೆಗೆ - ಹೆಜ್ಜೆ ಇಟ್ಟು ಧೀರ

ಸಂಗಾತಿಗಳಂತೆ ಎದೆಯುಬ್ಬಿಸಿ ಹೋರಾಟದಲ್ಲಿ ಮುನ್ನಡೆದರು..... ಆ ಸೇ ಕಾಗೋಡಿನ ವೀರಗಾಥೆ.

ಈ ಹೃದಯಸ್ಪರ್ಶಿ ಘಟನೆ ನಡೆದು ಐದು ದಶಕಗಳೇ ಆಗಿವೆ. ಈ ಅವಧಿಯಲ್ಲಿ ಕಾಲ - ಹಂತಕನಾದ ನಿರ್ದಯಿ ಕಾಲ - ಆ ನಿರಂತರ ದುಡಿಮೆಯ ಜವರಾಯ : ತನ್ನ ಕುಡುಗೋಲಿನಿಂದ ಒಳ್ಳೊಳ್ಳೆಯ ವೃಕ್ಷಗಳನ್ನು ಕಡಿದುಕೊಂಡೊಯ್ದಿದ್ದಾನೆ. ಇಂದು ಎಲ್ಲೋ ಒಬ್ಬ ಯು.ಆರ್. ಅನಂತಮೂರ್ತಿ, ಇನ್ನೊಬ್ಬ ಹೆಚ್. ಗಣಪತಿಯಪ್ಪ, ಮತ್ತೊಬ್ಬ ಹೆಚ್.ಎನ್. ಸೀತಾರಾಂ ಹೀಗೆ ಬೆರಳೆಣಿಕೆಯಷ್ಟು ಜನರನ್ನು ಮಾತ್ರ ಬಿಟ್ಟು ಮತ್ತೆಲ್ಲರನ್ನೂ ಜವರಾಯ ತನ್ನ ತೋಳ ತೆಕ್ಕೆಯಲ್ಲಿ ಅವಚಿ ಕೊಂಡೊಯ್ದಿದ್ದಾನೆ.

ಈ ಪುಣ್ಯ ಜೀವಿಗಳೇನೋ ಸ್ವಾತಂತ್ರ್ಯ ಮತ್ತು ಹೋರಾಟದ ಮಹಾ ಕೊಡುಗೆಯನ್ನು ಕಾಗೋಡಿನ ಗೇಣಿದಾರರಿಗೆ ಬಳುವಳಿಯಾಗಿ ಕೊಟ್ಟು ಹೋದರು. ಪ್ರತಿಯಾಗಿ ಅವರಿಗೆ ನಾವು ಏನನ್ನು ಕೊಡಬಲ್ಲೆವು ? ಕಾಗೋಡಿನ ಬಂದಿಖಾನೆಯಲ್ಲಿ ನಾನೇ ಒಂದು ಕವನವನ್ನು ರಚಿಸಿದ್ದೆ, ಆ ಕಾವ್ಯ ಶ್ರದ್ಧಾಂಜಲಿಯಿಂದಲೇ ಈ ಎಲ್ಲಾ ಮಹನೀಯರಿಗೂ ನುಡಿನಮನ ಸಲ್ಲಿಸೋಣ.

ಕ್ರಾಂತಿ ಕನ್ಯೆ

''ಹೊಸಲು ದಾಟಲು ಹೊರಟಿರುವ ಹೆಣ್ಣೇ
ನಿನಗೇನು ಕಾದಿಹುದು ಬಲ್ಲಿಯೇನ್''
''..... ದ್ವೇಷ, ಘೂಷಣೆ, ಅಣಕ
ರೋಗ, ಸೆರೆಮನೆ, ಹಸಿವು
ನೋವು ಸಂಕಟ, ಮೃತ್ಯು..''
''ಬಲ್ಲೆ ನಾನಿದನೆಲ್ಲಾ ''
ಎಂದಳಾ ಹೆಣ್ಣು
ಹೆಣ್ಣು ದಾಟಬಳು ಹೊಸಲ ;
ಬಿತ್ತು ಕಬ್ಬಿಣದ ತೆರೆ ಬಾಗಿಲಿಗೆ.
''ಮೂರ್ಖೀ..'' ಎಂದಿತೊಂದು ಕ್ರೋಧೋಕ್ತಿ
''ಮಹಾತ್ಮೆ..! ಎಂದಿತ್ತಿನ್ನೊಂದು ವಾಣಿ.

(ಸುಪ್ರಸಿದ್ಧ ರಷ್ಯನ್ ಸಾಹಿತಿ ಈವಾನ್ ಥರ್ಗೇನೇವ್ ಅವರ ಗದ್ಯ ಕಾವ್ಯವೊಂದರಿಂದ ಪ್ರೇರಿತ.)

ಕಾಗೋಡು ಸತ್ಯಾಗ್ರಹಕ್ಕೆ ಅದರದೇ ಆದ ಒಂದು ವಿಶಿಷ್ಟ ಅಸ್ಮಿತೆ ಇದೆ. ಶತಶತಮಾನಗಳಿಂದ ಭೂಮಾಲಿಕರ ದಬ್ಬಾಳಿಕೆ ವಂಚನೆ ಶೋಷಣೆಗಳಿಗೆ ತುತ್ತಾದವರು ಗೇಣೀದಾರರು. ತಮ್ಮ ಬೆವರುಗಳಿಕೆಯ ಫಲದಲ್ಲಿ ನ್ಯಾಯಯುತವಾದ ಪಾಲುಪಡೆಯಲಾರದವರಾಗಿ ಆರ್ಥಿಕ ಭದ್ರತೆ ಶೈಕ್ಷಣಿಕ ಸವಲತ್ತುಗಳಿಲ್ಲದೆ ಜೀತಗಾರಿಕೆಯ ನೊಗಭಾರದಲ್ಲಿ ನರಳುತ್ತಿದ್ದ ಕಾಯಜೀವಿಗಳವರು. ಇಂಥ ಈ ಸಮುದಾಯದ ಮಡುಗಟ್ಟಿದ ನೋವು ಕಟ್ಟೆಯೊಡೆದದ್ದು ಮಲೆನಾಡಿನಲ್ಲಿ ; ಸಮಾಜವಾದಿ ಚಿಂತಕರ, ಜನಮುಖಿ ಹೋರಾಟಗಾರರ ಸಾಂಸ್ಕೃತಿಕ ತಾಣವೆನಿಸಿದ ಶಿವಮೊಗ್ಗ ಜಿಲ್ಲೆಯಲ್ಲಿ. ಈ ಹೋರಾಟದ ಮೂಲ ಬಿಂದು ನ್ಯಗ್ರೋದ ಬೀಜದಂತೆ ಅಣು ರೂಪಿಯಾದರೂ ಅದರ ವೃಕ್ಷರೂಪ ನಮ್ಮ ಸಾಂಸ್ಕೃತಿಕ ಸಾಮಾಜಿಕ ರಾಜಕೀಯ ಕ್ಷೇತ್ರಗಳನ್ನು ವ್ಯಾಪಿಸಿದಂತೆ ಹಬ್ಬಿ ಬೆಳೆದ ವಟಸ್ವರೂಪಿಯಾದುದೆ ಆಗಿದೆ.

ಶ್ರೀ ಸಿ.ಬಿ. ಚಂದ್ರಶೇಖರ್ ಅವರು ಸ್ವತಹ ಕಾಗೋಡು ಸತ್ಯಾಗ್ರಹದಲ್ಲಿ ಕ್ರಿಯಾಶೀಲರಾಗಿ ಪಾಲ್ಗೊಂಡವರು. ಜೈಲುವಾಸ ಅನುಭವಿಸಿದವರು. ಅವರ ಅನುಭವ ಕಥನ ಇಲ್ಲಿ ಚಿತ್ರವತ್ತಾಗಿ ಕಣ್ಣಿಗೆ ಕಟ್ಟುವಂತೆ ನಿರೂಪಿತವಾಗಿದೆ.

ಪ್ರೊ. ಎಸ್. ಜಿ. ಸಿದ್ಧರಾಮಯ್ಯ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ